ಕರ್ನಾಟಕ ಸರ್ಕಾರ

# ಸಂಸತ್ ಸದಸ್ಯರು : ವಿಧಾನ ಮಂಡಲದ ಸದಸ್ಯರುಗಳನ್ನು ಸರ್ಕಾರಿ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ : ಅವರುಗಳಿಂದ ಬಂದ ಪತ್ರಗಳಿಗೆ ಉತ್ತರಿಸುವಲ್ಲಿ ಹಾಗೂ ಶಿಷ್ಟಾಚಾರ ಕುರಿತಂತೆ ಪಾಲಿಸಬೇಕಾದ ನೀತಿ ನಿಯಮಗಳ : ಆದೇಶ : ಸುತ್ತೋಲೆಗಳ ಸಂಗ್ರಹ

2025

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ರಾಜ್ಯ ಶಿಷ್ಟಾಚಾರ)

# ಸಂಸತ್ ಸದಸ್ಯರು : ವಿಧಾನ ಮಂಡಲದ ಸದಸ್ಯರುಗಳನ್ನು ಸರ್ಕಾರಿ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ : ಅವರುಗಳಿಂದ ಬಂದ ಪತ್ರಗಳಿಗೆ ಉತ್ತರಿಸುವಲ್ಲಿ ಹಾಗೂ ಶಿಷ್ಟಾಚಾರ ಕುರಿತಂತೆ ಪಾಲಿಸಬೇಕಾದ ನೀತಿ ನಿಯಮಗಳ : ಆದೇಶ : ಸುತ್ತೋಲೆಗಳ ಸಂಗ್ರಹ

**2025**

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

(ರಾಜ್ಯ ಶಿಷ್ಟಾಚಾರ)

# ಪರಿವಿಡಿ


| ಕ್ರಮ ಸಂಖ್ಯೆ | ವಿಷಯ | ಸರ್ಕಾರಿ/ ಆದೇಶ / ಸುತ್ತೋಲೆ ಸಂಖ್ಯೆ ಮತ್ತು ದಿನಾಂಕ | ಪುಟ ಸಂಖ್ಯೆ |
|---|---|---|---|
| 1. | ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಕುರಿತು ಸಮಗ್ರ ಸೂಚನೆಗಳನ್ನು ಹೊರಡಿಸುವ ಬಗ್ಗೆ. | ಸಿಆಸುಇ 34 ಹೆಚ್‌ಪಿಎ 2018 (1) ದಿನಾಂಕ:06.03.2019 | 01-05 |
| 2. | ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಕುರಿತು ಸಮಗ್ರ ಸೂಚನೆಗಳನ್ನು ಹೊರಡಿಸುವ ಬಗ್ಗೆ. | ಸಿಆಸುಇ 34 ಹೆಚ್‌ಪಿಎ 2019 (1) ದಿನಾಂಕ:16.04.2019 | 06-11 |
| 3. | ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲ ಸದಸ್ಯರುಗಳು ನಡುವಣ ಸರ್ಕಾರದ ವ್ಯವಹಾರಗಳ – ಸೂಕ್ತ ಕಾರ್ಯವಿಧಾನದ ಪಾಲನೆ ಕ್ರೋಢೀಕೃತ ಸೂಚನೆಗಳು | ಸಿಆಸುಇ 05 ಹೆಚ್‌ಪಿಎ 2019 ದಿನಾಂಕ:30.04.2019 | 12-14 |
| 4. | ಮಾನ್ಯ ಉಪ ಮುಖ್ಯಮಂತ್ರಿಯವರ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಭೇಟಿಯ ಅವಧಿಯಲ್ಲಿ ಮಾಡಬೇಕಾದ ಶಿಷ್ಟಾಚಾರದ ವ್ಯವಸ್ಥೆಯ ಬಗ್ಗೆ. | ಸಿಆಸುಇ 04 ಹೆಚ್‌ಪಿಎ 2019 ದಿನಾಂಕ:04.11.2019 | 15-16 |
| 5. | ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಕುರಿತು ಇರುವ ನಿಯಮ/ಆದೇಶ ಮಾರ್ಗಸೂಚಿಗಳನ್ನು ಕ್ರೋಢೀಕರಿಸಿ ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ. | ಸಿಆಸುಇ 04 ಹೆಚ್‌ಡಬ್ಲ್ಯೂಪಿ 2020 ದಿನಾಂಕ:22.03.2021 | 17-24 |
| 6. | ಗಣ್ಯ ವ್ಯಕ್ತಿಗಳ ಜಿಲ್ಲಾ ಪ್ರವಾಸದ ಸಂದರ್ಭದಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು. | ಸಿಆಸುಇ 12 ಹೆಚ್‌ಪಿಎ 2021 ದಿನಾಂಕ:21.03.2022 | 25-46 |
| 7. | ಸಭೆ ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಾಗ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಸೂಚನೆ. | ಸಿಆಸುಇ 28 ಎಚ್‌ಪಿಎ 2023 ದಿನಾಂಕ:20.09.2023 | 47-48 |
| 8. | ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಡಾ:ಬಿ.ಆರ್. ಅಂಬೇಡ್ಕರ್ ರವರ ಭಾವಚಿತ್ರವನ್ನು ಇಡುವ ಬಗ್ಗೆ. | ಸಿಆಸುಇ 7 ಹೆಚ್‌ಪಿಎ 2020 ದಿನಾಂಕ:25.01.2020 | 49 |
| 9. | ಆಗಸ್ಟ್-15ರ ಸ್ವಾತಂತ್ರ್ಯ ದಿನಾಚರಣೆ ಮತ್ತು ನವೆಂಬರ್ 26 ರ ಸಂವಿಧಾನದ ದಿನಾಚರಣೆ ಸಂದರ್ಭದಲ್ಲಿ ಡಾ.ಬಿ.ಆರ್. ಅಂಬೇಡ್ಕರವರ ಭಾವಚಿತ್ರವನ್ನು ಇಡುವ ಬಗ್ಗೆ. | ಸಿಆಸುಇ 39 ಹೆಚ್‌ಪಿಎ 2023, ದಿನಾಂಕ:08.07.2024 | 50 |
| 10. | ಕೋವಿಡ್-19ರ ನಿರ್ವಹಣೆಯ ಕುರಿತು ಸರ್ಕಾರವು ಕೈಗೊಂಡಿರುವ ಕ್ರಮಗಳ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯಲು ಮಾನ್ಯ ವಿರೋಧ ಪಕ್ಷದ ನಾಯಕರು ವಿಡಿಯೋ ಸಂವಾದದ ಮುಖಾಂತರ ಸಭೆಯನ್ನು ಏರ್ಪಡಿಸಿರುವ ಬಗ್ಗೆ | ಸಿಆಸುಇ 39 ಹೆಚ್‌ಪಿಎ 2021, ದಿನಾಂಕ:19.05.2021 | 51-52 |

| | | | |
|---|---|---|---|
| 11. | ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳ ಪ್ರವಾಸದ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ. | ಸಿಆಸುಇ 61 ಶಿರಾಅ 2017, ದಿನಾಂಕ:21.02.2018 | 53-54 |
| 12. | ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳ ಪ್ರವಾಸದ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ. | ಸಿಆಸುಇ 61 ಶಿರಾಅ 2017, ದಿನಾಂಕ:07.02.2018 | 55 |
| 13. | ಗೌರವಾನ್ವಿತ ಲೋಕಾಯುಕ್ತರು ಹಾಗೂ ಉಪಲೋಕಾಯುಕ್ತರಿಗೆ ಸಲ್ಲಬೇಕಾದ ಶಿಷ್ಟಾಚಾರದ ಸೂಚನೆಗಳನ್ನು ಹೊರಡಿಸುವ ಬಗ್ಗೆ | ಸಿಆಸುಇ 14 ಹೆಚ್‌ವಿಪಿ 2018, ದಿನಾಂಕ:30.07.2018 | 56-57 |
| 14. | ಆದ್ಯತಾಸೂಚಿ ಪರಿಗಣಿಸುವ ಒಂದೇ ಅನುಚ್ಛೇದದಲ್ಲಿರುವವರುಗಳ ನಡುವೆ ಆದ್ಯತೆಯನ್ನು ಪರಿಗಣಿಸುವ ಬಗ್ಗೆ. | ಸಿಆಸುಇ 12 ಹೆಚ್‌ಡಬ್ಲ್ಯೂಪಿ 2014, ದಿನಾಂಕ:08.01.2018 | 58-59 |
| 15. | ಸಚಿವರ ಸ್ಥಾನಮಾನ ಹೊಂದಿರುವ ವ್ಯಕ್ತಿಗಳಿಗೆ ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯಲ್ಲಿ ಸೇರಿಸುವ ಬಗ್ಗೆ. | ಡಿಪಿಎಆರ್ 02 ಹೆಚ್‌ಡಬ್ಲ್ಯೂಪಿ 2016, ದಿನಾಂಕ:06.06.2016 | 60 |
| 16. | ಸರ್ಕಾರದ ಸಭೆ ಸಮಾರಂಭಗಳಿಗೆ ನಿಗಮ ಮಂಡಳಿ ಅಧ್ಯಕ್ಷರನ್ನು ಆಹ್ವಾನಿಸುವ ಬಗ್ಗೆ. | ಸಿಆಸುಇ 01 ಹೆಚ್‌ಡಬ್ಲ್ಯೂಪಿ 2015, ದಿನಾಂಕ:04.03.2015 | 61-62 |
| 17. | ಸರ್ಕಾರದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯನ್ನು ಶಿಷ್ಟಾಚಾರ ರೀತ್ಯ ಮುದ್ರಿಸುವ ಬಗ್ಗೆ. | ಸಿಆಸುಇ 34 ಹೆಚ್‌ಪಿಎ 2024, ದಿನಾಂಕ:12.09.2024 | 63-64 |
| 18. | ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವ ಕುರಿತು ಸೂಚನೆಗಳನ್ನು ನೀಡುವ ಬಗ್ಗೆ. | ಸಿಆಸುಇ 20 ಹೆಚ್‌ಜಿಜಿ 2025, ದಿನಾಂಕ:20.02.2025 | 65 |
| 19. | ಉಭಯ ಸದನಗಳ ಅಧಿವೇಶನ ನಡೆಯುವ ಸಮಯದಲ್ಲಿ ಸರ್ಕಾರದ ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ಹಾಗೂ ವಿಶ್ವವಿದ್ಯಾಲಯಗಳು, ಶಾಸಕರು ಸದಸ್ಯರಾಗಿರುವ ಸಭೆಗಳನ್ನು ನಡೆಸದಿರುವ ಬಗ್ಗೆ. | ಸಿಆಸುಇ 33 ರಾರಾಅ 2015, ದಿನಾಂಕ:28.5.2015 | 66 |
| 20. | ಹಕ್ಕುಬಾಧ್ಯತಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ. | ಸಿಆಸುಇ 38 ರಾರಾಅ 2015, ದಿನಾಂಕ:15.6.2015 | 67 |
| 21. | ಹಕ್ಕುಬಾಧ್ಯತಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ. | ಸಿಆಸುಇ 38 ರಾರಾಅ 2015, ದಿನಾಂಕ:15.6.2015 | 68 |
| 22. | ಮಾನ್ಯ ಮುಖ್ಯಮಂತ್ರಿಯವರ ಪ್ರವಾಸ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರಗಳನ್ನು ಪಾಲಿಸುವ ಬಗ್ಗೆ. | ಸಿಆಸುಇ 54 ರಾರಾಅ 2015, ದಿನಾಂಕ:27.6.2015 | 69 |
| 23. | ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನಮಂಡಲದ ಸದಸ್ಯರಿಂದ ಬಂದಂತಹ ದೂರವಾಣಿ ಕರೆಗಳನ್ನು ಹಿಂತಿರುಗಿಸುವ ಬಗ್ಗೆ. | ಸಿಆಸುಇ 57 ರಾರಾಅ 2015, ದಿನಾಂಕ:16.7.2015 | 70 |

| | | | |
|---|---|---|---|
| 24. | ಸರ್ಕಾರಿ ಕಾರ್ಯಕ್ರಮಗಳನ್ನು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆಸುವ ಬಗ್ಗೆ. | ಸಿಆಸುಇ 01 ರಾರಾಆ 2015, ದಿನಾಂಕ:16.7.2015 | 71 |
| 25. | ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲ ಸದಸ್ಯರುಗಳ ನಡುವಣ ಸರ್ಕಾರದ ವ್ಯವಹಾರಗಳು – ಸೂಕ್ತ ಕಾರ್ಯವಿಧಾನದ ಪಾಲನೆ ಕುರಿತಾದ ಪರಿಷ್ಕೃತ ಕ್ರೋಢೀಕೃತ ಸೂಚನೆಗಳು. | ಸಿಆಸುಇ 120 ರಾರಾಆ 2011, ದಿನಾಂಕ16.3.2013 | 72-74 |
| 26. | ಸರ್ಕಾರಿ ಸಭೆಗಳನ್ನು ನಡೆಸುವ ಕುರಿತು ಸೂಚನೆಗಳನ್ನು ನೀಡುವ ಬಗ್ಗೆ. | ಸಿಆಸುಇ 05 ರಾರಾಆ 2012, ದಿನಾಂಕ:20.1.2012 | 75 |
| 27. | ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ/ ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ. | ಸಿಆಸುಇ 20 ರಾರಾಆ 2012 (ಭಾ), ದಿನಾಂಕ:27.6.2012 | 76-77 |
| 28. | ಸರ್ಕಾರದ ಸಭೆ/ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಾಗ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು. | ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿನಾಂಕ:17.9.2012 | 78-79 |
| 29. | ಸರ್ಕಾರದ ಸಭೆ/ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಾಗ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು. | ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿನಾಂಕ:10.10.2012 | 80 |
| 30. | ಸರ್ಕಾರದ ಸಭೆ/ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಾಗ ಬಗ್ಗೆ. | ಸಿಆಸುಇ 05 ಹೆಚ್‌ಡಬ್ಲ್ಯೂಪಿ 2012, ದಿನಾಂಕ:23.11.2012 | 81-82 |
| 31. | ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ / ವಿಧಾನ ಪರಿಷತ್ ಸದಸ್ಯರಿಗೆ ಸರ್ಕಾರಿ ಸಮಾರಂಭಗಳಲ್ಲಿ ನೀಡುವ ಸ್ಥಾನಮಾನಗಳ ಬಗ್ಗೆ. | ಸಿಆಸುಇ 55 ರಾರಾಆ 2009, ದಿನಾಂಕ:23.6.2010 | 83-84 |
| 32. | ಜಿಲ್ಲಾ ಮಂತ್ರಿಗಳು, ಸ್ಥಳೀಯ ಶಾಸಕರು ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರು, ಇತರೆ ಸಚಿವರು / ಸಂಸದರು / ವಿಧಾನ ಸಭಾ ಸದಸ್ಯರು / ವಿಧಾನ ಪರಿಷತ್ತಿನ ಸದಸ್ಯರನ್ನು ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ. | ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010, ದಿನಾಂಕ:7.12.2010 | 85-86 |
| 33. | ಶಿಷ್ಟಾಚಾರ ಪಾಲನೆ ಬಗ್ಗೆ ಸಚಿವಾಲಯದ ಮಟ್ಟದಲ್ಲಿ ಮೇಲ್ವಿಚಾರಣಾ ಕೋಶ (Monitoring Cell) ರಚನೆ ಕುರಿತು. | ಸಿಆಸುಇ 36 ರಾರಾಆ 2009, ದಿನಾಂಕ:20.8.2009 | 87 |
| 34. | 2003-04ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ 36ನೇ ವರದಿಯಲ್ಲಿನ ಶಿಫಾರಸ್ಸಿನ ಬಗ್ಗೆ. | ಸಿಆಸುಇ 33 ರಾರಾಆ 2009, ದಿನಾಂಕ:2.9.2009 | 88 |
| 35. | ವಿಧಾನ ಸಭಾ / ವಿಧಾನ ಪರಿಷತ್ ಸದಸ್ಯರಿಗೆ ಸರ್ಕಾರಿ ಸಮಾರಂಭಗಳಲ್ಲಿ ನೀಡುವ ಸ್ಥಾನಮಾನಗಳ ಬಗ್ಗೆ. | ಸಿಆಸುಇ 58 ರಾರಾಆ 2008, ದಿನಾಂಕ:29.9.2009 | 89-91 |
| 36. | ವಿಧಾನ ಮಂಡಲದ ಸದಸ್ಯರ ಮತ್ತು ಸಂಸತ್ ಸದಸ್ಯರ ಬಗ್ಗೆ ಶಿಷ್ಟಾಚಾರ ಪಾಲನೆಯಲ್ಲಿ ಆದ ಉಲ್ಲಂಘನೆ ಕುರಿತು ಪ್ರಕರಣಗಳ ಅಂಕಿ ಅಂಶಗಳ ನಿಗದಿತ ಪ್ರಪತ್ರದಲ್ಲಿ ತ್ರೈಮಾಸಿಕ ವರದಿ ಸಲ್ಲಿಸುವ ಬಗ್ಗೆ. | ಸಿಆಸುಇ 34 ರಾರಾಆ 2009, ದಿನಾಂಕ:30.6.2009 | 92-93 |

| | | | |
|---|---|---|---|
| 37. | ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯ 36ನೇ ವರದಿಯಲ್ಲಿನ ಶಿಫಾರಸ್ಸು – ಸರ್ಕಾರಿ ಸಮಾರಂಭಗಳಿಗೆ ಆಹ್ವಾನಿಸುವ ಶಿಲಾಫಲಕಗಳಲ್ಲಿ ಬರೆಸುವುದು ಮತ್ತು ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳಲ್ಲಿ ಹೊಣೆಗಾರಿಕೆ ಬಗ್ಗೆ. | ಸಿಆಸುಇ 33 ರಾರಾಆ 2009, ದಿನಾಂಕ:6.7.2009 | 94-95 |
| 38. | ಸಂವಿಧಾನ ಶಿಲ್ಪಿ ಡಾ\|\| ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರವನ್ನು ಸರ್ಕಾರದ ಎಲ್ಲಾ ಕಚೇರಿಗಳಲ್ಲಿಯೂ ಅಳವಡಿಸುವ ಬಗ್ಗೆ. | ಸಿಆಸುಇ 68 ರಾರಾಆ 2008, ದಿನಾಂಕ:31.12.2008 | 96 |
| 39. | ಇಲಾಖೆಯ ಅಧಿಕಾರಿಗಳ ಬದಲಾಗಿ ಶಾಸಕರು / ಸಂಸತ್ ಸದಸ್ಯರು ಹಾಗೂ ಸಾರ್ವಜನಿಕರೇ ಕಾರ್ಡ್‌ಗಳನ್ನು ಮುದ್ರಿಸಿ, ಸಮಾರಂಭಗಳನ್ನು ಏರ್ಪಡಿಸಬಾರದೆಂಬ ಕುರಿತು. | ಸಿಆಸುಇ 31 ರಾರಾಆ 2006, ದಿನಾಂಕ:6.2.2007 | 97 |
| 40. | ಕರ್ನಾಟಕ ರಾಜ್ಯದ ಆದ್ಯತಾ ಪಟ್ಟಿ ತಿದ್ದುಪಡಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 2 ಹೆಚ್‌ಡಬ್ಲ್ಯೂಪಿ 91ಕ್ಕೆ ಸೇರ್ಪಡೆ. | ಸಿಆಸುಇ 1 ಹೆಚ್‌ಡಬ್ಲ್ಯೂಪಿ 2005, ದಿನಾಂಕ:22.2.2007 | 98-99 |
| 41. | ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳ ಪತ್ರಗಳಿಗೆ ಶೀಘ್ರವಾಗಿ ಉತ್ತರಿಸುವ ಬಗ್ಗೆ ಹಾಗೂ ಹೊರಡಿಸಲಾದ ಶಿಷ್ಟಾಚಾರ ಸುತ್ತೋಲೆಯನ್ನು ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ. | ಸಿಆಸುಇ 28 ರಾರಾಆ 2005, ದಿನಾಂಕ:2.7.2007 | 100 |
| 42. | ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಉತ್ತರಿಸಲು ಇಲಾಖಾ ವರಿಷ್ಠರು ಶಿಷ್ಟಾಚಾರ ಪಾಲಿಸಿ ಕ್ರಮ ಕೈಗೊಳ್ಳುವುದರ ಕುರಿತು. | ಸಿಆಸುಇ 91 ರಾರಾಆ 2005, ದಿನಾಂಕ:25.4.2006 | 101 |
| 43. | Presiding over the Flag hoisting functions by MLAs on Independence day & Republic day – reg | No. 15/10/2005 – Public 27.9.2005 | 102 |
| 44. | 2003-04ನೇ ಸಾಲಿನ ಹಕ್ಕು ಭಾದ್ಯತಾ ಸಮಿತಿಯ 36ನೇ ವರದಿಯಲ್ಲಿನ ಶಿಫಾರಸ್ಸಿನ ಬಗ್ಗೆ. | ಸಿಆಸುಇ 71 ರಾರಾಆ 2005, ದಿನಾಂಕ:26.10.2005 | 103-104 |
| 45. | Official Dealings between the Administration and Members of Parliament and State Legislatures – Observance of Proper Procedure – Invitation to Public functions. | ಸಿಆಸುಇ 62 ರಾರಾಆ 2005, ದಿನಾಂಕ:5.9.2005 | 105 |
| 46. | Government of India, Office Memorandum – Inviting Members of Parliament / State Legislative to Public functions organized by Government Departments / Subordinate officers / Public Undertakings and sending invitations in advance and confirmations of their receipt. | No. 11013/6/2005 - Estt,(A) 27.6.2005 | 106 |

| | | | |
|---|---|---|---|
| 47. | Government of India Office Memorandum – Ensuring date, time venue of the meeting to be attended by Member of Parliament in advance and confirmation of intimation of its receipt. | No. 11013/2/2000- Estt, (A) 25.8.2000 | 107 |
| 48. | ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ. | ಸಿಆಸುಇ 02 ರಾರಾಆ 2004, ದಿನಾಂಕ:11.2.2004 | 108 |
| 49. | ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಸ್ವೀಕೃತಿ ನೀಡಿ ನಿಗದಿತ ಅವಧಿಯಲ್ಲಿ ಉತ್ತರಿಸಲು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳುವ ಕುರಿತು. | ಸಿಆಸುಇ 91 ರಾರಾಆ 2005, ದಿನಾಂಕ:5.11.2005 | 109 |
| 50. | Government of India instructions Ensuring prompt relies to the letters of Members of Parliament and Monitor Progress of deposit. | 20.9.2005 | 110 |
| 51. | Celebration on the Republic Day, 26th January, 2002 | No. 2/9/2001 – Public 9.1.2002 | 111 |
| 52. | Republic Day Ceremony, 2002. | No. 2/9/2001 – Public 9.1.2002 | 112-114 |
| 53. | Independence Day and Republic Day Celebrations Clarifications – reg. | No. 2/7/95 – Public 28.2.2002 | 115 |
| 54. | ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬರುವ ಪತ್ರಗಳಿಗೆ ಸಂಬಂಧಪಟ್ಟ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಅಥವಾ ಇಲಾಖಾ ಮುಖ್ಯಸ್ಥರು (ಆಯುಕ್ತರು / ನಿರ್ದೇಶಕರು / ವ್ಯವಸ್ಥಾಪಕ ನಿರ್ದೇಶಕರು) ಸ್ವತಃ ಉತ್ತರ ನೀಡುವ ಬಗ್ಗೆ. | ಸಿಆಸುಇ 50 ರಾರಾಆ 2001, ದಿನಾಂಕ:20.9.2001 | 116 |
| 55. | ದಿನಾಂಕ:12.7.2001ರ ಸರ್ಕಾರಿ ಆದೇಶಕ್ಕೆ ತಿದ್ದುಪಡಿ – ತಿದ್ದೋಲೆ ವಿಧಾನ ಪರಿಷತ್ತಿನ ಸದಸ್ಯರು ನೋಡಲ್ ತಾಲ್ಲೂಕುಗಳನ್ನು ಆಯ್ಕೆ | ಸಿಆಸುಇ 24 ರಾರಾಆ 2001, ದಿನಾಂಕ:2.3.2002 | 117 |
| 56. | ಸರ್ಕಾರದ ವತಿಯಿಂದ ಏರ್ಪಡಿಸುವ ಸಮಾರಂಭಗಳಿಗೆ ವಿಧಾನ ಪರಿಷತ್ತಿನ ಸದಸ್ಯರನ್ನು ಒಳಗೊಂಡಂತೆ ಸಂಸತ್ / ವಿಧಾನ ಸಭಾ ಸದಸ್ಯರನ್ನು ಆಹ್ವಾನಿಸುವುದು ಮತ್ತು ಆಹ್ವಾನ ಪತ್ರಿಕೆಯಲ್ಲಿ ಅವರ ಹೆಸರನ್ನು ಮುದ್ರಿಸಲು ಕ್ರಮ ಕೈಗೊಳ್ಳುವ ಬಗ್ಗೆ. | ಸಿಆಸುಇ 10 ರಾರಾಆ 2002, ದಿನಾಂಕ:25.2.2002 | 118 |
| 57. | Independence Day Celebrations on 15th August | No.2/7/2001 – Public 12.7.2001 | 119-120 |
| 58. | ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ. | ಸಿಆಸುಇ 09 ರಾರಾಆ 2001, ದಿನಾಂಕ:12.7.2001 | 121-122 |

| | | | |
|---|---|---|---|
| 59. | ಸರ್ಕಾರದ ವತಿಯಿಂದ ಏರ್ಪಡಿಸುವ ಜಿಲ್ಲಾ ಪಂಚಾಯತ್ ಸಭೆ, ಜಿಲ್ಲಾಧಿಕಾರಿಗಳ ಸಭೆ ಹಾಗೂ ಸರ್ಕಾರಿ ಕಾರ್ಯಕ್ರಮಗಳಿಗೆ ಸರ್ಕಾರಿ ಮುಖ್ಯ ಸಚೇತಕರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ. | ಸಿಆಸುಇ 52 ರಾರಾಆ 2000, ದಿನಾಂಕ:30.9.2000 | 123 |
| 60. | ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ. | ಸಿಆಸುಇ 02 ರಾರಾಆ 2000, ದಿನಾಂಕ:1.3.2000 | 124 |
| 61. | ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದಂತಹ ದೂರವಾಣಿ ಕರೆಗಳನ್ನು ಹಿಂತಿರುಗಿಸುವ ಬಗ್ಗೆ. | ಸಿಆಸುಇ 13 ರಾರಾಆ 99, ದಿನಾಂಕ:27.4.2000 | 125 |
| 62. | ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಸಂಸತ್ ಸದಸ್ಯರುಗಳು ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ. | ಸಿಆಸುಇ 29 ರಾರಾಆ 2000, ದಿನಾಂಕ:17.4.2000 | 126 |
| 63. | ಮುಖ್ಯಮಂತ್ರಿಯವರು ಹಾಗೂ ಇತರೆ ಸಚಿವರುಗಳ ಪ್ರವಾಸ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ. | ಸಿಆಸುಇ 46 ರಾರಾಆ 99, ದಿನಾಂಕ:28.4.2000 | 127 |
| 64. | ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ. | ಸಿಆಸುಇ 02 ರಾರಾಆ 1998, ದಿನಾಂಕ:20.3.1998 | 128 |
| 65. | ವಿರೋಧ ಪಕ್ಷದ ನಾಯಕರುಗಳಿಗೆ ಸೌಜನ್ಯ ತೋರಿಸುವ ಬಗ್ಗೆ. | ಸಿಆಸುಇ 50 ರಾರಾಆ 97, ದಿನಾಂಕ:28.7.97 | 129 |
| 66. | ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ವೇದಿಕೆಯ ಮೇಲೆ ಉಪಸ್ಥಿತರಿರುವ ಬಗ್ಗೆ. | ಸಿಆಸುಇ 97 ಶಿಸನೇ 96, ದಿನಾಂಕ:4.3.1997 | 130 |
| 67. | ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಅಧಿಕಾರಿಗಳನ್ನು ಭೇಟಿ ಮಾಡಿದಾಗ ಅವರಿಗೆ ಸೌಜನ್ಯ ಮತ್ತು ಗೌರವ ತೋರಿಸುವ ಬಗ್ಗೆ. | ಸಿಆಸುಇ 75 ರಾರಾಆ 96, ದಿನಾಂಕ:15.11.96 | 131 |
| 68. | ಸಂಸತ್ ಸದಸ್ಯರು ಹಾಗೂ ಶಾಸಕರುಗಳಿಗೆ ಸೌಜನ್ಯ ಮತ್ತು ಗೌರವ ನೀಡುವ ಬಗ್ಗೆ | ಸಿಆಸುಇ 28 ರಾರಾಆ 95, ದಿನಾಂಕ:10.4.1995 | 132 |
| 69. | ಸ್ಥಳೀಯ ಶಾಸಕರನ್ನು ಹಾಗೂ ಸಂಸತ್ ಸದಸ್ಯರನ್ನು ಸರ್ಕಾರದ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸುವ ಬಗ್ಗೆ. | ಸಿಆಸುಇ 02 ರಾರಾಆ 1993, ದಿನಾಂಕ:15.1.1993 | 133 |
| 70. | ಸ್ಥಳೀಯ ಶಾಸಕರನ್ನು ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರನ್ನು ಸರ್ಕಾರದ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸುವ ಬಗ್ಗೆ ಹಾಗೂ ಅವರುಗಳಿಗೆ ತೋರಿಸಬೇಕಾದ ಗೌರವ ಮತ್ತು ಸೌಜನ್ಯತೆಯ ಬಗ್ಗೆ. | ಸಿಆಸುಇ 02 ರಾರಾಆ 93, ದಿನಾಂಕ:16.4.1993 | 134-135 |

| | | | |
|---|---|---|---|
| 71. | ಮುಖ್ಯಮಂತ್ರಿಗಳು / ಮಂತ್ರಿಗಳು / ರಾಜ್ಯ ಮಂತ್ರಿಗಳು ಪ್ರವಾಸದಲ್ಲಿದ್ದಾಗ ವಿಹಿತಾಚಾರಗಳ ಬಗ್ಗೆ ಅಧಿಕಾರಿಗಳಿಗೆ ಸೂಚನೆಗಳು | ಸಿಆಸುಇ 63 ಇಆಸು 1993, ದಿನಾಂಕ:24.4.1993 | 136 |
| 72. | ಸಂಸತ್ ಸದಸ್ಯರು ಶಾಸಕರಿಗೆ ಸೌಜನ್ಯ ಹಾಗೂ ಗೌರವ ನೀಡುವುದು ಮತ್ತು ಅವರ ಅಭಿಪ್ರಾಯಗಳನ್ನು ಪಡೆಯುವುದರ ಬಗ್ಗೆ. | ಸಿಆಸುಇ 47 ರಾರಾಆ 93, ದಿನಾಂಕ:25.6.1993 | 137 |
| 73. | ಸಚಿವರುಗಳು, ರಾಜ್ಯ ಸಚಿವರುಗಳ ವಿಧಾನ ಮಂಡಲದ ವರಿಷ್ಠರು, ಲೋಕ ಸಭೆ ಮತ್ತು ರಾಜ್ಯ ಸಭಾ ಸದಸ್ಯರು, ವಿಧಾನ ಪರಿಷತ್ತು ಮತ್ತು ವಿಧಾನ ಸಭಾ ಸದಸ್ಯರುಗಳಿಗೆ ಆದ್ಯತಾ ಪಟ್ಟಿಯಲ್ಲಿ ನಿಗದಿಪಡಿಸಲಾಗಿರುವ ಸ್ಥಾನದ ನಮೂದಿಸುವಿಕೆ ಮತ್ತು ಶಂಕು ಸ್ಥಾಪನೆ ಅಥವಾ ಪ್ರಾರಂಭೋತ್ಸವ ಇತ್ಯಾದಿಗಳಿಗೆ ಶಿಲೆಗಳಲ್ಲಿ ಅಥವಾ ಆಹ್ವಾನ ಪತ್ರಿಕೆಗಳಲ್ಲಿ ಸಹ ಇದೇ ಆದ್ಯತೆ ಅನುಸರಿಸುವ ಬಗ್ಗೆ. | ಸಿಆಸುಇ 49 ರಾರಾಆ 93, ದಿನಾಂಕ:3.7.1993 | 138 |
| 74. | ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ – ನಿರ್ದೇಶನ. | ಸಿಆಸುಇ 18 ರಾರಾಆ 1991, ದಿನಾಂಕ:8.1.1992 | 139 |
| 75. | ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ | ಸಿಆಸುಇ 08 ರಾರಾಆ 1992, ದಿನಾಂಕ:23.4.1992 | 140 |
| 76. | ಸಂಸತ್ ಸದಸ್ಯರುಗಳಿಗೆ, ಶಾಸಕರುಗಳಿಗೆ ಅಧಿಕಾರಿಗಳು ತೋರಿಸಬೇಕಾದ ಗೌರವ ಮತ್ತು ಸೌಜನ್ಯತೆಯ ಬಗ್ಗೆ. | ಸಿಆಸುಇ 35 ರಾಕಾವ್ಯ 1991, ದಿನಾಂಕ:20.7.1991 | 141 |
| 77. | ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ- ಶಾಸಕರು ಮತ್ತು ಸಂಸತ್ ಸದಸ್ಯರುಗಳ ಆಸನ ವ್ಯವಸ್ಥೆ-ಗೌರವದಿಂದ ಕಂಡು ವಿಳಂಬ ಮಾಡದೆ ಕೆಲಸ ಮಾಡಿಕೊಡುವ ಬಗ್ಗೆ – ಸೂಚನೆಗಳು. | ಸಿಆಸುಇ 23 ರಾಕಾವ್ಯ 90, ದಿನಾಂಕ:21.6.1990 | 142 |
| 78. | ಸಂಸತ್ ಸದಸ್ಯರುಗಳಿಗೆ ಶಾಸಕರುಗಳಿಗೆ ಅಧಿಕಾರಿಗಳು ತೋರಿಸುವ ಸೌಜನ್ಯದ ಬಗ್ಗೆ ಮತ್ತು ಸರ್ಕಾರದ ಎಲ್ಲಾ ಸಮಾರಂಭಗಳಿಗೆ ಸದಸ್ಯರುಗಳನ್ನು ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ – ಸೂಚನೆಗಳು. | ಡಿಪಿಎಆರ್ 44 ಪಿಎಲ್ಎಕ್ಸ್ 87, ದಿನಾಂಕ:25.3.1987 | 143 |
| 79. | ಸರ್ಕಾರದ ಮತ್ತು ಸಂಸತ್ ಹಾಗೂ ರಾಜ್ಯದ ಶಾಸಕಾಂಗ ಸದಸ್ಯರ ನಡುವಿನ ಅಧಿಕೃತ ಕಲಾಪಗಳು ಸಾರ್ವ ಜನಿಕ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ - ಸೂಚನೆಗಳು | ಡಿಪಿಎಆರ್ 115 ಪಿಎಲ್ಎಕ್ಸ್ 86, ದಿನಾಂಕ:23.9.1986 | 144 |

| | | | |
|---|---|---|---|
| 80. | ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳ ನಡುವಣ ಸರ್ಕಾರ ವ್ಯವಹಾರಗಳು - ಸರ್ಕಾರಿ ಸಮಾರಂಭಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವುದು – ಸೂಚನೆಗಳು – ಕುರಿತು | ಡಿಪಿಎಆರ್ 119 ಪಿಎಲ್ಎಕ್ಸ್ 1984, ದಿನಾಂಕ:8.2.1985 | 145 |
| 81. | ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮೀಕ್ಷಣಾ ಸಭೆಗಳು. | ಡಿಪಿಎಆರ್ 113 ಎಎಆರ್ 85, ದಿನಾಂಕ: 6.12.1985 | 146 |
| 82. | ಮುಖ್ಯಮಂತ್ರಿ / ಸಚಿವರು / ರಾಜ್ಯ ಮಂತ್ರಿಗಳ ಪ್ರವಾಸ ಅಧಿಕಾರಿಗಳಿಗೆ ಸೂಚನೆ. | DPAR 55 AAR 82, Dated: 18.5.1982 | 147-148 |
| 83. | ಶಾಸಕರುಗಳು, ಸಚಿವರ ಆಪ್ತ ಕಾರ್ಯದರ್ಶಿ ಮತ್ತು ಆಪ್ತ ಸಹಾಯಕರುಗಳಿಗೆ ಸೂಚನೆಗಳು. | ಡಿಪಿಎಆರ್ 53 ಎಎಆರ್ 79, ದಿನಾಂಕ: 21.6.1979 | 149 |
| 84. | Official dealings between the Administration and Members of Parliament and State Legislatures Observance of proper procedure. | DPAR 31 PLX 1978, Dated: 29.3.1978 | 150 |
| 85. | ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳ ನಡುವಣ ಸರ್ಕಾರಿ ವ್ಯವಹಾರಗಳು ಸರ್ಕಾರಿ ಸಮಾರಂಭಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ಬಗೆಗಿನ ಸೂಚನೆಗಳನ್ನು ಕುರಿತು | ಡಿಪಿಎಆರ್ 17 ಪಿಎಲ್ಎಕ್ಸ್ 77, ದಿನಾಂಕ25.8.1977 | 151 |
| 86. | ಆಡಳಿತ ವರ್ಗ ಮತ್ತು ಸಂಸತ್ ಹಾಗೂ ವಿಧಾನ ಮಂಡಲಗಳ ನಡುವಣ ಸರ್ಕಾರಿ ವ್ಯವಹಾರಗಳು – ಸೂಕ್ತ ಕಾರ್ಯ ವಿಧಾನದ ಪಾಲನೆ ಸೂಚನೆಗಳು ಕುರಿತು. | ಜಿಎಡಿ 4 ಪಿಎಲ್ಎಕ್ಸ್ 1975, ದಿನಾಂಕ: 19.5.1975 | 152-153 |
| 87. | Official dealings between the Administration and Members of Parliament and State Legislatures-Observance of proper procedure-Instructions-regarding. | GAD 4 PLX 75 Dated: 19.05.1975 | 154-155 |

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:06.03.2019

## ಸುತ್ತೋಲೆ

**ವಿಷಯ:** ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ಹೊರಡಿಸುವ ಕುರಿತು.

*****

ಸರ್ಕಾರಿ ಸಭೆ ಮತ್ತು ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಸರ್ಕಾರವು ಸುತ್ತೋಲೆ / ಆದೇಶ / ಜ್ಞಾಪನ ಪತ್ರಗಳಲ್ಲಿ ಮಾರ್ಗಸೂಚಿಗಳನ್ನು ಕಾಲಕಾಲಕ್ಕೆ ಹೊರಡಿಸಿರುತ್ತದೆ. ಈ ಎಲ್ಲಾ ಸುತ್ತೋಲೆಗಳನ್ನು ಹಿಂಪಡೆದು ಹೊಸದಾಗಿ ಸಮಗ್ರವಾದ ಸೂಚನೆಗಳನ್ನು ಈ ಕೆಳಕಂಡಂತೆ ನೀಡಿದೆ.

### ಸಾಮಾನ್ಯ ಸೂಚನೆಗಳು

1. ಈ ಸೂಚನೆಗಳು ರಾಜ್ಯ ಸರ್ಕಾರದ ವತಿಯಿಂದ ನಡೆಸುವ ರಾಜ್ಯ / ಜಿಲ್ಲಾ / ತಾಲ್ಲೂಕು ಮಟ್ಟದ ಸಮಾರಂಭಗಳಿಗೆ ಮತ್ತು ರಾಜ್ಯದ ಧನ ಸಹಾಯದಿಂದ ಸ್ಥಾಪಿಸಲ್ಪಟ್ಟ ರಾಜ್ಯ ಮಟ್ಟದ ಸಹಕಾರಿ ಸಂಘಗಳು ಹಾಗೂ ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳಿಗೆ ಅನ್ವಯಿಸುತ್ತವೆ.
2. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಒಳಗೊಂಡಂತೆ ಸರ್ಕಾರದ ಆ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಇಲಾಖೆಯ ಸಚಿವರ ಸಮಾಲೋಚನೆಯೊಂದಿಗೆ ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸತಕ್ಕದ್ದು.
3. ಸರ್ಕಾರಿ ಕಾರ್ಯಕ್ರಮವನ್ನು ನಡೆಸಲು ಕನಿಷ್ಟ ಪಕ್ಷ 7 ದಿವಸಗಳ ಸಮಯಾವಕಾಶವನ್ನು ನೀಡುವಂತೆ ಜಿಲ್ಲಾ ಸಚಿವರುಗಳಿಗೆ ಕೋರುವುದು.
4. ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಬದಲಾಗಿ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರೇ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸಬಾರದು.
5. ಯಾವುದೇ ಸರ್ಕಾರಿ ಸಭೆ ಅಥವಾ ಕಾರ್ಯಕ್ರಮವನ್ನು ಖಾಸಗಿ ನಿವಾಸದಲ್ಲಿ ಏರ್ಪಡಿಸುವಂತಿಲ್ಲ.

### ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವ ಬಗ್ಗೆ

6. ಸರ್ಕಾರದ ಯಾವುದೇ ಕಾರ್ಯಕ್ರಮವಾಗಿದ್ದರೂ ಸಾಮಾನ್ಯವಾಗಿ ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಗೊಳಪಡುವ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸುವುದು. ಆದರೆ ಕೆಲವೊಂದು ಸಂದರ್ಭದಲ್ಲಿ ಒಂದು ವಿಧಾನಸಭಾ ಕ್ಷೇತ್ರದ ಸ್ಥಳೀಯ ಕಾರ್ಯಕ್ರಮವನ್ನು ಸದರಿ ವಿಧಾನಸಭಾ ಕ್ಷೇತ್ರದ ಹೋಬಳಿ / ಪ್ರದೇಶವಿರುವ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಆಯೋಜಿಸಿದಾಗ, ಸದರಿ ತಾಲ್ಲೂಕು ಕೇಂದ್ರ ಸ್ಥಾನವು ಇನ್ನೊಂದು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದರೂ ಸಹ ಅಂತಹ ಕಾರ್ಯಕ್ರಮವು ಯಾವ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಿರುತ್ತದೆಯೋ ಆ ಸಂಬಂಧಪಟ್ಟ ಶಾಸಕರು ಅಧ್ಯಕ್ಷತೆಯನ್ನು ವಹಿಸುವುದು.

7. ಕೆಲವೊಮ್ಮೆ ಕಾರಣಾಂತರಗಳಿಂದ ವಿಧಾನಸಭಾ ಸದಸ್ಯರ ಸ್ಥಾನವು ತೆರವಾದ ಸಂದರ್ಭದಲ್ಲಿ ಸರ್ಕಾರಿ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಕೆಳಕಂಡಂತೆ ವಹಿಸುವುದು.

i ಸರ್ಕಾರಿ ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯ ಮಂತ್ರಿಯವರು ಉದ್ಘಾಟಿಸಿದಾಗ ಜಿಲ್ಲಾ ಸಚಿವರು ಅಧ್ಯಕ್ಷತೆಯನ್ನು ವಹಿಸುವುದು.

ii ಸಂಬಂಧಪಟ್ಟ ಜಿಲ್ಲಾ ಸಚಿವರು ಉದ್ಘಾಟಿಸಿದಾಗ ಇಲಾಖಾ ಸಚಿವರು ಅಧ್ಯಕ್ಷತೆಯನ್ನು ವಹಿಸುವುದು.

iii ಜಿಲ್ಲಾ ಸಚಿವರು ಸರ್ಕಾರಿ ಕಾರ್ಯಕ್ರಮಗಳನ್ನು ಉದ್ಘಾಟಿಸಿದಾಗ, ಇಲಾಖಾ ಸಚಿವರು ಹಾಜರಾಗದೇ ಇರುವ ಸಂದರ್ಭಗಳಲ್ಲಿ, ಜಿಲ್ಲಾ ಸಚಿವರೇ ಅಧ್ಯಕ್ಷತೆಯನ್ನು ಸಹ ವಹಿಸುವುದು.

## **ಕಾರ್ಯಕ್ರಮಕ್ಕೆ ಆಹ್ವಾನಿಸುವ ಬಗ್ಗೆ**

8. ಕಾರ್ಯಕ್ರಮಕ್ಕನುಗುಣವಾಗಿ ಈ ಕೆಳಕಂಡಂತೆ ಜನಪ್ರತಿನಿಧಿಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕೆಂದು ಸೂಚಿಸಿದೆ.

**ತಾಲ್ಲೂಕು ಮಟ್ಟದ ಕಾರ್ಯಕ್ರಮ:**

- ಜಿಲ್ಲಾ ಉಸ್ತುವಾರಿ ಸಚಿವರುಗಳು.
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ಸಂಬಂಧಪಟ್ಟ ಕ್ಷೇತ್ರದ ವಿಧಾನ ಸಭಾ ಕ್ಷೇತ್ರದ ಶಾಸಕರು (ಅಧ್ಯಕ್ಷತೆ)
- ತಾಲ್ಲೂಕನ್ನು ಪ್ರತಿನಿಧಿಸುವ ಸಂಸದರು (ಆ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿರುವ ರಾಜ್ಯಸಭಾ ಸದಸ್ಯರು ಸೇರಿದಂತೆ).
- ತಾಲ್ಲೂಕನ್ನು ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ತಾಲ್ಲೂಕಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ತಾಲ್ಲೂಕುಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ತಾಲ್ಲೂಕು ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು / ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

**ಜಿಲ್ಲಾ ಮಟ್ಟದ ಕಾರ್ಯಕ್ರಮ:**

- ಜಿಲ್ಲಾ ಉಸ್ತುವಾರಿ ಸಚಿವರುಗಳು.
- ಜಿಲ್ಲೆಯ ಇತರೆ ಸಚಿವರುಗಳು.
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ಜಿಲ್ಲೆಯ ಎಲ್ಲಾ ವಿಧಾನ ಸಭಾ ಸದಸ್ಯರುಗಳು (ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆ)
- ಜಿಲ್ಲೆಯ ಎಲ್ಲಾ ಸಂಸದರು (ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ರಾಜ್ಯ ಸಭಾ ಸದಸ್ಯರು ಸೇರಿದಂತೆ).
- ಜಿಲ್ಲೆಯನ್ನು ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾಗಿರುವ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು / ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

**ರಾಜ್ಯ ಮಟ್ಟದ ಕಾರ್ಯಕ್ರಮ:**

- ಮಾನ್ಯ ಮುಖ್ಯಮಂತ್ರಿಗಳು.
- ಉಪ ಮುಖ್ಯಮಂತ್ರಿಗಳು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲೆಯ ಇತರೆ ಸಚಿವರು.
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ವಿರೋಧ ಪಕ್ಷದ ನಾಯಕರು.

- ಕಾರ್ಯಕ್ರಮ ನಡೆಯುವ ಜಿಲ್ಲೆಯ ಸಂಸದರು (ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ರಾಜ್ಯ ಸಭಾ ಸದಸ್ಯರು ಸೇರಿದಂತೆ).
- ಕಾರ್ಯಕ್ರಮ ಜರುಗುವ ಜಿಲ್ಲೆಯಲ್ಲಿನ ಎಲ್ಲಾ ಶಾಸಕರು (ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆ).
- ಕಾರ್ಯಕ್ರಮದ ನಡೆಯುವ ಜಿಲ್ಲೆಯ ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾಗಿರುವ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು / ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

9. ಕಂಡಿಕೆ 8ರಲ್ಲಿ ನಮೂದಿಸಿದ ಜನಪ್ರತಿನಿಧಿ / ಗಣ್ಯ ವ್ಯಕ್ತಿಗಳೊಂದಿಗೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂದರ್ಭಗನುಗುಣವಾಗಿ ಈ ಕೆಳಕಂಡ ಜನಪ್ರತಿನಿಧಿಗಳನ್ನು ಸಹ ಆಹ್ವಾನಿಸತಕ್ಕದ್ದು.

(ಎ) ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಬಿ) ಅದರಂತೆ, ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳು ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಸಿ) ಅದರಂತೆ ಗ್ರಾಮ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳು ಗ್ರಾಮ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಗ್ರಾಮ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಡಿ) ಅದರಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಗರ ಸ್ಥಳೀಯ ಸಂಸ್ಥೆಯ ಸದಸ್ಯರುಗಳನ್ನು ಆಹ್ವಾನಸಿವುದು.

**ಟಿಪ್ಪಣಿ:**

ಮೇಲ್ಕಂಡ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾಗಿರುವ ಜನಪ್ರತಿನಿಧಿಗಳನ್ನು ಹೊರತುಪಡಿಸಿ, ಇತರೆ ಸಚಿವರು / ಜನಪ್ರತಿನಿಧಿಗಳು / ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಲು ಕಾರ್ಯಕ್ರಮದ ಸಂದರ್ಭಕ್ಕನುಗುಣವಾಗಿ ಆಯೋಜಕರು ತೀರ್ಮಾನ ತೆಗೆದುಕೊಳ್ಳತಕ್ಕದ್ದು.

## ಆಹ್ವಾನ ಪತ್ರಿಕೆ ಮುದ್ರಿಸುವ ಬಗ್ಗೆ:

10. ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ, ರಾಜ್ಯ ಆಧ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆದರಿಸಿ ಕೇಂದ್ರ ಸಚಿವರುಗಳು, ರಾಜ್ಯ ಸಂಪುಟ ದರ್ಜೆ ಸಚಿವರುಗಳು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ, ಘನ ಉಪಸ್ಥಿತಿ, ಉದ್ಘಾಟನೆ / ಶಂಕುಸ್ಥಾಪನೆ / ಲೋಕಾರ್ಪಣೆ, ಅಧ್ಯಕ್ಷರು, ಮುಖ್ಯ ಅತಿಥಿಗಳು, ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು. ಇದೇ ಅನುಕ್ರಮದಲ್ಲಿ ಆಹ್ವಾನ ಪತ್ರಿಕೆಯನ್ನು ಮುದ್ರಿಸತಕ್ಕದ್ದು.

11. ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ರಾಜ್ಯ ಆಧ್ಯತಾ ಸೂಚಿ ಪಟ್ಟಿಗೆ ಅನುಗುಣವಾಗಿಯೇ ಮುದ್ರಿಸಬೇಕು. ಈ ಆದ್ಯತಾಸೂಚಿ ಪಟ್ಟಿಯನ್ನು ಪರಿಗಣಿಸುವಾಗ ಜನಪ್ರತಿನಿಧಿಗಳು ಹೊಂದಿರುವ ಸ್ಥಾನಮಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆದರೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಟಿಪ್ಪಣಿ 6(ಎ)ರಲ್ಲಿ ತಿಳಿಸಿರುವಂತೆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಆಹ್ವಾನ ಪತ್ರಿಕೆಯಲ್ಲಿ ಘನ ಉಪಸ್ಥಿತಿ, ಉದ್ಘಾಟನೆ / ಶಂಕುಸ್ಥಾಪನೆ / ಲೋಕಾರ್ಪಣೆಯ ನಂತರ ನಮೂದಿಸುವುದು.

12. 2018ರ ಆದ್ಯತಾ ಸೂಚಿಪಟ್ಟಿಯ ಪ್ರಕಾರ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಕ್ರಮ ಸಂಖ್ಯೆ:21 ಅನುಚ್ಛೇದದಲ್ಲಿ ಹಾಗೂ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರುಗಳು ಕ್ರಮ ಸಂಖ್ಯೆ:21(ಎ) ಅನುಚ್ಛೇದದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಭಾರತ ಸರ್ಕಾರದ ಗೃಹ ಮಂತ್ರಾಲಯವು "as per the practice the person who has served more than one term continuously are placed higher in the Table of Precedence (ToP)" ಎಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಆದ್ಯತಾಸೂಚಿ ಪಟ್ಟಿಯಲ್ಲಿ

ಒಂದೇ ಅನುಚ್ಛೇದದಲ್ಲಿರುವ ಹುದ್ದೆಗಳ ನಡುವೆ ಆದ್ಯತೆ ನೀಡುವಾಗ ಲೋಕಸಭಾ ಸದಸ್ಯರ ನಂತರ ರಾಜ್ಯಸಭಾ ಸದಸ್ಯರು ಹಾಗೂ ವಿಧಾನ ಸಭಾ ಸದಸ್ಯರ ನಂತರ ವಿಧಾನ ಪರಿಷತ್ತು ಸದಸ್ಯರು ಎಂಬ ಎರಡು ವಿಂಗಡನೆಗಳಾಗಿ ಮಾಡಿಕೊಳ್ಳದೇ ಯಾವ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಪರಸ್ಪರ ಆದ್ಯತೆಯನ್ನು ನಿಗದಿಪಡಿಸುವಾಗ ಮೇಲಿನ ಸ್ಥಾನವನ್ನು ನಿಗದಿಪಡಿಸುವುದು.

**ಟಿಪ್ಪಣಿ**

ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮ ನಡೆಯುವ ಸ್ಥಳದ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸದರನ್ನು ಮೊದಲಿಗೆ ಹಾಕುವುದು, ತದನಂತರ ಉಳಿದ ಸಂಸದರುಗಳನ್ನು (ಲೋಕಸಭಾ ಮತ್ತು ರಾಜ್ಯ ಸಭಾ ಸಂಸದರನ್ನೊಳಗೊಂಡಂತೆ) ಆದ್ಯತಾ ಪಟ್ಟಿಯ ಪ್ರಕಾರ ನಮೂದು ಮಾಡುವುದು.

13. ಸರ್ಕಾರದ ಸಮಾರಂಭಗಳ ಆಮಂತ್ರಣ ಪತ್ರಿಕೆಯಲ್ಲಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು) ಮತ್ತು ಶಾಸಕರು (ವಿಧಾನ ಸಭೆ) ಎಂದು ಹಾಗೂ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸಧಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ ಸಂಸದರು (ಲೋಕಸಭೆ) ಮತ್ತು ಸಂಸದರು (ರಾಜ್ಯಸಭೆ) ಎಂದು ನಮೂದು ಮಾಡುವುದು.

14. ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸಮಾರಂಭ ಏರ್ಪಡಿಸುವ ಮುನ್ನ ಆಹ್ವಾನ ಪತ್ರಿಕೆಗೆ ಆಯಾ ಜಿಲ್ಲಾಧಿಕಾರಿಗಳ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕು.

15. ಸರ್ಕಾರದ ಸಮಾರಂಭವನ್ನು ಏರ್ಪಡಿಸುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು ಸಂಸತ್ತಿನ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೇ ಆಹ್ವನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದಲ್ಲದೇ, ಇಲಾಖೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು.

16. ಆಹ್ವಾನ ಪತ್ರಿಕೆಗಳನ್ನು ಮುದ್ರಿಸದಿದ್ದ ಪಕ್ಷದಲ್ಲಿ ಕನಿಷ್ಠ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ ಸದಸ್ಯರುಗಳನ್ನು ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಹಾಗೂ ಇತರರನ್ನು ಸಮಾರಂಭಕ್ಕೆ ಆಹ್ವಾನಿಸಬೇಕು.

17. ಶಂಕುಸ್ಥಾಪನೆ / ಉದ್ಘಾಟನೆ ಇತ್ಯಾದಿಗಳಿಗೆ ಸಂಬಂಧಪಟ್ಟ ಶಿಲೆಗಳಲ್ಲೂ ಸಹ ಆಹ್ವಾನ ಪತ್ರಿಕೆಯಲ್ಲಿರುವ ಹೆಸರುಗಳನ್ನು ಅದೇ ಆದ್ಯತೆಯಲ್ಲಿ ನಮೂದಿಸಬೇಕು.

**ಆಸನ ವ್ಯವಸ್ಥೆ**

18. ಆಸನ ವ್ಯವಸ್ಥೆ ಮಾಡುವಾಗಲೂ ರಾಜ್ಯ ಆಧ್ಯತಾ ಪಟ್ಟಿಯ ಪ್ರಕಾರವೇ ಗಣ್ಯರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು. ಆದ್ದರಿಂದ, ಆಹ್ವಾನ ಪತ್ರಿಕೆಯನ್ನು ಆದ್ಯತಾಪಟ್ಟಿಯ ಮೇರೆಗೆ ಮುದ್ರಿಸುವುದರಿಂದ ಆಸನ ವ್ಯವಸ್ಥೆಯನ್ನು ಆಹ್ವಾನ ಪತ್ರಿಕೆಯ ಅನುಗುಣವಾಗಿ ಮಾಡುವುದು.

19. ಸಾಮಾನ್ಯವಾಗಿ ಶಿಷ್ಟಾಚಾರದಂತೆ, ಅನುಸರಿಸಬೇಕಾದ ಆಸನ ವ್ಯವಸ್ಥೆಯನ್ನು ಕೆಳಕಂಡಂತೆ ನೀಡಲಾಗಿದೆ.

| | | | | | | | | | | |
|---|---|---|---|---|---|---|---|---|---|---|
| 10 | 8 | 6 | 4 | 2 | 1 | 3 | 5 | 7 | 9 | 11 |

ಮೇಲ್ಕಂಡಂತೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯ ಪ್ರಕಾರ ಮೊದಲಿಗರೋ ಯಾರೋ ಅವರನ್ನು ಮಧ್ಯದಲ್ಲಿ (ಆಸನ ಸಂಖ್ಯೆ:1) ಕೂರಿಸಬೇಕು ಅವರ ನಂತರ ಆಹ್ವಾನ ಪತ್ರಿಕೆಯ ಅನುಗುಣವಾಗಿ ಉಳಿದ ಗಣ್ಯರನ್ನು ಬಲ ಮತ್ತು ಎಡ ಭಾಗದಲ್ಲಿ ಮೇಲ್ಕಂಡಂತೆ ಆಸನ ವ್ಯವಸ್ಥೆಯನ್ನು ಮಾಡಬೇಕು.

20. ಕಾರ್ಯಕ್ರಮಗಳಿಗೆ ತಡವಾಗಿ ಬರುವ ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ ಆಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅವರಿಗಾಗಿ ಪ್ರತ್ಯೇಕವಾಗಿರಿಸಿದ ಆಸನಗಳನ್ನು ಸಮಾರಂಭ ಮುಗಿಯುವವರೆಗೂ ಕಾದಿರಿಸತಕ್ಕದ್ದು. ಹಾಗೂ ಆ ಆಸನಗಳು ಖಾಲಿಯಿದ್ದಾಗ್ಯೂ ಅವುಗಳನ್ನು ಇತರರು ಉಪಯೋಗಿಸಿಕೊಳ್ಳತಕ್ಕದಲ್ಲ.

21. ಸರ್ಕಾರಿ ಅಧಿಕಾರಿಗಳು ಸಾಮಾನ್ಯವಾಗಿ ಯಾವುದೇ ಸರ್ಕಾರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಉದ್ಘಾಟಿಸುವುದನ್ನು ನಿಷೇಧಿಸಿದೆ. ಆದರೆ, ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಇನ್ನಿತರ ಸರ್ಕಾರಿ ಕಾರ್ಯಕ್ರಮಗಳಾದ ಜಯಂತಿ / ಉತ್ಸವ / ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಯಲ್ಲಿ ನಮೂದಿಸಿದ ಯಾವುದೇ ಜನಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಹಾಜರಾಗದೇ ಇದ್ದ ಸಂದರ್ಭದಲ್ಲಿ ಮಾತ್ರ ಅಧ್ಯಕ್ಷತೆ ವಹಿಸಬಹುದು ಮತ್ತು ಉದ್ಘಾಟನೆ ಮಾಡಬಹುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಅದಿಕಾರಿಗಳು ಕಾರ್ಯಕ್ರಮದ ವೇದಿಕೆ ಮೇಲೆ ಉಪಸ್ಥಿತರಿರಬಹುದು.

**ವಿಶೇಷ ಸೂಚನೆಗಳು:**

22. ನ್ಯಾಯಾಲಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕುರಿತಾಗಿ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದನ್ವಯ ಕ್ರಮವನ್ನು ಕೈಗೊಳ್ಳುವುದು.
23. ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಭಾಗವಹಿಸುವ ಕಾರ್ಯಕ್ರಮಗಳನ್ನು ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ಕಾರ್ಯಾಲಯದ ಅನುಮೋದನೆಯಂತೆ ನಡೆಸುವುದು.
24. ಕೇಂದ್ರ ಸರ್ಕಾರದ ಸಮಾರಂಭಗಳಿಗೆ ಸಂಸತ್ತು ಸದಸ್ಯರನ್ನು ಆಹ್ವಾನಿಸುವ ರೀತಿಯಲ್ಲಿಯೇ ಸ್ಥಳೀಯ ಚುನಾಯಿತ ಪ್ರತಿನಿಧಿಗಳಾದ ವಿಧಾನಮಂಡಲದ ಸದಸ್ಯರುಗಳನ್ನು ಶಿಷ್ಟಾಚಾರದನ್ವಯ ತಪ್ಪದೇ ಆಹ್ವಾನಿಸುವುದು.
25. ಗಣರಾಜ್ಯೋತ್ಸವ ಹಾಗೂ ಸ್ವತಂತ್ರ್ಯ ದಿನಾಚರಣೆ ದಿನಗಳಂದು ಯಾರು ಧ್ವಜಾರೋಹಣ ಮಾಡಬೇಕು ಎನ್ನುವ ಬಗ್ಗೆ ಭಾರತ ಸರ್ಕಾರ ಹೊರಡಿಸಿದ ಸುತ್ತೋಲೆಗಳಲ್ಲಿ ನೀಡಲಾದ ನಿರ್ದೇಶನವನ್ನು ಮುಂದುವರೆಸಿಕೊಂಡು ಹೋಗುವುದು.
26. ಸರ್ಕಾರಿ ಆದೇಶಗಳಲ್ಲಿ ಶಾಸಕರು ಅಥವಾ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟು ಸಮೀಕ್ಷಣಾ ಸಭೆಗಳನ್ನು ನಡೆಸಬಹುದು. ಇದನ್ನು ಹೊರತುಪಡಿಸಿ ಶಾಸಕರೇ ಆಗಲೀ ಇತರೇ ಖಾಸಗಿ ಪ್ರಮುಖರೇ ಆಗಲೀ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವಂತಿಲ್ಲ. ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ಕರೆಯಲು ಅವಕಾಶವಿರುವುದಿಲ್ಲ. ಆದರೆ, ಅಗತ್ಯ ಮಾಹಿತಿಯನ್ನು ಸೂಕ್ತವಾಗಿ ಒದಗಿಸಬಹುದಾಗಿದೆ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರ ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.
27. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ತರಬೇತಿ ನೀಡುವುದು. ಶಿಷ್ಟಾಚಾರ ಲೋಪವಾದ ಪ್ರಕರಣಗಳಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮಕೈಗೊಳ್ಳಲಾಗುವುದೆಂದು ಸಂಬಂಧಪಟ್ಟವರಿಗೆಲ್ಲ ತಿಳಿಸತಕ್ಕದ್ದು, ಸಂಬಂಧಪಟ್ಟ ಅಧಿಕಾರಿಗಳಲ್ಲದೇ ಶಿಷ್ಟಾಚಾರ ಪಾಲಿಸುವುದರಲ್ಲಿ ವಿಫಲರಾದ, ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಿದೆ.

**(ಟಿ.ಎಂ. ವಿಜಯಭಾಸ್ಕರ)**
**ಸರ್ಕಾರದ ಮುಖ್ಯ ಕಾರ್ಯದರ್ಶಿ**

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಎಲ್ಲಾ ವಿಭಾಗಾಧಿಕಾರಿಗಳು.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ).

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:16.04.2019

## ಸುತ್ತೋಲೆ

**ವಿಷಯ:** ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ಹೊರಡಿಸುವ ಕುರಿತು.

*****

ಸರ್ಕಾರಿ ಸಭೆ ಮತ್ತು ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಈಗಾಗಲೇ ಸಮಗ್ರವಾದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018(1), ದಿನಾಂಕ:06.03.2019ರಡಿ ಹೊರಡಿಸಲಾಗಿದೆ. ಸದರಿ ಸುತ್ತೋಲೆಗೆ ಕೆಲವೊಂದು ಅಂಶಗಳನ್ನು ಸೇರಿಸಬೇಕಾಗಿರುವುದರಿಂದ, ಈ ಪರಿಷ್ಕೃತ ಸುತ್ತೋಲೆಯನ್ನು ಹೊರಡಿಸಿದೆ. ಹೊಸದಾಗಿ ಸೇರಿಸಿದ ಅಂಶಗಳನ್ನು ಅನುಕ್ರಮ ಸಂಖ್ಯೆ:11ರ ಕೆಳಗಡೆ ದಪ್ಪ ಅಕ್ಷರಗಳಿಂದ ನಮೂದಿಸಿದೆ.

### ಸಾಮಾನ್ಯ ಸೂಚನೆಗಳು

1. ಈ ಸೂಚನೆಗಳು ರಾಜ್ಯ ಸರ್ಕಾರದ ವತಿಯಿಂದ ನಡೆಸುವ ರಾಜ್ಯ / ಜಿಲ್ಲಾ / ತಾಲ್ಲೂಕು ಮಟ್ಟದ ಸಮಾರಂಭಗಳಿಗೆ ಮತ್ತು ರಾಜ್ಯದ ಧನ ಸಹಾಯದಿಂದ ಸ್ಥಾಪಿಸಲ್ಪಟ್ಟ ರಾಜ್ಯ ಮಟ್ಟದ ಸಹಕಾರಿ ಸಂಘಗಳು ಹಾಗೂ ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ನಡೆಸುವ ಕಾರ್ಯಕ್ರಮಗಳಿಗೆ ಅನ್ವಯಿಸುತ್ತವೆ.
2. ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಒಳಗೊಂಡಂತೆ ಸರ್ಕಾರದ ಆ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ, ಸಂಬಂಧಪಟ್ಟ ಇಲಾಖೆಯ ಸಚಿವರ ಸಮಾಲೋಚನೆಯೊಂದಿಗೆ ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸತಕ್ಕದ್ದು.
3. ಸರ್ಕಾರಿ ಕಾರ್ಯಕ್ರಮವನ್ನು ನಡೆಸಲು ಕನಿಷ್ಠ ಪಕ್ಷ 7 ದಿವಸಗಳ ಸಮಯಾವಕಾಶವನ್ನು ನೀಡುವಂತೆ ಜಿಲ್ಲಾ ಸಚಿವರಿಗೆ ಕೋರುವುದು.
4. ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಬದಲಾಗಿ ಜನಪ್ರತಿನಿಧಿಗಳು ಹಾಗೂ ಸಾರ್ವಜನಿಕರೇ ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸಬಾರದು.
5. ಯಾವುದೇ ಸರ್ಕಾರಿ ಸಭೆ ಅಥವಾ ಕಾರ್ಯಕ್ರಮವನ್ನು ಖಾಸಗಿ ನಿವಾಸದಲ್ಲಿ ಏರ್ಪಡಿಸುವಂತಿಲ್ಲ.

### ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವ ಬಗ್ಗೆ

6. ಸರ್ಕಾರದ ಯಾವುದೇ ಕಾರ್ಯಕ್ರಮವಾಗಿದ್ದರೂ ಸಾಮಾನ್ಯವಾಗಿ ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಗೊಳಪಡುವ ವಿಧಾನ ಸಭಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸುವುದು. ಆದರೆ ಕೆಲವೊಂದು ಸಂದರ್ಭದಲ್ಲಿ ಒಂದು ವಿಧಾನಸಭಾ ಕ್ಷೇತ್ರದ ಸ್ಥಳೀಯ ಕಾರ್ಯಕ್ರಮವನ್ನು ಸದರಿ ವಿಧಾನಸಭಾ ಕ್ಷೇತ್ರದ ಹೋಬಳಿ / ಪ್ರದೇಶವಿರುವ ತಾಲ್ಲೂಕಿನ ಕೇಂದ್ರ ಸ್ಥಾನದಲ್ಲಿ ಆಯೋಜಿಸಿದಾಗ, ಸದರಿ ತಾಲ್ಲೂಕು ಕೇಂದ್ರ ಸ್ಥಾನವು ಇನ್ನೊಂದು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದ್ದರೂ ಸಹ ಅಂತಹ ಕಾರ್ಯಕ್ರಮಗಳಲ್ಲಿ, ಕಾರ್ಯಕ್ರಮವು ಯಾವ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಿರುತ್ತದೆಯೋ ಆ ಸಂಬಂಧಪಟ್ಟ ಶಾಸಕರು ಅಧ್ಯಕ್ಷತೆಯನ್ನು ವಹಿಸುವುದು.
7. ಕೆಲವೊಮ್ಮೆ ಕಾರಣಾಂತರಗಳಿಂದ ವಿಧಾನಸಭಾ ಸದಸ್ಯರ ಸ್ಥಾನವು ತೆರವಾದ ಸಂದರ್ಭದಲ್ಲಿ ಸರ್ಕಾರಿ ಕಾರ್ಯಕ್ರಮಗಳ ಅಧ್ಯಕ್ಷತೆಯನ್ನು ಕೆಳಕಂಡಂತೆ ವಹಿಸುವುದು.

i ಸರ್ಕಾರಿ ಕಾರ್ಯಕ್ರಮಗಳನ್ನು ಮಾನ್ಯ ಮುಖ್ಯ ಮಂತ್ರಿಯವರು ಉದ್ಘಾಟಿಸಿದಾಗ ಜಿಲ್ಲಾ ಸಚಿವರು ಅಧ್ಯಕ್ಷತೆಯನ್ನು ವಹಿಸುವುದು.

ii ಸಂಬಂಧಪಟ್ಟ ಜಿಲ್ಲಾ ಸಚಿವರು ಉದ್ಘಾಟಿಸಿದಾಗ ಇಲಾಖಾ ಸಚಿವರು ಅಧ್ಯಕ್ಷತೆಯನ್ನು ವಹಿಸುವುದು.

iii ಜಿಲ್ಲಾ ಸಚಿವರು ಸರ್ಕಾರಿ ಕಾರ್ಯಕ್ರಮಗಳನ್ನು ಉದ್ಘಾಟಿಸಿದಾಗ, ಇಲಾಖಾ ಸಚಿವರು ಹಾಜರಾಗದೇ ಇರುವ ಸಂದರ್ಭಗಳಲ್ಲಿ, ಜಿಲ್ಲಾ ಸಚಿವರೇ ಅಧ್ಯಕ್ಷತೆಯನ್ನು ಸಹ ವಹಿಸುವುದು.

## ಕಾರ್ಯಕ್ರಮಕ್ಕೆ ಆಹ್ವಾನಿಸುವ ಬಗ್ಗೆ

8. ಕಾರ್ಯಕ್ರಮಕ್ಕನುಗುಣವಾಗಿ ಈ ಕೆಳಕಂಡಂತೆ ಜನಪ್ರತಿನಿಧಿಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕೆಂದು ಸೂಚಿಸಿದೆ.

**ತಾಲ್ಲೂಕು ಮಟ್ಟದ ಕಾರ್ಯಕ್ರಮ:**

- ಜಿಲ್ಲಾ ಉಸ್ತುವಾರಿ ಸಚಿವರುಗಳು.
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ಸಂಬಂಧಪಟ್ಟ ಕ್ಷೇತ್ರದ ವಿಧಾನ ಸಭಾ ಕ್ಷೇತ್ರದ ಶಾಸಕರು (ಅಧ್ಯಕ್ಷತೆ)
- ತಾಲ್ಲೂಕನ್ನು ಪ್ರತಿನಿಧಿಸುವ ಸಂಸದರು (ಆ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡಿರುವ ರಾಜ್ಯಸಭಾ ಸದಸ್ಯರು ಸೇರಿದಂತೆ).
- ತಾಲ್ಲೂಕನ್ನು ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ತಾಲ್ಲೂಕಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ತಾಲ್ಲೂಕುಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ತಾಲ್ಲೂಕು ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು / ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

**ಜಿಲ್ಲಾ ಮಟ್ಟದ ಕಾರ್ಯಕ್ರಮ:**

- ಜಿಲ್ಲಾ ಉಸ್ತುವಾರಿ ಸಚಿವರುಗಳು.
- ಜಿಲ್ಲೆಯ ಇತರೆ ಸಚಿವರುಗಳು.
- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ಜಿಲ್ಲೆಯ ಎಲ್ಲಾ ವಿಧಾನ ಸಭಾ ಸದಸ್ಯರುಗಳು (ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆ).
- ಜಿಲ್ಲೆಯ ಎಲ್ಲಾ ಸಂಸದರು (ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ರಾಜ್ಯ ಸಭಾ ಸದಸ್ಯರು ಸೇರಿದಂತೆ).
- ಜಿಲ್ಲೆಯನ್ನು ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾಗಿರುವ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು / ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

**ರಾಜ್ಯ ಮಟ್ಟದ ಕಾರ್ಯಕ್ರಮ:**

- ಮಾನ್ಯ ಮುಖ್ಯಮಂತ್ರಿಗಳು.
- ಉಪ ಮುಖ್ಯಮಂತ್ರಿಗಳು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲೆಯ ಇತರೆ ಸಚಿವರು.

- ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಇಲಾಖಾ ಸಚಿವರು.
- ವಿರೋಧ ಪಕ್ಷದ ನಾಯಕರು.
- ಕಾರ್ಯಕ್ರಮ ನಡೆಯುವ ಜಿಲ್ಲೆಯ ಸಂಸದರು (ಜಿಲ್ಲೆಯನ್ನು ನೋಡಲ್ ಜಿಲ್ಲೆಯನ್ನಾಗಿ ಆಯ್ಕೆ ಮಾಡಿಕೊಂಡಿರುವ ರಾಜ್ಯ ಸಭಾ ಸದಸ್ಯರು ಸೇರಿದಂತೆ).
- ಕಾರ್ಯಕ್ರಮ ಜರುಗುವ ಜಿಲ್ಲೆಯಲ್ಲಿನ ಎಲ್ಲಾ ಶಾಸಕರು (ಕಾರ್ಯಕ್ರಮ ನಡೆಯುವ ಸ್ಥಳದ ವ್ಯಾಪ್ತಿಯ ಶಾಸಕರ ಅಧ್ಯಕ್ಷತೆ).
- ಕಾರ್ಯಕ್ರಮದ ನಡೆಯುವ ಜಿಲ್ಲೆಯ ಪ್ರತಿನಿಧಿಸುವ ಪದವೀದರ ಕ್ಷೇತ್ರ, ಶಿಕ್ಷಕರ ಕ್ಷೇತ್ರ ಮತ್ತು ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ಚುನಾಯಿತರಾಗಿರುವ ವಿಧಾನ ಪರಿಷತ್ತಿನ ಎಲ್ಲಾ ಶಾಸಕರುಗಳು ಮತ್ತು ನೋಡಲ್ ಜಿಲ್ಲೆಯಾಗಿ ಆಯ್ಕೆ ಮಾಡಿಕೊಂಡಿರುವ ನಾಮ ನಿರ್ದೇಶಿತ ಹಾಗೂ ವಿಧಾನಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಶಾಸಕರುಗಳು.
- ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ ಇತರೇ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ ಮತ್ತು ಮಂಡಳಿಗಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು.
- ಕಾರ್ಯಕ್ರಮ ನಡೆಯುವ ಸ್ಥಳದ ಜಿಲ್ಲಾ ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕು ಪಂಚಾಯತ್ ಅಧ್ಯಕ್ಷರು.
- ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು / ಮಹಾಪೌರರು ಅಥವಾ ಗ್ರಾಮ ಪಂಚಾಯಿತಿಯ ಅಧ್ಯಕ್ಷರು.

9. ಕಂಡಿಕೆ 8ರಲ್ಲಿ ನಮೂದಿಸಿದ ಜನಪ್ರತಿನಿಧಿ / ಗಣ್ಯ ವ್ಯಕ್ತಿಗಳೊಂದಿಗೆ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂದರ್ಭಗನುಗುಣವಾಗಿ ಈ ಕೆಳಕಂಡ ಜನಪ್ರತಿನಿಧಿಗಳನ್ನು ಸಹ ಆಹ್ವಾನಿಸತಕ್ಕದ್ದು.

(ಎ) ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಬಿ) ಅದರಂತೆ, ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ತಾಲ್ಲೂಕು ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ತಾಲ್ಲೂಕು ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಸಿ) ಅದರಂತೆ ಗ್ರಾಮ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳು ಗ್ರಾಮ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಗ್ರಾಮ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು.

(ಡಿ) ಅದರಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತಹ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಗರ ಸ್ಥಳೀಯ ಸಂಸ್ಥೆಯ ಸದಸ್ಯರುಗಳನ್ನು ಆಹ್ವಾನಿಸುವುದು.

**ಟಿಪ್ಪಣಿ:**

ಮೇಲ್ಕಂಡ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾಗಿರುವ ಜನಪ್ರತಿನಿಧಿಗಳನ್ನು ಹೊರತುಪಡಿಸಿ, ಇತರೆ ಸಚಿವರು / ಜನಪ್ರತಿನಿಧಿಗಳು / ಗಣ್ಯ ವ್ಯಕ್ತಿಗಳನ್ನು ಆಹ್ವಾನಿಸಲು ಕಾರ್ಯಕ್ರಮದ ಸಂದರ್ಭಕ್ಕನುಗುಣವಾಗಿ ಆಯೋಜಕರು ತೀರ್ಮಾನ ತೆಗೆದುಕೊಳ್ಳತಕ್ಕದ್ದು.

## ಆಹ್ವಾನ ಪತ್ರಿಕೆ ಮುದ್ರಿಸುವ ಬಗ್ಗೆ:

10. ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ, ರಾಜ್ಯ ಆಧ್ಯತಾ ಸೂಚಿ ಪಟ್ಟಿ ಮತ್ತು ಇತರೆ ಸನ್ನಿವೇಶಗಳನ್ನು ಆದರಿಸಿ ಕೇಂದ್ರ ಸಚಿವರುಗಳು, ರಾಜ್ಯ ಸಂಪುಟ ದರ್ಜೆ ಸಚಿವರುಗಳು, ರಾಜ್ಯ ಸಚಿವರು, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ, ಘನ ಉಪಸ್ಥಿತಿ, ಉದ್ಘಾಟನೆ / ಶಂಕುಸ್ಥಾಪನೆ / ಲೋಕಾರ್ಪಣೆ, ಅಧ್ಯಕ್ಷರು, ಮುಖ್ಯ ಅತಿಥಿಗಳು, ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು. ಇದೇ ಅನುಕ್ರಮದಲ್ಲಿ ಆಹ್ವಾನ ಪತ್ರಿಕೆಯನ್ನು ಮುದ್ರಿಸತಕ್ಕದ್ದು.

11. ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ರಾಜ್ಯ ಆಧ್ಯತಾ ಸೂಚಿ ಪಟ್ಟಿಗೆ ಅನುಗುಣವಾಗಿಯೇ ಮುದ್ರಿಸಬೇಕು. ಈ ಆದ್ಯತಾಸೂಚಿ ಪಟ್ಟಿಯನ್ನು ಪರಿಗಣಿಸುವಾಗ ಜನಪ್ರತಿನಿಧಿಗಳು ಹೊಂದಿರುವ ಸ್ಥಾನಮಾನವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ಆದರೆ, ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಟಿಪ್ಪಣಿ 6(ಎ)ರಲ್ಲಿ ತಿಳಿಸಿರುವಂತೆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಆಹ್ವಾನ ಪತ್ರಿಕೆಯಲ್ಲಿ ಘನ ಉಪಸ್ಥಿತಿ, ಉದ್ಘಾಟನೆ / ಶಂಕುಸ್ಥಾಪನೆ / ಲೋಕಾರ್ಪಣೆಯ ನಂತರ ನಮೂದಿಸುವುದು.

**ಟಿಪ್ಪಣಿ**

**ಅ)** ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾದ ಮತ್ತು ಕರ್ನಾಟಕ ರಾಜ್ಯ ಆಧ್ಯತಾ ಸೂಚಿ ಪಟ್ಟಿಯಲ್ಲಿ ಯಾವುದೇ ಸ್ಥಾನಮಾನವನ್ನು ಹೊಂದದೇ ಇರುವ ಜನಪ್ರತಿನಿಧಿಗಳನ್ನು / ಗಣ್ಯ ವ್ಯಕ್ತಿಗಳನ್ನು ಆಹ್ವಾನ ಪತ್ರಿಕೆಯಲ್ಲಿ ಕೊನೆಯ ಶಾಸಕರ ನಂತರ ಈ ಕೆಳಗಿನ ಆಧ್ಯತೆಯಂತೆ ನಮೂದಿಸಲು ಕ್ರಮಕೈಗೊಳ್ಳತಕ್ಕದ್ದು.

i ಶಾಸಕರಲ್ಲದ ಮತ್ತು ಸಚಿವ ಸ್ಥಾನಮಾನ ಹೊಂದದೇ ಇರುವ ರಾಜ್ಯ ಮಟ್ಟದ ಇತರೆ ನಿಗಮ ಮತ್ತು ಮಡಳಿಗಳ ಅಧ್ಯಕ್ಷರುಗಳು

- ಒಂದಕ್ಕಿಂತ ಹೆಚ್ಚಿಗೆ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳು ಇದ್ದಲ್ಲಿ, ಆಯಾ ಅಧ್ಯಕ್ಷರುಗಳು ಆ ಹುದ್ದೆಗೆ ಸೇರಿದ ದಿನಾಂಕವನ್ನು ಪರಿಗಣನೆಗೆ ತೆಗೆದುಕೊಂಡು ಪರಸ್ಪರ ಆಧ್ಯತೆ ನಿಗದಿಪಡಿಸುವುದು.

ii ಕಾರ್ಯಕ್ರಮ ನಡೆಯುವ ಸ್ಥಳದ ಮಹಾನಗರ ಪಾಲಿಕೆಯ ಮಹಾಪೌರರು.

iii ಕಾರ್ಯಕ್ರಮ ನಡೆಯುವ ಸ್ಥಳದ ತಾಲ್ಲೂಕ್ ಪಂಚಾಯತ್ ಅಧ್ಯಕ್ಷರು.

iv ಕಾರ್ಯಕ್ರಮ ನಡೆಯುವ ಸ್ಥಳದ ನಗರ ಸ್ಥಳೀಯ ಸಂಸ್ಥೆಯ / ಗ್ರಾಮ ಪಂಚಾಯತಿನ ಅಧ್ಯಕ್ಷರು.

**ಆ)** ಸರ್ಕಾರದ ಕಾರ್ಯಕ್ರಮಗಳಿಗೆ ಕಡ್ಡಾಯವಾಗಿ ಆಹ್ವಾನಿಸಬೇಕಾದ ಜನಪ್ರತಿನಿಧಿಗಳನ್ನು ಹೊರತುಪಡಿಸಿ ಇತರೆ ಜನಪ್ರತಿನಿಧಿಗಳನ್ನು ಮತ್ತು ಗಣ್ಯವ್ಯಕ್ತಿಗಳನ್ನು ಆಹ್ವಾನಿಸಿದಾಗ,

i ಈಗಾಗಲೇ ಅವರಿಗೆ ಕರ್ನಾಟಕ ರಾಜ್ಯದ ಆಧ್ಯತಾ ಸೂಚಿಪಟ್ಟಿಯಲ್ಲಿ ಸ್ಥಾನಮಾನ ನೀಡಿದ್ದರೆ ಅವರ ಹೆಸರುಗಳನ್ನು ಆ ಪ್ರಕಾರ ಆಹ್ವಾನ ಪತ್ರಿಕೆಗಳಲ್ಲಿ ನಮೂದಿಸುವುದು.

ii ಅವರಿಗೆ ಯಾವುದೇ ಸ್ಥಾನಮಾನವಿಲ್ಲದಿದ್ದಾಗ ಅವರ ಹೆಸರುಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕಾದ ಎಲ್ಲಾ ಜನಪ್ರತಿನಿಧಿಗಳ ನಂತರ ಅವರ ಹೆಸರುಗಳನ್ನು ನಮೂದಿಸುವುದು.

12. 2018ರ ಆದ್ಯತಾ ಸೂಚಿಪಟ್ಟಿಯ ಪ್ರಕಾರ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರು ಕ್ರಮ ಸಂಖ್ಯೆ:21 ಅನುಚ್ಛೇದದಲ್ಲಿ ಹಾಗೂ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರುಗಳು ಕ್ರಮ ಸಂಖ್ಯೆ:21(ಎ) ಅನುಚ್ಛೇದದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಭಾರತ ಸರ್ಕಾರದ ಗೃಹ ಮಂತ್ರಾಲಯವು "as per the practice the person who has served more than one term continuously are placed higher in the Table of Precedence (ToP)" ಎಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ ಆದ್ಯತಾಸೂಚಿ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲ್ಲಿರುವ ಹುದ್ದೆಗಳ ನಡುವೆ ಆದ್ಯತೆ ನೀಡುವಾಗ ಲೋಕಸಭಾ ಸದಸ್ಯರ ನಂತರ ರಾಜ್ಯಸಭಾ ಸದಸ್ಯರು ಹಾಗೂ ವಿಧಾನ ಸಭಾ ಸದಸ್ಯರ ನಂತರ ವಿಧಾನ ಪರಿಷತ್ತು ಸದಸ್ಯರು ಎಂಬ ಎರಡು ವಿಂಗಡನೆಗಳಾಗಿ ಮಾಡಿಕೊಳ್ಳದೇ ಯಾವ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಪರಸ್ಪರ ಆದ್ಯತೆಯನ್ನು ನಿಗದಿಪಡಿಸುವಾಗ ಮೇಲಿನ ಸ್ಥಾನವನ್ನು ನಿಗದಿಪಡಿಸುವುದು.

**ಟಿಪ್ಪಣಿ**

ಜಿಲ್ಲಾ ಮಟ್ಟದ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ, ಕಾರ್ಯಕ್ರಮ ನಡೆಯುವ ಸ್ಥಳದ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸದರನ್ನು ಮೊದಲಿಗೆ ಹಾಕುವುದು. ತದನಂತರ ಉಳಿದ ಸಂಸದರುಗಳನ್ನು (ಲೋಕಸಭಾ ಮತ್ತು ರಾಜ್ಯ ಸಭಾ ಸಂಸದರನ್ನೊಳಗೊಂಡಂತೆ) ಆದ್ಯತಾ ಪಟ್ಟಿಯ ಪ್ರಕಾರ ನಮೂದು ಮಾಡುವುದು.

13. ಸರ್ಕಾರದ ಸಮಾರಂಭಗಳ ಆಮಂತ್ರಣ ಪತ್ರಿಕೆಯಲ್ಲಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು) ಮತ್ತು ಶಾಸಕರು (ವಿಧಾನ ಸಭೆ) ಎಂದು ಹಾಗೂ ಲೋಕಸಭಾ ಸದಸ್ಯರು ಮತ್ತು ರಾಜ್ಯಸಭಾ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ ಸಂಸದರು (ಲೋಕಸಭೆ) ಮತ್ತು ಸಂಸದರು (ರಾಜ್ಯಸಭೆ) ಎಂದು ನಮೂದು ಮಾಡುವುದು.

14. ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸಮಾರಂಭ ಏರ್ಪಡಿಸುವ ಮುನ್ನ ಆಹ್ವಾನ ಪತ್ರಿಕೆಗೆ ಆಯಾ ಜಿಲ್ಲಾಧಿಕಾರಿಗಳ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕು.

15. ಸರ್ಕಾರದ ಸಮಾರಂಭವನ್ನು ಏರ್ಪಡಿಸುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು ಸಂಸತ್ತಿನ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕ್ಕದ್ದಲ್ಲದೇ, ಇಲಾಖೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು.

16. ಆಹ್ವಾನ ಪತ್ರಿಕೆಗಳನ್ನು ಮುದ್ರಿಸದಿದ್ದ ಪಕ್ಷದಲ್ಲಿ ಕನಿಷ್ಠ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ ಸದಸ್ಯರುಗಳನ್ನು ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಹಾಗೂ ಇತರರನ್ನು ಸಮಾರಂಭಕ್ಕೆ ಆಹ್ವಾನಿಸಬೇಕು.

17. ಶಂಕುಸ್ಥಾಪನೆ / ಉದ್ಘಾಟನೆ ಇತ್ಯಾದಿಗಳಿಗೆ ಸಂಬಂಧಪಟ್ಟ ಶಿಲೆಗಳಲ್ಲೂ ಸಹ ಆಹ್ವಾನ ಪತ್ರಿಕೆಯಲ್ಲಿರುವ ಹೆಸರುಗಳನ್ನು ಅದೇ ಆದ್ಯತೆಯಲ್ಲಿ ನಮೂದಿಸಬೇಕು.

## ಆಸನ ವ್ಯವಸ್ಥೆ

18. ಆಸನ ವ್ಯವಸ್ಥೆ ಮಾಡುವಾಗಲೂ ರಾಜ್ಯ ಆಧ್ಯತಾ ಪಟ್ಟಿಯ ಪ್ರಕಾರವೇ ಗಣ್ಯರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು. ಆದ್ದರಿಂದ, ಆಹ್ವಾನ ಪತ್ರಿಕೆಯನ್ನು ಆದ್ಯತಾಪಟ್ಟಿಯ ಮೇರೆಗೆ ಮುದ್ರಿಸುವುದರಿಂದ ಆಸನ ವ್ಯವಸ್ಥೆಯನ್ನು ಆಹ್ವಾನ ಪತ್ರಿಕೆಯ ಅನುಗುಣವಾಗಿ ಮಾಡುವುದು.

19. ಸಾಮಾನ್ಯವಾಗಿ ಶಿಷ್ಟಾಚಾರದಂತೆ, ಅನುಸರಿಸಬೇಕಾದ ಆಸನ ವ್ಯವಸ್ಥೆಯನ್ನು ಕೆಳಕಂಡಂತೆ ನೀಡಲಾಗಿದೆ.

| | | | | | | | | | | |
|---|---|---|---|---|---|---|---|---|---|---|
| 10 | 8 | 6 | 4 | 2 | 1 | 3 | 5 | 7 | 9 | 11 |

ಮೇಲ್ಕಂಡಂತೆ ಕಾರ್ಯಕ್ರಮದ ಆಹ್ವಾನ ಪತ್ರಿಕೆಯ ಪ್ರಕಾರ ಮೊದಲಿಗರೋ ಯಾರೋ ಅವರನ್ನು ಮಧ್ಯದಲ್ಲಿ (ಆಸನ ಸಂಖ್ಯೆ:1) ಕೂರಿಸಬೇಕು ಅವರ ನಂತರ ಆಹ್ವಾನ ಪತ್ರಿಕೆಯ ಅನುಗುಣವಾಗಿ ಉಳಿದ ಗಣ್ಯರನ್ನು ಬಲ ಮತ್ತು ಎಡ ಭಾಗದಲ್ಲಿ ಮೇಲ್ಕಂಡಂತೆ ಆಸನ ವ್ಯವಸ್ಥೆಯನ್ನು ಮಾಡಬೇಕು.

20. ಕಾರ್ಯಕ್ರಮಗಳಿಗೆ ತಡವಾಗಿ ಬರುವ ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ ಆಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅವರಿಗಾಗಿ ಪ್ರತ್ಯೇಕವಾಗಿರಿಸಿದ ಆಸನಗಳನ್ನು ಸಮಾರಂಭ ಮುಗಿಯುವವರೆಗೂ ಕಾದಿರಿಸತಕ್ಕದ್ದು. ಹಾಗೂ ಆ ಆಸನಗಳು ಖಾಲಿಯಿದ್ದಾಗ್ಯೂ ಅವುಗಳನ್ನು ಇತರರು ಉಪಯೋಗಿಸಿಕೊಳ್ಳತಕ್ಕದಲ್ಲ.

21. ಸರ್ಕಾರಿ ಅಧಿಕಾರಿಗಳು ಸಾಮಾನ್ಯವಾಗಿ ಯಾವುದೇ ಸರ್ಕಾರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸುವುದು ಮತ್ತು ಉದ್ಘಾಟಿಸುವುದನ್ನು ನಿಷೇಧಿಸಿದೆ. ಆದರೆ, ಅನಿವಾರ್ಯ ಸಂದರ್ಭಗಳಲ್ಲಿ ಅಂದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೊರತುಪಡಿಸಿ, ಇನ್ನಿತರ ಸರ್ಕಾರಿ ಕಾರ್ಯಕ್ರಮಗಳಾದ ಜಯಂತಿ / ಉತ್ಸವ / ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಯಲ್ಲಿ ನಮೂದಿಸಿದ ಯಾವುದೇ ಜನಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಹಾಜರಾಗದೇ ಇದ್ದ ಸಂದರ್ಭದಲ್ಲಿ ಮಾತ್ರ ಅಧ್ಯಕ್ಷತೆ ವಹಿಸಬಹುದು ಮತ್ತು ಉದ್ಘಾಟನೆ ಮಾಡಬಹುದು ಮತ್ತು ಅವಶ್ಯಕತೆಗೆ ಅನುಗುಣವಾಗಿ ಸಂಬಂಧಪಟ್ಟ ಅಧಿಕಾರಿಗಳು ಕಾರ್ಯಕ್ರಮದ ವೇದಿಕೆ ಮೇಲೆ ಉಪಸ್ಥಿತರಿರಬಹುದು.

## ವಿಶೇಷ ಸೂಚನೆಗಳು:

22. ನ್ಯಾಯಾಲಯಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಕುರಿತಾಗಿ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದನ್ವಯ ಕ್ರಮವನ್ನು ಕೈಗೊಳ್ಳುವುದು.

23. ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ಭಾಗವಹಿಸುವ ಕಾರ್ಯಕ್ರಮಗಳನ್ನು ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ಕಾರ್ಯಾಲಯದ ಅನುಮೋದನೆಯಂತೆ ನಡೆಸುವುದು.

24. ಕೇಂದ್ರ ಸರ್ಕಾರದ ಸಮಾರಂಭಗಳಿಗೆ ಸಂಸತ್ತು ಸದಸ್ಯರನ್ನು ಆಹ್ವಾನಿಸುವ ರೀತಿಯಲ್ಲಿಯೇ ಸ್ಥಳೀಯ ಚುನಾಯಿತ ಪ್ರತಿನಿಧಿಗಳಾದ ವಿಧಾನಮಂಡಲದ ಸದಸ್ಯರುಗಳನ್ನು ಶಿಷ್ಟಾಚಾರದನ್ವಯ ತಪ್ಪದೇ ಆಹ್ವಾನಿಸುವುದು.

25. ಗಣರಾಜ್ಯೋತ್ಸವ ಹಾಗೂ ಸ್ವತಂತ್ರ್ಯ ದಿನಾಚರಣೆ ದಿನಗಳಂದು ಯಾರು ಧ್ವಜಾರೋಹಣ ಮಾಡಬೇಕು ಎನ್ನುವ ಬಗ್ಗೆ ಭಾರತ ಸರ್ಕಾರ ಹೊರಡಿಸಿದ ಸುತ್ತೋಲೆಗಳಲ್ಲಿ ನೀಡಲಾದ ನಿರ್ದೇಶನವನ್ನು ಮುಂದುವರೆಸಿಕೊಂಡು ಹೋಗುವುದು.

26. ಸರ್ಕಾರಿ ಆದೇಶಗಳಲ್ಲಿ ಶಾಸಕರು ಅಥವಾ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟು ಸಮೀಕ್ಷಣಾ ಸಭೆಗಳನ್ನು ನಡೆಸಬಹುದು. ಇದನ್ನು ಹೊರತುಪಡಿಸಿ ಶಾಸಕರೇ ಆಗಲೀ ಇತರೇ ಖಾಸಗಿ ಪ್ರಮುಖರೇ ಆಗಲೀ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವಂತಿಲ್ಲ. ವಿರೋಧ ಪಕ್ಷದ ನಾಯಕರಿಗೂ ಸಹ ಅಧಿಕಾರಿಗಳ ಸಭೆ ಕರೆಯಲು ಅವಕಾಶವಿರುವುದಿಲ್ಲ. ಆದರೆ, ಅಗತ್ಯ ಮಾಹಿತಿಯನ್ನು ಸೂಕ್ತವಾಗಿ ಒದಗಿಸಬಹುದಾಗಿದೆ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರ ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.

27. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ತರಬೇತಿ ನೀಡುವುದು. ಶಿಷ್ಟಾಚಾರ ಲೋಪವಾದ ಪ್ರಕರಣಗಳಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟವರಿಗೆಲ್ಲ ತಿಳಿಸತಕ್ಕದ್ದು, ಸಂಬಂಧಪಟ್ಟ ಅಧಿಕಾರಿಗಳಲ್ಲದೇ ಶಿಷ್ಟಾಚಾರ ಪಾಲಿಸುವುದರಲ್ಲಿ ವಿಫಲರಾದ, ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದೆಂದು ಈ ಮೂಲಕ ಸೂಚಿಸಿದೆ.

**(ಟಿ.ಎಂ. ವಿಜಯಭಾಸ್ಕರ)**
**ಸರ್ಕಾರದ ಮುಖ್ಯ ಕಾರ್ಯದರ್ಶಿ**

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್
7. ಎಲ್ಲಾ ವಿಭಾಗಾಧಿಕಾರಿಗಳು.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ).

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 05 ಹೆಚ್‌ಪಿಎ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:30.04.2019

## ಸುತ್ತೋಲೆ

**ವಿಷಯ:** ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲ ಸದಸ್ಯರುಗಳ ನಡುವಣ ಸರ್ಕಾರದ ವ್ಯವಹಾರಗಳು – ಸೂಕ್ತ ಕಾರ್ಯವಿಧಾನದ ಪಾಲನೆ ಕುರಿತಾದ ಕ್ರೋಢೀಕೃತ ಸೂಚನೆಗಳು.

*****

ಸರ್ಕಾರದ ಆಡಳಿತ ವರ್ಗ ಹಾಗೂ ಸಂಸತ್ / ವಿಧಾನ ಮಂಡಲ ಸದಸ್ಯರು ಮತ್ತು ಇತರೆ ಚುನಾಯಿತ ಪ್ರತಿನಿಧಿಗಳ ನಡುವಣ ಸರ್ಕಾರಿ ವ್ಯವಹಾರಗಳ ಕಾರ್ಯವಿಧಾನದ ನಿರ್ವಹಣೆ ಕುರಿತು ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಸೂಚನೆ ಮತ್ತು ನಿರ್ದೇಶನಗಳನ್ನು ನೀಡಲಾಗಿರುತ್ತದೆ. ಈ ಎಲ್ಲಾ ಸುತ್ತೋಲೆಗಳನ್ನು ಹಿಂಪಡೆದು, ಅವುಗಳಲ್ಲಿದ್ದ ನಿರ್ದೇಶನಗಳನ್ನು ಸಮಗ್ರವಾಗಿ ಕೆಳಕಂಡಂತೆ ಒಟ್ಟುಗೂಡಿಸಿ ನೀಡಲಾಗಿದೆ. ಈ ಸೂಚನೆಗಳನ್ನು ಸರ್ಕಾರದ ಎಲ್ಲಾ ಅಧಿಕಾರಿ / ಸಿಬ್ಬಂದಿಗಳು ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

### ಭೇಟಿ

1. ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಅವರು ಕ್ಷೇತ್ರ ಒಂದರ ಪ್ರತಿನಿಧಿ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರು ನೀಡುವ ಮನವಿ ಹಾಗೂ ಸಲಹೆಗಳನ್ನು ಪರಿಗಣಿಸುವುದಲ್ಲದೆ ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವಂತೆ ಮತ್ತು ಸೌಜನ್ಯ ಪೂರ್ವಕವಾಗಿ ನಡೆದುಕೊಳ್ಳಲು ಸೂಚಿಸಲಾಗಿದೆ.
2. ಅವರು ಏನು ಹೇಳಬಹುದು ಎಂಬುದನ್ನು ಎಚ್ಚರಿಕೆಯಿಂದ ಪರ್ಯಾಲೋಚಿಸಿ ಅಥವಾ ತಾಳ್ಮೆಯಿಂದ ಆಲಿಸಿ ಸರ್ಕಾರಿ ನೌಕರರು ತಮ್ಮ ಸ್ವಂತ ವಿವೇಚಾನುಸಾರವಾಗಿ ನಿಯಮಾನುಸಾರವಾಗಿ ನಡೆದುಕೊಳ್ಳಬೇಕು
3. ಅವರು ಭೇಟಿಗಾಗಿ ಕೋರಿದಾಗ ಆದ್ಯತೆ ಮೇಲೆ ಅವಕಾಶ ನೀಡಬೇಕಾಗಿರುತ್ತದೆ. ಅಧಿಕಾರಿಗಳನ್ನು ಭೇಟಿ ಮಾಡಲು ಗೊತ್ತುಪಡಿಸಿಕೊಂಡ ಸಂದರ್ಶನ ವ್ಯವಸ್ಥೆಯಲ್ಲಿ / ಭೇಟಿಮಾಡಲು ಯಾವುದೇ ಅನಾನುಕೂಲತೆಯಿಂದಾಗಿ ತಪ್ಪಿಹೋದಲ್ಲಿ ಅವರೊಂದಿಗೆ ಸಮಾಲೋಚಿಸಿ ಹೊಸದಾಗಿ ಸಂದರ್ಶನ ಸಮಯವನ್ನು ನಗದಿಪಡಿಸಬೇಕು.
4. ಒಂದು ವೇಳೆ ಯಾವುದೇ ಮುನ್ಸೂಚನೆ ಇಲ್ಲದೆ ಭೇಟಿಗಾಗಿ ಬಂದರು ಸಹ, ಆದ್ಯತೆ ಮೇಲೆ ಅವರಿಗೆ ಭೇಟಿ ಮಾಡಲು ಅವಕಾಶ ಕಲ್ಪಸುವುದು.

### ಸರ್ಕಾರಿ ಕಾರ್ಯಕ್ರಮ

ಸರ್ಕಾರಿ ಸಭೆ ಮತ್ತು ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಹೊರಡಿಸಿರುವ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1), ದಿನಾಂಕ:06.03.2019ರ ಮತ್ತು ಈ ಸುತ್ತೋಲೆಗೆ ಕಾಲಕಾಲಕ್ಕೆ ಮಾಡುವ ತಿದ್ದುಪಡಿ ಅಂಶಗಳನ್ನು ಚಾಚು ತಪ್ಪದೇ ಪಾಲಿಸುವುದು.

### ದೂರವಾಣಿ ಕರೆಗಳು

ಸಂಸದರು ಹಾಗೂ ವಿಧಾನ ಮಂಡಲದ ಸದಸ್ಯರುಗಳು ದೂರವಾಣಿ ಕರೆಗಳನ್ನು ಮಾಡಿದಾಗ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ಸಭೆಯಲ್ಲಿದ್ದಾಗ ಅವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರು ಅವರಿಗೆ ಬಂದಂತಹ ದೂರವಾಣಿ ಕರೆಗಳನ್ನು ಪಟ್ಟಿ ಮಾಡುವುದಲ್ಲದೆ ಅವರುಗಳು ಹಿಂದಿರುಗಿ ಬಂದ ನಂತರ ಅವರಿಗೆ ಅದನ್ನು ತೋರಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು, ಹಾಗೂ ಅಂತಹ ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಹಿಂತಿರುಗಿಸುವಂತೆ ಸೂಚಿಸಲಾಗಿದೆ.

## ಪತ್ರ ವ್ಯವಹಾರ

1) ಸಂಸತ್ ಸದಸ್ಯರಿಂದ ಹಾಗೂ ವಿಧಾನ ಮಂಡಲ ಸದಸ್ಯರುಗಳಿಂದ ಸ್ವೀಕರಿಸಿದ ಪತ್ರಗಳನ್ನು ತ್ವರಿತವಾಗಿ ನಿರ್ವಹಿಸತಕ್ಕದ್ದು, ಸಾರ್ವಜನಿಕರಿಗೆ ಅಥವಾ ಅವರ ಒಂದು ಭಾಗಕ್ಕೆ ಅಥವಾ ಯಾವುದೇ ವ್ಯಕ್ತಿಗೆ ಅನ್ಯಾಯವಾಗಿದೆ ಎಂದು ಸಂಸದರು ಅಥವಾ ವಿಧಾನ ಮಂಡಲದ ಸದಸ್ಯರುಗಳಿಂದ ಸಚಿವರಿಗೆ ಪತ್ರ ಬಂದಲ್ಲಿ ಅವರ ಆಪ್ತ ಕಾರ್ಯದರ್ಶಿಯವರು ಸ್ವೀಕೃತಿಯನ್ನು ನೀಡತಕ್ಕದ್ದು ಹಾಗೂ ಅದರ ಅಂತಿಮ ವಿಲೇವಾರಿಯನ್ನು ಗಮನಿಸತಕ್ಕದ್ದು ಮತ್ತು ಸಂಬಂಧಪಟ್ಟ ಸದಸ್ಯರಿಗೆ ಅಂತಿಮ ಉತ್ತರವನ್ನು ನೀಡತಕ್ಕದ್ದು.

2) ಸರ್ಕಾರದ ಕಾರ್ಯದರ್ಶಿ ಅಥವಾ ಇತರೆ ಹಿರಿಯ ಅಧಿಕಾರಿಗಳಿಗೆ ಇದೇ ರೀತಿಯ ಪತ್ರವು ಸದಸ್ಯರುಗಳಿಂದ ಸ್ವೀಕೃತವಾದಲ್ಲಿ ಸ್ವೀಕೃತಿಯನ್ನು ನೀಡುವುದಲ್ಲದೇ ಸದರಿ ಅಧಿಕಾರಿಯು ವಿಷಯವನ್ನು ತ್ವರಿತ ಗತಿಯಲ್ಲಿ ಪರಿಶೀಲಿಸಿ ಸೂಕ್ತ ಉತ್ತರವನ್ನು ಕಳುಹಿಸತಕ್ಕದ್ದು.

3) ಯಾವುದೇ ಇಲಾಖಾ ಮುಖ್ಯಸ್ಥರು, ಸಾರ್ವಜನಿಕ ಉದ್ದಿಮೆಗಳು, ಸಂಸದರು ಅಥವಾ ವಿಧಾನ ಮಂಡಲದ ಸದಸ್ಯರುಗಳಿಂದ ಸ್ವೀಕರಿಸುವ ಪತ್ರಗಳನ್ನು ಪರಿಶೀಲಿಸಿ ಉತ್ತರವನ್ನು ನೀಡತಕ್ಕದ್ದು, ಪತ್ರಗಳಲ್ಲಿ ಸರ್ಕಾರದ ನೀತಿಯ ವಿಷಯಗಳು ಒಳಗೊಂಡಿದ್ದಲ್ಲಿ ಅಂತಹ ಪತ್ರಗಳನ್ನು ಉತ್ತರಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯತಕ್ಕದ್ದು.

4) ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸದಂತೆ ಮಾಹಿತಿ ಮತ್ತು ಅಂಕಿಅಂಶಗಳನ್ನು ಕೋರಿದಾಗ ಅಂತಹ ವಿವರಗಳನ್ನು ಒದಗಿಸಬೇಕಲ್ಲದೆ, ಸಂದೇಹಾಸ್ಪದ ಸಂದರ್ಭಗಳಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಪಡೆಯತಕ್ಕದ್ದು.

5) ಕಾರ್ಯನೀತಿಯಲ್ಲದ ವಿಷಯಗಳಲ್ಲಿ ಕೆಳಹಂತದ ಅಧಿಕಾರಿಗಳು ಸ್ವೀಕರಿಸುವ ಸದಸ್ಯರ ಪತ್ರಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಉತ್ತರ ನೀಡಬಹುದು ಮತ್ತು ಸರ್ಕಾರದ ನೀತಿಯನ್ನು ಒಳಗೊಂಡಿರುವ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಉತ್ತರ ನೀಡತಕ್ಕದ್ದು.

6) ಸದನದಲ್ಲಿ ಉತ್ತರ, ತಿರಸ್ಕರಿಸುವ ಪ್ರಕರಣಗಳನ್ನು ಹೊರತುಪಡಿಸಿ ಸದಸ್ಯರಿಂದ ಮಾಹಿತಿ ಕೋರಿ ಸ್ವೀಕರಿಸುವ ಎಲ್ಲಾ ಪತ್ರಗಳಿಗೆ ಸ್ವೀಕೃತಿ ಪತ್ರವನ್ನು ಹಾಗೂ ಮುಂದಿನ 15 ದಿನಗಳಲ್ಲಿ ಕೈಗೊಂಡ ಕ್ರಮವನ್ನು ತಿಳಿಸತಕ್ಕದ್ದು.

7) ಉತ್ತರ ನೀಡಲು ವಿಳಂಬವಾದಲ್ಲಿ ಅಂತಿಮ ಉತ್ತರವನ್ನು ಎಷ್ಟು ದಿನಗಳೊಳಗಾಗಿ ನೀಡಲಾಗುವುದು ಎಂಬುದನ್ನು ಒಳಗೊಂಡಂತೆ ಮಧ್ಯಂತರ ಉತ್ತವನ್ನು ನೀಡತಕ್ಕದ್ದು.

8) ಸದಸ್ಯರಿಗೆ ಉತ್ತರವನ್ನು ಕಳುಹಿಸುವಾಗ ಸ್ಪುಟವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು ಹಾಗೂ ಪೂರ್ವ ಮುದ್ರಿತ ಅಥವಾ ಸೈಕ್ಲೋಸ್ಟೈಲ್ ಮಾಡಿದ್ದ ಉತ್ತರವನ್ನು ಕಳುಹಿಸತಕ್ಕದ್ದಲ್ಲ.

9) ಮಾಜಿ ಸದಸ್ಯರು, ಸಚಿವರು ಅಥವಾ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಉತ್ತರವನ್ನು ಕಳುಹಿಸತಕ್ಕದ್ದು.

10) ಸದಸ್ಯರು ಪತ್ರವನ್ನು ಸಂಬಂಧಪಟ್ಟ ಇಲಾಖೆಗೆ ಅಲ್ಲದೆ ಬೇರೆ ಇಲಾಖೆಗೆ ವಿಳಾಸಿಸಿದ್ದಲ್ಲಿ ಸದರಿ ಇಲಾಖೆಯು ಅಂತಹ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಗೆ ಒಂದು ವಾರದೊಳಗೆ ವರ್ಗಾಯಿಸತಕ್ಕದ್ದು.

11) ಪತ್ರ ಸ್ವೀಕರಿಸಿದ ದಿನಾಂಕ, ಸ್ವೀಕೃತಿ ನೀಡಿದ ದಿನಾಂಕ, ಪರಿಶೀಲನೆಯ ಮುಂದುವರಿದ ಹಂತ ಮತ್ತು ಅಂತಿಮ ಉತ್ತರವನ್ನು ಕಳುಹಿಸಿದ ದಿನಾಂಕವನ್ನು ಒಳಗೊಂಡ ವಿಶೇಷ ವಹಿಯನ್ನು ಪ್ರತಿ ಸಚಿವರ ಮತ್ತು ಕಾರ್ಯದರ್ಶಿಯವರ ಕಛೇರಿಯಲ್ಲಿ ನಿರ್ವಹಿಸುವುದಲ್ಲದೆ ತ್ವರಿತ ಕ್ರಮ ಕೈಗೊಂಡ ಕುರಿತು ಪ್ರತಿ ತಿಂಗಳು ಸದರಿ ಅಧಿಕಾರಿಗಳು ಪರಿಶೀಲಿಸತಕ್ಕದ್ದು.

12) ಸೂಚನೆಗಳು ಸರ್ಕಾರದ ಇಲಾಖೆಗಳ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳಿಗೂ ಅನ್ವಯಿಸುತ್ತವೆ.

13) ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಕಂಡಿಕೆ 143 ರನ್ವಯ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ನಿಯಮ 26ರಲ್ಲಿ ನಿಗದಿಪಡಿಸಿರುವಂತೆ ಸರ್ಕಾರಿ ನೌಕರರು ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ವಿಧಾನ ಮಂಡಲದ / ಸಂಸತ್ ಸದಸ್ಯರ ಅಥವಾ ಅಂತಹ ಇತರೆ ಪ್ರತಿಷ್ಠಿತರ ಬೆಂಬಲ ಅಥವಾ ಮಧ್ಯಸ್ಥಿಕೆ ಪಡೆಯುವುದಕ್ಕೆ ಅವಕಾಶ ಇರುವುದಿಲ್ಲ.

ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು, ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ಶಾಸಕರುಗಳು ತಮ್ಮ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವಂತೆ

ಮತ್ತು ಅವರುಗಳೊಡನೆ ಸೌಜನ್ಯ ಪೂರ್ವಕವಾಗಿ ನಡೆದುಕೊಳ್ಳಲು ಸೂಚಿಸಲಾಗಿದೆ. ಈ ಸುಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

**(ಟಿ.ಎಂ. ವಿಜಯಭಾಸ್ಕರ)**
**ಸರ್ಕಾರದ ಮುಖ್ಯ ಕಾರ್ಯದರ್ಶಿ**

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಎಲ್ಲಾ ವಿಭಾಗಾಧಿಕಾರಿಗಳು.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ).

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 04 ಹೆಚ್‌ಪಿಎ 2019

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:04.11.2019

## ಸುತ್ತೋಲೆ

**ವಿಷಯ:** ಮಾನ್ಯ ಉಪ ಮುಖ್ಯಮಂತ್ರಿಯವರ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಭೇಟಿಯ ಅವಧಿಯಲ್ಲಿ ಮಾಡಬೇಕಾದ ಶಿಷ್ಟಾಚಾರ ವ್ಯವಸ್ಥೆಯ ಬಗ್ಗೆ.

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ: ಸಿಆಸುಇ 72 ಶಿಸನೇ 2004, ದಿನಾಂಕ:15.06.2004
2. ಸುತ್ತೋಲೆ ಸಂಖ್ಯೆ: ಸಿಆಸುಇ 96 ಶಿಸನೇ 2012, ದಿನಾಂಕ:23.07.2012
3. ಸುತ್ತೋಲೆ ಸಂಖ್ಯೆ: ಸಿಆಸುಇ 63 ಹೆಚ್‌ವಿಪಿ 2018, ದಿನಾಂಕ:26.09.2018

******

ಮಾನ್ಯ ಉಪ ಮುಖ್ಯಮಂತ್ರಿಗಳ ಭೇಟಿಯ ಅವಧಿಯಲ್ಲಿ ಮಾಡಬೇಕಾದ ಶಿಷ್ಟಾಚಾರದ ವ್ಯವಸ್ಥೆಯ ಬಗ್ಗೆ ರಾಜ್ಯ ಸರ್ಕಾರದಿಂದ ಕಾಲಕಾಲಕ್ಕೆ ಮೇಲ್ಕಂಡ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. ಆಡಳಿತಾತ್ಮಕ ಹಿತದೃಷ್ಟಿಯಿಂದ ಈ ಎಲ್ಲಾ ಸುತ್ತೋಲೆಗಳನ್ನು ಹಿಂಪಡೆದು, ಅವುಗಳಲ್ಲಿದ್ದ ನಿರ್ದೇಶನಗಳನ್ನು ಮಾರ್ಪಡಿಸಿ ಈ ಕೆಳಗಿನಂತೆ ನೀಡಲಾಗಿದೆ.

1. ಮಾನ್ಯ ಉಪ ಮುಖ್ಯಮಂತ್ರಿಯವರು ಪ್ರವಾಸ ಮಾಡಿದಾಗ, ಅವರ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು, ಅವರುಗಳನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಅವರ ನಂತರದ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವುದಲ್ಲದೆ, ಮಾನ್ಯ ಉಪ ಮುಖ್ಯಮಂತ್ರಿಯವರು ಕೋರಿದ್ದಲ್ಲಿ ಅವರುಗಳೊಡನೆ ಪ್ರವಾಸ ಮಾಡುವುದು.
2. ಮಾನ್ಯ ಉಪ ಮುಖ್ಯಮಂತ್ರಿಯವರು ಪ್ರವಾಸದ ಸಮಯದಲ್ಲಿ, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದಲ್ಲಿ ಸಚಿವರನ್ನು ಭೇಟಿ ಮಾಡುವುದು ಮತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಕೋರಿದ್ದಲ್ಲಿ, ಅವರುಗಳೊಡನೆ ಪ್ರವಾಸ ಮಾಡುವಂತೆ ಸಹ ಸೂಚಿಸಿದೆ.
3. ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲಾ ಕೇಂದ್ರ ಸ್ಥಾನ ಹೊರತುಪಡಿಸಿ ಜಿಲ್ಲೆಯ ಬೇರೆ ಸ್ಥಳಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ವಿಶೇಷ ಪ್ರವಾಸ ಕೈಗೊಂಡು ಮಾನ್ಯ ಉಪ ಮುಖ್ಯಮಂತ್ರಿಯವರು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಈ ಅಧಿಕಾರಿಗಳು ಜಿಲ್ಲೆಯ ಬೇರೆ ಸ್ಥಳಗಳಲ್ಲಿ ಪ್ರವಾಸದಲ್ಲಿದ್ದು, ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಆಗಮಿಸಿದ ಸಂದರ್ಭದಲ್ಲಿಯೂ ಸಹ ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ ಮಾನ್ಯ ಉಪ ಮುಖ್ಯಮಂತ್ರಯವರು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಆದರೆ, ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲೆಯ ಪ್ರವಾಸದ ಬಗ್ಗೆ ಮುಂಚಿತವಾಗಿ ಮಾಹಿತಿಯಿದ್ದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡುವ ದಿನಾಂಕದಂದು ತಾವುಗಳು ಸಹ ಜಿಲ್ಲಾ ಕೇಂದ್ರದಲ್ಲಿ ಹಾಜರಿರಲು ಸಾಧ್ಯವಾಗುವಷ್ಟು ಮಟ್ಟಿಗೆ ತಮ್ಮ ಪ್ರವಾಸ ಕಾರ್ಯಕ್ರಮವನ್ನು ನಿರೂಪಿಸುವುದು.
4. ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ರಾಜ್ಯ ಆತಿಥ್ಯ ನಿಯಮದ ಪ್ರಕಾರ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮಾಡುವುದು.
    - ❖ ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕಶೀರ್ಷಿಕೆ:2053-00-093-0-02-59 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು.
5. ಮಾನ್ಯ ಉಪ ಮುಖ್ಯಮಂತ್ರಿಗಳು ಜಿಲ್ಲೆಗಳಿಗೆ ಭೇಟಿ ನೀಡಿದಾಗ ವಾಸ್ತವ್ಯವಿರುವ ಗೃಹದಲ್ಲಿ ವ್ಯವಸ್ಥೆ ಬಗ್ಗೆ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಜವಾಬ್ದಾರಿ ನೀಡುವುದರೊಂದಿಗೆ ಉಪವಿಭಾಗಾಧಿಕಾರಿಗಳ ಮಟ್ಟದ ಹಿರಿಯ ಅಧಿಕಾರಿಯನ್ನು ಶಿಷ್ಟಾಚಾರ ನಿರ್ವಹಣೆಗಾಗಿ ನೇಮಿಸುವುದು,

6. ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು.
7. ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲ ಮಟ್ಟದ ಇಲಾಖಾ ಅಧಿಕಾರಿಗಳು ಮಾನ್ಯ ಉಪ ಮುಖ್ಯಮಂತ್ರಿಯವರ ಜೊತೆಗೆ ಜಿಲ್ಲೆಗಳಿಗೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅನಾವಶ್ಯಕವಾಗಿ ತಮ್ಮ ಅಧೀನ ಅಧಿಕಾರಿಗಳು / ಸಿಬ್ಬಂದಿಗಳನ್ನು ಕರೆದುಕೊಂಡು ಹೋಗುವಂತಿಲ್ಲ.
8. ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲೆಯ ಪ್ರವಾಸ ಸಂದರ್ಭದಲ್ಲಿ ಯಾವುದೇ ಇಲಾಖೆಯ ವಿಷಯಗಳ ಬಗ್ಗೆ ಮಾಹಿತಿಯನ್ನು ಕೋರಿದ್ದಲ್ಲಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮಾಹಿತಿಯನ್ನು ಒದಗಿಸತಕ್ಕದ್ದು.
9. ಮಾನ್ಯ ಉಪ ಮುಖ್ಯಮಂತ್ರಿಯವರೊಂದಿಗೆ ವಿವಿಧ ಅದಿಕಾರಿಗಳು ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ, ವಾಹನಗಳ ಮಿತಬಳಕೆ ದೃಷ್ಟಿಯಿಂದ ವಾಹನ ಸಾಮರ್ಥ್ಯಕ್ಕನುಗುಣವಾಗಿ ಐದಾರು ಇಲಾಖೆಯ ಅಧಿಕಾರಿಗಳು ಒಂದೇ ವಾಹನದಲ್ಲಿ ಪ್ರವಾಸ ಮಾಡುವಂತೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಯು ನೋಡಿಕೊಳ್ಳತಕ್ಕದ್ದು.
10. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು.
11. ಮಾನ್ಯ ಉಪ ಮುಖ್ಯಮಂತ್ರಿಗಳು ಭಾಗವಹಿಸುವ ಸಮಾರಂಭಗಳಲ್ಲಿ ವೇದಿಕೆ ಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳ ಆಸನದ ಹಿಂಭಾಗದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಸಚಿವಾಲಯದ ಅಧಿಕಾರಿಗಳಿಗೆ ಆಸನಗಳನ್ನು ಕಾಯ್ದಿರಿಸುವುದು.

ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು, ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ಶಾಸಕರುಗಳು ತಮ್ಮ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವಂತೆ ಮತ್ತು ಅವರುಗಳೊಡನೆ ಸೌಜನ್ಯಪೂರ್ವಕವಾಗಿ ನಡೆದುಕೊಳ್ಳಲು ಸೂಚಿಸಲಾಗಿದೆ. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

**(ಪಿ. ಹೇಮಲತ)**
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿ, ರಾಜಭವನ, ಬೆಂಗಳೂರು.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಎಲ್ಲಾ ವಿಭಾಗಾಧಿಕಾರಿಗಳು.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
10. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
11. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ).

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಕುರಿತು ಇರುವ ನಿಯಮ / ಆದೇಶ / ಮಾರ್ಗ ಸೂಚಿಗಳನ್ನು ಕ್ರೋಡೀಕರಿಸಿ ಪರಿಷ್ಕೃತ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಹೆಚ್ ಡಬ್ಲ್ಯೂಪಿ 2020, ದಿನಾಂಕ: 23.11.2020.
2. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:28.11.2020ರಂದು ನಡೆದ ಸಭೆಯ ನಡವಳಿಗಳು.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04 ಹೆಚ್‌ಡಬ್ಲ್ಯೂಪಿ 2020, ದಿನಾಂಕ: 12.03.2021.

*******

**ಪ್ರಸ್ತಾವನೆ:**

ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯನ್ನು ಮಾರ್ಪಾಡು ಮಾಡಿರುವ ಮೇಲೆ ಓದಲಾದ (3)ರ ಆದೇಶವನ್ನು ಸೂಕ್ತವಾಗಿ ಪರಿಷ್ಕರಿಸಬೇಕಾಗಿರುವುದರಿಂದ, ಸದರಿ ಆದೇಶವನ್ನು ಹಿಂಪಡೆದು ಹೊಸದಾಗಿ ಆದೇಶ ಹೊರಡಿಸುವ ಬಗ್ಗೆ ಪರಿಶೀಲಿಸಿದೆ.

ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಕುರಿತು ಇರುವ ನಿಯಮ / ಆದೇಶ / ಮಾರ್ಗ ಸೂಚಿಗಳನ್ನು ಕ್ರೋಡೀಕರಿಸಿ ಮೇಲೆ ಓದಲಾದ (1)ರ ಪರಿಷ್ಕೃತ ಆದೇಶವನ್ನು ಹೊರಡಿಸಲಾಗಿದೆ.

ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:28.11.2020ರಂದು ರಾಜ್ಯದ ಸಂಸತ್ ಸದಸ್ಯರುಗಳೊಂದಿಗೆ ನಡೆಸಿದ ಸಭೆಯಲ್ಲಿ ಈ ಕೆಳಕಂಡ ಅಂಶವನ್ನು ಪ್ರಸ್ತಾಪಿಸಲಾಗಿದೆ.

> *"ಸಂಸದರು ಜಿಲ್ಲೆ ಮತ್ತು ಜಿಲ್ಲೆಗಳಿಗಿಂತ ಹೆಚ್ಚು ಕಾರ್ಯಕ್ಷೇತ್ರ ವ್ಯಾಪ್ತಿಯನ್ನು ಹೊಂದಿದ್ದು, ಸರ್ಕಾರದ ವಿವಿಧ ಅಭಿವೃದ್ಧಿ ಕಾರ್ಯಕ್ರಮ ಆಹ್ವಾನ ಪತ್ರಿಕೆಗಳಲ್ಲಿ ಪ್ರಸ್ತುತ ಸಂಸದರನ್ನು ಜಿಲ್ಲಾ ಪಂಚಾಯತಿ ಅಧ್ಯಕ್ಷರ ಕೆಳಗೆ ನಿಗದಿಪಡಿಸಲಾಗಿದ್ದು, ಸದರಿ ಕ್ರಮದಲ್ಲಿ ಮೊದಲಿಗೆ ಸಂಸದರು ನಂತರ ಜಿಲ್ಲಾ ಪಂಚಾಯತಿ ಅಧ್ಯಕ್ಷರು ಬರುವಂತೆ ಬದಲಿಸಿ, ಶಿಷ್ಟಾಚಾರದ ನಿಯಮಾವಳಿಗಳಲ್ಲಿ ಬದಲಾವಣೆಯನ್ನು ಮಾಡುವುದು".*

ಮೇಲೆ ಓದಲಾದ (2)ರ ಸಭಾ ನಡವಳಿಯ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗಿಂತ ಮೇಲಿನ ಕ್ರಮಾಂಕದಲ್ಲಿ ಸಂಸದರನ್ನು ನಮೂದಿಸಿ ರಾಜ್ಯ ಆದ್ಯತಾ ಸೂಚಿ ಪಟ್ಟಿಯನ್ನು ಮಾರ್ಪಾಡು ಮಾಡುವುದು ಸೂಕ್ತವೆಂದು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04 ಹೆಚ್‌ಡಬ್ಲ್ಯೂಪಿ 2020, ಬೆಂಗಳೂರು, ದಿನಾಂಕ: 22.03.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಹೆಚ್ ಡಬ್ಲ್ಯೂಪಿ 2020, ದಿನಾಂಕ: 23.11.2020ರನ್ವಯ ಹೊರಡಿಸಿರುವ ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯನ್ನು ಮಾರ್ಪಾಡು ಮಾಡಿ ಈ ಆದೇಶದೊಂದಿಗೆ ಅನುಬಂಧಿಸಿರುವ ಪರಿಷ್ಕೃತ ಆದೇಶವನ್ನು ರಚಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಮೊಹಮ್ಮದ ನಯೀಮ್ ಮೊಮಿನ್)**
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಿಆಸುಇ (ರಾಜ್ಯ ಶಿಷ್ಟಾಚಾರ).

**ಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು - **ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು ಹಾಗೂ ಮುದ್ರಿಸಿ 200 ಪ್ರತಿಗಳನ್ನು ಸಿಆಸು ಇಲಾಖೆಯ (ಸಾಮಾನ್ಯ-ಎ) ಶಾಖೆಗೆ ಒದಗಿಸಲು ಕೋರಿದೆ.**

**ಪ್ರತಿ ಇವರಿಗೆ:**

1. ಮಹಾಲೇಖಪಾಲರು, (ಲೆಕ್ಕ ಪತ್ರ / ಆಡಿಟ್), ಕರ್ನಾಟಕ, ಬೆಂಗಳೂರು.
2. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜ ಭವನ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
6. ರಾಜ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
8. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
9. The Resident commissioner, Karnataka Bhavan, Koutilya Marg, Chanakyapuri, New Delhi.(Fax : 011-26889030)
10. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ, ವಿಧಾನಸೌಧ, ಬೆಂಗಳೂರು.
11. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಪರಿಷತ್, ವಿಧಾನಸೌಧ, ಬೆಂಗಳೂರು.
12. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
13. ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳು.
14. ಎಲ್ಲಾ ಜಿಲ್ಲಾಧಿಕಾರಿಗಳು.
15. ಎಲ್ಲಾ ಮುಖ್ಯಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ .
16. ವಿಶೇಷಾಧಿಕಾರಿಗಳು, ಕುಮಾರ ಕೃಪ ಅತಿಥಿ ಗೃಹ, ಬೆಂಗಳೂರು.
17. ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ರಾಜಕೀಯ).

# ಕರ್ನಾಟಕ ರಾಜ್ಯದಲ್ಲಿ ಆದ್ಯತಾ ಸೂಚಿ

| | |
|---|---|
| 1 | ರಾಷ್ಟ್ರಪತಿ |
| 2 | ಉಪ ರಾಷ್ಟ್ರಪತಿ |
| 3 | ಪ್ರಧಾನಮಂತ್ರಿ |
| 4 | ಕರ್ನಾಟಕ ರಾಜ್ಯಪಾಲರು |
| 5 | ಮಾಜಿ ರಾಷ್ಟ್ರಪತಿಗಳು |
| | ಉಪ ಪ್ರಧಾನಮಂತ್ರಿ |
| 6 | ಭಾರತದ ಮುಖ್ಯ ನ್ಯಾಯಮೂರ್ತಿ |
| | ಲೋಕಸಭಾಧ್ಯಕ್ಷರು |
| 7 | ಭಾರತ ರತ್ನ ಪ್ರಶಸ್ತಿ ಪುರಸ್ಕೃತರು |
| | ಕೇಂದ್ರ ಕ್ಯಾಬಿನೆಟ್ ದರ್ಜೆಯ ಸಚಿವರು |
| | ಕರ್ನಾಟಕ ಮುಖ್ಯ ಮಂತ್ರಿಗಳು |
| | NITI ಆಯೋಗದ ಉಪಾಧ್ಯಕ್ಷರು |
| | ಮಾಜಿ ಪ್ರಧಾನ ಮಂತ್ರಿಗಳು |
| | ರಾಜ್ಯಸಭೆ ಮತ್ತು ಲೋಕಸಭೆಯ ವಿರೋಧ ಪಕ್ಷದ ನಾಯಕರು |
| 8 | ಭಾರತಕ್ಕೆ ಕಳುಹಿಸಲ್ಪಟ್ಟಿರುವ ಕಾಮನ್‌ವೆಲ್ತ್ ದೇಶಗಳ ವಿಶೇಷ ರಾಯಭಾರಿಗಳು ಮತ್ತು ಸಂಪೂರ್ಣ ಅಧಿಕಾರವುಳ್ಳ ರಾಯಭಾರಿ ಹಾಗೂ ಹೈಕಮಿಷನರುಗಳು |
| | ಇತರ ರಾಜ್ಯಗಳ ಮುಖ್ಯ ಮಂತ್ರಿಗಳು |
| | ಕರ್ನಾಟಕದ ಮಾಜಿ ರಾಜ್ಯಪಾಲರುಗಳು |
| | ಇತರ ರಾಜ್ಯಗಳ ರಾಜ್ಯಪಾಲರುಗಳು |
| 9 | ಸರ್ವೋಚ್ಛ ನ್ಯಾಯಾಲಯದ ನ್ಯಾಯಾಧೀಶರುಗಳು |
| 10 | ರಾಜ್ಯಸಭೆಯ ಉಪ ಸಭಾಪತಿ |
| | ಕರ್ನಾಟಕ ರಾಜ್ಯದ ಉಪ ಮುಖ್ಯ ಮಂತ್ರಿಗಳು |
| | ಉಪ ಸಭಾಧ್ಯಕ್ಷರು, ಲೋಕಸಭೆ |
| | NITI ಆಯೋಗದ ಸದಸ್ಯರು |
| | ಕೇಂದ್ರ ಸರ್ಕಾರದ ರಾಜ್ಯ ಸಚಿವರು |
| 11 | ಭಾರತದ ಅಟಾರ್ನಿ ಜನರಲ್ |
| | ಸಚಿವ ಸಂಪುಟ ಕಾರ್ಯದರ್ಶಿ |
| | ಮುಖ್ಯ ಚುನಾವಣಾ ಆಯುಕ್ತರು |
| | ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು |
| 12 | ಫುಲ್ ಜನರಲ್‌ರ ದರ್ಜೆಯ ಅಥವಾ ತತ್ಸಮಾನವಾದ ದರ್ಜೆಯನ್ನು ಹೊಂದಿರುವ ಸಿಬ್ಬಂದಿ ಮುಖ್ಯಸ್ಥರುಗಳು |
| 13 | ಭಾರತಕ್ಕೆ ಕಳುಹಿಸಲ್ಪಟ್ಟಿರುವ ವಿಶೇಷ ರಾಯಭಾರಿಗಳು ಮತ್ತು ಸಚಿವರ ಪೂರ್ಣಾಧಿಕಾರವುಳ್ಳ ರಾಯಭಾರಿ |
| 14 | ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು |
| | ಕರ್ನಾಟಕ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು |
| | ಕರ್ನಾಟಕ ಲೋಕಾಯುಕ್ತ |
| | ಕರ್ನಾಟಕ ವಿಧಾನ ಸಭಾಧ್ಯಕ್ಷರು |
| 15 | ಕರ್ನಾಟಕದ ಕ್ಯಾಬಿನೆಟ್ ದರ್ಜೆ ಸಚಿವರು |
| | ಕೇಂದ್ರ ಸರ್ಕಾರದ ಉಪ ಸಚಿವರುಗಳು |
| | ಕರ್ನಾಟಕದ ಮಾಜಿ ಮುಖ್ಯ ಮಂತ್ರಿಗಳು |
| | ಕರ್ನಾಟಕದ ಉಚ್ಛ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿಗಳು |
| | ಕರ್ನಾಟಕ ವಿಧಾನಮಂಡಲದ ವಿರೋಧ ಪಕ್ಷದ ನಾಯಕರು |
| | ಬೆಂಗಳೂರಿನ ಮೇಯರ್ |
| 16 | ಲೆಫ್ಟಿನೆಂಟ್ ಜನರಲ್ ದರ್ಜೆಯ ಅಥವಾ ಅದಕ್ಕೆ ಸಮಾನವಾದ ದರ್ಜೆಯನ್ನು ಹೊಂದಿರುವ ಸಿಬ್ಬಂದಿಯ ಸ್ಥಾನಪನ್ನ ಮುಖ್ಯಸ್ಥರುಗಳು |
| 17 | ಅಧ್ಯಕ್ಷರು, ಕೇಂದ್ರ ಆಡಳಿತ ನ್ಯಾಯಮಂಡಳಿ |
| | ಅಧ್ಯಕ್ಷರು, ಕರ್ನಾಟಕ ಆಡಳಿತ ನ್ಯಾಯಮಂಡಳಿ |
| | ಅಧ್ಯಕ್ಷರು, ಕರ್ನಾಟಕ ಲೋಕಸೇವಾ ಆಯೋಗ **(*)** |

| | |
|---|---|
| | ಅಧ್ಯಕ್ಷರು, ಅಲ್ಪಸಂಖ್ಯಾತರ ಆಯೋಗ |
| | ಅಧ್ಯಕ್ಷರು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳ ಆಯೋಗ |
| | ಅಧ್ಯಕ್ಷರು, ರಾಜ್ಯ ಹಿಂದುಳಿದ ವರ್ಗಗಳ ಆಯೋಗ |
| | ಅಧ್ಯಕ್ಷರು, ಕೇಂದ್ರ ಲೋಕಸೇವಾ ಆಯೋಗ |
| | ಇತರ ರಾಜ್ಯಗಳ ಉಚ್ಚ ನ್ಯಾಯಾಲಯಗಳ ಮುಖ್ಯ ನ್ಯಾಯಮೂರ್ತಿಗಳು |
| | ಕರ್ನಾಟಕ ಸಹಕಾರ ಚುನಾವಣಾ ಆಯುಕ್ತರು |
| | ಕರ್ನಾಟಕ ಉಚ್ಚ ನ್ಯಾಯಾಲಯದ ಕಿರಿಯ ನ್ಯಾಯಾಧೀಶರು |
| | ರಾಜ್ಯ ಮುಖ್ಯ ಮಾಹಿತಿ ಆಯುಕ್ತರು |
| | ರಾಜ್ಯ ಚುನಾವಣಾ ಆಯುಕ್ತರು |
| | ಉಪ ಲೋಕಾಯುಕ್ತ, ಕರ್ನಾಟಕ ರಾಜ್ಯ |
| 18 | ಇತರ ರಾಜ್ಯಗಳ ಕ್ಯಾಬಿನೆಟ್ ದರ್ಜೆ ಸಚಿವರುಗಳು |
| | ಅಧ್ಯಕ್ಷರು, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಆಯೋಗ |
| | ಇತರ ರಾಜ್ಯ ವಿಧಾನ ಮಂಡಲಗಳ ಸಭಾಪತಿಗಳು ಮತ್ತು ಸಭಾಧ್ಯಕ್ಷರು |
| | ಕರ್ನಾಟಕ ರಾಜ್ಯ ವಿಧಾನ ಮಂಡಲದ ಉಪಸಭಾಪತಿ ಮತ್ತು ಉಪಸಭಾಧ್ಯಕ್ಷರು |
| | ಕರ್ನಾಟಕದ ಸರ್ಕಾರಿ ಮುಖ್ಯ ಸಚೇತಕರು |
| | ಕರ್ನಾಟಕ ರಾಜ್ಯ ಸಚಿವರುಗಳು |
| | ವಿರೋಧ ಪಕ್ಷದ ಮುಖ್ಯ ಸಚೇತಕರು, ಕರ್ನಾಟಕ ರಾಜ್ಯ |
| | ಕ್ಯಾಬಿನೆಟ್ ದರ್ಜೆ ಸಚಿವರ ಸ್ಥಾನಮಾನ ಹೊಂದಿರುವಂತಹ (ಶಾಸಕರು ಅಥವಾ ಶಾಸಕರೇತರರು) ವ್ಯಕ್ತಿಗಳು |
| **19** | **ಕರ್ನಾಟಕ ರಾಜ್ಯದ ಉಪಸಚಿವರುಗಳು** |
| 20 | ಇತರ ರಾಜ್ಯಗಳ ವಿಧಾನ ಮಂಡಲಗಳ ಉಪ ಸಭಾಪತಿಗಳು ಮತ್ತು ಉಪ ಸಭಾಧ್ಯಕ್ಷರುಗಳು |
| | ಕರ್ನಾಟಕ ಉಚ್ಚ ನ್ಯಾಯಾಲಯದ ಮಾಜಿ ನ್ಯಾಯಾಧೀಶರುಗಳು |
| | ಇತರ ರಾಜ್ಯಗಳ ರಾಜ್ಯ ಸಚಿವರುಗಳು |
| | ಇತರ ರಾಜ್ಯಗಳ ಉಚ್ಚ ನ್ಯಾಯಾಲಯಗಳ ಕಿರಿಯ ನ್ಯಾಯಾಧೀಶರುಗಳು |
| 21 | ಸಂಸತ್ ಸದಸ್ಯರುಗಳು |
| **21 (ಅ)** | **ಅಧ್ಯಕ್ಷರು, ಜಿಲ್ಲಾ ಪಂಚಾಯತ್‌ಗಳು** |
| | **ರಾಜ್ಯ ದರ್ಜೆ ಸಚಿವರ ಸ್ಥಾನಮಾನ ಹೊಂದಿರುವಂತ (ಶಾಸಕರು ಅಥವಾ ಶಾಸಕರೇತರರು) ವ್ಯಕ್ತಿಗಳು** |
| **21 (ಬ)** | **ಕರ್ನಾಟಕ ವಿಧಾನಸಭಾ ಸದಸ್ಯರುಗಳು** |
| | **ಕರ್ನಾಟಕ ವಿಧಾನ ಪರಿಷತ್ ಸದಸ್ಯರುಗಳು** |
| 22 | ಇತರ ರಾಜ್ಯಗಳ ಉಪ ಸಚಿವರುಗಳು |
| 23 | ಸೇನಾ ಕಮ್ಯಾಂಡರ್‌ಗಳು / ಸೇನಾ ಸಿಬ್ಬಂದಿಯ ಅಥವಾ ಇತರ ಸೇವೆಗಳಲ್ಲಿನ ತತ್ಸಮಾನ ದರ್ಜೆಯ ಉಪ ಮುಖ್ಯಸ್ಥರುಗಳು |
| | ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ / ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದದ ಅಧಿಕಾರಿಗಳು |
| | ಭಾಷಾ ಅಲ್ಪಸಂಖ್ಯಾತರ ಆಯುಕ್ತರು, ಭಾರತ ಸರ್ಕಾರ |
| | ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯುಕ್ತರು, ಭಾರತ ಸರ್ಕಾರ |
| | ಸದಸ್ಯರುಗಳು, ಅಲ್ಪಸಂಖ್ಯಾತರ ಆಯೋಗ, ಭಾರತ ಸರ್ಕಾರ |
| | ಸದಸ್ಯರು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗ, ಭಾರತ ಸರ್ಕಾರ |
| | ಫುಲ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು |
| | ಮಹಾ ಕಾರ್ಯದರ್ಶಿ / ಕಾರ್ಯದರ್ಶಿ, ರಾಜ್ಯಸಭೆ / ಲೋಕಸಭೆ |
| | ಅಲ್ಪಸಂಖ್ಯಾತರ ಆಯೋಗದ ಕಾರ್ಯದರ್ಶಿ, ಭಾರತ ಸರ್ಕಾರ |
| | ರಾಷ್ಟ್ರಪತಿಗಳ ಕಾರ್ಯದರ್ಶಿ |
| | ಪ್ರಧಾನ ಮಂತ್ರಿಗಳ ಕಾರ್ಯದರ್ಶಿ |
| | ಕಾರ್ಯದರ್ಶಿ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗ, ಭಾರತ ಸರ್ಕಾರ |
| | ಭಾರತ ಸರ್ಕಾರದ ಕಾರ್ಯದರ್ಶಿಗಳು ಮತ್ತು ವಿಶೇಷ ಕಾರ್ಯದರ್ಶಿಗಳು (ಪದನಿಮಿತ್ತ ಹುದ್ದೆ ಹೊಂದಿರುವ ಅಧಿಕಾರಿಗಳನ್ನೂ ಒಳಗೊಂಡಂತೆ) |
| | ಸಾಲಿಸಿಟರ್ ಜನರಲ್ |
| | ಉಪಾಧ್ಯಕ್ಷರು, ಕೇಂದ್ರ ಆಡಳಿತ ನ್ಯಾಯಮಂಡಳಿ / ಕರ್ನಾಟಕ ಆಡಳಿತ ನ್ಯಾಯಮಂಡಳಿ |

| | |
|---|---|
| 24 | ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ |
| | ಲೆಫ್ಟಿನೆಂಟ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಅಧಿಕಾರಿಗಳು |
| | ಅರಣ್ಯಗಳ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ದಳದ ಮುಖ್ಯಸ್ಥರು |
| 25 | ಭಾರತ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ಕರ್ನಾಟಕದ ತತ್ಸಮಾನ ದರ್ಜೆಯ ಅಧಿಕಾರಿಗಳು |
| | ಹೆಚ್ಚುವರಿ ಸಾಲಿಸಿಟರ್ ಜನರಲ್ |
| | ಕರ್ನಾಟಕದ ಅಡ್ವೊಕೇಟ್ ಜನರಲ್ |
| | ಅಧ್ಯಕ್ಷರು, ಆಮದು-ರಫ್ತು ಸುಂಕ ಆಯೋಗ |
| | ಉಪ ರಾಯಭಾರಿ ಮತ್ತು ಕಾರ್ಯಾರ್ಥ / ಹೈಕಮೀಷನರ್ ಎ-ಪೈಡ್ ಅಂಡ್ ಆಡ್-ಇಂಟೆರಿಮ್ |
| | ಉಪ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು |
| | ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಉಪ ಸಭಾಧ್ಯಕ್ಷರುಗಳು ಮತ್ತು ಉಪಾಧ್ಯಕ್ಷರು, ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್ (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ) |
| | ಅಭಿವೃದ್ಧಿ ಆಯುಕ್ತರು, ಕರ್ನಾಟಕ |
| | ನಿರ್ದೇಶಕರು, ಕೇಂದ್ರ ತನಿಖಾ ದಳ |
| | ಮಹಾ ನಿರ್ದೇಶಕರು, ಗಡಿ ಭದ್ರತಾ ಪಡೆ |
| | ಮಹಾ ನಿರ್ದೇಶಕರು, ಕೇಂದ್ರ ಮೀಸಲು ಪೊಲೀಸ್ |
| | ನಿರ್ದೇಶಕರು, ಗುಪ್ತವಾರ್ತಾ ಸಂಸ್ಥೆ |
| | ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗೌವರ್ನರ್‌ಗಳು (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ) |
| | ಸದಸ್ಯರುಗಳು, ಕೇಂದ್ರ ಆಡಳಿತ ನ್ಯಾಯಮಂಡಳಿ / ಕರ್ನಾಟಕ ಆಡಳಿತ ನ್ಯಾಯಮಂಡಳಿ |
| | ಸದಸ್ಯರುಗಳು, ಕರ್ನಾಟಕ ಲೋಕಸೇವಾ ಆಯೋಗ **(*)** |
| | ಸದಸ್ಯರುಗಳು, ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿಗಳ ಆಯೋಗ |
| | ಸದಸ್ಯರುಗಳು, ಕೇಂದ್ರ ಲೋಕಸೇವಾ ಆಯೋಗ |
| | ಕೇಂದ್ರಾಡಳಿತ ಪ್ರದೇಶಗಳ ಸಚಿವರುಗಳು ಮತ್ತು ಕಾರ್ಯನಿರ್ವಾಹಕ ಕೌನ್ಸಿಲರ್, ದೆಹಲಿ (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ) |
| | ಕರ್ನಾಟಕ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು |
| | ಮೇಜರ್ ಜನರಲ್ ದರ್ಜೆಯ ಅಥವಾ ತತ್ಸಮಾನ ದರ್ಜೆಯ ಸಶಸ್ತ್ರ ದಳಗಳ ಪ್ರಧಾನ ಸಿಬ್ಬಂದಿ ಅಧಿಕಾರಿಗಳು |
| | ರಾಜ್ಯ ಮಾಹಿತಿ ಆಯುಕ್ತರು |
| | ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಸಭಾಧ್ಯಕ್ಷರುಗಳು ಮತ್ತು ದೆಹಲಿ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅಧ್ಯಕ್ಷರು (ಕರ್ನಾಟಕಕ್ಕೆ ಅವರು ಭೇಟಿ ನೀಡಿದ ಅವಧಿಯಲ್ಲಿ) |
| 26 | ಪೊಲೀಸ್ ಕಮಿಷನರ್, ಬೆಂಗಳೂರು ಸೇರಿದಂತೆ ಹೆಚ್ಚುವರಿ ಡಿ.ಜಿ.ಪಿ ಗಳು ಮತ್ತು ಪೊಲೀಸ್ ಮಹಾನಿರೀಕ್ಷಕರು |
| | ಅರಣ್ಯ ಇಲಾಖೆಯ ಹೆಚ್ಚುವರಿ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿ |
| | ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು |
| | ಹಿಂದುಳಿದ ವರ್ಗಗಳ ಆಯೋಗದ ಸದಸ್ಯರುಗಳು |
| | ಮೇಜರ್-ಜನರಲ್ ದರ್ಜೆಯ ಅಧಿಕಾರಿಗಳು |
| | ಕರ್ನಾಟಕದಲ್ಲಿನ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳು |
| | ಕರ್ನಾಟಕ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿಗಳು |
| | ಕರ್ನಾಟಕ ಸರ್ಕಾರದ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು |
| 27 | ಮಹಾಲೇಖಾಪಾಲರು, ಕರ್ನಾಟಕ |
| | ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳು |
| | ಕರ್ನಾಟಕ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು |
| | ಬ್ರಿಗೇಡಿಯರ್, ಕೇಂದ್ರ ಕಾರ್ಯಸ್ಥಾನ, ಕರ್ನಾಟಕ ಮತ್ತು ಗೋವಾ ಉಪ-ಪ್ರದೇಶ |
| | ಕೇಂದ್ರ ಅಬಕಾರಿ ಕಲೆಕ್ಟರ್, ಕರ್ನಾಟಕ |

| | |
|---|---|
| | ಆದಾಯ ತೆರಿಗೆ ಆಯುಕ್ತರು, ಕರ್ನಾಟಕ |
| | ಪೊಲೀಸ್ ಉಪ ಮಹಾನಿರೀಕ್ಷಕರು |
| | ಅರಣ್ಯ ಸಂರಕ್ಷಣಾಧಿಕಾರಿ |
| | ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು |
| | ಪ್ರಧಾನ ವ್ಯವಸ್ಥಾಪಕರು, ದೂರ ಸಂಪರ್ಕ |
| | ಪೋಸ್ಟ್ ಮಾಸ್ಟರ್ ಜನರಲ್, ಕರ್ನಾಟಕ |
| | ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ / ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು |
| | ಕರ್ನಾಟಕದಲ್ಲಿನ ವಿಶ್ವವಿದ್ಯಾಲಯಗಳ ಕುಲಪತಿಗಳು |
| 28 | ಐಎಎಫ್‌ನಲ್ಲಿ ಹಾಗೂ ಭಾರತೀಯ ನೌಕಾಪಡೆಯಲ್ಲಿ ಬ್ರಿಗೇಡಿಯರ್ ಮತ್ತು ತತ್ಸಮಾನ ದರ್ಜೆ ಹೊಂದಿರುವ ಅಧಿಕಾರಿಗಳು |
| | ಜಿಲ್ಲೆಯ ಜಿಲ್ಲಾಧಿಕಾರಿಗಳು (ಅವರಿಗೆ ಸಂಬಂಧಪಟ್ಟ ಜಿಲ್ಲೆಗಳಲ್ಲಿ) |
| | ಕರ್ನಾಟಕ ಸರ್ಕಾರದ ಜಂಟಿ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದ |
| | ಸದಸ್ಯರುಗಳು, ರಾಜ್ಯ ಯೋಜನಾ ಮಂಡಳಿ |
| | ಇತರ ಪ್ರಮುಖ ಇಲಾಖಾ ಮುಖ್ಯಸ್ಥರುಗಳು |
| 29 | ರಕ್ಷಣಾಪಡೆಗಳಲ್ಲಿನ ಕರ್ನಲ್ ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು |
| | ಕರ್ನಾಟಕ ಸರ್ಕಾರದ ಉಪ ಕಾರ್ಯದರ್ಶಿಗಳು ಮತ್ತು ತತ್ಸಮಾನ ವೃಂದಗಳು |
| | ಅರಣ್ಯ ಉಪ ಸಂರಕ್ಷಣಾಧಿಕಾರಿ (ಐಎಫ್‌ಎಸ್ ಮಾತ್ರ) |
| | ರಕ್ಷಣಾ ಪಡೆಗಳಲ್ಲಿನ ಲೆಫ್ಟಿನೆಂಟ್ ಕರ್ನಲ್ ಮತ್ತು ತತ್ಸಮಾನ ದರ್ಜೆಯ ಅಧಿಕಾರಿಗಳು |
| | ಇಲಾಖೆಗಳ ಇತರ ಉಪ, ಜಂಟಿ ಮತ್ತು ಹೆಚ್ಚುವರಿ ಮುಖ್ಯಸ್ಥರುಗಳು |
| | ವಿಶೇಷ ಡೆಪ್ಯುಟಿ ಕಮೀಷನರುಗಳು ಮತ್ತು ಇತರ ತತ್ಸಮಾನ ವೃಂದಗಳು |
| | ಜಿಲ್ಲೆಗಳ ಪೊಲೀಸ್ ಅಧೀಕ್ಷಕರುಗಳು |
| 30 | ಉಪ-ವಿಭಾಗಗಳ ಉಪ ವಿಭಾಗಾಧಿಕಾರಿಗಳು ಮತ್ತು ತತ್ಸಮಾನ ವೃಂದಗಳು |
| | ಉಪ ನಿರ್ದೇಶಕರುಗಳು (ಹಿರಿಯ ಶ್ರೇಣಿ) ಮತ್ತು ತತ್ಸಮಾನ ವೃಂದಗಳು |
| | ಕಿರಿಯ ಶ್ರೇಣಿಯ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು |
| | ಐಎಫ್‌ಎಸ್ ಕಿರಿಯ ಶ್ರೇಣಿಯ ಅಧಿಕಾರಿಗಳು |

| | |
|---|---|
| **ಟಿಪ್ಪಣಿ:** | **(*) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 01 ಹೆಚ್‌ಡಬ್ಲ್ಯೂಪಿ 2020, ದಿನಾಂಕ: 23.11.2020ರನ್ವಯ ಮಾರ್ಪಡಿಸಲಾಗಿದೆ.** |

## ಟಿಪ್ಪಣಿಗಳು

| | |
|---|---|
| **ಟಿಪ್ಪಣಿ:1** | ಈ ಆದ್ಯತಾ ಸೂಚಿಪಟ್ಟಿಯಲ್ಲಿನ ಕ್ರಮವನ್ನು ರಾಜ್ಯ ಮತ್ತು ಸಮಾರಂಭದ ಸಂದರ್ಭಗಳಿಗಾಗಿ ಯೋಜಿಸಲಾಗಿದೆ, ಆದರೆ ಅದು ಸರ್ಕಾರದ ದೈನಂದಿನ ವ್ಯವಹಾರಕ್ಕೆ ಅನ್ವಯವಾಗುವುದಿಲ್ಲ. |
| **ಟಿಪ್ಪಣಿ:2** | ಆದ್ಯತಾ ಸೂಚಿಪಟ್ಟಿಯಲ್ಲಿನ ವ್ಯಕ್ತಿಗಳು, ಅನುಚ್ಛೇದಗಳ ಸಂಖ್ಯೆಯ ಕ್ರಮದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಈ ಅನುಚ್ಛೇದಗಳಲ್ಲಿನ ನಮೂದುಗಳನ್ನು ಆಂಗ್ಲಭಾಷೆಯ ವರ್ಣಮಾಲೆಯ ಕ್ರಮವಾಗಿ ಅಳವಡಿಸಲಾಗಿದೆ. ಒಂದೇ ಅನುಚ್ಛೇದದಲ್ಲಿ ಸೇರ್ಪಡೆಗೊಂಡಿರುವಂಥವರು ಆ ಅನುಚ್ಛೇದಗಳಲ್ಲಿ ಸೇರ್ಪಡೆಗೊಂಡ ದಿನಾಂಕದ ಅನುಸಾರ ಪರಸ್ಪರ ಆದ್ಯತೆಯನ್ನು ಪಡೆಯುತ್ತಾರೆ. ಆದರೂ, ಒಂದೇ ಅನುಚ್ಛೇದದಲ್ಲಿ ಒಳಗೊಂಡಿರುವಂಥ ವಿವಿಧ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಗಣ್ಯವ್ಯಕ್ತಿಗಳು, ಅವರ ರಾಜ್ಯಗಳ ಅಥವಾ ಕೇಂದ್ರಾಡಳಿತ ಪ್ರದೇಶಗಳ ಹೊರಗೆ ಸಮಾರಂಭಕ್ಕೆ ಹಾಜರಾಗಿರುವಲ್ಲಿ ಮತ್ತು ಅವರ ನಮೂದಿನ ದಿನಾಂಕಗಳನ್ನು ಖಚಿತಪಡಿಸುವುದು ಕಷ್ಟವಾದರೆ, ಅವರು ಆ ಅನುಚ್ಛೇದದಲ್ಲಿ ಪ್ರವೇಶ ಪಡೆದ ದಿನಾಂಕದ ಅನುಸಾರವಾಗಿ ಯಾರ ಆದ್ಯತೆಯನ್ನು ನಿರ್ಧರಿಸಲಾಗಿದೆಯೋ ಅಂಥವರ ನಂತರ ಸಂಬಂಧಪಟ್ಟ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಹೆಸರುಗಳ ಅಕಾರಾದಿ ಕ್ರಮದಲ್ಲಿ ಅವರ ನಡುವೆ ಪರಸ್ಪರ ಆದ್ಯತೆಯನ್ನು ಗೊತ್ತುಪಡಿಸಬಹುದು. |
| **ಟಿಪ್ಪಣಿ: 2 (ಎ)** | ಆದ್ಯತಾ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲ್ಲಿರುವವರುಗಳ ನಡುವೆ ಆದ್ಯತೆ ನೀಡುವಾಗ ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯ ಪತ್ರ ಸಂಖ್ಯೆ 12/07/2016 ಪಬ್ಲಿಕ್, ದಿನಾಂಕ: 02.01.2017ರಲ್ಲಿ ಅಭಿಪ್ರಾಯಿಸಿದಂತೆ "ಯಾವ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಮೇಲಿನ ಸ್ಥಾನವನ್ನು ನಿಗದಿಪಡಿಸುವುದು". |

| | |
|---|---|
| **ಟಿಪ್ಪಣಿ:3** | ಅನುಚ್ಛೇದ 7ರಲ್ಲಿ, ಮಾಜಿ ಪ್ರಧಾನ ಮಂತ್ರಿಗಳು ಕೇಂದ್ರದ ಕ್ಯಾಬಿನೆಟ್ ದರ್ಜೆ ಸಚಿವರ ಮತ್ತು ರಾಜ್ಯಸಭೆ ಹಾಗೂ ಲೋಕಸಭೆಯಲ್ಲಿನ ವಿರೋಧಪಕ್ಷದ ನಾಯಕರಿಗಿಂತ ಮೇಲೆ ಆದ್ಯತೆಯನ್ನು ಪಡೆಯುತ್ತಾರೆ. ರಾಜ್ಯಗಳ ಮುಖ್ಯ ಮಂತ್ರಿಗಳು, ಅವರವರ ರಾಜ್ಯಗಳೊಳಗೆ, ಅವರವರ ರಾಜ್ಯಗಳಲ್ಲಿ ನಡೆಯುವ ಸರ್ಕಾರಿ ಸಮಾರಂಭಗಳಲ್ಲಿ ಕೇಂದ್ರದ ಕ್ಯಾಬಿನೆಟ್ ದರ್ಜೆ ಸಚಿವರಿಗಿಂತ ಮೇಲೆ ಆದ್ಯತೆಯನ್ನು ಪಡೆಯುತ್ತಾರೆ. |
| **ಟಿಪ್ಪಣಿ:4** | ಅನುಚ್ಛೇದ 8ರಲ್ಲಿ - |
| **(ಎ)** | ಭಾರತಕ್ಕೆ ಕಳುಹಿಸಲ್ಪಟ್ಟಿರುವ ಕಾಮನ್‌ವೆಲ್ತ್ ದೇಶಗಳ ವಿಶೇಷ ರಾಯಭಾರಿಗಳು ಮತ್ತು ಪೂರ್ಣಾಧಿಕಾರವುಳ್ಳ ರಾಯಭಾರಿ ಹಾಗೂ ಹೈ ಕಮಿಷನರುಗಳು, ಸಂಬಂಧಪಟ್ಟ ರಾಜ್ಯಗಳ ಹೊರಗಿನ ರಾಜ್ಯದ ರಾಜ್ಯಪಾಲರುಗಳ ಮೇಲೆ ಒಟ್ಟಾಗಿ ಸ್ಥಾನವನ್ನು ಪಡೆಯುತ್ತಾರೆ. |
| **(ಬಿ)** | ರಾಜ್ಯಗಳ ರಾಜ್ಯಪಾಲರುಗಳು ತಮ್ಮ ತಮ್ಮ ರಾಜ್ಯಗಳ ಹೊರಗೆ, ತಮ್ಮ ರಾಜ್ಯಗಳ ಹೊರಗಿನ ರಾಜ್ಯಗಳ ಮುಖ್ಯ ಮಂತ್ರಿಗಳಿಗಿಂತ ಮೇಲೆ ಒಟ್ಟಾಗಿ ಸ್ಥಾನವನ್ನು ಪಡೆಯುತ್ತಾರೆ. |
| **ಟಿಪ್ಪಣಿ:5** | ವಿದೇಶಾಂಗ ವ್ಯವಹಾರಗಳ ಮಂತ್ರಾಲಯವು, ವಿದೇಶಿ ಗಣ್ಯರಿಗೆ ಮತ್ತು ಭಾರತೀಯ ರಾಯಭಾರಿಗಳಿಗೆ, ಹೈ ಕಮಿಷನರುಗಳಿಗೆ ಹಾಗೂ ಸಚಿವರ ಪೂರ್ಣಾಧಿಕಾರವುಳ್ಳ ರಾಯಭಾರಿಗಳಿಗೆ, ಅವರು ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸೂಕ್ತ ಸ್ಥಾನಗಳನ್ನು ನೀಡಬಹುದು. |
| **ಟಿಪ್ಪಣಿ:6** | ಟಿಪ್ಪಣಿ 2ರಲ್ಲಿ ವಿಧಿಸಲಾದ ಕಾರ್ಯವಿಧಾನದಲ್ಲಿ ಏನೇ ಇದ್ದರೂ, ಅನುಚ್ಛೇದ 10ರಲ್ಲಿ ವ್ಯಕ್ತಿಗಳಲ್ಲಿ ಪರಸ್ಪರ ಸ್ಥಾನ ಮತ್ತು ಆದ್ಯತೆಯನ್ನು ಈ ಮುಂದಿನ ಕ್ರಮದಲ್ಲಿ ನೀಡತಕ್ಕದ್ದು:<br>(i) ಉಪ ಸಭಾಪತಿ, ರಾಜ್ಯಸಭೆ<br>(ii) ಉಪ ಸಭಾಧ್ಯಕ್ಷರು, ಲೋಕಸಭೆ<br>(iii) ಕೇಂದ್ರದ ರಾಜ್ಯ ಸಚಿವರುಗಳು ಮತ್ತು ರಕ್ಷಣಾ ವಿಷಯಗಳಿಗೆ ಸಂಬಂಧಿಸಿದ ರಕ್ಷಣಾ ಮಂತ್ರಾಲಯದಲ್ಲಿನ ಯಾರೇ ಇತರ ಸಚಿವರು<br>(iv) ರಾಜ್ಯಗಳ ಉಪ ಮುಖ್ಯ ಮಂತ್ರಿಗಳು<br>(v) ಯೋಜನಾ ಆಯೋಗದ ಸದಸ್ಯರುಗಳು |
| | ಆದರೂ, ರಾಜ್ಯಗಳ ಉಪ ಮುಖ್ಯ ಮಂತ್ರಿಗಳು, ತಮ್ಮ ತಮ್ಮ ರಾಜ್ಯಗಳ ಹೊರಗೆ, ಈ ಅನುಚ್ಛೇದದಲ್ಲಿ ಉಲ್ಲೇಖಿಸಿರುವ ಎಲ್ಲಾ ಇತರ ಗಣ್ಯರಿಗಿಂತ ಯಾವಾಗಲೂ ಕೆಳಗಿನ ಸ್ಥಾನದಲ್ಲಿರುತ್ತಾರೆ. |
| **ಟಿಪ್ಪಣಿ:6 (ಎ)** | ಆದ್ಯತಾ ಸೂಚಿಯ ಟಿಪ್ಪಣಿ-2ರಲ್ಲಿ ವಿಧಿಸಲಾದ ಕಾರ್ಯ ವಿಧಾನವೇನೇ ಇದ್ದರೂ ಸಹ ವಿಧಾನಸಭೆಯನ್ನು ಪ್ರತಿನಿಧಿಸುವ ಸ್ಥಳೀಯ ವಿಧಾನಸಭೆ ಶಾಸಕರ ಅಧ್ಯಕ್ಷತೆಯಲ್ಲಿಯೇ ಸರ್ಕಾರದ ಕಾರ್ಯಕ್ರಮಗಳು ನಡೆಸತಕ್ಕದ್ದು. |
| **ಟಿಪ್ಪಣಿ:7** | ರಾಜ್ಯ ವಿಧಾನ ಪರಿಷತ್ತಿನ ಸಭಾಪತಿಯವರು, ವಿಧಾನ ಸಭಾಧ್ಯಕ್ಷರು ಒಂದೇ ದಿನ ಚುನಾಯಿತರಾಗಿದ್ದ ಸಂದರ್ಭದಲ್ಲಿ, ವಿಧಾನ ಪರಿಷತ್ತಿನ ಸಭಾಪತಿಯವರು ವಿಧಾನ ಸಭಾಧ್ಯಕ್ಷರಿಗಿಂತ ಮೇಲಿನ ಸ್ಥಾನವನ್ನು ಪಡೆಯುತ್ತಾರೆ. |
| **ಟಿಪ್ಪಣಿ:8** | ರಾಜ್ಯದ ಪ್ರಮುಖ ಸಮಾರಂಭಗಳಿಗೆ ಸಂಸತ್ ಸದಸ್ಯರನ್ನು ಒಟ್ಟಿಗೆ ಆಹ್ವಾನಿಸಿದಾಗ, ಅವರಿಗೆ ಮೀಸಲಾದ ಸ್ಥಾನಗಳು ಮುಖ್ಯ ನ್ಯಾಯಮೂರ್ತಿ, ಲೋಕಸಭಾ ಸ್ಪೀಕರ್, ರಾಯಭಾರಿಗಳು ಮುಂತಾದವರ ನಂತರ ಇರತಕ್ಕದ್ದು. |
| **ಟಿಪ್ಪಣಿ:9** | ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿಧಾನಸಭೆಗಳ ಸಭಾಧ್ಯಕ್ಷರು ಮತ್ತು ದೆಹಲಿಯ ಮೆಟ್ರೋಪಾಲಿಟನ್ ಕೌನ್ಸಿಲ್‌ನ ಅಧ್ಯಕ್ಷರು, ಒಂದೇ ಅನುಚ್ಛೇದದಲ್ಲಿ ಸೇರ್ಪಡೆ ಮಾಡಲಾದ ಮಂತ್ರಿಗಳಿಗಿಂತ ಹಾಗೂ ಕಾರ್ಯನಿರ್ವಾಹಕ ಕೌನ್ಸಿಲರುಗಳಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ. |

| | |
|---|---|
| **ಪ್ಪಣಿ:10** | ಅನುಚ್ಛೇದ 23ರಲ್ಲಿ - |
| | (ಎ) ವಿದೇಶಾಂಗ ಕಾರ್ಯದರ್ಶಿಯನ್ನು ಹೊರತುಪಡಿಸಿ ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿನ ಕಾರ್ಯದರ್ಶಿಗಳು, ತಮ್ಮ ತಮ್ಮ ನಡುವೆ ಭಾರತೀಯ ವಿದೇಶಾಂಗ ಸೇವೆಗಳ ಗ್ರೇಡ್-1ರಲ್ಲಿ ತಮ್ಮ ಜ್ಯೇಷ್ಠತೆಯ ಕ್ರಮದಲ್ಲಿ ಆದ್ಯತೆ ಪಡೆಯುತ್ತಾರೆ ಮತ್ತು ಅವರಿಬ್ಬರೂ ವಿದೇಶಾಂಗ ಕಾರ್ಯದರ್ಶಿಯ ನಂತರ ಆದ್ಯತೆ ಪಡೆಯುತ್ತಾರೆ. |

| | | |
|---|---|---|
| | (ಬಿ) | ಅಲ್ಪಸಂಖ್ಯಾತರ ಆಯೋಗದ ಸದಸ್ಯರುಗಳು ಮತ್ತು ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಆಯೋಗದ ಸದಸ್ಯರುಗಳು, ಯಾವಾಗಲೂ ಈ ಆಯೋಗಗಳ ಕಾರ್ಯದರ್ಶಿಗಳಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ. |
| | (ಸಿ) | ದೆಹಲಿ / ನವದೆಹಲಿಯಲ್ಲಿ ನಡೆಸಲಾಗುವ ಸರ್ಕಾರಿ ಸಮಾರಂಭಗಳಲ್ಲಿ, ಸೇನಾ ಕಮ್ಯಾಂಡರ್‌ಗಳು / ಸೇನಾ ಸಿಬ್ಬಂದಿಯ ಉಪ ಮುಖ್ಯಸ್ಥರು ಅಥವಾ ಇತರ ಸೇವೆಗಳಲ್ಲಿನ ತತ್ಸಮಾನರಾದವರು ಭಾರತ ಸರ್ಕಾರದ ಕಾರ್ಯದರ್ಶಿಗಳ ನಂತರ ಸ್ಥಾನ ಪಡೆಯುತ್ತಾರೆ. |
| **ಟಿಪ್ಪಣಿ:11** | | ಅನುಚ್ಛೇದ 25ರಲ್ಲಿ - |
| | (ಎ) | ವಿದೇಶಾಂಗ ವ್ಯವಹಾರಗಳ ಮಂತ್ರಾಲಯದಲ್ಲಿನ ಹೆಚ್ಚುವರಿ ಕಾರ್ಯದರ್ಶಿಗಳು ತಮ್ಮ ತಮ್ಮ ನಡುವೆ ಭಾರತೀಯ ವಿದೇಶಾಂಗ ಸೇವೆಗಳ ಗ್ರೇಡ್ II ರಲ್ಲಿ ಅವರ ಜ್ಯೇಷ್ಠತೆಯ ಕ್ರಮದಲ್ಲಿ ಆದ್ಯತೆ ಪಡೆಯುತ್ತಾರೆ. |
| | (ಬಿ) | ಹೆಚ್ಚುವರಿ ಸಾಲಿಸಿಟರ್ ಜನರಲ್‌ರವರು ರಾಜ್ಯಗಳ ಅಡ್ವೋಕೇಟ್ ಜನರಲ್‌ರಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ. |
| | (ಸಿ) | ಲೆಫ್ಟಿನೆಂಟ್ ಗವರ್ನರ್ ಗಳು ಮುಖ್ಯ ಮಂತ್ರಿಳಿಗಿಂತ ಮತ್ತು ದೆಹಲಿಯ ಮುಖ್ಯ ಕಾರ್ಯನಿರ್ವಾಹಕ ಕೌನ್ಸಿಲರ್ ಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ, ಹಾಗೂ ಮೇಲೆ ತಿಳಿಸಿರುವವರಲ್ಲಿ ಎರಡನೆಯವರು ವಿಧಾನ ಸಭಾಧ್ಯಕ್ಷರು ಮತ್ತು ಅಧ್ಯಕ್ಷರು, ಮೆಟ್ರೋಪಾಲಿಟಿನ್ ಕೌನ್ಸಿಲ್, ದೆಹಲಿ-ಇವರಿಗಿಂತ ಮೇಲೆ ಆದ್ಯತೆ ಪಡೆಯುತ್ತಾರೆ. |
| | (ಡಿ) | ಕೇಂದ್ರಾಡಳಿತ ಪ್ರದೇಶಗಳ ವಿಧಾನ ಸಭೆಗಳ ಉಪಸಭಾಧ್ಯಕ್ಷರು ಮತ್ತು ದೆಹಲಿಯ ಮೆಟ್ರೋಪಾಲಿಟನ್ ಕೌನ್ಸಿಲಿನ ಉಪ ಸಭಾಪತಿಯವರು ಕೇಂದ್ರಾಡಳಿತ ಪ್ರದೇಶಗಳ ಮಂತ್ರಿಗಳು ಹಾಗೂ ದೆಹಲಿಯ ಕಾರ್ಯನಿರ್ವಾಹಕ ಕೌನ್ಸಿಲರುಗಳ ನಂತರ ಆದ್ಯತೆ ಪಡೆಯುತ್ತಾರೆ. |
| **ಟಿಪ್ಪಣಿ:12** | | 26ನೇ ಅನುಚ್ಛೇದದ ಉದ್ದೇಶಕ್ಕಾಗಿ, ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳ ಹುದ್ದೆಗಳಿಗೆ ಸಮಾನವಾದ ಹುದ್ದೆಗಳನ್ನು ಗೃಹ ವ್ಯವಹಾರಗಳ ಮಂತ್ರಾಲಯವು ನಿರ್ಧರಿಸುತ್ತದೆ. |
| **ಟಿಪ್ಪಣಿ:13** | | ಅನುಚ್ಛೇದ 23 ರಿಂದ 28ರಲ್ಲಿ - |
| | | ರಕ್ಷಣಾ ಸೇವೆಯ ಅತ್ಯಂತ ಹಿರಿಯ ಪ್ರತಿನಿಧಿಗಳನ್ನು ಮತ್ತು ಪೊಲೀಸ್ ಮಹಾ ನಿರ್ದೇಶಕರನ್ನು ಸೇವಾ ಜ್ಯೇಷ್ಠತೆಯ ಕ್ರಮದಲ್ಲಿ ಮತ್ತು ಅವರು ಪ್ರತಿನಿಧಿಸುವ ಸೇನಾಪಡೆಯನ್ನು ಅಂದರೆ, ಭೂ ಸೇನೆ, ನೌಕಾಪಡೆ, ವಾಯುಪಡೆ ಮತ್ತು ಪೊಲೀಸ್ ಪಡೆಯ ಕ್ರಮದಲ್ಲಿ ಪರಿಚಯಿಸುವ ಆದರೆ, ಆದ್ಯತಾಸೂಚಿ ಪಟ್ಟಿಯಲ್ಲಿ ಆಯಾ ಅಧಿಕಾರಿಗಳ ಹುದ್ದೆಯ ಕ್ರಮವನ್ನು ಅನುಸರಿಸದೆ ಪರಿಚಯಿಸುವ ಈಗಿನ ಪದ್ಧತಿಯು ಗಣರಾಜ್ಯೋತ್ಸವ ದಿನಾಚರಣೆ ಮತ್ತು ಸ್ವಾತಂತ್ರ್ಯ ದಿನಾಚರಣೆಗಳಂದು ಆಂತರಿಕ ಸೇವೆಗಳ ಪೆರೇಡುಗಳ ಸಂದರ್ಭದಲ್ಲಿ ಮುಂದುವರೆಯತಕ್ಕದ್ದು. |
| | | ಇತರ ಎಲ್ಲಾ ಸಂದರ್ಭಗಳಲ್ಲಿ, ರಕ್ಷಣಾ ಸೇವೆಗಳ ಪ್ರತಿನಿಧಿಯನ್ನು ಮತ್ತು ಪೊಲೀಸ್ ಮಹಾ ನಿರ್ದೇಶಕರು / ಮಹಾ ನಿರೀಕ್ಷಕರನ್ನು ಆದ್ಯತಾ ಸೂಚಿಪಟ್ಟಿಯಲ್ಲಿ ಆಯಾ ಅಧಿಕಾರಿಯ ಹುದ್ದೆಯ ಕ್ರಮದಲ್ಲಿ ಪರಿಚಯಿಸಬಹುದೇ ಹೊರತು ಒಂದು ಸಮೂಹವಾಗಿ ಅಲ್ಲ. |

**(ಮೊಹಮ್ಮದ ನಯೀಮ್ ಮೊಮಿನ್)**
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಿಆಸುಇ (ರಾಜ್ಯ ಶಿಷ್ಟಾಚಾರ)

ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 12 ಹೆಚ್‌ಪಿಎ 2021

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:21.03.2022

## ಸುತ್ತೋಲೆ

**ವಿಷಯ:** ಗಣ್ಯ ವ್ಯಕ್ತಿಗಳ ಜಿಲ್ಲಾ ಪ್ರವಾಸದ ಸಂದರ್ಭಗಳಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು.

**ಉಲ್ಲೇಖ:** ಸುತ್ತೋಲೆ ಸಂಖ್ಯೆ:ಸಿಆಸುಇ 04 ಹೆಚ್‌ಪಿಎ 2019 ದಿನಾಂಕ:04.12.2020

******

ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ರಾಜ್ಯಪಾಲರು ಕೇಂದ್ರ ಸಚಿವರು, ಮುಖ್ಯಮಂತ್ರಿಗಳು/ಉಪ ಮುಖ್ಯಮಂತ್ರಿಗಳು, ಸಚಿವರುಗಳು ಸೇರಿದಂತೆ ಇತರೆ ಗಣ್ಯವ್ಯಕ್ತಿಗಳು ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲಾಗಿರುವ ಎಲ್ಲಾ ಸುತ್ತೋಲೆಗಳನ್ನು ಹಿಂಪಡೆದು, ಉಲ್ಲೇಖಿತ ಸುತ್ತೋಲೆಯಲ್ಲಿ ಹೊಸದಾಗಿ ಸಮಗ್ರವಾದ ಸೂಚನೆಗಳನ್ನು ನೀಡಲಾಗಿದೆ. ಸದರಿ ಸುತ್ತೋಲೆಯಲ್ಲಿ ವಿಧಾನ ಪರಿಷತ್ತಿನ ಸಭಾಪತಿಯವರು, ಸಭಾಧ್ಯಕ್ಷರು ಹಾಗೂ ವಿಧಾನ ಮಂಡಲದ ಸಮಿತಿಗಳು ಅಧಿಕೃತ ಕರ್ತವ್ಯದ ಮೇಲೆ ಜಿಲ್ಲಾ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅನುಸರಿಸಬೇಕಾದ ಶಿಷ್ಟಾಚಾರ ಕ್ರಮಗಳನ್ನು ಸೇರ್ಪಡಿಸಿ, ಈ ಕೆಳಕಂಡಂತೆ ಸಮಗ್ರವಾದ ಸೂಚನೆಗಳನ್ನು ನೀಡಿದೆ.

| **ಅ.** | **ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ಪ್ರವಾಸದ ಸಂದರ್ಭದಲ್ಲಿ:** |
|---|---|
| 1. | ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳು ರಾಜ್ಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೇಂದ್ರ ಗೃಹ ಸಚಿವಾಲಯದಿಂದ ಹೊರಡಿಸಲಾಗಿರುವ ನೀಲಿ ಪುಸ್ತಕದ (Blue Book) ಪ್ರಕಾರ ಹಾಗೂ ಸಂಬಂಧಪಟ್ಟ ಗಣ್ಯರ ಸಚಿವಾಲಯದಿಂದ ಸ್ವೀಕೃತವಾಗುವ ಲಿಖಿತ ನಿರ್ದೇಶನಗಳಂತೆ ಕ್ರಮ ವಹಿಸತಕ್ಕದ್ದು. |
| 2. | ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು ಮತ್ತು ಪ್ರಧಾನ ಮಂತ್ರಿಗಳ ಪ್ರವಾಸದ ಕಾರ್ಯಕ್ರಮದ ಪತ್ರ ಬಂದ ನಂತರ ಜಿಲ್ಲಾಡಳಿತವು ಈ ಸುತ್ತೋಲೆಗೆ ಲಗತ್ತಿಸಿದ ಅನುಬಂಧ-1 ಮತ್ತು ಅನುಬಂಧ-2ರಲ್ಲಿ ಕೋರಿರುವ ಮಾಹಿತಿಯನ್ನು ತಕ್ಷಣವೇ ಆಂಗ್ಲ ಭಾಷೆಯಲ್ಲಿ ಸಲ್ಲಿಸುವುದು. ಲೈನ್‌ಅಪ್‌ನ್ನು ಅನುಬಂಧ-3ರಲ್ಲಿ ನೀಡಿರುವ ಸೂಚನೆಗಳಂತೆ ತಯಾರಿಸುವುದು. |
| 3. | ಈ ಗಣ್ಯ ವ್ಯಕ್ತಿಗಳ ಭೇಟಿ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ತಮ್ಮ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಜಿಲ್ಲೆಯ ಇತರೆ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ಅನುಬಂಧ-4ರಲ್ಲಿ ನೀಡಿರುವ ಅಂಶಗಳ ಬಗ್ಗೆ ಚರ್ಚಿಸಿ ಎಲ್ಲಾ ರೀತಿಯ ಅವಶ್ಯ ಕ್ರಮ ಜರುಗಿಸುವುದು. |
| 4. | ಈ ಗಣ್ಯರ ಪ್ರವಾಸದ ಸಂದರ್ಭದಲ್ಲಿ ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಯ ಜೊತೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ನಿರಂತರ ಸಂಪರ್ಕದಲ್ಲಿದ್ದು ಶಿಷ್ಟಾಚಾರ ವ್ಯವಸ್ಥೆ ಮತ್ತು ಇತರೆ ಸಿದ್ಧತೆಗಳ ಕುರಿತು ಕ್ರಮ ವಹಿಸತಕ್ಕದ್ದು. |
| 4.1 | ವಸತಿ ಹಾಗೂ ಊಟೋಪಚಾರಕ್ಕೆ ತಗಲುವ ವೆಚ್ಚವನ್ನು ರಾಜ್ಯ ಶಿಷ್ಟಾಚಾರ ಶಾಖೆಯಿಂದ ನೀಡಲಾಗುವುದು. ಈ ವೆಚ್ಚವನ್ನು ರಾಜ್ಯ ಶಿಷ್ಟಾಚಾರ ಶಾಖೆಯ, ರಾಜ್ಯ ಆತಿಥ್ಯ ಸಂಸ್ಥೆಯಾದ ಕುಮಾರ ಕೃಪ ವಸತಿ ಗೃಹದ ಲೆಕ್ಕ ಶೀರ್ಷಿಕೆ 2070-00-115-1-01-051ರಡಿ ಭರಿಸುವುದು |

| | |
|---|---|
| 4.2 | ಈ ಗಣ್ಯ ವ್ಯಕ್ತಿಗಳ ಕಾನ್ವಾಯ್‌ಗೆ ಅವಶ್ಯವಿರುವ ಡಿ.ವಿ ವಾಹನಗಳನ್ನು ಇತರೆ ಜಿಲ್ಲೆಗಳಿಂದ ಒದಗಿಸಲು ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಯಿಂದ ಆದೇಶ ಹೊರಡಿಸಲಾಗುವುದು. ಈ ವಾಹನಗಳಿಗೆ ಇಂಧನವನ್ನು ಜಿಲ್ಲಾ ಕೇಂದ್ರಕ್ಕೆ ಡಿ.ವಿ ವಾಹನಕ್ಕಾಗಿ ನೀಡಿರುವ ಇಂಧನ ವೆಚ್ಚದ ಅನುದಾನದಿಂದ ಭರಿಸಬೇಕು. |
| 5. | ಈ ಗಣ್ಯ ವ್ಯಕ್ತಿಗಳನ್ನು ಕರೆತರುವ ಭಾರತೀಯ ವಾಯುಸೇನೆಯ ವಿಮಾನದ ಏರ್‌ಕ್ರೀವ್ (Air Crew) ಹಾಗೂ ಇತರೆ ತಾಂತ್ರಿಕ ಸಿಬ್ಬಂದಿಗಳಿಗೆ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಜಿಲ್ಲಾಡಳಿತದಿಂದ ವ್ಯವಸ್ಥೆ ಮಾಡುವುದು. |
| 5.1 | ವಿಮಾನದ ಏರ್‌ಕ್ರೀವ್ (Air Crew) ಹಾಗೂ ಇತರೆ ತಾಂತ್ರಿಕ ಸಿಬ್ಬಂದಿಗಳಿಗೆ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆ ನಿರ್ವಹಿಸಲು ಪ್ರತ್ಯೇಕ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸುವುದು. |
| 5.2 | ಪೈಲಟ್ ಹಾಗೂ ಕೊ-ಪೈಲಟ್‌ಗಳು ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮೂರು ಘಂಟೆಗಳ ಕಾಲಕ್ಕಿಂತ ಹೆಚ್ಚಿನ ಸಮಯ ಇರುವುದಾದರೆ ಅವರ ಬೇಡಿಕೆಯನುಗುಣವಾಗಿ ಪೈಲಟ್, ಕೊ-ಪೈಲಟ್ ಹಾಗೂ ಇತರೆ ತಾಂತ್ರಿಕ ಸಿಬ್ಬಂದಿಗಳಿಗೆ ಸರ್ಕಾರಿ ವಸತಿ ಗೃಹದಲ್ಲಿ ಉತ್ತಮ ವಸತಿ ಹಾಗೂ ಊಟೋಪಚಾರ ಕಲ್ಪಿಸುವುದು. ಒಂದು ವೇಳೆ ಸರ್ಕಾರಿ ವಸತಿ ಗೃಹ ಲಭ್ಯವಿಲ್ಲದಿದ್ದಲ್ಲಿ, ಮೂರು ಸ್ಟಾರ್ ಹೋಟೆಲ್ ದರ್ಜೆ ಹೋಟೆಲ್‌ಗಳಲ್ಲಿ ವಸತಿ ಹಾಗೂ ಊಟೋಪಚಾರ ಕಲ್ಪಿಸುವುದು. |
| 5.3 | ಒಬ್ಬ ಗ್ರೇಡ್-1 ಅಧಿಕಾರಿಗೆ ಒಂದು ಕೊಠಡಿಯಂತೆ ಮತ್ತು ಎರಡು ಗ್ರೇಡ್-2 ಅಧಿಕಾರಿಗಳಿಗೆ ಒಂದು ಕೊಠಡಿಯಂತೆ ವಸತಿ ಸೌಲಭ್ಯ ಒದಗಿಸುವುದು ಮತ್ತು ಒಂದು ವೇಳೆ ಗಗನಸಖಿಯರು ಇದ್ದಲ್ಲಿ ಒಬ್ಬರಿಗೆ ಒಂದರಂತೆ ಕೊಠಡಿ ನೀಡುವುದು. |
| 5.4 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳು ಮತ್ತು ಅಂತಹ ಡಿ.ವಿ ವಾಹನಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ, ಜಿಲ್ಲೆಯ ಇತರೆ ಇಲಾಖೆಗಳಿಂದ ವಾಹನವನ್ನು ಪಡೆದು ಅಥವಾ ಖಾಸಗಿ ಸಂಸ್ಥೆಯಿಂದ ವಾಹನಗಳನ್ನು ಬಾಡಿಗೆ ಆಧಾರದ ಮೇಲೆ ಪಡೆದು ಸಾರಿಗೆ ವ್ಯವಸ್ಥೆಯನ್ನು ಮಾಡತಕ್ಕದ್ದು. |
| 5.5 | ಸಾಮಾನ್ಯವಾಗಿ ಅಧಿಕಾರಿಗಳ ಬಳಕೆಗಾಗಿ ಎರಡು ಕಾರುಗಳನ್ನು ಮಾತ್ತು ಇತರೆ ತಾಂತ್ರಿಕ ಸಿಬ್ಬಂದಿಗಳ ಉಪಯೋಗಕ್ಕೆ ಹಾಗೂ ಲಗೇಜುಗಳನ್ನು ಸಾಗಿಸಲು 15 ಸೀಟು ಸಾಮ್ಯರ್ಥ್ಯವುಳ್ಳ ಒಂದು ವ್ಯಾನ್ ಒದಗಿಸುವುದು. ಗಗನಸಖಿಯರು ಇದ್ದಲ್ಲಿ ಅವರ ಉಪಯೋಗಕ್ಕೆ ಒಂದು ಹೆಚ್ಚುವರಿ ಕಾರನ್ನು ಪ್ರತ್ಯೇಕವಾಗಿ ಒದಗಿಸುವುದು. |
| 5.6 | ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಪತ್ರ ಸಂಖ್ಯೆ: Air HQ / 25654 / 21 / Accts / Aircrew, ದಿನಾಂಕ:12.07.2018 ಮತ್ತು ID No: 9(12) / 2018 / AF(P&W) 01 May 2019ರನ್ವಯ ಈ ಸಿಬ್ಬಂದಿಗಳಿಗೆ ಒದಗಿಸಲಾಗುವ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯ ವೆಚ್ಚದ ಬಿಲ್ಲುಗಳನ್ನು ಸಿದ್ಧಪಡಿಸಿ ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯಿಂದ ಹಿಂಪಡೆಯಲು ಅಗತ್ಯ ಕ್ರಮ ಕೈಗೊಳ್ಳುವುದು. ಸದರಿ ಪತ್ರದ ಮಾರ್ಗಸೂಚಿಗಳನ್ನು ಅನುಬಂಧ-5ರಲ್ಲಿ ಇಡಲಾಗಿದೆ. |
| 5.7 | ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯಿಂದ ಊಟ, ವಸತಿ ಮತ್ತು ಸಾರಿಗೆ ವ್ಯವಸ್ಥೆಯ ವೆಚ್ಚದ ಬಿಲ್ಲುಗಳನ್ನು ಹಿಂಪಡೆಯಲು ಅನುಬಂಧ-6ರಲ್ಲಿ ಸೂಚಿಸಿರುವ ನಮೂನೆಯಲ್ಲಿ ಹಾಗೂ ಅದರಲ್ಲಿ ನಮೂದಿಸಿರುವ ಪ್ರಮಾಣ ಪತ್ರ Accommodation Certificate, Reasonability Certificate ಮತ್ತು ಬ್ಯಾಂಕ್ ಖಾತೆಯ ವಿವರಗಳು ಹಾಗೂ ಮೂರು MT Proforma, Hotel Bills and Vouchers ಗಳೊಂದಿಗೆ ಪ್ರಸ್ತಾವನೆಯನ್ನು ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಗೆ ಸಲ್ಲಿಸುವುದು. ಈ ಪ್ರಯುಕ್ತ ಬಳಕೆ ಮಾಡುವ MT PROFORMA ಪ್ರತಿಯನ್ನು ಅನುಬಂಧ-7ರಲ್ಲಿ ಇಡಲಾಗಿದೆ. |
| 6. | ಈ ಗಣ್ಯ ವ್ಯಕ್ತಿಗಳ ಭದ್ರತೆಗೆ ಆಗಮಿಸುವ ಎಸ್.ಪಿ.ಜಿ, ಎನ್.ಎಸ್.ಜಿ ಹಾಗೂ ಅರೆ ಸೈನಿಕ ಪಡೆ (ಪ್ಯಾರಾ ಮಿಲಿಟರಿ) ಅಧಿಕಾರಿ / ಸಿಬ್ಬಂದಿಗಳಿಗೆ ಸೂಕ್ತ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಜಿಲ್ಲಾಡಳಿತ ಮಾಡುವುದು. |
| 6.1 | ಸದರಿ ಎಸ್.ಪಿ.ಜಿ, ಎನ್.ಎಸ್.ಜಿ ಹಾಗೂ ಅರೆ ಸೈನಿಕ ಪಡೆ (ಪ್ಯಾರಾ ಮಿಲಿಟರಿ) ತಂಡದವರಿಗೆ ಮೇಲ್ಕಂಡ ಗಣ್ಯ ವ್ಯಕ್ತಿಗಳಿಗೆ ಏರ್ಪಡಿಸಿರುವ ವಸತಿಗೆ ಹತ್ತಿರದಲ್ಲಿಯೇ (ಸಾಧ್ಯವಾದಷ್ಟು) ಅವರಿಗೂ ವಸತಿ ಕಲ್ಪಿಸಬೇಕು. ಮತ್ತು ಸಾಮಾನ್ಯ ದರ್ಜೆಯ ಊಟೋಪಚಾರದ ವ್ಯವಸ್ಥೆಯನ್ನು ಮಾಡುವುದು. ಆದರೆ ಕೆಲವೊಂದು ವಿಶೇಷ |

| | |
|---|---|
| | ಸಂದರ್ಭಗಳಲ್ಲಿ ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಯ ನಿರ್ದೇಶನದನ್ವಯ ಕೈಗೊಂಡಲ್ಲಿ ವಸತಿ ಹಾಗೂ ಊಟೋಪಚಾರದ ಬಿಲ್ಲುಗಳನ್ನು ರಾಜ್ಯ ಶಿಷ್ಟಾಚಾರ ಶಾಖೆಯಿಂದ ಭರಿಸುವುದು. |
| 6.2 | ಈ ತಂಡದಲ್ಲಿ ಆಗಮಿಸುವ ರಕ್ಷಣಾ ಸಿಬ್ಬಂದಿಯವರಿಗೆ ವಿಮಾನ ನಿಲ್ದಾಣದಲ್ಲಿ ಅಥವಾ ರೈಲ್ವೆ ನಿಲ್ದಾಣದಲ್ಲಿ ಆಗಮಿಸುವ ಸಮಯದಿಂದ ಮೇಲ್ಕಂಡ ಗಣ್ಯ ವ್ಯಕ್ತಿಗಳ ರಕ್ಷಣಾ ಕಾರ್ಯ ಮುಗಿದ ನಂತರ ಹಿಂದಿರುಗುವವರೆಗೂ ಮತ್ತು ಕಾರ್ಯಕ್ರಮದ ನಿಮಿತ್ತ ಜಿಲ್ಲೆಯ ವಿವಿಧ ಸ್ಥಳಗಳಿಗೆ ಭೇಟಿ ನೀಡಲು ಹಾಗೂ ಪೂರ್ವಭಾವಿ ರಕ್ಷಣಾ ವ್ಯವಸ್ಥೆ ಮಾಡಲು ಅನುವಾಗುವಂತೆ ಅವರಿಗೆ ಪ್ರತ್ಯೇಕ ಸಾರಿಗೆ ವ್ಯವಸ್ಥೆಯನ್ನು ಮಾಡುವುದು. ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳು ಮತ್ತು ಅಂತಹ ಡಿ.ವಿ ವಾಹನಗಳು ಸಾಕಷ್ಟು ಸಂಖ್ಯೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ, ಜಿಲ್ಲೆಯ ಇತರೆ ಇಲಾಖೆಗಳಿಂದ ವಾಹನವನ್ನು ಪಡೆದು ರಕ್ಷಣಾ ವ್ಯವಸ್ಥೆಗಾಗಿ ವಾಹನ ಸೌಕರ್ಯವನ್ನು ಒದಗಿಸತಕ್ಕದ್ದು. ಈ ವಾಹನಗಳಿಗೆ ಇಂಧನವನ್ನು ಜಿಲ್ಲಾ ಕೇಂದ್ರಕ್ಕೆ ಡಿ.ವಿ ವಾಹನಕ್ಕಾಗಿ ನೀಡಿರುವ ಇಂಧನ ವೆಚ್ಚದ ಅನುದಾನದಿಂದ ಭರಿಸುವುದು. |
| **ಆ.** | **ಮಾನ್ಯ ಕೇಂದ್ರ ಸಚಿವರು ಹಾಗೂ ಇತರೆ ರಾಜ್ಯ ಅತಿಥಿಗಳ ಪ್ರವಾಸದ ಸಂದರ್ಭದಲ್ಲಿ:** |
| | ಮಾನ್ಯ ಮಾಜಿ ರಾಷ್ಟ್ರಪತಿಗಳು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು, ಮಾಜಿ ಉಪರಾಷ್ಟ್ರಪತಿಗಳು, ಮಾಜಿ ಪ್ರಧಾನ ಮಂತ್ರಿಗಳು, ಕರ್ನಾಟಕ ರಾಜ್ಯದ ಮಾಜಿ ರಾಜ್ಯಪಾಲರು, ಇತರೆ ರಾಜ್ಯದ ರಾಜ್ಯಪಾಲರುಗಳು, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು, ಇತರೆ ರಾಜ್ಯದ ಮುಖ್ಯಮಂತ್ರಿಗಳು, ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು, ಸರ್ವೋಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಮೂರ್ತಿಗಳು, ಇತರೆ ರಾಜ್ಯದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಮತ್ತು ಭಾರತರತ್ನ ಪ್ರಶಸ್ತಿ ವಿಜೇತರು ಯಾವುದೇ ಸಂದರ್ಭದಲ್ಲಿ ರಾಜ್ಯಕ್ಕೆ ಭೇಟಿ ನೀಡಿದಾಗ ರಾಜ್ಯ ಅತಿಥಿಗಳಾಗಿರುತ್ತಾರೆ. ಮತ್ತು ಲೋಕಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ಕೇಂದ್ರ ಸರ್ಕಾರದ ಸಂಪುಟ ದರ್ಜೆ / ರಾಜ್ಯ / ಉಪ ಸಚಿವರು, ರಾಜ್ಯ ಸಭೆಯ ಉಪಾಧ್ಯಕ್ಷರು ಸಂಸತ್ತಿನ (ಲೋಕಸಭೆ ಮತ್ತು ರಾಜ್ಯಸಭೆ) ವಿರೋಧ ಪಕ್ಷದ ನಾಯಕರುಗಳು ಒಳಗೊಂಡಂತೆ ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಯಿಂದ ಕಾಲಕಾಲಕ್ಕೆ ಹೊರಡಿಸುವ ರಾಜ್ಯ ಆತಿಥ್ಯ ನಿಯಮಗಳ ಪ್ರಕಾರ ರಾಜ್ಯ ಅತಿಥಿಗಳು ಎಂಬ ಶೀರ್ಷಿಕೆಯಡಿ ಯಾವ ಗಣ್ಯರು ಅಧಿಕೃತ ಕಾರ್ಯನಿಮಿತ್ತ / ಸರ್ಕಾರದ ಆಹ್ವಾನದ ಮೇರೆಗೆ ರಾಜ್ಯಕ್ಕೆ ಭೇಟಿ ನೀಡಿದಾಗ ರಾಜ್ಯ ಅತಿಥಿ ಎಂದು ಪರಿಗಣಿಸಲಾಗುವುದು. ಈ ರಾಜ್ಯ ಅತಿಥಿಗಳಿಗೆ ಕೆಳಕಂಡ ಶಿಷ್ಟಾಚಾರವನ್ನು ನೀಡುವುದು. |
| 1. | ಈ ಮೇಲ್ಕಂಡ ರಾಜ್ಯ ಅತಿಥಿಗಳ ಆಗಮನ ಮತ್ತು ನಿರ್ಗಮನದ ಸಂದರ್ಭಗಳಲ್ಲಿ ಅವರನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಈ ಕಾರ್ಯವನ್ನು ಜಿಲ್ಲಾಧಿಕಾರಿಗಳು ಅಥವಾ ಅವರ ಪರವಾಗಿ ಹಿರಿಯ ಅಧಿಕಾರಿಗಳನ್ನು ನೇಮಿಸುವುದರ ಮುಖಾಂತರ ಕ್ರಮ ಕೈಗೊಳ್ಳುವುದು. |
| 2. | ಈ ರಾಜ್ಯ ಅತಿಥಿಗಳಿಗೆ ರಾಜ್ಯ ಆತಿಥ್ಯ ನಿಯಮದ ಪ್ರಕಾರ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮಾಡುವುದು. |
| 3. | ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕ ಶೀರ್ಷಿಕೆ: 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. |
| 4. | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. |
| 5. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಈ ರಾಜ್ಯ ಅತಿಥಿಗಳಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು. |
| **ಇ.** | **ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರ ಪ್ರವಾಸದ ಸಂದರ್ಭದಲ್ಲಿ:** |
| 1. | ಕರ್ನಾಟಕ ರಾಜ್ಯದ ಮಾನ್ಯ ರಾಜ್ಯಪಾಲರು ಜಿಲ್ಲೆಗಳಿಗೆ ಭೇಟಿ ನೀಡಿದಾಗ ಅವರ ಆಗಮನ ಮತ್ತು ನಿರ್ಗಮನದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಜಿಲ್ಲೆಯ ಗಡಿಯಲ್ಲಿ ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. |
| 2. | ಮಾನ್ಯ ರಾಜ್ಯಪಾಲರು ಹಾಗೂ ಅವರೊಂದಿಗೆ ಆಗಮಿಸುವ ಕುಟುಂಬದ ಸದಸ್ಯರು ಹಾಗೂ ಅವರ ಆಪ್ತ ಶಾಖೆಯ ಅಧಿಕಾರಿ / ಸಿಬ್ಬಂದಿಗಳನ್ನು ರಾಜ್ಯ ಅತಿಥಿಗಳೆಂದು ಪರಿಗಣಿಸಿ ಅಗತ್ಯ ಶಿಷ್ಟಾಚಾರ ವ್ಯವಸ್ಥೆ ಮಾಡಲು ಜಿಲ್ಲಾಧಿಕಾರಿಗಳು ಕ್ರಮ ಕೈಗೊಳ್ಳುವುದು. |

| | |
|---|---|
| 3. | ಈ ರಾಜ್ಯ ಅತಿಥಿಗಳಿಗೆ ರಾಜ್ಯ ಆತಿಥ್ಯ ನಿಯಮದ ಪ್ರಕಾರ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮಾಡುವುದು. |
| 3.1 | ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕ ಶೀರ್ಷಿಕೆ 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. |
| 3.2 | ಮಾನ್ಯ ರಾಜ್ಯಪಾಲರು ಜಿಲ್ಲೆಗಳಿಗೆ ಭೇಟಿ ನೀಡಿದಾಗ ವಾಸ್ತವ್ಯವಿರುವ ಅತಿಥಿ ಗೃಹದಲ್ಲಿ ವ್ಯವಸ್ಥೆ ಬಗ್ಗೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಗೆ ಜವಾಬ್ದಾರಿ ನೀಡುವುದರೊಂದಿಗೆ ಅಪರ ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ ಮಟ್ಟದ ಹಿರಿಯ ಅಧಿಕಾರಿಯನ್ನು ಶಿಷ್ಟಾಚಾರ ನಿರ್ವಹಣೆಗಾಗಿ ನೇಮಿಸುವುದು. |
| 3.3 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. |
| 4. | ಮಾನ್ಯ ರಾಜ್ಯಪಾಲರು – ಚಾರ್ಟರ್ ವಿಮಾನ / ಹೆಲಿಕಾಪ್ಟರ್ ಮುಖಾಂತರ ಆಗಮಿಸಿದ್ದಲ್ಲಿ, ಸಂಬಂಧಪಟ್ಟ ಪೈಲೆಟ್, ಕೋ-ಪೈಲಟ್‌ಗಳೊಂದಿಗೆ ವ್ಯವಹರಿಸಲು ಹಾಗೂ ಹೆಲಿಕಾಪ್ಟರ್‌ನ ತಾಂತ್ರಿಕ ತೊಂದರೆಗಳಿದ್ದರೆ ಅವುಗಳ ವ್ಯವಸ್ಥೆ ಬಗ್ಗೆ ಹಾಗೂ ಪುನಃ ಇಂಧನ ತುಂಬುವ ಅವಶ್ಯಕತೆ ಇದ್ದರೆ ಅದರ ಬಗ್ಗೆ ಮೇಲುಸ್ತುವಾರಿ ಮಾಡಲು ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯನ್ನು ನೇಮಿಸುವುದು. |
| 5. | ಚಾರ್ಟರ್ ವಿಮಾನ / ಹೆಲಿಕಾಪ್ಟರ್‌ನ ತಾಂತ್ರಿಕ ವಿಷಯದ ಬಗ್ಗೆ ಆಗಲಿ, ಪುನಃ ಇಂಧನ ತುಂಬುವ ಬಗ್ಗೆ ಆಗಲಿ ಸಮನ್ವಯಿಸಲು ಹೆಲಿಕಾಪ್ಟರ್‌ನ ಸೇವೆ ಒದಗಿಸುವ ಖಾಸಗಿ ಸಂಸ್ಥೆಯು ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನೇಮಿಸುವುದು ಹಾಗೂ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಅಧೀನ ಕಾರ್ಯದರ್ಶಿಗಳು-2, ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಯಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಯವರು ಮುಂಚಿತವಾಗಿ ಪಡೆಯುವುದು. |
| 6. | ಪೈಲಟ್ ಹಾಗೂ ಕೊ-ಪೈಲಟ್‌ಗಳ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆ ನಿರ್ವಹಿಸಲು ಪ್ರತ್ಯೇಕ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸುವುದು. |
| 6.1 | ಪೈಲಟ್ ಹಾಗೂ ಕೊ-ಪೈಲಟ್‌ಗಳು ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮೂರು ಘಂಟೆಗಳ ಕಾಲಕ್ಕಿಂತ ಹೆಚ್ಚಿಗೆ ಸಮಯ ಇರುವುದಾದರೆ ಪೈಲಟ್, ಕೊ-ಪೈಲಟ್ ಹಾಗೂ ಇತರೆ ತಾಂತ್ರಿಕ ಸಿಬ್ಬಂದಿಗಳಿಗೆ ಸರ್ಕಾರಿ ವಸತಿ ಗೃಹದಲ್ಲಿ ಉತ್ತಮ ವಸತಿ ಹಾಗೂ ಊಟೋಪಚಾರ ಕಲ್ಪಿಸುವುದು. ಒಂದು ವೇಳೆ ಸರ್ಕಾರಿ ವಸತಿ ಗೃಹ ಲಭ್ಯವಿಲ್ಲದಿದ್ದಲ್ಲಿ, ಮೂರು ಸ್ಟಾರ್ ಹೋಟೆಲ್‌ಗಳಲ್ಲಿ ವಸತಿ ಹಾಗೂ ಊಟೋಪಚಾರ ಕಲ್ಪಿಸುವುದು. |
| 6.2 | ವಸತಿ, ಊಟೋಪಚಾರ ಹಾಗೂ ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಮಾಡತಕ್ಕದ್ದು. ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕ ಶೀರ್ಷಿಕೆ 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. ವಸತಿ ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಮಾಡಿರುವ ಮಾಹಿತಿಯನ್ನು ತಕ್ಷಣವೇ ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಗೆ ತಿಳಿಸುವುದು. ಈ ಮಾಹಿತಿ ಆಧಾರದ ಮೇಲೆ ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಯು ಚಾರ್ಟರ್ ವಿಮಾನ / ಹೆಲಿಕಾಪ್ಟರ್ ಸೇವೆ ಒದಗಿಸುವ ಖಾಸಗಿ ಸಂಸ್ಥೆಗೆ ಪಾವತಿಸಬೇಕಾದ ಹಣದಲ್ಲಿ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಗೆ ತಗುಲಿದ ವೆಚ್ಚವನ್ನು ಕಡಿತಗೊಳಿಸತಕ್ಕದ್ದು. |
| 6.3 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. |
| 7. | ಮಾನ್ಯ ರಾಜ್ಯಪಾಲರು ಭಾಗವಹಿಸುವ ಸಮಾರಂಭಗಳಲ್ಲಿ ವೇದಿಕೆ ಮೇಲೆ ಮಾನ್ಯ ರಾಜ್ಯಪಾಲರ ಆಸನದ ಹಿಂಭಾಗದಲ್ಲಿ ಮಾನ್ಯ ರಾಜ್ಯಪಾಲರುಗಳ ಎ.ಡಿ.ಸಿ ಹಾಗೂ ಆಪ್ತ ಕಾರ್ಯದರ್ಶಿಯವರಿಗೆ ಎರಡು ಆಸನಗಳನ್ನು ಕಾಯ್ದಿರಿಸುವುದು. |
| 8. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಮಾನ್ಯ ರಾಜ್ಯಪಾಲರಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು. |

| ಈ. | ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಪ್ರವಾಸದ ಸಂದರ್ಭದಲ್ಲಿ: |
|---|---|
| 1. | ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆ ಪ್ರವಾಸ ಮಾಡಿದಾಗ ಆಗಮನ ಮತ್ತು ನಿರ್ಗಮನ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ನಗರ ಪೊಲೀಸ್ ಆಯುಕ್ತರು ಅವರನ್ನು ಜಿಲ್ಲೆಯ ಗಡಿಯಲ್ಲಿ ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಮತ್ತು ಮಾನ್ಯ ಮುಖ್ಯಮಂತ್ರಿಗಳು ಇತರೆ ಜಿಲ್ಲೆಯ ಪ್ರವಾಸದ ಸಮಯದಲ್ಲಿ ಇನ್ನಿತರ ಯಾವುದೇ ಜಿಲ್ಲೆಯ ಮೂಲಕ ಹಾದುಹೋದಲ್ಲಿ ಅವರನ್ನು ತಮ್ಮ ಜಿಲ್ಲೆಗಳ ಗಡಿಯಲ್ಲಿ ಬರಮಾಡಿಕೊಂಡು ತಮ್ಮ ಜಿಲ್ಲೆಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಳನ್ನು ಒದಗಿಸುವುದು. |
| 2. | ಮಾನ್ಯ ಮುಖ್ಯಮಂತ್ರಿಗಳಿಗೆ ರಾಜ್ಯ ಆತಿಥ್ಯ ನಿಯಮದ ಪ್ರಕಾರ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮಾಡುವುದು. |
| 2.1 | ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕ ಶೀರ್ಷಿಕೆ 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. |
| 2.2 | ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆಗಳಿಗೆ ಭೇಟಿ ನೀಡಿದಾಗ ವಾಸ್ತವ್ಯವಿರುವ ಅತಿಥಿ ಗೃಹದಲ್ಲಿ ವ್ಯವಸ್ಥೆ ಬಗ್ಗೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಗೆ ಜವಾಬ್ದಾರಿ ನೀಡುವುದರೊಂದಿಗೆ ಅಪರ ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ ಮಟ್ಟದ ಹಿರಿಯ ಅಧಿಕಾರಿಯನ್ನು ಶಿಷ್ಟಾಚಾರ ನಿರ್ವಹಣೆಗಾಗಿ ನೇಮಿಸುವುದು. |
| 2.3 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. |
| 3. | ಮಾನ್ಯ ಮುಖ್ಯಮಂತ್ರಿಗಳು – ಹೆಲಿಕಾಪ್ಟರ್ ಮುಖಾಂತರ ಆಗಮಿಸಿದ್ದಲ್ಲಿ, ಸಂಬಂಧಪಟ್ಟ ಪೈಲೆಟ್ ಕೊ-ಪೈಲಟ್‌ಗಳೊಂದಿಗೆ ವ್ಯವಹರಿಸಲು ಹಾಗೂ ಹೆಲಿಕಾಪ್ಟರ್‌ನ ತಾಂತ್ರಿಕ ತೊಂದರೆಗಳಿದ್ದರೆ ಅವುಗಳ ವ್ಯವಸ್ಥೆ ಬಗ್ಗೆ ಹಾಗೂ ಪುನಃ ಇಂಧನ ತುಂಬುವ ಅವಶ್ಯಕತೆ ಇದ್ದರೆ ಅದರ ಬಗ್ಗೆ ಮೇಲುಸ್ತುವಾರಿ ಮಾಡಲು ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯನ್ನು ನೇಮಿಸುವುದು. |
| 4. | ಚಾರ್ಟರ್ ವಿಮಾನ / ಹೆಲಿಕಾಪ್ಟರ್‌ನ ತಾಂತ್ರಿಕ ವಿಷಯದ ಬಗ್ಗೆ ಆಗಲಿ, ಪುನಃ ಇಂಧನ ತುಂಬುವ ಬಗ್ಗೆ ಆಗಲಿ ಸಮನ್ವಯಿಸಲು ಹೆಲಿಕಾಪ್ಟರ್‌ನ ಸೇವೆ ಒದಗಿಸುವ ಖಾಸಗಿ ಸಂಸ್ಥೆಯು ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನೇಮಿಸುವುದು ಹಾಗೂ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿಯವರಿಂದ ಜಿಲ್ಲಾಧಿಕಾರಿಯವರು ಮುಂಚಿತವಾಗಿ ಪಡೆಯುವುದು. |
| 5. | ಪೈಲಟ್ ಹಾಗೂ ಕೊ-ಪೈಲಟ್‌ಗಳ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆ ನಿರ್ವಹಿಸಲು ಪ್ರತ್ಯೇಕ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸುವುದು. |
| 6. | ಪೈಲಟ್ ಹಾಗೂ ಕೊ-ಪೈಲಟ್‌ಗಳು ಯಾವುದೇ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಮೂರು ಘಂಟೆಗಳ ಕಾಲಕ್ಕಿಂತ ಹೆಚ್ಚಿಗೆ ಸಮಯ ಇರುವುದಾದರೆ ಪೈಲಟ್, ಕೊ-ಪೈಲಟ್ ಹಾಗೂ ಇತರೆ ತಾಂತ್ರಿಕ ಸಿಬ್ಬಂದಿಗಳಿಗೆ ಸರ್ಕಾರಿ ವಸತಿ ಗೃಹದಲ್ಲಿ ಉತ್ತಮ ವಸತಿ ಹಾಗೂ ಊಟೋಪಚಾರ ಕಲ್ಪಿಸುವುದು. ಒಂದು ವೇಳೆ ಸರ್ಕಾರಿ ವಸತಿ ಗೃಹ ಲಭ್ಯವಿಲ್ಲದಿದ್ದಲ್ಲಿ, ಮೂರು ಸ್ಟಾರ್ ಹೋಟೆಲ್‌ಗಳಲ್ಲಿ ವಸತಿ ಹಾಗೂ ಊಟೋಪಚಾರ ಕಲ್ಪಿಸುವುದು. |
| 6.1 | ವಸತಿ, ಊಟೋಪಚಾರ ಹಾಗೂ ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಮಾಡತಕ್ಕದ್ದು. ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕ ಶೀರ್ಷಿಕೆ 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. ವಸತಿ ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಮಾಡಿರುವ ಮಾಹಿತಿಯನ್ನು ತಕ್ಷಣವೇ ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಗೆ ತಿಳಿಸುವುದು. ಈ ಮಾಹಿತಿ ಆಧಾರದ ಮೇಲೆ ಸಿಆಸುಇ (ರಾಜ್ಯ ಶಿಷ್ಟಾಚಾರ ) ಶಾಖೆಯು ಚಾರ್ಟರ್ / ವಿಮಾನ ಹೆಲಿಕಾಪ್ಟರ್ ಸೇವೆ ಒದಗಿಸುವ ಖಾಸಗಿ ಸಂಸ್ಥೆಗೆ ಪಾವತಿಸಬೇಕಾದ ಹಣದಲ್ಲಿ ವಸತಿ ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಗೆ ತಗುಲಿದ ವೆಚ್ಚವನ್ನು ಕಡಿತಗೊಳಿಸತಕ್ಕದ್ದು. |
| 6.2 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. |

| | |
|---|---|
| 7. | ಮಾನ್ಯ ಮುಖ್ಯ ಮಂತ್ರಿಗಳೊಂದಿಗೆ ವಿವಿಧ ಅಧಿಕಾರಿಗಳು ಪ್ರವಾಸ ಕೈಗೊಳ್ಳುವಾಗ ವಾಹನಗಳ ಮಿತಬಳಕೆ ದೃಷ್ಟಿಯಿಂದ ವಾಹನ ಸಾಮರ್ಥ್ಯಕ್ಕನುಗುಣವಾಗಿ ಐದಾರು ಇಲಾಖೆಯ ಅಧಿಕಾರಿಗಳು ಒಂದೇ ವಾಹನದಲ್ಲಿ ಪ್ರವಾಸ ಮಾಡುವಂತೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ನೋಡಿಕೊಳ್ಳತಕ್ಕದ್ದು. |
| 8. | ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸುವ ಸಮಾರಂಭಗಳಲ್ಲಿ ವೇದಿಕೆ ಮೇಲೆ ಮಾನ್ಯ ಮುಖ್ಯಮಂತ್ರಿಗಳ ಆಸನದ ಹಿಂಭಾಗದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯದ ಅಧಿಕಾರಿಗಳಿಗೆ ಎರಡು ಆಸನಗಳನ್ನು ಕಾಯ್ದಿರಿಸುವುದು. |
| **ಉ.** | **ಕರ್ನಾಟಕ ರಾಜ್ಯದ ಮಾನ್ಯ ಉಪ ಮುಖ್ಯಮಂತ್ರಿಗಳ ಪ್ರವಾಸದ ಸಂದರ್ಭದಲ್ಲಿ:** |
| 1. | ಮಾನ್ಯ ಉಪ ಮುಖ್ಯಮಂತ್ರಿಯವರು ಪ್ರವಾಸ ಮಾಡಿದಾಗ, ಅವರ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು, ಅವರುಗಳನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಅವರ ನಂತರದ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವುದಲ್ಲದೆ, ಮಾನ್ಯ ಉಪ ಮುಖ್ಯಮಂತ್ರಿಯವರು ಕೋರಿದ್ದಲ್ಲಿ ಅವರುಗಳೊಡನೆ ಪ್ರವಾಸ ಮಾಡುವುದು. |
| 2. | ಮಾನ್ಯ ಉಪ ಮುಖ್ಯಮಂತ್ರಿಯವರು ಪ್ರವಾಸದ ಸಮಯದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದಲ್ಲಿ ಅವರನ್ನು ಭೇಟಿ ಮಾಡುವುದು ಮತ್ತು ಮಾನ್ಯ ಉಪ ಮುಖ್ಯಮಂತ್ರಿಯವರು ಕೋರಿದ್ದಲ್ಲಿ, ಅವರೊಡನೆ ಪ್ರವಾಸ ಮಾಡುವಂತೆ ಸಹ ಸೂಚಿಸಿದೆ. |
| 3. | ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲಾ ಕೇಂದ್ರಸ್ಥಾನ ಹೊರತುಪಡಿಸಿ ಜಿಲ್ಲೆಯ ಬೇರೆ ಸ್ಥಳಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ವಿಶೇಷ ಪ್ರವಾಸ ಕೈಗೊಂಡು ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಈ ಅಧಿಕಾರಿಗಳು ಜಿಲ್ಲೆಯ ಬೇರೆ ಸ್ಥಳಗಳಲ್ಲಿ ಪ್ರವಾಸದಲ್ಲಿದ್ದು, ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲಾ ಕೇಂದ್ರಸ್ಥಾನಕ್ಕೆ ಆಗಮಿಸಿದ ಸಂದರ್ಭದಲ್ಲಿಯೂ ಸಹ ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ ಮಾನ್ಯ ಉಪ ಮುಖ್ಯಮಂತ್ರಿಯವರನ್ನು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಆದರೆ, ಮಾನ್ಯ ಉಪ ಮುಖ್ಯಮಂತ್ರಿಯವರ ಜಿಲ್ಲೆಯ ಪ್ರವಾಸದ ಬಗ್ಗೆ ಮುಂಚಿತವಾಗಿ ಮಾಹಿತಿಯಿದ್ದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡುವ ದಿನಾಂಕದಂದು ತಾವುಗಳು ಸಹ ಜಿಲ್ಲಾ ಕೇಂದ್ರದಲ್ಲಿ ಹಾಜರಿರಲು ಸಾಧ್ಯವಾಗುವಷ್ಟು ಮಟ್ಟಿಗೆ ತಮ್ಮ ಪ್ರವಾಸ ಕಾರ್ಯಕ್ರಮವನ್ನು ನಿರೂಪಿಸುವುದು. |
| 4. | ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ರಾಜ್ಯ ಆತಿಥ್ಯ ನಿಯಮದ ಪ್ರಕಾರ ವಸತಿ, ಊಟೋಪಚಾರ ಮತ್ತು ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಮಾಡುವುದು. |
| 4.1 | ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕಶೀರ್ಷಿಕೆ 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. |
| 4.2 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. |
| 5. | ಮಾನ್ಯ ಉಪ ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡಿದಾಗ ವಾಸ್ತವ್ಯವಿರುವ ಗೃಹದಲ್ಲಿ ವ್ಯವಸ್ಥೆ ಬಗ್ಗೆ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಜವಾಬ್ದಾರಿ ನೀಡುವುದರೊಂದಿಗೆ ಉಪವಿಭಾಗಾಧಿಕಾರಿಗಳ ಮಟ್ಟದ ಹಿರಿಯ ಅಧಿಕಾರಿಯನ್ನು ಶಿಷ್ಟಾಚಾರ ನಿರ್ವಹಣೆಗಾಗಿ ನೇಮಿಸುವುದು. |
| 6. | ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾ ಮಟ್ಟದ ಇಲಾಖಾ ಅಧಿಕಾರಿಗಳು ಮಾನ್ಯ ಉಪ ಮುಖ್ಯಮಂತ್ರಿಯವರ ಜೊತೆಗೆ ಜಿಲ್ಲೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅನಾವಶ್ಯಕವಾಗಿ ತಮ್ಮ ಅಧೀನ ಅಧಿಕಾರಿಗಳು / ಸಿಬ್ಬಂದಿಗಳನ್ನು ಕರೆದುಕೊಂಡು ಹೋಗುವಂತಿಲ್ಲ. |
| 7. | ಮಾನ್ಯ ಉಪ ಮುಖ್ಯಮಂತ್ರಿಯವರು ಜಿಲ್ಲೆಯ ಪ್ರವಾಸ ಸಂದರ್ಭದಲ್ಲಿ ಯಾವುದೇ ಇಲಾಖೆ ವಿಷಯಗಳ ಬಗ್ಗೆ ಮಾಹಿತಿಯನ್ನು ಕೋರಿದ್ದಲ್ಲಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮಾಹಿತಿಯನ್ನು ಒದಗಿಸತಕ್ಕದ್ದು. |

| | |
|---|---|
| 8. | ಮಾನ್ಯ ಉಪ ಮುಖ್ಯಮಂತ್ರಿಯವರೊಂದಿಗೆ ವಿವಿಧ ಅಧಿಕಾರಿಗಳು ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ, ವಾಹನಗಳ ಮಿತಬಳಕೆ ದೃಷ್ಟಿಯಿಂದ ವಾಹನ ಸಾಮರ್ಥ್ಯಕ್ಕನುಗುಣವಾಗಿ ಐದಾರು ಇಲಾಖೆಯ ಅಧಿಕಾರಿಗಳು ಒಂದೇ ವಾಹನದಲ್ಲಿ ಪ್ರವಾಸ ಮಾಡುವಂತೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಯು ನೋಡಿಕೊಳ್ಳತಕ್ಕದ್ದು. |
| 9. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು. |
| 10. | ಮಾನ್ಯ ಉಪ ಮುಖ್ಯಮಂತ್ರಿಗಳು ಭಾಗವಹಿಸುವ ಸಮಾರಂಭಗಳಲ್ಲಿ ವೇದಿಕೆ ಮೇಲೆ ಮಾನ್ಯ ಉಪ ಮುಖ್ಯಮಂತ್ರಿಗಳ ಆಸನದ ಹಿಂಭಾಗದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಸಚಿವಾಲಯದ ಅಧಿಕಾರಿಗಳಿಗೆ ಆಸನಗಳನ್ನು ಕಾಯ್ದಿರಿಸುವುದು. |
| **ಊ.** | **ಕರ್ನಾಟಕ ರಾಜ್ಯದ ಮಾನ್ಯ ಸಚಿವರುಗಳು ಪ್ರವಾಸದ ಸಂದರ್ಭದಲ್ಲಿ :** |
| 1. | ಮಾನ್ಯ ಸಚಿವರು ಪ್ರವಾಸ ಮಾಡಿದಾಗ, ಅವರ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು ಅವರುಗಳನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಅವರ ನಂತರದ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವುದಲ್ಲದೆ, ಸಚಿವರುಗಳು ಕೋರಿದ್ದಲ್ಲಿ, ಅವರುಗಳೊಡನೆ ಪ್ರವಾಸ ಮಾಡುವುದು ಹಾಗೂ ಮಾನ್ಯ ಸಚಿವರುಗಳಿಗೆ ಪಾವತಿ ಆಧಾರದ ಮೇಲೆ ವಸತಿ ಹಾಗೂ ಊಟೋಪಚಾರ ವ್ಯವಸ್ಥೆಯನ್ನು ಮಾಡತಕ್ಕದ್ದು. |
| 2. | ಮಾನ್ಯ ಸಚಿವರುಗಳ ಪ್ರವಾಸದ ಸಮಯದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದಾಗ ಸಚಿವರನ್ನು ಭೇಟಿ ಮಾಡುವುದು ಮತ್ತು ಸಚಿವರುಗಳು ಕೋರಿದ್ದಲ್ಲಿ, ಅವರುಗಳೊಡನೆ ಪ್ರವಾಸ ಮಾಡುವಂತೆ ಸಹ ಸೂಚಿಸಿದೆ. |
| 3. | ಮಾನ್ಯ ಸಚಿವರು ಜಿಲ್ಲಾ ಕೇಂದ್ರ ಸ್ಥಾನ ಹೊರತುಪಡಿಸಿ ಜಿಲ್ಲೆಯ ಬೇರೆ ಸ್ಥಳಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ವಿಶೇಷ ಪ್ರವಾಸ ಕೈಗೊಂಡು ಮಾನ್ಯ ಸಚಿವರನ್ನು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಈ ಅಧಿಕಾರಿಗಳು ಜಿಲ್ಲೆಯ ಬೇರೆ ಸ್ಥಳಗಳಲ್ಲಿ ಪ್ರವಾಸದಲ್ಲಿದ್ದು, ಮಾನ್ಯ ಸಚಿವರುಗಳು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಆಗಮಿಸಿದ ಸಂದರ್ಭದಲ್ಲಿಯೂ ಸಹ ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ ಮಾನ್ಯ ಸಚಿವರನ್ನು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಆದರೆ, ಮಾನ್ಯ ಸಚಿವರುಗಳ ಜಿಲ್ಲೆಯ ಪ್ರವಾಸದ ಬಗ್ಗೆ ಮುಂಚಿತವಾಗಿ ಮಾಹಿತಿಯಿದ್ದಲ್ಲಿ ಮಾನ್ಯ ಸಚಿವರು ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡುವ ದಿನಾಂಕದಂದು ತಾವುಗಳು ಸಹ ಜಿಲ್ಲಾ ಕೇಂದ್ರದಲ್ಲಿ ಹಾಜರಿರಲು ಸಾಧ್ಯವಾಗುವಷ್ಟು ಮಟ್ಟಿಗೆ ತಮ್ಮ ಪ್ರವಾಸ ಕಾರ್ಯಕ್ರಮವನ್ನು ನಿರೂಪಿಸುವುದು. |
| 4. | ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾ ಮಟ್ಟದ ಇಲಾಖಾ ಅಧಿಕಾರಿಗಳು ಮಾನ್ಯ ಸಚಿವರ ಜೊತೆಗೆ ಜಿಲ್ಲೆಯ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅನಾವಶ್ಯಕವಾಗಿ ತಮ್ಮ ಅಧೀನ ಅಧಿಕಾರಿಗಳು / ಸಿಬ್ಬಂದಿಗಳನ್ನು ಕರೆದುಕೊಂಡು ಹೋಗುವಂತಿಲ್ಲ. |
| 5. | ಮಾನ್ಯ ಸಚಿವರುಗಳು ಜಿಲ್ಲೆಯ ಪ್ರವಾಸ ಸಂದರ್ಭದಲ್ಲಿ ಯಾವುದೇ ಇಲಾಖೆಯ ವಿಷಯಗಳ ಬಗ್ಗೆ ಮಾಹಿತಿಯನ್ನು ಕೋರಿದ್ದಲ್ಲಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮಾಹಿತಿಯನ್ನು ಒದಗಿಸತಕ್ಕದ್ದು. |
| 6. | ಮಾನ್ಯ ಸಚಿವರುಗಳೊಂದಿಗೆ ವಿವಿಧ ಅಧಿಕಾರಿಗಳು ಪ್ರವಾಸ ಕೈಗೊಳ್ಳುವ ಸಂದರ್ಭದಲ್ಲಿ, ವಾಹನಗಳ ಮಿತ ಬಳಕೆ ದೃಷ್ಟಿಯಿಂದ ವಾಹನ ಸಾಮರ್ಥ್ಯಕ್ಕನುಗುಣವಾಗಿ ಐದಾರು ಇಲಾಖೆಯ ಅಧಿಕಾರಿಗಳು ಒಂದೇ ವಾಹನದಲ್ಲಿ ಪ್ರವಾಸ ಮಾಡುವಂತೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಯು ನೋಡಿಕೊಳ್ಳತಕ್ಕದ್ದು. |
| 7. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಮಾನ್ಯ ಸಚಿವರಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು. |

| | |
|---|---|
| **(ಖ)** | **ವಿಧಾನ ಪರಿಷತ್ತಿನ ಸಭಾಪತಿಯವರು ಮತ್ತು ವಿಧಾನ ಸಭೆಯ ಸಭಾಧ್ಯಕ್ಷರು ಹಾಗೂ ವಿಧಾನ ಮಂಡಲದ ಸಮಿತಿಗಳು ಅಧಿಕೃತ ಕರ್ತವ್ಯದ ಮೇಲೆ ಜಿಲ್ಲಾ ಪ್ರವಾಸ ಕೈಗೊಂಡ ಸಂದರ್ಭದಲ್ಲಿ:** |
| 1. | ಜಿಲ್ಲಾಧಿಕಾರಿಗಳಿಂದ ನಿಯೋಜಿಸಲ್ಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳು/ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು ಅವರುಗಳನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಅವರ ನಂತರದ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವುದು ಹಾಗೂ ಮಾನ್ಯ ಗಣ್ಯರಿಗೆ ಪಾವತಿ ಆಧಾರದ ಮೇಲೆ ವಸತಿ ಹಾಗೂ ಊಟೋಪಚಾರ ವ್ಯವಸ್ಥೆಯನ್ನು ಮಾಡತಕ್ಕದ್ದು. |
| 2. | ಮಾನ್ಯ ವಿಧಾನ ಸಭೆಯ ಅಧ್ಯಕ್ಷರು ಮತ್ತು ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರ ಪ್ರವಾಸದ ಸಮಯದಲ್ಲಿ, ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕೇಂದ್ರ ಸ್ಥಾನದಲ್ಲಿದ್ದಾಗ ಅವರನ್ನು ಭೇಟಿ ಮಾಡುವುದು. |
| 3. | ಜಿಲ್ಲಾ ಕೇಂದ್ರ ಸ್ಥಾನ ಹೊರತುಪಡಿಸಿ ಜಿಲ್ಲೆಯ ಬೇರೆ ಸ್ಥಳಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ವಿಶೇಷ ಪ್ರವಾಸ ಕೈಗೊಂಡು ಗಣ್ಯರನ್ನು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಈ ಅಧಿಕಾರಿಗಳು ಜಿಲ್ಲೆಯ ಬೇರೆ ಸ್ಥಳಗಳಲ್ಲಿ ಪ್ರವಾಸದಲ್ಲಿದ್ದು, ಮಾನ್ಯ ವಿಧಾನ ಸಭೆಯ ಅಧ್ಯಕ್ಷರು ಮತ್ತು ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರು ಜಿಲ್ಲಾ ಕೇಂದ್ರ ಸ್ಥಾನಕ್ಕೆ ಆಗಮಿಸಿದ ಸಂದರ್ಭದಲ್ಲಿಯೂ ಸಹ ತಮ್ಮ ಪ್ರವಾಸವನ್ನು ಮೊಟಕುಗೊಳಿಸಿ ಅವರನ್ನು ಭೇಟಿ ಮಾಡುವ ಅವಶ್ಯಕತೆಯಿರುವುದಿಲ್ಲ. ಆದರೆ, ಜಿಲ್ಲೆಯ ಪ್ರವಾಸದ ಬಗ್ಗೆ ಮುಂಚಿತವಾಗಿ ಮಾಹಿತಿಯಿದ್ದಲ್ಲಿ ಜಿಲ್ಲಾ ಕೇಂದ್ರಕ್ಕೆ ಭೇಟಿ ನೀಡುವ ದಿನಾಂಕದಂದು ತಾವುಗಳು ಸಹ ಜಿಲ್ಲಾ ಕೇಂದ್ರದಲ್ಲಿ ಹಾಜರಿರಲು ಸಾಧ್ಯವಾಗುವಷ್ಟು ಮಟ್ಟಿಗೆ ತಮ್ಮ ಪ್ರವಾಸ ಕಾರ್ಯಕ್ರಮವನ್ನು ನಿರೂಪಿಸುವುದು. |
| 4. | ಜಿಲ್ಲೆಯ ಪ್ರವಾಸ ಸಂದರ್ಭದಲ್ಲಿ ಯಾವುದೇ ಇಲಾಖೆಯ ವಿಷಯಗಳ ಬಗ್ಗೆ ಮಾಹಿತಿಯನ್ನು ಕೋರಿದ್ದಲ್ಲಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮಾಹಿತಿಯನ್ನು ಒದಗಿಸತಕ್ಕದ್ದು. |
| 5. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು/ ಪೊಲೀಸ್ ಆಯುಕ್ತರು ಮಾನ್ಯ ಗಣ್ಯರಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು. |
| **ಎ.** | **ಕರ್ನಾಟಕ ವಿಧಾನ ಮಂಡಲದ ಮಾನ್ಯ ವಿರೋಧ ಪಕ್ಷದ ನಾಯಕರ ಪ್ರವಾಸದ ಸಂದರ್ಭದಲ್ಲಿ** |
| | ವಿರೋಧ ಪಕ್ಷದ ನಾಯಕರು ಯಾವುದೇ ಜಿಲ್ಲೆಗೆ ಅಧಿಕೃತವಾಗಿ ಭೇಟಿ ನೀಡಿದಾಗ, ಅವರನ್ನು ಸ್ವಾಗತಿಸಲು ಮತ್ತು ಅವರು ಕೋರುವ ಮಾಹಿತಿಯನ್ನು ಒದಗಿಸಲು ಜಿಲ್ಲಾಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳುವುದು. |
| **ಏ.** | **ಕರ್ನಾಟಕ ರಾಜ್ಯದ ಮಾನ್ಯ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರ ಪ್ರವಾಸದ ಸಂದರ್ಭದಲ್ಲಿ:** |
| | ಮಾನ್ಯ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ರಾಜ್ಯದ ವಿವಿಧ ಜಿಲ್ಲೆಗಳಿಗೆ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಅಧಿಕೃತ ಕರ್ತವ್ಯದ ಮೇಲೆ ಭೇಟಿ ನೀಡಿದ ಸಂದರ್ಭದಲ್ಲಿ, ಅವರಿಗೆ ಕೆಳಕಂಡ ಶಿಷ್ಟಾಚಾರವನ್ನು ನೀಡುವುದು. |
| 1. | ಜಿಲ್ಲೆಗೆ ಆಗಮಿಸಿದ ಮತ್ತು ನಿರ್ಗಮಿಸಿದ ಸಮಯದಲ್ಲಿ, ಜಿಲ್ಲಾಧಿಕಾರಿಗಳು ಅಥವಾ ಅವರಿಂದ ನಿಯೋಜಿಸಲ್ಪಟ್ಟ ಜಿಲ್ಲೆಯ ಹಿರಿಯ ಅಧಿಕಾರಿಗಳು ಸದರಿಯವರನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಸದರಿಯವರು ಕೋರಿದ್ದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲೆಯ ಇತರ ಅಧಿಕಾರಿಗಳು ಅವರೊಂದಿಗೆ ಜಿಲ್ಲೆಯ ಪ್ರವಾಸ ಮಾಡುವುದು. |
| 2. | ರಾಜ್ಯ ಶಿಷ್ಟಾಚಾರ ನಿಯಮಗಳ ಪ್ರಕಾರ ವಸತಿ, ಊಟೋಪಚಾರ ಹಾಗೂ ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಒದಗಿಸುವುದು. |

| | |
|---|---|
| 2.1 | ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕ ಶೀರ್ಷಿಕೆ 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. |
| 2.2 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು. |
| 3. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಮಾನ್ಯರಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು. |
| **ಐ.** | **ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಮಾನ್ಯ ಮುಖ್ಯ ನ್ಯಾಯಾಧೀಶರು ಹಾಗೂ ಇತರೆ ಮಾನ್ಯ ನ್ಯಾಯಾಧೀಶರುಗಳ ಪ್ರವಾಸದ ಸಂದರ್ಭದಲ್ಲಿ:** |
| | ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದ ಮಾನ್ಯ ಮುಖ್ಯ ನ್ಯಾಯಾಧೀಶರು ಹಾಗೂ ಇತರೆ ಮಾನ್ಯ ನ್ಯಾಯಾಧೀಶರುಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಅಧಿಕೃತ ಕರ್ತವ್ಯದ ಮೇಲೆ ಭೇಟಿ ನೀಡಿದ ಸಂದರ್ಭದಲ್ಲಿ, ಅವರಿಗೆ ಕೆಳಕಂಡ ಶಿಷ್ಟಾಚಾರವನ್ನು ನೀಡುವುದು. |
| 1. | ಜಿಲ್ಲೆಗೆ ಆಗಮಿಸಿದ ಮತ್ತು ನಿರ್ಗಮಿಸಿದ ಸಮಯದಲ್ಲಿ, ಜಿಲ್ಲಾಧಿಕಾರಿಗಳು ಅಥವಾ ಅವರಿಂದ ನಿಯೋಜಿಸಲ್ಪಟ್ಟ ಜಿಲ್ಲೆಯ ಹಿರಿಯ ಅಧಿಕಾರಿಗಳು ಸದರಿಯವರನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು. ಸದರಿಯವರು ಕೋರಿದ್ದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲೆಯ ಇತರೆ ಅಧಿಕಾರಿಗಳು ಅವರೊಂದಿಗೆ ಜಿಲ್ಲೆಯ ಪ್ರವಾಸ ಮಾಡುವುದು. |
| 2. | ರಾಜ್ಯ ಶಿಷ್ಟಾಚಾರ ನಿಯಮಗಳ ಪ್ರಕಾರ ವಸತಿ, ಊಟೋಪಚಾರ ಹಾಗೂ ಸಾರಿಗೆ ವ್ಯವಸ್ಥೆಯನ್ನು ಉಚಿತವಾಗಿ ಒದಗಿಸುವುದು. |
| 2.1 | ಈ ವಸತಿ ಹಾಗೂ ಊಟೋಪಚಾರಕ್ಕೆ ತಗುಲುವ ವೆಚ್ಚವನ್ನು ಕಂದಾಯ ಇಲಾಖೆಯ ಲೆಕ್ಕ ಶೀರ್ಷಿಕೆ 2053-00-093-0-02-059 ಇತರೆ ವೆಚ್ಚದಡಿಯಲ್ಲಿ ಶಿಷ್ಟಾಚಾರಕ್ಕೆ ಒದಗಿಸುವ ಅನುದಾನದಿಂದ ಭರಿಸುವುದು. |
| 2.2 | ಜಿಲ್ಲಾ ಕೇಂದ್ರದಲ್ಲಿ ಲಭ್ಯವಿರುವ ಡಿ.ವಿ ವಾಹನಗಳ ಮುಖಾಂತರ ಸಾರಿಗೆ ವ್ಯವಸ್ಥೆ ಕಲ್ಪಿಸುವುದು |
| 3. | ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಪೊಲೀಸ್ ಆಯುಕ್ತರು ಮಾನ್ಯರಿಗೆ ನೀಡಬೇಕಾದ ರಕ್ಷಣೆಯ ಬಗ್ಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವುದು. |

**(ಪಿ. ರವಿಕುಮಾರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ)

## ANNEXURE-1

## INFORMATION TO BE PROVIDED BY DEPUTY COMMISSIONER WITH RESPECT TO THE VISIT OF VVIP

| | |
|---|---|
| 1 | Name of the Programme |
| 2 | Brief details of the Programme |
| 3 | Names of any other VIPs attending the programme |
| 4 | Type of Audience |
| 5 | Number of members of Audience expected to attend the programme |
| 6 | Place of function, (Permanent / Temporary Structure) size of dais and seating capacity, etc. |
| 7 | Suitability of the function place in terms of movement of VIP Convoy, parking and security and also convenience from the public point of view. |
| 8 | Distance to be travelled by the VVIPs within the district in the format given below. |

| Sl No | From | To | Distance | Type of Movement | Time Required | Road Condition from physical and security point of view |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |

| | | |
|---|---|---|
| 9. | **Other details:** | |
| | (a) | Whether all necessary permissions have been obtained from competent authorities for the works to be inaugurated / foundation to be laid. |
| | (b) | Any adverse comments if any from the media or general public. |
| | (c) | Background of Organisers. (Criminal antecedents and any disputes / or internal differences among the Organisers) |

| | |
|---|---|
| 10 | Overall opinion of the District Administration about the participation of VVIP in the programme. |

## ANNEXURE-2

| | |
|---|---|
| 1 | Draft Invitation Card |
| 2 | Dais plan |
| 3 | Minute to Minute Programme |
| 4 | Draft Material of the Backdrop, Stone / Plaque ( if any to be unveiled) |
| 5 | Line up for the reception and See-off |
| 6 | Helipad details with co-ordinates, if required. |
| 7 | Contact details of following Officers |

| Sl.No | Name of the Officer | Mobile No |
|---|---|---|
| 1 | Deputy Commissioner | |
| 2 | Additional Deputy Commissioner | |
| 3 | Superintendent of Police / Police Commissioner | |
| 4 | Additional Superintendent of Police | |

| | | |
|---|---|---|
| 5 | Executive Engineer, PWD | |
| 6 | District Health Officer | |
| 7 | District Surgeon | |
| 8 | District Fire Officer | |
| 9 | General Manager, Airport | |
| 10 | Organiser name | |

**ANNEXURE 3**

**COURTESIES TO BE SHOWN TO VIPS ON THEIR VISIT TO STATE AND UNION TERRITORY**

| | | |
|---|---|---|
| 1. | **PRESIDENT** | |
| | 1.1 | The President's visits are classified as public, official and private. |
| | 1.2 | Detailed instructions in respect of each visit are issued by the President's Secretariat indicating the nature of the visit, ceremonials to be observed including guard of honour, etc. The following instructions should be observed subject to such detailed instructions. |
| | 1.3 | **PUBLIC VISIT**:- The President should be received on arrival and seen off at the time of departure by the Governor, Chief Minister, Chief Secretary to the State Government and the Inspector General of Police or, if the visit is to a Union Territory, by the corresponding functionaries of the Union Territory. The Mayor of the town visited should also be among those who receive and see off the President. |
| | 1.4 | Honorary personal staff, senior officers (Central as well as State and prominent non-officials at the place visited may be invited to be present on such occasions. In addition, foreign consular representatives, if any, stationed at the place visited should be invited.) |
| | 1.5 | **OFFICIAL VISIT**:- If the visit is to the capital of State, the arrangements for the reception and farewell will be the same as those mentioned in Para 1.3 and 1.4 except that the foreign consular representatives need not be invited and the number of other invites may be kept to the minimum. If for any reason, the Chief Minister is unable to be present on arrival or departure of the President, one of the Senior Cabinet Ministers should be deputed instead. |
| | 1.6 | If the visit is to a place other than the State Capital, the President should be received on arrival and seen off on departure by the Chief Minister or a Minister nominated by the State Government, the Commissioner or Deputy Commissioner and the Deputy Inspector General or Superintendent of Police having jurisdiction at the place. The Mayor, if any, of the town visited should also be among those who receive and see off the President. |
| | 1.7 | **PRIVATE VISIT**:- The President should be received and seen off by the Chief Secretary and the Inspector General or Commissioner or Deputy Commissioner of Police and the Deputy Inspector General or Superintendent of Police at other places. There will be no ceremonials on such occasions and other officers and non-officials need not be present. |
| | 1.8 | **GUARD OF HONOUR**:- There should be no guard of honour or ceremonial without proper clearance from the President's Secretariat, whether the visit is public, official or private. |
| | 1.9 | **OFFICIAL LINE UP AT THE LADDER FOR BOTH PUBLIC AND OFFICIAL VISIT TO STATE CAPITAL**:- The Reception / Seen Off line |

| | | |
|---|---|---|
| | | up during the visits of Hon'ble President to State / UTs has been revised as under vide President's Secretariat letter No.IV-17017 / 19 / 2019-TS, Dated 3rd January, 2020. |

| | |
|---|---|
| (a) | Governor / LG / Administrator (incase of UT) |
| (b) | Chief Minister / Minister-in-waiting |
| (c) | Union Ministers and State Ministers (case to case basis) |
| (d) | Mayor |
| (e) | Chief Secretary |
| (f) | Advisors to Governor (in case of Presidents's rule, to be placed as per their seniority) |
| (g) | Advisors to Administrator (in case of UT, to be placed as per their seniority) |
| (h) | DGP / ADGP |
| (i) | Divisional Commissioner or Principal Secretary (Cabinet coordination) or Head of Protocol (min JS level) (to be decided by Chief Secretary) |
| (j) | Reps of all three services (if there are establishments of the Defence Services locally) only for the first visit to State Capital<br>**Or**<br>Senior most rep of Defence Services (if there are establishments of the Defence Services locally ) for the official visit to State Capital or any other place in the State. |

| | | |
|---|---|---|
| 2. | **VICE PRESIDENT** | |
| | 2.1 | **OFFICIAL VISIT:-** If the visit is to a State Capital, the Vice-President should be received by the Governor, the Chief Minister, the Mayor, the Chief Secretary and the Inspector General of Police. |
| | 2.2 | If the visit is to town outside the State Capital, the Vice President should be received and seen off by the Chief Minister or a Minister nominated by him. The President of the local Zilla Prishad, the Mayor or President of the local municipal body and the two senior most executive and police officers of the district. |
| | 2.3 | The above provisions will also apply in regard to the departure of the Vice President. |
| | 2.4 | If the Vice President is making a transit halt either at the State Capital or any other place in the State, one executive and one police officer deputed by the State Government may be present to render such assistance as may be necessary. |
| | 2.5 | **PRIVATE VISIT:-** One executive and one police officer only should be present on arrival and departure to render necessary assistance. |

| | | |
|---|---|---|
| | 2.6 | **GUARD OF HONOUR:-** There should be no guard of honour or ceremonial without proper clearance from the Vice President's Secretariat, whether the visit is official or private. |

| | | |
|---|---|---|
| 3. | **PRIME MINISTER** | |
| | 3.1 | **OFFICIAL VISITS:-** If the visit is to a State Capital, the Prime Minister should be received by the Governor, the Chief Minister, the Mayor, the Chief Secretary and the Inspector General of Police. Members of the State Council of Ministers or other officers (except those who have specific duties to perform) need not be present. |
| | 3.2 | If the visit is to a town outside the State Capital, the Chief Minister or a Minister nominated by the State Government, the President of the local Zilla Parishad and the Mayor or President of the local municipal body and the two senior –most executive and police officers of the district only should be present to receive the Prime Minister. In particular, the Governor need not be present. |
| | 3.3 | The above provisions will apply also in regard to the departure of the Prime Minister. |
| | 3.4 | **TRANSIT VISIT:-** If the Prime Minister is making a transit halt at a State Capital, the Chief Minister may, if he so desires, be present, though it should normally not be necessary for him to do so. It is not necessary for the Governor to be present unless the Prime Minister or the Governor wish to have a few minutes talks with each other. One executive and one Police officer deputed by the State Government may be present to render such assistance as may be necessary. |
| | 3.5 | If the Prime Minister is making a transit halt in a town outside the State Capital, there is no need for the Chief Minister or any other Minister to be present. One executive and one Police officer of the district only should be present. |
| | 3.6 | **PRIVATE VISITS:-** It is not necessary for the Governor or the Chief Minister to be present unless the Prime Minister or the Governor or the Chief Minister wish to have a few minutes talk with each other. One executive and Police officer only should be present on arrival and departure to render necessary assistance. |
| | 3.7 | **GUARD OF HONOUR:-** There should be no guard of honour or ceremonial without proper clearance from the Prime Minister's Secretariat, whether the visit is official or private. |

**ANNEXURE-4**
**ACTION POINTS FOR THE VISIT OF VVIP**

| | Action Points | Action By |
|---|---|---|
| I | **Providing Airport Lounge and Handling of VVIP Aircraft:** | |
| 1. | Airport Authorities shall ensure that the ceremonial is kept clean and open during the arrival and departure of the VVIP. | 1. GENERAL MANAGER, AIRPORT<br>2. DEPUTY COMMISSIONER<br>3. COMMISSIONER OF POLICE<br>4. SUPERINTENDENT OF POLICE |
| 2. | Airport Authorities concerned to ensure proper arrangements for the movement and handling of VVIP Aircraft at the Airport. | |
| 3. | Adequate security to BBJ Aircraft shall be provided. | |
| 4. | Arrangements for refueling of aircraft shall be done through IOC authorities by the police. | |
| 5. | Accommodation and Transportation (If required) and Admin facilities for the BBJ Crew shall be provided by the concerned Deputy Commissioner. | |
| II | **Reception and Farewell Line up:** | |
| | It shall be ensured that dignitaries approved by the Vice President's Office only be allowed to receive the VVIP at the airport and at the place of function. | 1. DEPUTYCOMMISSIONER<br>2. COMMISSIONER OF POLICE<br>3. SUPERINTENDENT OF POLICE.<br>4. ORGANISERS. |
| III | **Vehicles for the Carcade:** | |
| 1. | Bullet Proof Vehicle for the VIP to be arranged by Police authorities | 1. DEPUTY COMMISSIONER<br>2. COMMISSIONER OF POLICE<br>3. SUPERINTENDENT OF POLICE<br>4. DEPUTY SECRETARY, DPAR (STATE PROTOCOL) |
| 2. | DPAR (State protocol) shall provide required number of cars for the carcade. | |
| 3. | Deputy Commissioner, shall provide additional vehicles required for the VVIP visit. | |
| | These vehicles are required to report to the concerned positively 48 hours before the scheduled visit of VVIP | |
| IV | **Maintenance of Roads** | |
| 1. | All roads on which the VVIP moves shall be free from pot holes and humps and shall be kept neat and tidy. | 1. CORPORATION COMMISSIONER |

| | | |
|---|---|---|
| **2.** | **Concerned urban local bodies/Gram Panchayats and the organizers shall keep the place of function and its surrounding area neat and clean.** | **2. DEPUTY COMMISSIONER**<br>**3. COMMISSIONER OF POLICE**<br>**4. SUPERINTENDENT OF POLICE.**<br>**5. ORGANISERS** |
| **3.** | **Organizers in consultation with the police shall erect signage boards at all places wherever necessary for smooth movement of invitees and dignitaries to the function** | |
| **V** | **Uninterrupted Power Supply:** | |
| | **Concerned Escoms to ensure uninterrupted power supply at the places of visit of the VVIP. However Organisers will run the programme on UPS.** | **1. MD, ESCOM,**<br>**2. ORGANISERS** |
| **VI** | **Food checking:** | |
| | **Food checking at the places of function and stay to be arranged.** | **1. COMMISSIONER OF POLICE**<br>**2. SUPERINTENDENT OF POLICE.**<br>**3. DISTRICT HEALTH OFFICER** |
| **VII** | **Medical Facilities:** | |
| **1.** | **An exclusive special ward befitting the status of the VVIP shall be reserved in a Government Hospital and also in a Good Private Hospital near the place of function** | **1. DEPUTY COMMISSIONER**<br>**2. COMMISSIONER OF POLICE**<br>**3. SUPERINTENDENT OF POLICE**<br>**4. DISTRICT HEALTH OFFICER**<br>**5. DISTRICT SURGEON** |
| **2.** | **A fully equipped ambulance to be provided in the carcade of the VVIP. In addition to normal medical infrastructure, one cardiac defibrillator and one oxygen cylinder with full accessories shall also be made available in the ambulance.** | |
| **3.** | **Sufficient quantities of blood shall kept ready as per the Blood group of the VVIP.** | |
| **It is instructed that the doctors on duty be briefed in writing to be ready at all times till departure of the VVIP and details of such doctors and specialists on duty be furnished to the Deputy Commissioner and also to the Commissioner of Police/ Superintendent of Police.** | | |
| **VIII** | **Telephone and Internet Connections at the place of function:** | |
| **BSNL authorities shall set up telephone / Hotline and Internet connections at the place of function 2 days in advance without fail.** | | **1. GM, BSNL**<br>**2. DEPUTY COMMISSIONER**<br>**3. COMMISSIONER OF POLICE** |
| **1.** | **Details of such connections made shall be typed in one single sheet and** | |

| | | |
|---|---|---|
| | **be furnished to the Deputy Commissioner and also to the Commissioner of Police/ Superintendent of Police 48 hours before the scheduled visit of VVIP** | 4. **SUPERINTENDENT OF POLICE**<br>5. **ORGANISERS** |
| **2.** | **It shall be ensured that the internet services are at highest speed and are in workable condition when installed with the computer** | |
| IX | **<u>Deployment of Bomb Disposal & Mine Detection Teams:</u>** | |
| | **Arrangement of Mine Detection Team at the places of visit of the VVIP.**<br>Arrangement of Bomb Disposal Team at the places of visit of the VVIP. | 1. **DEPUTY COMMISSIONER**<br>2. **COMMISSIONER OF POLICE**<br>3. **SUPERINTENDENT OF POLICE** |
| X | **<u>Arrangement at the Function Site:</u>** | |
| **1.** | Invitation, Dias plan, Minute to Minute programme, Backdrop, stone /plaque, if any unveiled shall be as approved by the Prime Minister Office | 1. **DEPUTY COMMISSIONER**<br>2. **COMMISSIONER OF POLICE**<br>3. **SUPERINTENDENT OF POLICE.**<br>4. **ORGANISERS** |
| **2.** | **The Organisers shall strictly adhere to the programme as approved by the office of the VVIP and there should not be any deviation or delay in the programme.** | |
| **3.** | The Organisers shall also make necessary arrangements at the place of function as per the requirements of VVIP | |
| **4.** | **Organizers will set up air-conditioned green room separately for the Hon'ble Vice President and also for the Governor and Chief Minister (in case of their arrival) with sufficient furniture and toilet facilities. It shall insure that toilet is kept neat and clean all the time.** | |
| **5.** | **Organizers will install CCTV at the place of function as per the police requirements. In case if it is not done by the Organizers, then same thing has to be done by Deputy Commissioner and the cost shall be recovered from the Organizers.** | |
| **6.** | Deputy Commissioner, to ensure that all the arrangements as above including Green Room are arranged and to submit a detail report on the same to Chief Secretary well in advance | |
| **XI** | **<u>National Anthem at the Function:</u>** | |
| | It is to be ensured that the functions at both the places should | **1. DEPUTY COMMISSIONER** |

| | | |
|---|---|---|
| | commence and conclude with the National Anthem. It is also to be ensured that the National Anthem should either be sung live or played live by the Police Band. In any case the recorded track should not be played out. | 2. **COMMISSIONER OF POLICE**<br>3. **SUPERINTENDENT OF POLICE.**<br>4. **ORGANISERS.** |
| **XII** | **Security Arrangements:** | |
| * | **The State Police to make all necessary security, traffic and bandobasth arrangements at the places of visit of the VVIP.** | 1. **DEPUTY COMMISSIONER**<br>2. **COMMISSIONER OF POLICE**<br>3. **SUPERINTENDENT OF POLICE.**<br>4. **DISTRICT FIRE OFFICER**<br>5. **EXECUTIVE ENGINEER ,PWD**<br>6. **DEPUTY CHIEF ELECTRICAL INSPECTOR** |
| * | **The Fire Authorities to make all necessary arrangements at the places of function.** | |
| * | **The police will ensure that the Organizer has obtained the following certificates** | |
| **I** | **Stage fitness certificate from Executive Engineer PWD** | |
| **II** | **Fire safety certificate from District Fire Officer** | |
| **III** | **Electrical fitness certificate from Deputy Chief Electrical Inspector.** | |
| **XIII** | **Publicity Coverage:** | |
| | **The Director of Information and Public Relations department and the organizers of the function to organize the publicity coverage of the VVIP visit as per directions of the Government issued from time to time.** | 1. **DEPUTY COMMISSIONER**<br>2. **COMMISSIONER OF POLICE**<br>3. **SUPERINTENDENT OF POLICE.**<br>4. **DEPUTY DIRECTOR INFORMATION & PUBLIC RELATION DEPT.ORGANISERS.** |
| | **It is to be ensured that only authorized media personnel be invited. List of Details of such persons be handed over to the Commissioner of Police /Superintendent of Police 3 days in advance along-with a copy of the photo identity and 2 photos, so that the police authorities will issue necessary passes for entry of authorized press personnel.** | |
| | **Separate enclosure for the publicity coverage shall be arranged at the place of function without obstructing the function.** | |
| **XIV** | **Arrangement of lunch on board:** | |
| | Air India/ Deputy Commissioner shall arrange for lunch/Dinner on Board for the VIP and entourage during the outward journey and snacks in the Helicopter movement if any. | 1. **DEPUTY COMMISSIONER**<br>2. **MANAGER, CUTOMER SERVICE, AIR INDIA.** |

| | | |
|---|---|---|
| XV | **Accommodation Plan:(If required)** | |
| | **Deputy Commissioner, in consultation with Commissioner of Police/Superintendent of Police shall chart out the Accommodation plan for VVIP and his entourage at 'Governement Guest houses/ Hotels as per the requirement of VVIP'office.** | **1. DEPUTY COMMISSIONER<br>2. COMMISSIONER OF POLICE<br>3. SUPERINTENDENT OF POLICE.** |
| | **Setting up of camp office at Place of stay** | |
| **Set up a camp office at place of stay with all necessary logistics desired by the VVIP'office.** | | |
| **a)** | **BSNL authorities should install telephone and hotline connections 2 days in advance. Internet facility with maximum speed should be provided.** | |
| **b)** | **The necessary logistics such as computers with internet facility, printer, fax, shrudder machine, stationery items should be provided and installed atleast two days in advance at Place of Night halt and stay. The necessary staffs required for maintenance of the above should be deployed.** | |
| **c)** | **2 Stenographers and Data Entry Operators each well-versed in English and Hindi language shall be placed for service at place of stay round the clock by the Deputy Commissioner.** | |
| **d)** | **All the detailed personnel shall be issued with the security passes from Police Authorities.** | |

## ANNEXURE – 5

## ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯ ಮಾರ್ಗಸೂಚಿಯನ್ವಯ ಏರ್‌ಕ್ರ್ಯೂ ಬಿಲ್ಲುಗಳನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸುವ ಬಗ್ಗೆ.

ಭಾರತ ಸರ್ಕಾರದ ರಕ್ಷಣಾ ಇಲಾಖೆಯ ಸುತ್ತೋಲೆ Air HQ / 25654 / 21 / Accts / Aircrew, ದಿನಾಂಕ: 12.07.2018 ಮತ್ತು ID No: 9(12) / 2018 / AF(P&W) 01 May 2019ರಲ್ಲಿ ಭಾರತದ ಮಾನ್ಯ ರಾಷ್ಟ್ರಪತಿಗಳು, ಉಪರಾಷ್ಟ್ರಪತಿಗಳು, ಪ್ರಧಾನ ಮಂತ್ರಿಗಳು, ರಕ್ಷಣಾ ಸಚಿವರು / ರಕ್ಷಣಾ ರಾಜ್ಯ ಸಚಿವರು / ರಕ್ಷಣಾ ಉಪ ಸಚಿವರ / ರಕ್ಷಣಾ ಇಲಾಖೆಗೆ ಸಂಬಂಧಿಸಿದ ಹಿರಿಯ ಅಧಿಕಾರಿಗಳ ಪ್ರವಾಸದ ನಿಮಿತ್ತ ಆಗಮಿಸುವ ಏರ್‌ಕ್ರ್ಯೂ ಹಾಗೂ ವಿಮಾನದ ಇತರೆ ತಾಂತ್ರಿಕ ಸಿಬ್ಬಂದಿಗಳಿಗೆ ಒದಗಿಸಲಾಗುವ ಊಟ, ವಸತಿ ಮತ್ತು ಸಾರಿಗೆ ವ್ಯವಸ್ಥೆಯ ವೆಚ್ಚ ಬಿಲ್ಲುಗಳ ವೆಚ್ಚವನ್ನು ಕೇಂದ್ರ ಸರ್ಕಾರದ ರಕ್ಷಣಾ ಇಲಾಖೆಯಿಂದ ಹಿಂಪಡೆಯಲು ಈ ಕೆಳಕಂಡ ಮಾರ್ಗಸೂಚಿಗಳನುಸಾರ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.

| | |
|---|---|
| 1 | ಕೇಂದ್ರ ರಕ್ಷಣಾ ಇಲಾಖೆಯು ಹೊರಡಿಸಿರುವ ಮಾರ್ಗಸೂಚಿಗಳು ಈ ಕೆಳಗಿನಂತಿರುತ್ತದೆ. |
| **a)** | **General Guidelines** |

| | | |
|---|---|---|
| | i) | State Government should forward the bills to this Directorate for reimbursement immediately after the visit of VVIP/VIP, preferably within one month so that the bills can be paid within the financial year. |
| | ii) | Air Crew bills pertaining to the visit of the President, the Vice-President, the Prime Minister, and the Defence Minister/Minister of State for Defence/Deputy Defence Minister and senior service / Civilian Officers connected with the defence Organisation only are to be forwarded to this office. |
| | iii) | A copy of the Tour programme of VIP/VVIP must be enclosed along with the bills. |
| | iv) | The Reasonability Certificate duly signed by the protocol officer must be annexed with the bills. |
| **b)** | **Hotel Bills** | |
| | i) | The names of the aircrew and total numbar of aircrew for whom special arrangements have been made should agree with the names and numbers as per the M T Proforma. |
| | ii) | Hotel bills in respect of the Liaison officers of the VIP / VVIP are not to be forwarded to this office. |
| | iii) | A certificate is to be endorsed by the state protocol /State Department on boarding, loading and transport bills that amount charged/claimed are reasonable and are in connection with the official purposes of the VIP fight. |
| | iv) | The total number of breakfast, lunch and dinner billed should agree with the number of aircrew involved and their total number of days spent at the halting station. |
| | v) | Items of non essential nature are not to be included in the hotel bills i.e items like, Cigarettes, soda, soft drinks, fruit juices, laundry charges, liquor, beer, telephone charges (other than official) etc. The charges for the same are to be recovered from the concerned aircrew before checking out/ leaving the Hotels. The hotel management should be clearly briefed that the Government of India does not accept any liability to clear such bills. |
| | vi) | Sub vouchers showing the details of items served are to be attached with the hotel bills or details of items served should be clearly given. |
| | vii) | The bills should be clearly signed by the aircrew concerned with their full particulars (e.g. Service no, rank, name and Unit) in the guest signature column. |
| | viii) | The hotel bills should be counter signed by the captain of the aircraft |
| | ix) | Hotel / Transport bills should be only for the day/days of the visit and at the most for one additional day immediately preceding the visit of the VIP |
| | x) | The summary of bills indicating the total expenditure incurred duly signed by the protocol officers must be enclosed along with the bills. |
| **b)** | **Transport Bills** | |
| | I) | The total mileage charged in transport bills should tally with the total mileage as given on the M T Proforma. |

| | | |
|---|---|---|
| | II) | Distance between airport and the place of stay of the aircrew should be given in the M T Proforma. |
| | III) | There should be no variation between the mileage for different vehicles in respect of the same journey. |
| | IV) | The rates charges should not exceed the rates prescribed by the Road transport authority (RTO). A certificate to this effect may be endorsed in the bills. |
| | V) | The transport bills should be duly signed by the captain of the aircraft and also certified by the protocol Officer. |

2. ಈ ಮೇಲ್ಕಂಡ ಗಣ್ಯಾತಿಗಣ್ಯರ ಪ್ರವಾಸದ ನಿಮಿತ್ತ ಆಗಮಿಸುವ ಏರ್‌ಕ್ರ್ಯೂ ಹಾಗೂ ವಿಮಾನದ ಇತರೆ ತಾಂತ್ರಿಕ ಸಿಬ್ಬಂದಿಗಳಿಗೆ ಒದಗಿಸಲಾಗುವ ಊಟ, ವಸತಿ ಮತ್ತು ಸಾರಿಗೆ ವ್ಯವಸ್ಥೆಯ ವೆಚ್ಚ ಬಿಲ್ಲುಗಳನ್ನು ಈ ಮೇಲಿನ ಮಾರ್ಗಸೂಚಿಯನ್ವಯ ಪರಿಶೀಲಿಸಿ ಅನುಬಂಧ-6ರಲ್ಲಿ ಸೂಚಿಸಿರುವ ನಮೂನೆಯಲ್ಲಿ ಹಾಗೂ ಅದರಲ್ಲಿ ನಮೂದಿಸಿರುವ ಪ್ರಮಾಣ ಪತ್ರ, Accommodation Certificate, Reasonability Certificate ಮತ್ತು ಬ್ಯಾಂಕ್ ಖಾತೆಯ ವಿವರಗಳು ಹಾಗೂ ಮೂಲ MT Proforma, Hotel Bills and Vouchersಗಳೊಂದಿಗೆ ಪ್ರಸ್ತಾವನೆಯನ್ನು ಸಿಆಸುಇ (ರಾಜ್ಯ ಶಿಷ್ಟಾಚಾರ) ಶಾಖೆಗೆ ಸಲ್ಲಿಸುವುದು.
MT Proforma ನಮೂನೆಯನ್ನು ಅನುಬಂಧ-7ರಲ್ಲಿ ಇಡಲಾಗಿದೆ.

## ANNEXURE – 6

### FORMATE IN WHICH REIMBURSEMENT OF HOTEL BILLS OF AIRCREWS DEPLOYED ON THE VIP FLIGHTS SHALL BE PREPARED

| Sl.No | No of Aircrew / Groundcrew in MT proforma | Rank | Name of the Aircrew / Groundcrew | Hotel in which stayed | Duration of Stay | Bill No | Amount | Flagged at |
|---|---|---|---|---|---|---|---|---|
| | | | | | | | | |
| Signature of the Deputy Commissioner / Protocol Officer with office seal | | | | | | | | |

**CERTIFICATE**

"The details have been thoroughly checked with their respective records/documents and found correct. All other documents have been checked properly"

Signature of the Deputy Commissioner / Protocol Officer with office seal

**ACCOMMODATION CERTIFICATE**

"This is to certify that due to non-availability of suitable and adequate accommodation in Government Guest House, the arrangements for stay of crew members were made at-------- (Hotel Name and Place) as per their entitlement".

Signature of the Deputy Commissioner / Protocol Officer with office seal

| REASONABILITY CERTIFICATE |
|---|
| "This is to certify that the expenditure charged in these bills amounting to Rupees ...................... (in words) are reasonable and are in connection with the official purpose of the visit of Hon'ble President/Vice President/Prime Minister of India to .......... (place of visit) on..................(date of visit) " |
| Signature of the Dep uty Commissioner / Protocol Officer with office seal |

| BANK ACCOUNT PARTICULARS | | |
|---|---|---|
| a | Name of the Bank | |
| b | Branch Address | |
| c | Name / Designation of the Account Holder | |
| d | Account Number | |
| e | IFSC Code | |
| Signature of the Deputy Commissioner / Protocol Officer with office seal | | |

**ANNEXURE - 7**
**MT PROFORMA**

| | | | |
|---|---|---|---|
| **1.** | **Aircraft type and No. of Aircraft** | : | |
| | VVIP / VIP carried (Designation in full) | : | |
| | Authority (with reference and date) | : | |

**2. Place visited by VVIP / VIP**

| Departure | Arrival | Place of Stay |
|---|---|---|
| Date / Time / Place............. | Date / Time / Place............ | ................................... |

| **3.** | **Transport arrangements made for the Aircrew** | | | |
|---|---|---|---|---|
| | a) | Whether provided by State Govt. / Service | : | |
| | b) | Whether provided by State owned transport | : | |

**Details of journey performed in the transport provided by the State Govt:**

| Date | Type of Vehicle | No. of Vehicle | Details of journey | | Distance (one way in Km) | No. of crew travelled | Purpose |
|---|---|---|---|---|---|---|---|
| | | | From | To | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |

| | | |
|---|---|---|
| **4.** | **Accommodation:-** | |
| | a) | Certified that accommodation was provided at ............................................ .................................................................................................... .................................................................................................... |
| | b) | The Accommodation was satisfactory/ Unsatisfactory (If unsatisfactory give reasons):- |
| | i. | .................................................................................................... |
| | ii. | Alternative accommodation was asked for and was provided / not provided by State at.......................................................................................... |
| | iii. | The alternate accommodation was satisfactory / unsatisfactory (if unsatisfactory give reasons)............................................................................ |

**5. Crew Details:**

| Sl. No | Ser. No | Rank | Name | Trade | Unit |
|---|---|---|---|---|---|
| | | | | | |
| | | | | | |
| | | | | | |
| | | | | | |
| | | | | | |
| | | | | | |
| | | | | | |

**6. Certified that the above details are correct.**

| | |
|---|---|
| Sign of Liaison / Protocol Officer................. | Signature of Captain............................ |
| Name:................................................ (In Block Letter) | Name:.............................................. ... (In Block Letter) |
| Designation.......................................... .. | Rank............................................... .. |
| | Unit............................................... ... |
| Date:................................................ | Date:.............................................. .. |

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 28 ಹೆಚ್‌ಪಿಎ 2023

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:20.09.2023

## ಸುತ್ತೋಲೆ

**ವಿಷಯ:** ಸಭೆ ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವಾಗ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಸೂಚನೆ.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1), ದಿನಾಂಕ:16.04.2019.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 05 ಹೆಚ್‌ಪಿಎ 2019, ದಿನಾಂಕ:30.04.2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಶಿಷ್ಟಾಚಾರ ಉಲ್ಲಂಘನೆ ಕುರಿತಾಗಿ ನೀಡಲಾದ ಹಕ್ಕುಚ್ಯುತಿ ಸೂಚನೆಗಳ ಹಿನ್ನೆಲೆಯಲ್ಲಿ ದಿನಾಂಕ:31.08.2023ರಂದು ನಡೆದ ಹಕ್ಕುಬಾಧ್ಯತಾ ಸಮಿತಿ ಸಭೆಯಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಿದ್ದು, ಈ ಬಗ್ಗೆ ಸಮಿತಿಯು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ.

ವಾಸ್ತವವಾಗಿ, ಗಣ್ಯ ವ್ಯಕ್ತಿಗಳು, ಜಿಲ್ಲಾ ಮಂತ್ರಿಗಳು, ಸ್ಥಳೀಯ ಶಾಸಕರು, ಮಾನ್ಯ ಸಂಸತ್ ಸದಸ್ಯರು / ವಿಧಾನಸಭಾ ಸದಸ್ಯರು / ವಿಧಾನ ಪರಿಷತ್ ಸದಸ್ಯರುಗಳನ್ನು ಸಭೆ / ಸಮಾರಂಭಗಳಿಗೆ ಆಹ್ವಾನಿಸುವ ಹಾಗೂ ಅವರುಗಳ ಜಿಲ್ಲಾ ಪ್ರವಾಸ ಸಂದರ್ಭದಲ್ಲಿ ಶಿಷ್ಟಾಚಾರ ಪಾಲನೆ ಕುರಿತಂತೆ ಉಲ್ಲೇಖ (1) ಮತ್ತು (2)ರ ಸರ್ಕಾರದ ಸುತ್ತೋಲೆಗಳಲ್ಲಿ ಸಮಗ್ರ ಸೂಚನೆಗಳನ್ನು ನೀಡಲಾಗಿರುತ್ತದೆ.

ಆದಾಗ್ಯೂ ಇತ್ತೀಚಿನ ದಿನಗಳಲ್ಲಿ ಶಿಷ್ಟಾಚಾರ ಉಲ್ಲಂಘನೆಯ ಪ್ರಕರಣಗಳು, ಅದರಲ್ಲಿಯೂ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳನ್ನು ಕಡೆಗಣಿಸಿ ಶಿಷ್ಟಾಚಾರ ಉಲ್ಲಂಘನೆ ಮಾಡುತ್ತಿರುವ ಪ್ರಕರಣಗಳ ಬಗ್ಗೆ ಹಕ್ಕುಬಾಧ್ಯತಾ ಸಮಿತಿ ಸಭೆಯು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತದೆ.

ಈ ಹಿನ್ನೆಲೆಯಲ್ಲಿ, ಭವಿಷ್ಯತ್‌ನಲ್ಲಿ ಶಿಷ್ಟಾಚಾರ ಸಂಬಂಧಿತ ವಿಷಯಗಳಲ್ಲಿ ಯಾವುದೇ ತರದ ಉಲ್ಲಂಘನೆಗೆ ಆಸ್ಪದ ನೀಡದಂತೆ, ಅತ್ಯಂತ ಜಾಗರೂಕತೆಯಿಂದ ಕ್ರಮವಹಿಸುವಂತೆ ಹಾಗೂ ಉಲ್ಲೇಖಿತ ಸರ್ಕಾರದ ಸುತ್ತೋಲೆಗಳ ನಿರ್ದೇಶನ / ಸೂಚನೆಗಳನ್ನು ಸಂದರ್ಭೋಚಿತವಾಗಿ ಅರ್ಥೈಸಿಕೊಳ್ಳುವುದರೊಂದಿಗೆ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ.

ಮುಂದಿನ ದಿನಗಳಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳಿಗೆ ಎಡೆಮಾಡಿಕೊಟ್ಟಲ್ಲಿ ಅಂತಹ ಪ್ರಕರಣಗಳನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸುವುದಲ್ಲದೇ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಹಾಗೂ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದೆಂದು ಸ್ಪಷ್ಟಪಡಿಸಿದೆ.

**(ವಂದಿತಾ ಶರ್ಮಾ)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು.

2. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
3. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು
4. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.
6. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
7. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
8. ಎಲ್ಲಾ ಜಿಲ್ಲೆಯ ಉಪ ವಿಭಾಗಾಧಿಕಾರಿಗಳು.
9. ಎಲ್ಲಾ ಪಟ್ಟಣ ಪಂಚಾಯತಿ / ಪುರಸಭಾ / ನಗರಸಭೆಯ ಆಯುಕ್ತರುಗಳು
10. ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರರು.
11. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.

(9–11) **ಆಯಾ ಜಿಲ್ಲಾಧಿಕಾರಿಗಳ ಮೂಲಕ**

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 07 ಹೆಚ್‌ಪಿಎ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:25.01.2020

# ಸುತ್ತೋಲೆ

**ವಿಷಯ:** ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಡಾ. ಬಿ ಆರ್ ಅಂಬೇಡ್ಕರ್ ರವರ ಭಾವಚಿತ್ರವನ್ನು ಇಡುವ ಬಗ್ಗೆ.

*****

ಜನವರಿ 26ನೇ ದಿನಾಂಕದಂದು ರಾಜ್ಯದ ಸರ್ಕಾರಿ ಕಛೇರಿಗಳು, ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ಸಂಸ್ಥೆಗಳು ಹಾಗೂ ಸರ್ಕಾರಿ ಶಾಲಾ ಕಾಲೇಜು ಸೇರಿದಂತೆ ಸರ್ಕಾರದ ವತಿಯಿಂದ ನಡೆಯುವ ಎಲ್ಲಾ ಗಣರಾಜ್ಯೋತ್ಸವ ಸಮಾರಂಭಗಳಲ್ಲಿ ಸಂವಿಧಾನದ ಪಿತಾಮಹ, ಭಾರತ ರತ್ನ ಡಾ. ಬಿ. ಆರ್ ಅಂಬೇಡ್ಕರ್‌ರವರ ಭಾವಚಿತ್ರವನ್ನು ಕಡ್ಡಾಯವಾಗಿ ಇಡುವಂತೆ ಸೂಚಿಸಲಾಗಿದೆ.

ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಿಆಸು ಇಲಾಖೆ
(ರಾಜ್ಯ ಶಿಷ್ಟಾಚಾರ)

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಎಲ್ಲಾ ವಿಭಾಗಾಧಿಕಾರಿಗಳು.
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ).

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 39 ಹೆಚ್‌ಪಿಎ 2023

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:08.07.2024

**ಸುತ್ತೋಲೆ**

**ವಿಷಯ:** ಆಗಸ್ಟ್-15ರ ಸ್ವಾತಂತ್ರ್ಯ ದಿನಾಚರಣೆ ಮತ್ತು ನವೆಂಬರ್-26ರ ಸಂವಿಧಾನದ ದಿನಾಚರಣೆ ಸಂದರ್ಭದಲ್ಲಿ ಡಾ.ಬಿ.ಆರ್ ಅಂಬೇಡ್ಕರ್‌ರವರ ಭಾವಚಿತ್ರವನ್ನು ಇಡುವ ಬಗ್ಗೆ.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 07 ಹೆಚ್‌ಪಿಎ 2020, ದಿನಾಂಕ:25.01.2020.

******

ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವಂತೆ, ಜನವರಿ 26ರ ಗಣರಾಜ್ಯೋತ್ಸವ ದಿನದೊಂದಿಗೆ ಆಗಸ್ಟ್-15ರ ಸ್ವಾತಂತ್ರ್ಯ ದಿನಾಚರಣೆಯಂದು ಕೂಡ ರಾಜ್ಯದ ಎಲ್ಲಾ ಸರ್ಕಾರಿ ಕಛೇರಿಗಳು, ಸರ್ಕಾರಿ ಸ್ವಾಮ್ಯಕ್ಕೆ ಒಳಪಡುವ ಸಂಸ್ಥೆಗಳು ಹಾಗೂ ಎಲ್ಲಾ ಶಾಲಾ ಕಾಲೇಜು ಸೇರಿದಂತೆ ಸರ್ಕಾರದ ವತಿಯಿಂದ ನಡೆಯುವ ಎಲ್ಲಾ ಸಮಾರಂಭಗಳಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಭಾವಚಿತ್ರದೊಂದಿಗೆ ಸಂವಿಧಾನದ ಪಿತಾಮಹ, ಭಾರತ ರತ್ನ ಡಾ||ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರವನ್ನು ಸಹ ಕಡ್ಡಾಯವಾಗಿ ಇಡುವಂತೆ ಸೂಚಿಸಿದೆ.

ಮುಂದುವರೆದು, ನವೆಂಬರ್-26ರ ಸಂವಿಧಾನದ ದಿನಾಚರಣೆ ಸಂದರ್ಭದಲ್ಲಿ ಮೇಲ್ಕಂಡ ಎಲ್ಲಾ ಸಂಸ್ಥೆಗಳು, ಶಾಲಾ ಕಾಲೇಜು ಹಾಗೂ ಸರ್ಕಾರಿ ಕಛೇರಿಗಳಲ್ಲಿ ಸಂವಿಧಾನದ ಪಿತಾಮಹ, ಭಾರತ ರತ್ನ ಡಾ||ಬಿ.ಆರ್.ಅಂಬೇಡ್ಕರ್ ರವರ ಭಾವಚಿತ್ರವನ್ನು ಕಡ್ಡಾಯವಾಗಿ ಇಡುವಂತೆ ಸೂಚಿಸಿದೆ.

**(ವಿಜಯಕುಮಾರ್ ಹೆಚ್ ಬಿ)**
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಿಆಸುಇ (ರಾಜ್ಯ ಶಿಷ್ಟಾಚಾರ)

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.
4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಎಲ್ಲಾ ವಿಭಾಗಾಧಿಕಾರಿಗಳು
8. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
9. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
10. ಎಲ್ಲಾ ಜಿಲ್ಲಾಧಿಕಾರಿಗಳು.
11. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
12. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
13. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಸಚಿವ ಸಂಪುಟ ಶಾಖೆ **(ಪ್ರಕರಣ ಸಂಖ್ಯೆ:ಸಿ.298/2024)**, ವಿಧಾನಸೌಧ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ).

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 39 ಹೆಚ್‌ಪಿಎ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು. ದಿನಾಂಕ:19.05.2021

**ಇಂದ:**
ಸರ್ಕಾರದ ಮುಖ್ಯ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ,
ವಿಧಾನ ಸೌಧ, ಬೆಂಗಳೂರು.

**ಇವರಿಗೆ**
ಶ್ರೀ. ಸಿದ್ಧರಾಮಯ್ಯ,
ಮಾನ್ಯ ವಿರೋಧ ಪಕ್ಷದ ನಾಯಕರು,
ಕರ್ನಾಟಕ ವಿಧಾನಸಭೆ,
ವಿಧಾನಸೌಧ, ಬೆಂಗಳೂರು

**ಮಾನ್ಯರೆ,**

**ವಿಷಯ:** ಕೋವಿಡ್-19ರ ನಿರ್ವಹಣೆಯ ಕುರಿತು ಸರ್ಕಾರವು ಕೈಗೊಂಡಿರುವ ಕ್ರಮಗಳ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆಯಲು ಮಾನ್ಯ ವಿರೋಧ ಪಕ್ಷದ ನಾಯಕರು ವಿಡಿಯೋ ಸಂವಾದದ ಮುಖಾಂತರ ಸಭೆಯನ್ನು ಏರ್ಪಡಿಸಿರುವ ಬಗ್ಗೆ.

**ಉಲ್ಲೇಖ:**
1. ನಿಮ್ಮ ಪತ್ರ ಸಂಖ್ಯೆ: ವಿಪನಾ / 1902 / 2021, ದಿನಾಂಕ:17.05.2021
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 272 ಸೇಅಸೆ 2009, ದಿನಾಂಕ:25.06.2009
3. ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 9 ರಾರಾಆ 2016, ದಿನಾಂಕ:27.04.2016
4. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018(1), ದಿನಾಂಕ:16.04.2019.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಪತ್ರದ ಕಡೆಗೆ ಗಮನ ಸೆಳೆದಿದೆ. ಉಲ್ಲೇಖ (2), (3) ಮತ್ತು (4)ರಲ್ಲಿನ ಸುತ್ತೋಲೆ / ಪತ್ರಗಳ ಪ್ರತಿಗಳನ್ನು ಈ ಪತ್ರದೊಂದಿಗೆ ಮಾನ್ಯರ ಅವಗಾಹನೆಗಾಗಿ ಲಗತ್ತಿಸಿದೆ.

ಉಲ್ಲೇಖ (2)ರ ಸುತ್ತೋಲೆಯಲ್ಲಿ ಸೂಚಿಸಿರುವಂತೆ, ವಿರೋಧ ಪಕ್ಷದ ನಾಯಕರು ಆಡಳಿತಾತ್ಮಕ ಮಾಹಿತಿಯನ್ನು ಇಲಾಖಾ ಮುಖ್ಯಸ್ಥರು, ಜಿಲ್ಲಾಧಿಕಾರಿಗಳು ಮತ್ತು ಇತರೆ ಸರ್ಕಾರಿ ಅಧಿಕಾರಿಗಳಿಂದ ಪತ್ರ ಬರೆದು ಪಡೆಯಬಹುದಾಗಿರುತ್ತದೆ. ಆದರೆ, ಅಧಿಕಾರಿಗಳ ಸಭೆ ನಡೆಸಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಇರುವುದಿಲ್ಲ. ಸದರಿ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಲಾಗಿರುವ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಉಲ್ಲೇಖ (3)ರ ಪತ್ರದಲ್ಲಿ ಎಲ್ಲಾ ಇಲಾಖಾ ಮುಖ್ಯಸ್ಥರಿಗೆ ತಿಳಿಸಲಾಗಿದೆ. ಉಲ್ಲೇಖ (2)ರ ಸುತ್ತೋಲೆಯಲ್ಲಿನ ಅಂಶವನ್ನು ಉಲ್ಲೇಖ (4)ರ ಸುತ್ತೋಲೆಯಲ್ಲಿಯೂ ಪುನರುಚ್ಚರಿಸಲಾಗಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ವಿರೋಧ ಪಕ್ಷದ ನಾಯಕರು ಉಲ್ಲೇಖ (1)ರ ಪತ್ರದಲ್ಲಿ ತಿಳಿಸಿರುವಂತೆ, ಕೋವಿಡ್-19ರ ನಿರ್ವಹಣೆಯ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳ ಕುರಿತು ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದದ ಮುಖಾಂತರ ಸಭೆಯನ್ನು ಏರ್ಪಡಿಸಿ, ಮಾಹಿತಿಯನ್ನು ಪಡೆಯಲು ಅವಕಾಶವಿರುವುದಿಲ್ಲ. ಆದರೆ, ಮಾನ್ಯ ವಿರೋಧ ಪಕ್ಷದ ನಾಯಕರು ಅಪೇಕ್ಷಿತ ಮಾಹಿತಿಯನ್ನು ಪತ್ರದ ಮುಖಾಂತರ ಪಡೆಯಬಹುದಾಗಿರುತ್ತದೆಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.
**(ಮಾನ್ಯ ಮುಖ್ಯ ಮಂತ್ರಿಯವರಿಂದ ಅನುಮೋದಿತ)**

ತಮ್ಮ ವಿಶ್ವಾಸಿ,

**(ರಾಜೇಶ ಶಂಕ್ರಪ್ಪ ಸೂಳಿಕೇರಿ)**
ಸರ್ಕಾರದ ಅಧೀನ ಕಾರ್ಯದರ್ಶಿ-2
ಸಿಆಸುಇ (ರಾಜ್ಯ ಶಿಷ್ಟಾಚಾರ)

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**
1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
4. ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
8. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ.
9. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
10. ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.
11. ಮುಖ್ಯ ಆಯುಕ್ತರು, ಬಿಬಿಎಂಪಿ, ಬೆಂಗಳೂರು.
12. ಎಲ್ಲಾ ಪ್ರಾದೇಶಿಕ ಆಯುಕ್ತರು.
13. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ವಿವಿಧ ನಗರ ಪಾಲಿಕೆಗಳ ಆಯುಕ್ತರು, ಜಿಲ್ಲಾ ಆರೋಗ್ಯಾಧಿಕಾರಿಗಳು.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 61 ಶಿರಾಆ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:07.02.2018

## ಸುತ್ತೋಲೆ

**ವಿಷಯ:** ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳ ಪ್ರವಾಸದ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ.

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ: ಸಿಆಸುಇ 55 ಎಎಆರ್ 82, ದಿನಾಂಕ:18.05.1982
2. ಸುತ್ತೋಲೆ ಸಂಖ್ಯೆ: ಸಿಆಸುಇ 49 ರಾರಾಆ 93, ದಿನಾಂಕ:03.07.1993
3. ಸುತ್ತೋಲೆ ಸಂಖ್ಯೆ: ಸಿಆಸುಇ 63 ಇಆಸು 93, ದಿನಾಂಕ:24.04.1993
4. ಸುತ್ತೋಲೆ ಸಂಖ್ಯೆ:ಸಿಆಸುಇ 46 ರಾರಾಆ 99, ದಿನಾಂಕ:28.06.2000
5. ಸುತ್ತೋಲೆ ಸಂಖ್ಯೆ: ಸಿಆಸುಇ 54 ರಾರಾಆ 2015, ದಿನಾಂಕ:27.06.2015

******

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳು ಜಿಲ್ಲೆಗಳಿಗೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅವರಿಗೆ ಸಲ್ಲಿಸಬೇಕಾದ ಶಿಷ್ಟಾಚಾರ ವ್ಯವಸ್ಥೆಗೆ ಸಂಬಂಧಪಟ್ಟಂತೆ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಉಲ್ಲೇಖಿತ ಸುತ್ತೋಲೆಗಳ ಮೂಲಕ ಸೂಚನೆಗಳನ್ನು ನೀಡಲಾಗಿರುತ್ತದೆ. ಆದಾಗ್ಯೂ ಕೂಡ ಕೆಲವು ಸಂದರ್ಭಗಳಲ್ಲಿ ಜಿಲ್ಲೆಗಳಿಂದ ಶಿಷ್ಟಾಚಾರದಲ್ಲಿ ಲೋಪವಾಗುತ್ತಿರುವುದು ಕಂಡು ಬರುತ್ತಿದೆ. ಆದ್ದರಿಂದ, ಉಲ್ಲೇಖಿತ ಸುತ್ತೋಲೆಗಳ ಸೂಚನೆಗಳೊಂದಿಗೆ, ಈ ಕೆಳಕಂಡ ಸೂಚನೆಗಳನ್ನು ಸಹ ಪಾಲಿಸುವುದು.

1. ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆಗಳಿಗೆ ಭೇಟಿ ನೀಡಿದಾಗ ವಾಸ್ತವ್ಯವಿರುವ ಅತಿಥಿ ಗೃಹದಲ್ಲಿ ವ್ಯವಸ್ಥೆ ಬಗ್ಗೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಗೆ ಜವಾಬ್ದಾರಿ ನೀಡುವುದರೊಂದಿಗೆ ಅಪರ ಜಿಲ್ಲಾಧಿಕಾರಿಗಳ / ಉಪ ವಿಭಾಗಾಧಿಕಾರಿಗಳ ಮಟ್ಟದ ಹಿರಿಯ ಅಧಿಕಾರಿಯನ್ನು ಶಿಷ್ಟಾಚಾರ ನಿರ್ವಹಣೆಗಾಗಿ ನೇಮಿಸುವುದು.
2. ಮಾನ್ಯ ಮುಖ್ಯಮಂತ್ರಿಗಳು – ಹೆಲಿಕಾಪ್ಟರ್ ಮುಖಾಂತರ ಆಗಮಿಸಿದ್ದಲ್ಲಿ, ಸಂಬಂಧಪಟ್ಟ ಪೈಲೆಟ್ ಕೋ-ಪೈಲಟ್‌ಗಳೊಂದಿಗೆ ವ್ಯವಹರಿಸಲು ಹಾಗೂ ಹೆಲಿಕಾಪ್ಟರ್‌ನ ತಾಂತ್ರಿಕ ತೊಂದರೆಗಳಿದ್ದರೆ ಅವುಗಳ ವ್ಯವಸ್ಥೆ ಬಗ್ಗೆ ಹಾಗೂ ಪುನಃ ಇಂಧನ ತುಂಬುವ ಅವಶ್ಯಕತೆ ಇದ್ದರೆ ಅದರ ಬಗ್ಗೆ ಮೇಲುಸ್ತುವಾಗಿ ಮಾಡಲು ಒಬ್ಬ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಯನ್ನು ನೇಮಿಸುವುದು.
3. ಪೈಲಟ್ ಹಾಗೂ ಕೊ-ಪೈಲಟ್‌ಗಳ ವಾಸ್ತವ್ಯ ಹಾಗೂ ಸಾರಿಗೆ ವ್ಯವಸ್ಥೆ ನಿರ್ವಹಿಸಲು ಪ್ರತ್ಯೇಕ ನೋಡಲ್ ಅಧಿಕಾರಿಯೊಬ್ಬರನ್ನು ನೇಮಿಸುವುದು.
4. ಹೆಲಿಕಾಪ್ಟರ್‌ನ ತಾಂತ್ರಿಕ ವಿಷಯದ ಬಗ್ಗೆ ಆಗಲಿ, ಪುನಃ ಇಂಧನ ತುಂಬುವ ಬಗ್ಗೆ ಆಗಲಿ ಸಮನ್ವಯಿಸಲು ಹೆಲಿಕಾಪ್ಟರ್‌ನ ವ್ಯವಸ್ಥೆ ಮಾಡುವ ಖಾಸಗಿ ಸಂಸ್ಥೆಯು ಒಬ್ಬ ಜವಾಬ್ದಾರಿಯುತ ಅಧಿಕಾರಿಯನ್ನು ನೇಮಿಸುವುದು ಹಾಗೂ ಅವರ ಹೆಸರು ಮತ್ತು ದೂರವಾಣಿ ಸಂಖ್ಯೆಯನ್ನು ಜಿಲ್ಲಾಧಿಕಾರಿಯವರಿಗೆ ಮುಂಚಿತವಾಗಿ ನೀಡುವುದು.
5. ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸುವ ಸಮಾರಂಭಗಳಲ್ಲಿ ವೇದಿಕೆ ಮೇಲೆ ಆಸನದ ಹಿಂಭಾಗದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಚಿವಾಲಯದ ಅಧಿಕಾರಿಗಳಿಗೆ ಎರಡು ಆಸನಗಳನ್ನು ಕಾಯ್ದಿರಿಸುವುದು.

6. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರವಾಸದ ಸಮಯದಲ್ಲಿ ಯಾವುದೇ ಜಿಲ್ಲೆಯ ಮೂಲಕ ಹಾದುಹೋದಲ್ಲಿ ಅಥವಾ ಪ್ರವಾಸ ಮಾಡಿದಲ್ಲಿ, ಅವರನ್ನು ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಮ್ಮ ಜಿಲ್ಲೆಗಳ ಗಡಿಯಲ್ಲಿ ಭೇಟಿ ಮಾಡಿ / ಬರಮಾಡಿಕೊಂಡು ತಮ್ಮ ಜಿಲ್ಲೆಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಳನ್ನು ಒದಗಿಸುವುದು.
7. ಸಚಿವರುಗಳ ಪ್ರವಾಸದ ಸಮಯದಲ್ಲಿ, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರು ಕೇಂದ್ರ ಸ್ಥಾನದಲ್ಲಿದ್ದಲ್ಲಿ ಮಾತ್ರ ಸಚಿವರನ್ನು ಭೇಟಿ ಮಾಡುವಂತೆ ಉಲ್ಲೇಖ (4)ರ ಸುತ್ತೋಲೆಯಲ್ಲಿ ಸೂಚಿಸಲಾಗಿರುತ್ತದೆ. ಹಾಗೂ ಸಚಿವರು ಪ್ರವಾಸ ಮಾಡಿದಾಗ, ಅವರ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು, ಅವರುಗಳನ್ನು ಸ್ವಾಗತಿಸುವುದಲ್ಲದೆ, ಬೀಳ್ಕೊಡಬೇಕಾಗುತ್ತದೆ. ಜಿಲ್ಲಾ ಮಟ್ಟದ ಅದಿಕಾರಿಗಳ ಅನುಪಸ್ಥಿತಿಯಲ್ಲಿ ಅವರ ನಂತರದ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವುದಲ್ಲದೆ, ಸಚಿವರುಗಳು ಕೋರಿದ್ದಲ್ಲಿ, ಅವರುಗಳೊಡನೆ ಪ್ರವಾಸ ಮಾಡುವಂತೆ ಕೂಡ ಸೂಚಿಸಲಾಗಿದೆ.
8. ಜಿಲ್ಲಾಧಿಕಾರಿಗಳು ಸಚಿವರುಗಳ ಪ್ರವಾಸದ ಕಾರ್ಯಕ್ರಮದ ಪ್ರತಿಯನ್ನು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಳುಹಿಸಿ ದೂರುಗಳಿಗೆ ಅವಕಾಶ ಕೊಡದೆ, ಎಲ್ಲಾ ಶಿಷ್ಟಾಚಾರದ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ.

**(ಕೆ. ರತ್ನ ಪ್ರಭ)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 61 ಶಿರಾಲ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ: 21.02.2018

## ಸುತ್ತೋಲೆ

**ವಿಷಯ:** ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳ ಪ್ರವಾಸದ ಸಮಯದಲ್ಲಿ ಅದಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ.

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ: ಸಿಆಸುಇ 55 ಎಎಆರ್ 82, ದಿನಾಂಕ:18.05.1982
2. ಸುತ್ತೋಲೆ ಸಂಖ್ಯೆ: ಸಿಆಸುಇ 49 ರಾರಾಆ 93, ದಿನಾಂಕ:03.07.1993
3. ಸುತ್ತೋಲೆ ಸಂಖ್ಯೆ: ಸಿಆಸುಇ 63 ಇಆಸು 93, ದಿನಾಂಕ:24.04.1993
4. ಸುತ್ತೋಲೆ ಸಂಖ್ಯೆ:ಸಿಆಸುಇ 46 ರಾರಾಆ 99, ದಿನಾಂಕ:28.06.2000
5. ಸುತ್ತೋಲೆ ಸಂಖ್ಯೆ: ಸಿಆಸುಇ 54 ರಾರಾಆ 2015, ದಿನಾಂಕ:27.06.2015
6. ಸುತ್ತೋಲೆ ಸಂಖ್ಯೆ: ಸಿಆಸುಇ 61 ಶಿರಾಆ 2017, ದಿನಾಂಕ:07.02.2018

******

ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳು ಜಿಲ್ಲೆಗಳಿಗೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಅವರಿಗೆ ಸಲ್ಲಿಸಬೇಕಾದ ಶಿಷ್ಟಾಚಾರ ವ್ಯವಸ್ಥೆಗೆ ಸಂಬಂಧಪಟ್ಟಂತೆ ಅನುಸರಿಸಬೇಕಾದ ಶಿಷ್ಟಾಚಾರದ ಕುರಿತು ಉಲ್ಲೇಖಿತ ಸುತ್ತೋಲೆಗಳ ಮೂಲಕ ಸೂಚನೆಗಳನ್ನು ನೀಡಲಾಗಿರುತ್ತದೆ. ವಿಶೇಷವಾಗಿ ಸುತ್ತೋಲೆ ದಿನಾಂಕ:07.02.2018ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇತರೆ ಸಚಿವರುಗಳ ಪ್ರವಾಸದ ಸಮಯದಲ್ಲಿ ಪಾಲಿಸಬೇಕಾದ ಶಿಷ್ಟಾಚಾರಗಳ ಬಗ್ಗೆ ಸ್ಪಷ್ಟ ನಿರ್ದೇಶನ ನೀಡಿದ್ದಾಗ್ಯೂ ಸಹ ಮಾನ್ಯ ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ಸೂಚನೆಗಳನ್ನು ಪಾಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಯಥಾವತ್ತಾಗಿ ಪಾಲಿಸಲು ಈ ಮೂಲಕ ಮತ್ತೊಮ್ಮೆ ಸೂಚಿಸಿದೆ. ಇಲ್ಲವಾದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು.

**(ಕೆ. ರತ್ನ ಪ್ರಭ)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**
ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.

**ಪ್ರತಿ ಮಾಹಿತಿಗಾಗಿ:**
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನಸೌಧ.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನಸೌಧ.
3. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ-1.
4. ಎಲ್ಲಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗೌರವಾನ್ವಿತ ಲೋಕಾಯುಕ್ತರು ಹಾಗೂ ಉಪಲೋಕಾಯುಕ್ತರಿಗೆ ಸಲ್ಲಬೇಕಾದ ಶಿಷ್ಟಾಚಾರದ ಸೂಚನೆಗಳನ್ನು ಹೊರಡಿಸುವ ಬಗ್ಗೆ.

**ಓದಲಾಗಿದೆ:** ನಿಬಂಧಕರು, ಕರ್ನಾಟಕ ಲೋಕಾಯುಕ್ತರ ಕಛೇರಿ ಪತ್ರ ಸಂ:ಲೋಕ್/ಶಿಷ್ಟಾಚಾರ/01/2016-17, ದಿನಾಂಕ:22.01.2018

*******

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಛೇರಿರವರ ಪತ್ರ ದಿನಾಂಕ. 22.01.2018ರಲ್ಲಿ ಗೌರವಾನ್ವಿತ ಲೋಕಾಯುಕ್ತರು ಹಾಗೂ ಗೌರವಾನ್ವಿತ ಉಪ ಲೋಕಾಯುಕ್ತರು ಕಛೇರಿ ಕರ್ತವ್ಯಗಳ ನಿಮಿತ್ತ ಅಧಿಕೃತ ಪ್ರವಾಸ ಮತ್ತು ಖಾಸಗಿ ಪ್ರವಾಸಗಳನ್ನು ಕೈಗೊಂಡು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭಗಳಲ್ಲಿ ಅವರಿಗೆ ಸಲ್ಲಬೇಕಾದ ಶಿಷ್ಟಾಚಾರದ ಬಗ್ಗೆ ಯಾವುದೇ ನಿಯಮಾವಳಿಗಳು / ಸರ್ಕಾರದ ಅಧಿಸೂಚನೆಗಳು ಇರುವುದಿಲ್ಲ. ಸದರಿ ಗಣ್ಯರ ಭೇಟಿಯ ಸಮಯದಲ್ಲಿ ಅವರಿಗೆ ಸಲ್ಲಬೇಕಾದ ಶಿಷ್ಟಾಚಾರದ ಬಗ್ಗೆ ವಿಧ್ಯುಕ್ತವಾದ ಸ್ಪಷ್ಟ ಸೂಚನೆಗಳು ಜಿಲ್ಲಾಡಳಿತ ಕಛೇರಿಗಳಿಗೆ ಅತ್ಯಗತ್ಯವಾಗಿರುತ್ತದೆಂದು ತಿಳಿಸಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಶಿಷ್ಟಾಚಾರ ಶಾಖೆಯಿಂದ ಕರ್ನಾಟಕ ರಾಜ್ಯಕ್ಕೆ ಭೇಟಿ ನೀಡುವ ಗಣ್ಯ ವ್ಯಕ್ತಿಗಳಿಗೆ ಆತಿಥ್ಯ ನೀಡುವ ಬಗ್ಗೆ ಮಾರ್ಗಸೂಚಿಗಳಿರುತ್ತವೆ. ಸದರಿ ಮಾರ್ಗಸೂಚಿಯ ಪ್ರಕಾರ ರಾಜ್ಯಕ್ಕೆ ಭೇಟಿ ನೀಡುವ ವ್ಯಕ್ತಿಗಳನ್ನು ಮೂರು ಪ್ರವರ್ಗಗಳಾಗಿ ವರ್ಗೀಕರಿಸಲಾಗಿದೆ.

1. ರಾಜ್ಯ ಅತಿಥಿಗಳು
2. ಪಾವತಿ ರಹಿತ ಅತಿಥಿಗಳು ಮತ್ತು
3. ಪಾವತಿ ಅತಿಥಿಗಳು

ಅಂತಹ ರಾಜ್ಯ ಅತಿಥಿಗಳೆಂದು ಪರಿಗಣಿಸಲ್ಪಟ್ಟಿರುವ ಗಣ್ಯವ್ಯಕ್ತಿಗಳಿಗೆ ಸರ್ಕಾರದ ವತಿಯಿಂದ ವಸತಿ ಮತ್ತು ಊಟೋಪಚಾರ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಮತ್ತು ಭದ್ರತೆ ವ್ಯವಸ್ಥೆ ಕಲ್ಪಿಸಲು ಅವಕಾಶಗಳಿರುತ್ತವೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 3ರಲ್ಲಿ ಗೌರವಾನ್ವಿತ ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರ ನೇಮಕಾತಿ ಬಗ್ಗೆ ಷರತ್ತುಗಳಿವೆ. ಸದರಿ ಹುದ್ದೆಗಳ ಘನತೆ ಹಾಗೂ ಗೌರವ ಗಣನೆಗೆ ತೆಗೆದುಕೊಂಡು ಗೌರವಾನ್ವಿತ ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರವರು ವಿವಿಧ ಜಿಲ್ಲೆಗಳಿಗೆ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಅಧಿಕೃತ ಭೇಟಿ ನೀಡಿದ ಸಂದರ್ಭದಲ್ಲಿ ಅಗತ್ಯ ಶಿಷ್ಟಾಚಾರ ಕಲ್ಪಿಸುವುದು ಅವಶ್ಯಕವಾಗಿರುತ್ತದೆ. ರಾಜ್ಯ ಅತಿಥಿಗಳಿಗೆ ನೀಡುವ ಸವಲತ್ತುಗಳನ್ನು ಅಗತ್ಯಗನುಗುಣವಾಗಿ ಮಾರ್ಪಡಿಸಿ, ಈ ಕೆಳಗಿನಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 14 ಹೆಚ್‌ಪಿಪಿ 2018, ಬೆಂಗಳೂರು, ದಿನಾಂಕ 30-07-2018.**

ಗೌರವಾನ್ವಿತ ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ರಾಜ್ಯದ ವಿವಿಧ ಜಿಲ್ಲೆಗಳಿಗೆ (ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ) ಅಧಿಕೃತ ಕರ್ತವ್ಯದ ಮೇಲೆ ಭೇಟಿ ನೀಡಿದ ಸಂದರ್ಭದಲ್ಲಿ ಅವರಿಗೆ ಕೆಳಕಂಡ ಶಿಷ್ಟಾಚಾರವನ್ನು ನೀಡಲು ಆದೇಶಿಸಿದೆ:

ಅ) ಜಿಲ್ಲೆಗೆ ಆಗಮಿಸಿದ ಮತ್ತು ನಿರ್ಗಮಿಸಿದ ಸಮಯದಲ್ಲಿ ಜಿಲ್ಲಾಧಿಕಾರಿಗಳಿಂದ ನಿಯೋಜಿಸಲ್ಪಟ್ಟ ಜಿಲ್ಲೆಯ ಹಿರಿಯ ಅಧಿಕಾರಿಗಳು ಸದರಿಯವರನ್ನು ಸ್ವಾಗತಿಸುವುದು ಮತ್ತು ಬೀಳ್ಕೊಡುವುದು.

ಆ) ಸರ್ಕಾರಿ ಅತಿಥಿ ಗೃಹಗಳಲ್ಲಿ ಊಟ-ವಸತಿಯ ಅವಕಾಶ ಕಲ್ಪಿಸುವುದು ಮತ್ತು ಸರ್ಕಾರಿ ಅತಿಥಿ ಗೃಹಗಳು ಇಲ್ಲದಿರುವ ಕಡೆಗಳಲ್ಲಿ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಇರುವ ಸರ್ಕ್ಯೂಟ್ ಹೌಸ್‌ಗಳು / ನಿರೀಕ್ಷಣಾ ಮಂದಿರಗಳಲ್ಲಿ ಅಂತಹ ಸೌಲಭ್ಯ ಒದಗಿಸುವುದು. ಸದರಿಯವರಿಗೆ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ ಇರುವ ಸರ್ಕ್ಯೂಟ್ ಹೌಸ್‌ಗಳು / ನಿರೀಕ್ಷಣಾ ಮಂದಿರಗಳಲ್ಲಿ ಸ್ಥಳಾವಕಾಶ ಲಭ್ಯವಿಲ್ಲದಿದ್ದರೆ,

ಅವರಿಗೆ ಹೋಟೆಲ್‌ಗಳಲ್ಲಿ ವಾಸ್ತವ್ಯ ಕಲ್ಪಿಸುವುದು. ಊಟ, ವಸತಿ ಮುಂತಾದ ಎಲ್ಲಾ ವೆಚ್ಚಗಳನ್ನು ರಾಜ್ಯ ಸರ್ಕಾರವು ಭರಿಸುವುದು.

ಇ) ಜಿಲ್ಲೆಯ ವ್ಯಾಪ್ತಿಯೊಳಗೆ ಅವರಿಗೆ ಉಚಿತವಾಗಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುವುದು.

ಈ) ಪೊಲೀಸ್ ಇಲಾಖೆಯಿಂದ ಭದ್ರತೆ ಹಾಗೂ ರಕ್ಷಣೆ ನೀಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

ಉ) ಪತ್ರಿಕಾಗೋಷ್ಠಿಯ ಅಥವಾ ಸಂದರ್ಶನದ ಸಂದರ್ಭದಲ್ಲಿ ಆತಿಥ್ಯ ಮತ್ತು ಹೂವಿನ ಹಾರಗಳ ಮತ್ತು ಹೂಗುಚ್ಛಗಳ ಅರ್ಪಣೆ ಬಾಬ್ತುಗಳ ಮೇಲಿನ ವೆಚ್ಚಗಳನ್ನು ರಾಜ್ಯ ಸರ್ಕಾರವೇ ಭರಿಸುವುದು.

ಊ) ಜಿಲ್ಲೆಯ ವ್ಯಾಪ್ತಿಯೊಳಗೆ ಪಡೆಯುವ ಸಾರಿಗೆ, ವಸತಿ, ಊಟೋಪಚಾರ ಮತ್ತು ಇತರೆ ಸವಲತ್ತುಗಳಿಗೆ ಸಂಬಂಧಿಸಿದಂತೆ, ವೆಚ್ಚಗಳ ಕ್ಲೇಮುಗಳನ್ನು ಲೋಕಾಯುಕ್ತ ಕಚೇರಿಯಿಂದ ಮರು ಪಾವತಿ ಮಾಡಿಕೊಳ್ಳುವಂತಿಲ್ಲ.

ಋ) ಸದರಿ ಭೇಟಿ ಸಂಬಂಧ ತಗಲುವ ವೆಚ್ಚಗಳನ್ನು ರಾಜ್ಯ ಅತಿಥ್ಯ ಸಂಸ್ಥೆ, ಕುಮಾರ ಕೃಪ ಅತಿಥಿ ಗೃಹ, ಬೆಂಗಳೂರು, ಇಲ್ಲಿಂದ ಮರು ಪಾವತಿ ಮಾಡಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ.ಎಂ. ವಿಜಯಭಾಸ್ಕರ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ,

1. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು.
2. ಎಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
3. ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು.
4. ವಿಶೇಷಾಧಿಕಾರಿ, ಕುಮಾರ ಕೃಪ ಅತಿಥಿ ಗೃಹ, ಬೆಂಗಳೂರು.
5. ಶಾಖಾ ರಕ್ಷಾ ಕಡತ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 12 ಹೆಚ್‌ಡಬ್ಲ್ಯೂಪಿ 2014

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:08.01.2018

## ಸುತ್ತೋಲೆ

**ವಿಷಯ:** ಆದ್ಯತಾಸೂಚಿ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲ್ಲಿರುವವರುಗಳ ನಡುವೆ ಆದ್ಯತೆಯನ್ನು ಪರಿಗಣಿಸುವ ಕುರಿತು.

**ಉಲ್ಲೇಖ:**

1. ಸುತ್ತೋಲೆ ಸಂಖ್ಯೆ: ಸಿಆಸುಇ 12 ಹೆಚ್‌ಡಬ್ಲ್ಯೂಪಿ 2014, ದಿನಾಂಕ:21.09.2015.
2. ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ ಇವರ ಅ.ಸ ಪತ್ರ ಸಂಖ್ಯೆ: ವಿಪಸ : ಪಶಿಕ್ಷೇ : 577 : 2015-16, ದಿನಾಂಕ:13.10.2015 ಮತ್ತು 04.11.2016
3. ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯ ಇವರ ಪತ್ರ ಸಂಖ್ಯೆ: 12 / 7 / 2016 –Public, ದಿನಾಂಕ:02.01.2017

******

ಸರ್ಕಾರದ ಸಭೆ ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವ ಬಗ್ಗೆ ಉಲ್ಲೇಖ (1)ರಡಿ ಸುತ್ತೋಲೆ ಹೊರಡಿಸಿ, ಕರ್ನಾಟಕ ರಾಜ್ಯ ಆದ್ಯತಾ ಸೂಚಿ 2014ರನ್ವಯ ಶಿಷ್ಟಾಚಾರ ಪಾಲಿಸಲು ಸೂಚಿಸಲಾಗಿದೆ.

ಮಾನ್ಯ ವಿಧಾನ ಪರಿಷತ್ತು ಸದಸ್ಯರು ಹಾಗೂ ಮಾಜಿ ಶಿಕ್ಷಣ ಸಚಿವರು ತಮ್ಮ ಉಲ್ಲೇಖ (2)ರ ದಿನಾಂಕ:13.10.2015ರ ಪತ್ರದಲ್ಲಿ ಹಿರಿಯ ವಿಧಾನ ಪರಿಷತ್ ಸದಸ್ಯರುಗಳ ಗೌರವಕ್ಕೆ ತೊಂದರೆಯಾಗದಂತೆ 2014ರ ಆದ್ಯತಾ ಪಟ್ಟಿಯಲ್ಲಿರುವಂತೆ ಸಂಸತ್ ಸದಸ್ಯರು, ವಿಧಾನ ಸಭೆ / ವಿಧಾನ ಪರಿಷತ್ ಸದಸ್ಯರ ಶಿಷ್ಟಾಚಾರದ ಯಥಾಸ್ಥಿತಿಯನ್ನು ಮುಂದುವರೆಸಿ ಹಿರಿಯ ಸದಸ್ಯರುಗಳಿಗೆ ಅವಕಾಶ ಕಲ್ಪಿಸಲು ಅವಶ್ಯ ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರುಗಳು 2015ರ ಆದ್ಯತಾ ಸೂಚಿಪಟ್ಟಿಯ ಕ್ರಮ ಸಂಖ್ಯೆ:21A ಅನುಚ್ಛೇದದಲ್ಲಿ ಸ್ಥಾನವನ್ನು ಪಡೆಯುತ್ತಾರೆ. ಈ ರೀತಿ ಒಂದೇ ಅನುಚ್ಛೇದದಲ್ಲಿ ಇರುವ ಹುದ್ದೆಗಳಿಗೆ ಸಂಬಂಧಿಸಿದಂತೆ ಯಾರನ್ನು ಆದ್ಯತೆ ಪ್ರಕಾರ ಪರಿಗಣಿಸಬೇಕು ಎನ್ನುವುದನ್ನು ಕುರಿತು ಭಾರತ ಸರ್ಕಾರದ ಗೃಹ ಮಂತ್ರಾಲಯದಿಂದ ಅಭಿಪ್ರಾಯ ಕೋರಲಾಗಿದ್ದು, ಗೃಹ ಮಂತ್ರಾಲಯವು ಉಲ್ಲೇಖ (3)ರಲ್ಲಿರುವ ಪತ್ರದಲ್ಲಿ "as per the practice the person who have served for more than one term continuously are placed higher in the Table of Precedence (ToP)" ಎಂದು ಅಭಿಪ್ರಾಯಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಆದ್ಯತಾಸೂಚಿ ಪಟ್ಟಿಯಲ್ಲಿ ಒಂದೇ ಅನುಚ್ಛೇದದಲಿರುವವರುಗಳ ನಡುವೆ ಆದ್ಯತೆ ನೀಡುವಾಗ, ಯಾವ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಅವಧಿಗೆ ಸತತವಾಗಿ ಅದೇ ಸ್ಥಾನದಲ್ಲಿ ಮುಂದುವರೆದಿರುತ್ತಾರೋ ಅಂತಹವರಿಗೆ ಪರಸ್ಪರ ಆದ್ಯತೆಯನ್ನು ನಿಗದಿಪಡಿಸುವಾಗ ಮೇಲಿನ ಸ್ಥಾನವನ್ನು ನಿಗದಿಪಡಿಸಲು ಸೂಚಿಸಿದೆ.

**(ಡಾ. ಬಿ ಎಸ್ ಮಂಜುನಾಥ ಸ್ವಾಮಿ)**
ಸರ್ಕಾರದ ಅಧಿನ ಕಾರ್ಯದರ್ಶಿ-1
ಸಿಆಸು ಇಲಾಖೆ (ರಾಜ್ಯ ಶಿಷ್ಟಾಚಾರ)

**ಪ್ರತಿಗಳು:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
3. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು.

4. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
5. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.
6. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.
7. ಎಲ್ಲಾ ವಿಭಾಗಾಧಿಕಾರಿಗಳು
8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
9. ಎಲ್ಲಾ ಜಿಲ್ಲಾಧಿಕಾರಿಗಳು.
10. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
11. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
12. ಪತ್ರಿಕಾ ಪ್ರಕಟಣೆ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ರಾಜಕೀಯ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 2016

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:06.06.2016

**ಸೇರ್ಪಡೆ**

**ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯ ಕ್ರಮ ಸಂಖ್ಯೆ:18ರಲ್ಲಿ ಈ ಕೆಳಗಿನವರನ್ನು ಸೇರಿಸಲಾಗಿದೆ.**

"ಕ್ಯಾಬಿನೆಟ್ ದರ್ಜೆ ಸಚಿವರ ಸ್ಥಾನಮಾನ ನೀಡಿರುವಂತಹ ವ್ಯಕ್ತಿಗಳು ಶಾಸಕರಾಗಿರಲಿ ಅಥವಾ ಶಾಸಕರಾಗಿಲ್ಲದಿರಲಿ ಅಂತಹವರ ಸ್ಥಾನಮಾನವನ್ನು ಹೊಂದಿರುವ ವ್ಯಕ್ತಿಗಳು"

**ಕರ್ನಾಟಕ ರಾಜ್ಯದ ಆದ್ಯತಾ ಸೂಚಿ ಪಟ್ಟಿಯ ಕ್ರಮ ಸಂಖ್ಯೆ:19ರಲ್ಲಿ ಈ ಕೆಳಗಿನವರನ್ನು ಸೇರಿಸಲಾಗಿದೆ.**

"ರಾಜ್ಯ ದರ್ಜೆ ಸಚಿವರ ಸ್ಥಾನಮಾನ ನೀಡಿರುವಂತಹ ವ್ಯಕ್ತಿಗಳು ಶಾಸಕರಾಗಿರಲಿ ಅಥವಾ ಶಾಸಕರಾಗಿಲ್ಲದಿರಲಿ ಅಂತಹವರ ಸ್ಥಾನಮಾನವನ್ನು ಹೊಂದಿರುವ ವ್ಯಕ್ತಿಗಳು"

ಈ ಮೇಲೆ ತಿಳಿಸಿರುವ ಸಚಿವರ ಸ್ಥಾನಮಾನ ಹೊಂದಿರುವ ವ್ಯಕ್ತಿಗಳಿಗೆ ಕರ್ನಾಟಕ ರಾಜ್ಯ ಆದ್ಯತಾ ಸೂಚಿ ಪಟ್ಟಿಯಲ್ಲಿ ಈ ಮೇಲೆ ತಿಳಿಸಿದ ಕ್ರಮಾಂಕವು ಈ ತಕ್ಷಣ ಜಾರಿಗೆ ಬರುವಂತೆ ಸೇರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ. ಬಿ ಎಸ್ ಮಂಜುನಾಥ ಸ್ವಾಮಿ)**
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಿಆಸು ಇಲಾಖೆ (ರಾಜ್ಯ ಶಿಷ್ಟಾಚಾರ)

**ಗೆ:**

ಸಂಚಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು – ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು ಹಾಗೂ ಮುದ್ರಿಸಿದ 200 ಪ್ರತಿಗಳನ್ನು ಸಿಆಸು ಇಲಾಖೆಯ (ಸಾಮಾನ್ಯ-ಎ) ಶಾಖೆಗೆ ಒದಗಿಸಲು ಕೋರಿದೆ.

**ಪ್ರತಿ ಇವರಿಗೆ:**

1. ಮಹಾಲೇಖಪಾಲರು (ಲೆಕ್ಕ ಪತ್ರ / ಆಡಿಟ್) ಕರ್ನಾಟಕ, ಬೆಂಗಳೂರು.
2. ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗಳು, ರಾಜ ಭವನ, ಬೆಂಗಲೂರು.
3. ಎಲ್ಲಾ ಕ್ಯಾಬಿನೆಟ್ ದರ್ಜೆ / ರಾಜ್ಯ ಸಚಿವರ ಸ್ಥಾನಮಾನ ನೀಡಿರುವ ಗಣ್ಯರಿಗೆ.
4. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
7. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 01 ಹೆಚ್‌ಡಬ್ಲ್ಯೂಪಿ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:04.03.2015

## ಸುತ್ತೋಲೆ

**ವಿಷಯ:** ಸರ್ಕಾರದ ಸಭೆ ಸಮಾರಂಭಗಳಿಗೆ ನಿಗಮ ಮಂಡಳಿ ಅಧ್ಯಕ್ಷರನ್ನು ಆಹ್ವಾನಿಸುವ ಬಗ್ಗೆ.

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010, ದಿನಾಂಕ:07.12.2010.
2. ಸುತ್ತೋಲೆ ಸಂಖ್ಯೆ: ಸಿಆಸುಇ 20 ರಾರಾಆ 2012 (ಭಾ), ದಿನಾಂಕ:27.06.2012
3. ಸುತ್ತೋಲೆ ಸಂಖ್ಯೆ: ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿನಾಂಕ:17.09.2012.
4. ಸುತ್ತೋಲೆ ಸಂಖ್ಯೆ: ಸಿಆಸುಇ 05 ಹೆಚ್‌ಡಬ್ಲ್ಯೂಪಿ 2012, ದಿನಾಂಕ:23.11.2012.

******

ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ಸರ್ಕಾರದ ಸಮಾರಂಭಗಳಿಗೆ ನಿಗಮ ಮಂಡಳಿಗಳ ಅಧ್ಯಕ್ಷರುಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಶಿಷ್ಟಾಚಾರ ಕುರಿತು ಸೂಚನೆಗಳನ್ನು ನೀಡಲಾಗಿದೆ. ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ ಸದರಿ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಗಳನ್ನು ಹಿಂಪಡೆದಿದ್ದು, ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಗಿದೆ.

"ನಿಗಮ ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮಂಡಳಿಗಳ ಅಧ್ಯಕ್ಷರನ್ನು ಆಹ್ವಾನಿಸುವುದು ಜೊತೆಗೆ ನಿಗಮ ಮಂಡಳಿಗಳ ಅಧ್ಯಕ್ಷರು ಅಧಿಕೃತವಾಗಿ ವಾಸವಿರುವ ವಿಧಾನ ಸಭಾ ಕ್ಷೇತ್ರದಲ್ಲಿ ನಡೆಯುವ ಎಲ್ಲಾ ಸರ್ಕಾರಿ ಕಾರ್ಯಕ್ರಮಗಳಿಗೆ ಆಹ್ವಾನಿಸುವಂತೆ ಸೂಚಿಸಿದೆ"

ಈ ಸೂಚನೆಯನ್ನು ಯಾವುದೇ ಉಲ್ಲಂಘನೆ ಆಗದಂತೆ ತಪ್ಪದೆ ಪಾಲಿಸಲು ಸೂಚಿಸಲಾಗಿದೆ.

**(ಕೌಶಿಕ್ ಮುಖರ್ಜಿ)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**
1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು.
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು.
4. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ.
5. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು.
6. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಎಲ್ಲಾ ಪ್ರಾದೇಶಿಕ ಆಯುಕ್ತರು.
8. ಎಲ್ಲಾ ಜಿಲ್ಲಾಧಿಕಾರಿಗಳು.

9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಎಲ್ಲಾ ಇಲಖೆಗಳ ಇಲಾಖಾ ಮುಖ್ಯಸ್ಥರು.
11. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
12. ಎಲ್ಲಾ ಉಪ ವಿಭಾಗಾಧಿಕಾರಿಗಳು.
13. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
14. ಎಲ್ಲಾ ಪುರಸಭಾ ಆಯುಕ್ತರು.
15. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು / ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು.
16. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
17. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನಸೌಧ.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
4. ಪ್ರಧಾನ ಕಾರ್ಯದರ್ಶಿ, ಸಿಆಸುಇ ಇವರ ಆಪ್ತ ಕಾರ್ಯದರ್ಶಿ.
5. ಉಪಾಧ್ಯಕ್ಷರು, ರಾಜ್ಯ ಯೋಜನಾ ಆಯೋಗ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿ.
6. ಅಧ್ಯಕ್ಷರು, ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿ.
7. ಅಧ್ಯಕ್ಷರು, ಭದ್ರ ಅಚ್ಚುಕಟ್ಟು ಪ್ರಾಧಿಕಾರ, ಶಿವಮೊಗ್ಗ ಇವರ ಆಪ್ತ ಕಾರ್ಯದರ್ಶಿ.
8. ಅಧ್ಯಕ್ಷರು, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ ಇವರ ಆಪ್ತ ಕಾರ್ಯದರ್ಶಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2024

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:12.09.2024

## ಸುತ್ತೋಲೆ

ವಿಷಯ: ಸರ್ಕಾರದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಯನ್ನು ಶಿಷ್ಟಾಚಾರ ರೀತ್ಯ ಮುದ್ರಿಸುವ ಬಗ್ಗೆ.

ಉಲ್ಲೇಖ:
1. ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಹಕ್ಕು ಬಾಧ್ಯತಾ ಸಮಿತಿಯ ಸಭೆ ನಡವಳಿಯ ದಿನಾಂಕ:02.02.2024.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಹೆಚ್‌ಪಿಎ 2018 (1), ದಿನಾಂಕ:16.04.2019.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 04 ಹೆಚ್ಚಬ್ಲ್ಯೂಪಿ 2020, ದಿನಾಂಕ:22.03.2021

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಆಯೋಜಿಸುವ ಕಾರ್ಯಕ್ರಮಗಳ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಸಂವಿಧಾನದತ್ತ ಹುದ್ದೆಯಲ್ಲಿರುವ ಗಣ್ಯರನ್ನು ಅಹ್ವಾನಿಸುವಾಗ ಕರ್ನಾಟಕ ರಾಜ್ಯದಲ್ಲಿ ಅನುಸರಿಸಬೇಕಾದ ಆದ್ಯತಾ ಸೂಚಿಪಟ್ಟಿಯನ್ವಯ ಮುದ್ರಿಸದೇ ಶಿಷ್ಟಾಚಾರ ಉಲ್ಲಂಘನೆಯಾಗಿರುವ ಪ್ರಕರಣಗಳ ಕುರಿತಂತೆ ದಿನಾಂಕ:02.08.2024ರಂದು ನಡೆದ ಮಾನ್ಯ ವಿಧಾನ ಪರಿಷತ್ತಿನ ಹಕ್ಕು ಭಾದ್ಯತಾ ಸಮಿತಿ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗಿರುತ್ತದೆ. ಅದರಂತೆ ಮಾನ್ಯ ಸಭಾಪತಿಯವರು / ಸಭಾಧ್ಯಕ್ಷರು / ಮುಖ್ಯ ಮಂತ್ರಿಗಳು /ಉಪ ಮುಖ್ಯಮಂತ್ರಿಗಳು ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಕೇಂದ್ರ ಮತ್ತು ರಾಜ್ಯ ಸಚಿವರ ಸ್ಥಾನಮಾನಗಳ ವ್ಯತ್ಯಾಸ ಕುರಿತು ಅತ್ಯಂತ ಗಂಭೀರವಾಗಿ ಪರಿಗಣಿಸುವುದರೊಂದಿಗೆ ತೀವ್ರ ಅಸಮಾಧಾನವನ್ನು ಮಾನ್ಯ ಸಮಿತಿಯು ವ್ಯಕ್ತಪಡಿಸಿರುತ್ತದೆ.

ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತು ಸಮಗ್ರ ಸೂಚನೆಗಳನ್ನು ಉಲ್ಲೇಖ(2)ರಲ್ಲಿ ನೀಡಲಾಗಿರುತ್ತದೆ ಹಾಗೂ ಸರ್ಕಾರದ ಕಾರ್ಯಕ್ರಮದ ಎಲ್ಲಾ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ಉಲ್ಲೇಖ (3)ರ ಅದೇಶನುಸಾರ ಮುದ್ರಿಸುವುದು ಕಡ್ಡಾಯವಾಗಿರುತ್ತದೆ.

ಪ್ರಸ್ತುತ ಸರ್ಕಾರದ ಸಭೆ ಸಮಾರಂಭಗಳ ಆಯೋಜನೆಯಲ್ಲಿ ಪಾಲಿಸಬೇಕಾದ ಶಿಷ್ಟಾಚಾರ ಕುರಿತಾದ ಸಮಗ್ರ ಸೂಚನೆಗಳು ಹಾಗೂ ರಾಜ್ಯ ಅದ್ಯತಾ ಸೂಚಿ ಪಟ್ಟಿಯು ಸ್ಪಷ್ಟವಾಗಿದ್ದಾಗ್ಯೂ ಸಹ ಸರ್ಕಾರಿ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಮೇಲಿಂದ ಮೇಲೆ ಪುನರಾವರ್ತನೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಸರ್ಕಾರದ ಆಯೋಜಿತ ಕಾರ್ಯಕ್ರಮಗಳಲ್ಲಿ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಉಲ್ಲೇಖದ ಸರ್ಕಾರದ ಸುತ್ತೋಲೆ/ ಆದೇಶಗಳಲ್ಲಿನ ಸೂಚನೆ & ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಈ ಮೂಲಕ ಸೂಚಿಸಿದೆ ಹಾಗೂ ಮುಂದಿನ ದಿನಗಳಲ್ಲಿ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಮರುಕಳಿಸಿದಲ್ಲಿ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿಸಿ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿದೆ.

**(ಡಾ.ಶಾಲಿನಿ ರಜನೀಶ್)**
**ಸರ್ಕಾರದ ಮುಖ್ಯ ಕಾರ್ಯದರ್ಶಿ**

**ಪ್ರತಿಗಳು:**

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು.
2. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

3. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.

4. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು.

5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು.

6. ಎಲ್ಲಾ ಜಿಲ್ಲೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

7. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.

8. ಎಲ್ಲಾ ಜಿಲ್ಲೆಯ ಉಪ ವಿಭಾಗಾಧಿಕಾರಿಗಳು.

9. ಎಲ್ಲಾ ಪಟ್ಟಣ ಪಂಚಾಯತಿ / ಪುರಸಭಾ ನಗರಸಭೆಯ ಆಯುಕ್ತರುಗಳು ಆಯಾ ಜಿಲ್ಲಾಧಿಕಾರಿಗಳ ಮೂಲಕ.

10. ರಾಜ್ಯದ ಎಲ್ಲಾ ತಾಲ್ಲೂಕಿನ ತಹಶೀಲ್ದಾರರು.

11. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ.

12. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.

13. ಶಾಖಾ ರಕ್ಷಾ ಕಡತ ಬಿಡಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 20 ಹೆಚ್‌ಜಿಜಿ 2025

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:20.02.2025

## ಸುತ್ತೋಲೆ

ವಿಷಯ: ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳನ್ನು ಮುದ್ರಿಸುವ ಕುರಿತು ಸೂಚನೆಗಳನ್ನು ನೀಡುವ ಬಗ್ಗೆ.

* * * * *

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರದ ವತಿಯಿಂದ ಆಯೋಜಿಸಲ್ಪಡುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆಗಳಲ್ಲಿ ಆಹ್ವಾನಿತರ ಹೆಸರುಗಳನ್ನು ಮುದ್ರಿಸುವಲ್ಲಿ ಸೂಕ್ತ ಶಿಷ್ಟಾಚಾರ ಪಾಲನೆಯಾಗಿರುವ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜ್ಯ ಶಿಷ್ಟಾಚಾರ) ಯಿಂದ ಕಡ್ಡಾಯವಾಗಿ ಪೂರ್ವಾನುಮೋದನೆಯನ್ನು ಪಡೆದು ಮುಂದಿನ ಕ್ರಮವಹಿಸುವಂತೆ ಈ ಮೂಲಕ ಸೂಚಿಸಿದೆ.

**(ಎಲಿಷ ಆಂಡ್ರೂಸ್)**
ಸರ್ಕಾರದ ಉಪ ಕಾರ್ಯದರ್ಶಿ,
ಸಿಆಸುಇ (ರಾಜ್ಯ ಶಿಷ್ಟಾಚಾರ)
(Email ID: stateprotocolofficer@gmail.com)
(Contact No: 080-2203321)

**ಪ್ರತಿಗಳು:**

1. ಸರ್ಕಾರದ ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ರಾಜ್ಯದ ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
3. ಎಲ್ಲಾ ಇಲಾಖಾ ಮುಖ್ಯಸ್ಥರು.
4. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಸರ್ಕಾರದ ಅಧೀನ ಕಾರ್ಯದರ್ಶಿ-1(ಪ್ರ) ಸಿಆಸುಇ (ರಾಜ್ಯ ಶಿಷ್ಟಾಚಾರ) ವಿಧಾನಸೌಧ, ಬೆಂಗಳೂರು (Gmail Id: undersecretary1protocol@gmail.com) (Contact No: 080-2203270/3038).

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 33 ರಾರಾಅ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:28.05.2015

## ಸುತ್ತೋಲೆ

**ವಿಷಯ:** ಉಭಯ ಸದನಗಳ ಅಧಿವೇಶನ ನಡೆಯುವ ಸಮಯದಲ್ಲಿ ಸರ್ಕಾರದ ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ಹಾಗೂ ವಿಶ್ವವಿದ್ಯಾಲಯಗಳು ಶಾಸಕರು ಸದಸ್ಯರಾಗಿರುವ ಸಭೆಗಳನ್ನು ನಡೆಸದಿರುವ ಬಗ್ಗೆ

******

ಶ್ರೀ. ಹೆಚ್ ಎಸ್ ಶಿವಶಂಕರ್, ಹರಿಹರ ವಿಧಾನಸಭಾ ಕ್ಷೇತ್ರ, ಇವರು ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸಿರುವ ಮನವಿ ಹಾಗೂ ಕಾರ್ಯದರ್ಶಿ ವಿಧಾನಸಭೆ, ಇವರು ಮುಖ್ಯ ಕಾರ್ಯದರ್ಶಿಯವರಿಗೆ ಬರೆದಿರುವ ಪತ್ರಗಳಲ್ಲಿ ಉಭಯಸದನಗಳ ಅಧಿವೇಶನ ನಡೆಯುವ ಸಮಯದಲ್ಲಿ ಸರ್ಕಾರದ ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ಹಾಗೂ ವಿಶ್ವವಿದ್ಯಾಲಯಗಳು ಶಾಸಕರು ಸದಸ್ಯರಾಗಿರುವ ಸಭೆಗಳನ್ನು ನಡೆಸುವುದರಿಂದ ಶಾಸಕರುಗಳ ಹಕ್ಕನ್ನು ಮೊಟಕುಗೊಳಿಸಿದಂತಾಗುತ್ತದೆ. ಆದುದರಿಂದ, ಅಧಿವೇಶನದ ವೇಳೆಯಲ್ಲಿ ಸಭೆಗಳನ್ನು ನಡೆಸಬಾರದೆಂದು ಕೋರಿರುತ್ತಾರೆ.

ಆದ್ದರಿಂದ, ಸರ್ಕಾರದ ಸ್ಥಳೀಯ ಸಂಸ್ಥೆಗಳು, ಪ್ರಾಧಿಕಾರಗಳು ಹಾಗೂ ವಿಶ್ವವಿದ್ಯಾಲಯಗಳು ಇನ್ನು ಮುಂದೆ ವಿಧಾನಮಂಡಲದ ಅಧಿವೇಶನ ಇರುವ ದಿನಗಳಂದು ಶಾಸಕರು ಸದಸ್ಯರಾಗಿರುವ ಸಭೆಗಳನ್ನು ನಡೆಸಬಾರದೆಂದು ಈ ಮೂಲಕ ಸೂಚಿಸಲಾಗಿದೆ.

**(ಕೌಶಿಕ್ ಮುಖರ್ಜಿ)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು
4. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು
5. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನಸೌಧ, ಬೆಂಗಳೂರು.

(2–5) ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸ್ಥಳೀಯ ಸಂಸ್ಥೆಗಳು, ಎಲ್ಲಾ ಪ್ರಾಧಿಕಾರಗಳು ಹಾಗೂ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸುತ್ತೋಲೆಯನ್ನು ರವಾನಿಸುವಂತೆ ಕೋರಿದೆ

6. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 38 ರಾರಾಆ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:15.06.2015

**ಅಧಿಕೃತ ಜ್ಞಾಪನ**

**ವಿಷಯ:** ಹಕ್ಕುಬಾಧ್ಯತಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ

**ಉಲ್ಲೇಖ:** ಉಪ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಇವರ ಪತ್ರ ಸಂಖ್ಯೆ: ವಿಸಸ / ಶಾರಶಾ / 200 / ವರದಿ / 2015, ದಿನಾಂಕ:18.04.2015.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭಾ ಹಕ್ಕುಬಾಧ್ಯತಾ ಸಮಿತಿಯು ತನ್ನ ನಾಲ್ಕನೇ ವರದಿಯಲ್ಲಿ ಮಾಡಲಾದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ ತೆಗೆದುಕೊಂಡ ಕ್ರಮ ಕುರಿತು ಕರ್ನಾಟಕ ವಿಧಾನ ಸಭಾ ಸಚಿವಾಲಯಕ್ಕೆ ವರದಿ ಮಾಡುವಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿದೆ. ಹಕ್ಕುಬಾಧ್ಯತಾ ಸಮಿತಿ ತನ್ನ ನಾಲ್ಕನೇ ವರದಿಯಲ್ಲಿ ಗಣರಾಜ್ಯೋತ್ಸವ ದಿನ ಮತ್ತು ಸ್ವಾತಂತ್ರ್ಯ ದಿನಾಚರಣೆಯ ದಿನ ರಾಷ್ಟ್ರ ಧ್ವಜಾರೋಹಣ ಮಾಡುವುದರ ಕುರಿತಂತೆ ಕೇಂದ್ರ ಸರ್ಕಾರದಿಂದ ಹೊರಡಿಸಿದ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯ ಸರ್ಕಾರದ ವತಿಯಿಂದ ರಾಜ್ಯಮಟ್ಟದಿಂದ ಗ್ರಾಮ ಪಂಚಾಯತಿವರೆಗೆ ತಿಳುವಳಿಕೆಯಾಗದಂತೆ ಸೂಕ್ತ ರೀತಿಯಲ್ಲಿ ಸುತ್ತೋಲೆಯನ್ನು ಹೊರಡಿಸುವಂತೆ ತಿಳಿಸಿರುತ್ತಾರೆ.

2. ಗಣರಾಜ್ಯೋತ್ಸವ ದಿನ ಮತ್ತು ಸ್ವಾತಂತ್ರ್ಯ ದಿನಾಚರಣೆಯ ದಿನ ರಾಷ್ಟ್ರ ಧ್ವಜಾರೋಹಣ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಈ ಕೆಳಕಂಡ ಪತ್ರ ಹಾಗೂ ಸುತ್ತೋಲೆಗಳಲ್ಲಿ ಸೂಚನೆಗಳನ್ನು ನೀಡಿರುತ್ತವೆ.

1. No. 2.7.2001-Public, Government of India / Bharat Sarkar, Ministry of Home Affairs / Grih Mantralaya, New Delhi, dated the 12th July, 2001
2. No:2.9.2001-Public, Government of India / Bharat Sarkar, Ministry of Home Affairs / Grih Mantralaya, New Delhi, dated for 9TH January, 2002
3. No. 2.7.95-Public, Government of India / Bharat Sarkar, Ministry of Home Affairs / Grih Mantralaya, North Block, New Delhi, dated the 28th February, 2002.
4. No. 15.10.2005-Public, Government of India / Bharat Sarkar, Ministry of Home Affairs / Grih Mantralaya, North Block, New Delhi, dated the 27th September, 2005.
5. ಸುತ್ತೋಲೆ ಸಂಖ್ಯೆ: ಸಿಆಸುಇ 05 ಹೆಚ್‌ಡಬ್ಲ್ಯೂಪಿ 2012, ದಿನಾಂಕ:23.11.2012

3. ಹಕ್ಕುಬಾಧ್ಯತಾ ಸಮಿತಿಯ ಶಿಫಾರಸ್ಸಿನ ಅನುಸಾರ ಗಣರಾಜ್ಯೋತ್ಸವ ದಿನ ಮತ್ತು ಸ್ವಾತಂತ್ರ್ಯ ದಿನಾಚರಣೆಯ ದಿನ ರಾಷ್ಟ್ರ ಧ್ವಜಾರೋಹಣ ಮಾಡುವ ಬಗ್ಗೆ ಹೊರಡಿಸಿರುವ ಮೇಲ್ಕಂಡ ಕೇಂದ್ರ ಸರ್ಕಾರದ ಪತ್ರಗಳು ಹಾಗೂ ರಾಜ್ಯ ಸರ್ಕಾರದ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಮ್ಮ ಅಧೀನದಲ್ಲಿ ಬರುವ ಸರ್ಕಾರಿ ಕಛೇರಿಗಳು ಸೇರಿದಂತೆ ಎಲ್ಲಾ ಅಂಗ ಸಂಸ್ಥೆಗಳಿಗೆ ಸೂಕ್ತ ನಿರ್ದೇಶನಗಳನ್ನು ಹೊರಡಿಸುವಂತೆ ಹಾಗೂ ನ್ಯೂನತೆಗಳು ಉಂಟಾಗದಂತೆ ಎಚ್ಚರ ವಹಿಸುವಂತೆ ತಿಳಿಸಲಾಗಿದೆ. ಮೇಲಿನ ಕಂಡಿಕೆ 2ರಲ್ಲಿ ತಿಳಿಸಿರುವ ಕೇಂದ್ರ ಸರ್ಕಾರದ ಮತ್ತು ರಾಜ್ಯ ಸರ್ಕಾರದ ಸುತ್ತೋಲೆಗಳ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

**(ಜಯವಿಭವ ಸ್ವಾಮಿ)**
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸು ಇಲಾಖೆ (ರಾಜ್ಯ ಶಿಷ್ಟಾಚಾರ)

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು.
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 38 ರಾರಾಆ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:15.06.2015

## ಅಧಿಕೃತ ಜ್ಞಾಪನ

**ವಿಷಯ:** ಹಕ್ಕುಬಾಧ್ಯತಾ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಉಲ್ಲೇಖ:** ಉಪ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಇವರ ಪತ್ರ ಸಂಖ್ಯೆ: ವಿಸಸ / ಶಾರಶಾ / 200 / ವರದಿ / 2015, ದಿನಾಂಕ:18.04.2015.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಧಾನ ಸಭಾ ಹಕ್ಕುಬಾಧ್ಯತಾ ಸಮಿತಿಯು ತನ್ನ ನಾಲ್ಕನೇ ವರದಿಯಲ್ಲಿ ಮಾಡಲಾದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಿ ತೆಗೆದುಕೊಂಡ ಕ್ರಮ ಕುರಿತು ಕರ್ನಾಟಕ ವಿಧಾನ ಸಭಾ ಸಚಿವಾಲಯಕ್ಕೆ ವರದಿ ಮಾಡುವಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಲಾಗಿದೆ.

2. ಹಕ್ಕುಬಾಧ್ಯತಾ ಸಮಿತಿ ತನ್ನ 4ನೇ ವರದಿಯಲ್ಲಿ ವಿಧಾನಸಭೆಯ ಮಾನ್ಯ ಸದಸ್ಯರ ಗೌರವಕ್ಕೆ ತಕ್ಕಂತೆ ಶಿಷ್ಟಾಚಾರಗಳನ್ನು ಪಾಲಿಸಲು ಎಲ್ಲಾ ಹಂತದ ಜಿಲ್ಲೆ / ತಾಲ್ಲೂಕು / ಗ್ರಾಮಗಳ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ತಿಳಿಸಿದೆ. ಸರ್ಕಾರದ ಸಭೆ ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವ ಬಗ್ಗೆ ಸರ್ಕಾರದಿಂದ ದಿನಾಂಕ:23.11.2012ರಂದು ಹೊರಡಿಸಲಾದ ಆದೇಶ ಹಾಗೂ ಇನ್ನು ಮುಂದೆ ಈ ದಿಸೆಯಲ್ಲಿ ಆಗಿಂದಾಗ್ಗೆ ಹೊರಡಿಸಲಾದ ಆದೇಶಗಳನ್ನು ಸರ್ಕಾರದ ಎಲ್ಲಾ ಹಂತದಲ್ಲಿ ಕಟ್ಟುನಿಟ್ಟಾಗಿ ಪಾಲಿಸುವಂತೆ ಹಾಗೂ ಶಿಷ್ಟಾಚಾರದ ಉಲ್ಲಂಘನೆಯಾದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿರುತ್ತದೆ.

3. ಜನಪ್ರತಿನಿಧಿಗಳನ್ನು ಸರ್ಕಾರಿ ಸಭೆ / ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ ಹಾಗೂ ಆದ್ಯತೆಯನುಸಾರ ವೇದಿಕೆಯಲ್ಲಿ ಆಸನದ ವ್ಯವಸ್ಥೆ ಮಾಡುವ ಕುರಿತು, ಶಿಷ್ಟಾಚಾರ ಪಾಲನೆಯ ಬಗ್ಗೆ ಸರ್ಕಾರದ ವತಿಯಿಂದ ಈ ಕೆಳಕಂಡ ಸುತ್ತೋಲೆಗಳನ್ನು ಹೊರಡಿಸಲಾಗಿದೆ.

1. ಸಿಆಸುಇ 55 ರಾರಾಆ 2009, ದಿನಾಂಕ:23.06.2010
2. ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010, ದಿನಾಂಕ:07.12.2010
3. ಸಿಆಸುಇ 5 ರಾರಾಆ 2012, ದಿನಾಂಕ:20.01.2012
4. ಸಿಆಸುಇ 20 ರಾರಾಆ 2012 (ಭಾಗ), ದಿನಾಂಕ:27.06.2012
5. ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿನಾಂಕ:17.09.2012
6. ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿನಾಂಕ:10.10.2012
7. ಸಿಆಸುಇ 5 ಹೆಚ್‌ಡಬ್ಲ್ಯೂಪಿ 2012, ದಿನಾಂಕ:23.11.2012

4. ಹಕ್ಕುಬಾಧ್ಯತಾ ಸಮಿತಿಯ ಶಿಫಾರಸ್ಸಿನ ಅನುಸಾರ ಜನಪ್ರತಿನಿಧಿಗಳನ್ನು ಆಹ್ವಾನಿಸುವ ಬಗ್ಗೆ ಹಾಗೂ ಶಿಷ್ಟಾಚಾರ ಪಾಲನೆ ಬಗ್ಗೆ ಹೊರಡಿಸಿರುವ ಮೇಲ್ಕಂಡ ಸುತ್ತೋಲೆಗಳನ್ನು ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸರ್ಕಾರಿ ಕಛೇರಿಗಳಿಗೂ ಕಳುಹಿಸಿ ಸರ್ಕಾರದ ನಿರ್ದೇಶನಗಳನ್ನು ಚಾಚೂ ತಪ್ಪದೇ ಚ್ಯುತಿಯಾಗದಂತೆ ಪಾಲಿಸುವಂತೆ ಸೂಚಿಸಲು ಈ ಮೂಲಕ ತಿಳಿಸಿದೆ. ಯಾವುದೇ ಸರ್ಕಾರಿ ಸಭೆ, ಸಮಾರಂಭಗಳನ್ನು ನಡೆಸುವಾಗ, ಅಂತಹ ಸಭೆ, ಸಮಾರಂಭಗಳಿಗೆ ಆಹ್ವಾನ ಪತ್ರಿಕೆಗಳನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳವರಿಂದ ಪರಿಶೀಲಿಸಿಕೊಂಡು ಅನುಮೋದನೆ ಪಡೆಯತಕ್ಕದ್ದೆಂದು ಸಹ ತಿಳಿಸಿದೆ.

5. ಶಿಷ್ಟಾಚಾರ ಪಾಲನೆಯ ಎಲ್ಲಾ ಸುತ್ತೋಲೆಗಳಂತೆ ಪಾಲಿಸಬೇಕಾದ ನೀತಿ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದೆ. ಸಂಬಂಧಿಸಿದ ಆದೇಶ ಮತ್ತು ಸುತ್ತೋಲೆಗಳ ಉದ್ಧೃತ ಭಾಗಗಳನ್ನು ಪ್ರತಿ ಮಾಡಿಸಿ, ಜಿಲ್ಲಾ ಮಟ್ಟದ, ತಾಲ್ಲೂಕು ಮಟ್ಟದ ಹಾಗೂ ಗ್ರಾಮ ಪಂಚಾಯತ್ ಮಟ್ಟದ ಎಲ್ಲಾ ಸರ್ಕಾರಿ, ಸರ್ಕಾರಿ ಸ್ವಾಮ್ಯತೆಗೆ ಒಳಪಡುವಂತಹ ಎಲ್ಲಾ ಸಂಸ್ಥೆಗಳಿಗೆ ರವಾನಿಸತಕ್ಕದ್ದೆಂದು ತಿಳಿಸಿದೆ. ಮೇಲಿನ ಸುತ್ತೋಲೆಗಳಲ್ಲಿ ತಿಳಿಸಿರುವ ನಿರ್ದೇಶನಗಳನ್ನು ಚಾಚೂತಪ್ಪದೇ ಪಾಲಿಸಲು ಹಾಗೂ ಪಾಲಿಸಲು ತಪ್ಪಿದವರ ವಿರುದ್ಧ ಸಂಬಂಧಿತ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳು ಶಿಸ್ತಿನ ಕ್ರಮವಹಿಸಲು ತಿಳಿಸಿದೆ.

**(ಜಯವಿಭವ ಸ್ವಾಮಿ)**
ಸರ್ಕಾರದ ಉಪ ಕಾರ್ಯದರ್ಶಿ
ಸಿಆಸು ಇಲಾಖೆ (ರಾಜ್ಯ ಶಿಷ್ಟಾಚಾರ)

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು.
4. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
5. ಎಲ್ಲಾ ಪ್ರಾದೇಶಿಕ ಆಯುಕ್ತರು.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 54 ರಾರಾಆ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:27.06.2015

## ಸುತ್ತೋಲೆ

**ವಿಷಯ:** ಮಾನ್ಯ ಮುಖ್ಯಮಂತ್ರಿಯವರ ಪ್ರವಾಸ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ

**ಉಲ್ಲೇಖ:**
1. ದಿನಾಂಕ:18.05.1982 ಸುತ್ತೋಲೆ ಸಂಖ್ಯೆ: ಸಿಆಸುಇ 85 ಎಎಆರ್ 82
2. ದಿನಾಂಕ:18.05.1982 ಸುತ್ತೋಲೆ ಸಂಖ್ಯೆ: ಸಿಆಸುಇ 55 ಎಎಆರ್ 85
3. ದಿನಾಂಕ:25.11.1992 ಸುತ್ತೋಲೆ ಸಂಖ್ಯೆ: ಸಿಆಸುಇ 73 ಜಿಎಂ 95
4. ದಿನಾಂಕ:17.03.1997 ಸುತ್ತೋಲೆ ಸಂಖ್ಯೆ: ಸಿಆಸುಇ 16 ರಾರಾಆ 97
5. ದಿನಾಂಕ:28.04.2000 ಸುತ್ತೋಲೆ ಸಂಖ್ಯೆ: ಸಿಆಸುಇ 46 ರಾರಾಆ 99

******

ಮೇಲಿನ ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯಲ್ಲಿನ ಕಂಡಿಕೆ-2ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಪ್ರವಾಸದ ಸಮಯದಲ್ಲಿ ಯಾವುದೇ ಜಿಲ್ಲೆಯ ಮೂಲಕ ಹಾದುಹೋದಲ್ಲಿ ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಅವರನ್ನು ತಮ್ಮ ಗಡಿಯಲ್ಲಿ ಭೇಟಿ ಮಾಡುವುದಲ್ಲದೆ ಜಿಲ್ಲೆಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಳನ್ನು ಅವರಿಗೆ ಒದಗಿಸಬೇಕೆಂದು ಸೂಚಿಸಲಾಗಿತ್ತು. ಸಂಬಂಧಿಸಿದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಸಹ ಭೇಟಿ ಮಾಡಿ ಜಿಲ್ಲೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಗಳನ್ನು ನೀಡುವ ಅವಶ್ಯಕತೆ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ, ಮಾನ್ಯ ಮುಖ್ಯಮಂತ್ರಿಯವರು ತಮ್ಮ ಪ್ರವಾಸದ ಸಮಯದಲ್ಲಿ ಯಾವುದೇ ಜಿಲ್ಲೆಯ ಮೂಲಕ ಹಾದುಹೋದಲ್ಲಿ ಅಥವಾ ಪ್ರವಾಸ ಮಾಡಿದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಮ್ಮ ಜಿಲ್ಲೆಗಳ ಗಡಿಗಳಲ್ಲಿ ಭೇಟಿ ಮಾಡಿ / ಬರಮಾಡಿಕೊಂಡು ತಮ್ಮ ಜಿಲ್ಲೆಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಳನ್ನು ನೀಡತಕ್ಕದ್ದೆಂದು ಈ ಮೂಲಕ ಸೂಚಿಸಿದೆ.

**(ಕೌಶಿಕ್ ಮುಖರ್ಜಿ)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
2. ಎಲ್ಲಾ ಜಿಲ್ಲಾಧಿಕಾರಿಗಳು.
3. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
4. ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
5. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 57 ರಾರಾಅ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:16.07.2015

## ಸುತ್ತೋಲೆ

**ವಿಷಯ:** ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದಂತಹ ದೂರವಾಣಿ ಕರೆಗಳನ್ನು ಹಿಂತಿರುಗಿಸುವ ಬಗ್ಗೆ.

**ಉಲ್ಲೇಖ:** ಸುತ್ತೋಲೆ ಸಂಖ್ಯೆ: ಸಿಆಸುಇ 13 ರಾರಾಅ 99, ದಿನಾಂಕ:27.04.2000

******

ವಿಧಾನ ಮಂಡಲದ ಸದಸ್ಯರುಗಳ ದೂರವಾಣಿ ಕರೆಗಳಿಗೆ ಸರ್ಕಾರದ ಅಧಿಕಾರಿಗಳು ಸ್ಪಂದಿಸುತ್ತಿಲ್ಲವೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ಸಭೆಯಲ್ಲಿದ್ದಾಗ, ಅವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರುಗಳು, ಅವರುಗಳಿಗೆ ಬಂದಂತಹ ದೂರವಾಣಿ ಕರೆಗಳನ್ನು ಪಟ್ಟಿ ಮಾಡುವುದಲ್ಲದೆ, ಅವರುಗಳು ಹಿಂತಿರುಗಿ ಬಂದ ನಂತರ ಅವರಿಗೆ ಅದನ್ನು ತೋರಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಸಚಿವರುಗಳು, ಸಂಸತ್ ಸದಸ್ಯರುಗಳು, ಶಾಸಕರುಗಳು, ಅತಿ ಗಣ್ಯ ವ್ಯಕ್ತಿಗಳು ಮತ್ತು ಹಿರಿಯ ಅಧಿಕಾರಿಗಳಿಂದ ಬಂದಂತಹ ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಹಿಂತಿರುಗಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಉಲ್ಲೇಖಿತ ಸುತ್ತೋಲೆಯಲ್ಲಿ ಸರ್ಕಾರವು ಸೂಚನೆಯನ್ನು ನೀಡಿರುತ್ತದೆ.

ಮುಂದುವರೆದು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಇತರೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಸಹ ಸರ್ಕಾರದ ಈ ಸೂಚನೆಯನ್ನು ಇನ್ನು ಮುಂದೆ ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ.

**(ಭೀಮಾಶಂಕರ ರಾಸೂರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಇವರಿಗೆ:**

1. ಎಲ್ಲಾ ಜಿಲ್ಲಾಧಿಕಾರಿಗಳು / ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು --ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಮೂಲಕ.
2. ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು.
3. ಎಲ್ಲಾ ತಾಲ್ಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿಗಳು.
4. ಶಾಖಾ ರಕ್ಷಾ ಕಡತ / ವಾರ್ಷಿಕ ಸಂಗ್ರಹ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮಾನ್ಯ ಕಾರ್ಯದರ್ಶಿಯವರ ಅಪ್ತ ಕಾರ್ಯುದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸು ಇಲಾಖೆ ಇವರ ಆಪ್ತ ಕಾರ್ಯದರ್ಶಿ.
3. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 01 ರಾರಾಆ 2015

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:16.07.2015

## ಸುತ್ತೋಲೆ

**ವಿಷಯ:** ಸರ್ಕಾರಿ ಕಾರ್ಯಕ್ರಮಗಳನ್ನು ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ನಡೆಸುವ ಬಗ್ಗೆ

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 05 ಹೆಚ್‌ಡಬ್ಲ್ಯೂಪಿ 2012, ದಿನಾಂಕ:23.11.2012.

******

ಸರ್ಕಾರದ ಸಭೆ ಸಮಾರಂಭಗಳಿಗೆ ಜನಪ್ರತಿನಿಧಿಗಳನ್ನು ಆಹ್ವಾನಿಸುವ ಬಗ್ಗೆ ಮೇಲೆ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚನೆಗಳನ್ನು ನೀಡಲಾಗಿದೆ. ಸರ್ಕಾರದ ಯಾವುದೇ ಕಾರ್ಯಕ್ರಮವಿದ್ದಲ್ಲಿ ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸಲು ಸ್ಪಷ್ಟವಾಗಿ ತಿಳಿಸಲಾಗಿದೆ. ಆದಾಗ್ಯೂ, ಸರ್ಕಾರದ ಸೂಚನೆಗಳನ್ನು ಪಾಲಿಸದೇ ಸರ್ಕಾರಿ ಕಾರ್ಯಕ್ರಮಗಳಿಗೆ ಶಾಸಕರನ್ನು ಆಹ್ವಾನಿಸದೇ ಕಾರ್ಯಕ್ರಮ ಆಯೋಜಿಸಲಾದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿದೆ. ಇನ್ನು ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟುನಿಟ್ಟಿನ ಎಚ್ಚರಿಕೆ ವಹಿಸುವಂತೆ ಸೂಚಿಸಿದೆ. ಇಂತಹ ಘಟನೆಗಳು ಸಂಭವಿಸಿದ ಪಕ್ಷದಲ್ಲಿ ಜಿಲ್ಲಾಡಳಿತವು ಶಿಷ್ಟಾಚಾರ ಉಲ್ಲಂಘನೆ ಮಾಡಿದಂತಹ ಅಧಿಕಾರಿ / ನೌಕರರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸುವಂತೆ ಸಹ ಸೂಚಿಸಲಾಗಿದೆ.

**(ಡಾ. ಇ ವಿ ರಮಣ ರೆಡ್ಡಿ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಿಆಸು ಇಲಾಖೆ

**ಇವರಿಗೆ:**

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು.
2. ಕಾರ್ಯದರ್ಶಿ, ವಿಧಾನಸಭೆ, ವಿಧಾನಸೌಧ.
3. ಕಾರ್ಯದರ್ಶಿ, ವಿಧಾನ ಪರಿಷತ್ತು, ವಿಧಾನಸೌಧ.
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೂ, ಜಿಲ್ಲ ಪಂಚಾಯತ್.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 120 ರಾರಾಅ 2011

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:16.03.2013

## ಸುತ್ತೋಲೆ

**ವಿಷಯ:** ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲ ಸದಸ್ಯರುಗಳ ನಡುವಣ ಸರ್ಕಾರದ ವ್ಯವಹಾರಗಳು – ಸೂಕ್ತ ಕಾರ್ಯವಿಧಾನದ ಪಾಲನೆ ಕುರಿತಾದ ಪರಿಷ್ಕೃತ ಕ್ರೋಢೀಕೃತ ಸೂಚನೆಗಳು.

**ಉಲ್ಲೇಖ:** ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಬ್ಬಂದಿ ಮತ್ತು ತರಬೇತಿ ಇಲಾಖೆ, ಸಾರ್ವಜನಿಕ ಕುಂದು ಕೊರತೆ ಮತ್ತು ಪಿಂಚಣಿ ಮಂತ್ರಾಲಯ ಇವರ ಅ.ಸ ಪತ್ರ ಸಂಖ್ಯೆ:11013 / 4 / 2011-Estt (A), ದಿನಾಂಕ:08.12.2011.

******

ಆಡಳಿತ ವರ್ಗ ಮತ್ತು ಸಂಸತ್ ಹಾಗೂ ವಿಧಾನ ಮಂಡಲ ಸದಸ್ಯರ ನಡುವಣ ಸರ್ಕಾರಿ ವ್ಯವಹಾರಗಳ ಕಾರ್ಯವಿಧಾನದ ಪಾಲನೆಯ ಕುರಿತು ಕೇಂದ್ರ ಸರ್ಕಾರದಿಂದ ಇದುವರೆವಿಗೂ ನೀಡಲಾಗಿರುವ ಸೂಚನೆಗಳನ್ನು ಬಲವರ್ಧನೆಗೊಳಿಸಲು ಕ್ರೋಢೀಕರಿಸಿ ಹೊರಡಿಸಲಾದ ಕೇಂದ್ರ ಸರ್ಕಾರದ ದಿನಾಂಕ:01.12.2011ರ ಅಧಿಕೃತ ಜ್ಞಾಪನ ಮತ್ತು ಇದೇ ವಿಷಯದ ಬಗ್ಗೆ ರಾಜ್ಯ ಸರ್ಕಾರದಿಂದ ಹೊರಡಿಸಿರುವ ವಿವಿಧ ಸೂಚನೆ ಹಾಗೂ ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿಯ ಮಾರ್ಗಸೂಚಿಯನ್ನು ಪರಿಗಣಿಸಿ ಈ ಕೆಳಗೆ ಸೂಚಿಸಿದಂತೆ ಪರಿಷ್ಕರಿಸಿ ಕ್ರೋಢೀಕರಿಸಲಾಗಿದೆ.

| | |
|---|---|
| I | ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಅವರು ಕ್ಷೇತ್ರ ಒಂದರ ಪ್ರತಿನಿಧಿ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರು ನೀಡುವ ಮನವಿ ಹಾಗೂ ಸಲಹೆಗಳನ್ನು ಪರಿಗಣಿಸುವುದಲ್ಲದೆ ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವಂತೆ ಮತ್ತು ಸೌಜನ್ಯಪೂರ್ವಕವಾಗಿ ನಡೆದುಕೊಳ್ಳಲು ಸೂಚಿಸಲಾಗಿದೆ. |
| II | ಅವರು ಏನು ಹೇಳಬಹುದು ಎಂಬುದನ್ನು ಎಚ್ಚರಿಕೆಯಿಂದ ಪರ್ಯಾಲೋಚಿಸಿ ಅಥವಾ ತಾಳ್ಮೆಯಿಂದ ಆಲಿಸಿ ಸರ್ಕಾರಿ ನೌಕರರು ತಮ್ಮ ಸ್ವಂತ ವಿವೇಚಾನುಸಾರವಾಗಿ ನಿಯಮಾನುಸಾರವಾಗಿ ನಡೆದುಕೊಳ್ಳಬೇಕು |
| III | ಅವರು ಭೇಟಿಗಾಗಿ ಕೋರಿದಾಗ ಆದ್ಯತೆ ಮೇಲೆ ಅವಕಾಶ ನೀಡಬೇಕಾಗಿರುತ್ತದೆ. ಅಧಿಕಾರಿಗಳನ್ನು ಭೇಟಿ ಮಾಡಲು ಗೊತ್ತುಪಡಿಸಿಕೊಂಡ ಸಂದರ್ಶನ ವ್ಯವಸ್ಥೆಯಲ್ಲಿ ಯಾವುದೇ ಅನಾನುಕೂಲತೆಯಿಂದಾಗಿ ತಪ್ಪಿಹೋದಲ್ಲಿ ಅವರೊಂದಿಗೆ ಸಮಾಲೋಚಿಸಿ ಹೊಸದಾಗಿ ಸಂದರ್ಶನ ಸಮಯವನ್ನು ನಿಗದಿಪಡಿಸಬೇಕು. |
| IV | ಜಿಲ್ಲಾ ಉಸ್ತುವಾರಿ ಸಚಿವರನ್ನು ಆಹ್ವಾನಿಸುವುದನ್ನು ಒಳಗೊಂಡಂತೆ ಸರ್ಕಾರದ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ ಸಂಬಂಧಪಟ್ಟ ಇಲಾಖೆಯ ಸಚಿವರ ಅನುಮೋದನೆಯೊಂದಿಗೆ ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸತಕ್ಕದ್ದು. |
| V | ರಾಜ್ಯ ಸರ್ಕಾರದ ವತಿಯಿಂದ ಏರ್ಪಡಿಸುವ ಎಲ್ಲಾ ಸಭೆ / ಸಮಾರಂಭಗಳಲ್ಲಿ ಆದ್ಯತಾ ಪಟ್ಟಿಯ ಪ್ರಕಾರ (Table of Precedence) ಅವರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಸಂಸದರು ಹಾಗೂ ವಿಧಾನ ಮಂಡಲದ ಸದಸ್ಯರುಗಳನ್ನು ಒಳಗೊಂಡಂತೆ ಆಯಾ ವರಿಷ್ಠರಿಗೆ ಸಲ್ಲಿಸಬೇಕು ಮತ್ತು ಸಂಬಂಧಪಟ್ಟ ಆಹ್ವಾನ ಪತ್ರಿಕೆಗಳಲ್ಲಿಯೂ ಸಹ ಇದೇ ಆದ್ಯತೆಯನ್ನು ಅನುಸರಿಸಿ ಅವರ ಹೆಸರುಗಳನ್ನು ನಮೂದಿಸಬೇಕು. ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕ್ಕದಲ್ಲದೆ ಇಲಾಖೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು. |

| | |
|---|---|
| VI | ಸಂಸದರು ಹಾಗೂ ವಿಧಾನ ಮಂಡಲದ ಸದಸ್ಯರುಗಳು ದೂರವಾಣಿ ಕರೆಗಳನ್ನು ಮಾಡಿದಾಗ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ಸಭೆಯಲ್ಲಿದ್ದಾಗ ಅವರ ಆಪ್ತ ಕಾರ್ಯದರ್ಶಿಗಳು / ಆಪ್ತ ಸಹಾಯಕರು ಅವರಿಗೆ ಬಂದಂತಹ ದೂರವಾಣಿ ಕರೆಗಳನ್ನು ಪಟ್ಟಿ ಮಾಡುವುದಲ್ಲದೆ ಅವರುಗಳು ಹಿಂದಿರುಗಿ ಬಂದ ನಂತರ ಅವರಿಗೆ ಅದನ್ನು ತೋರಿಸಲು ಕ್ರಮ ತೆಗೆದುಕೊಳ್ಳತಕ್ಕದ್ದು ಹಾಗೂ ಅಂತಹ ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಹಿಂತಿರುಗಿಸುವಂತೆ ಸೂಚಿಸಲಾಗಿದೆ. |
| VII | ಸಂಸತ್ ಸದಸ್ಯರಿಂದ ಹಾಗೂ ವಿಧಾನ ಮಂಡಲ ಸದಸ್ಯರುಗಳಿಂದ ಸ್ವೀಕರಿಸಿದ ಪತ್ರಗಳನ್ನು ತ್ವರಿತವಾಗಿ ನಿರ್ವಹಿಸತಕ್ಕದ್ದು. ಸಾರ್ವಜನಿಕರಿಗೆ ಅಥವಾ ಅವರ ಒಂದು ಭಾಗಕ್ಕೆ ಅಥವಾ ಯಾವುದೇ ವ್ಯಕ್ತಿಗೆ ಅನ್ಯಾಯವಾಗಿದೆ ಎಂದು ಸಂಸದರು ಅಥವಾ ವಿಧಾನ ಮಂಡಲದ ಸದಸ್ಯರುಗಳಿಂದ ಸಚಿವರಿಗೆ ಪತ್ರ ಬಂದಲ್ಲಿ ಅವರ ಆಪ್ತ ಕಾರ್ಯದರ್ಶಿಯವರು ಸ್ವೀಕೃತಿಯನ್ನು ನೀಡತಕ್ಕದ್ದು ಹಾಗೂ ಅದರ ಅಂತಿಮ ವಿಲೇವಾರಿಯನ್ನು ಗಮನಿಸತಕ್ಕದ್ದು ಮತ್ತು ಸಂಬಂಧಪಟ್ಟ ಸದಸ್ಯರಿಗೆ ಅಂತಿಮ ಉತ್ತರವನ್ನು ನೀಡತಕ್ಕದ್ದು. |
| VIII | ಸರ್ಕಾರದ ಕಾರ್ಯದರ್ಶಿ ಅಥವಾ ಇತರ ಹಿರಿಯ ಅಧಿಕಾರಿಗಳಿಗೆ ಇದೇ ರೀತಿಯ ಪತ್ರವು ಸದಸ್ಯರುಗಳಿಂದ ಸ್ವೀಕೃತವಾದಲ್ಲಿ ಸ್ವೀಕೃತಿಯನ್ನು ನೀಡುವುದಲ್ಲದೆ ಸದರಿ ಅಧಿಕಾರಿಯು ವಿಷಯವನ್ನು ತ್ವರಿತ ಗತಿಯಲ್ಲಿ ಪರಿಶೀಲಿಸಿ ಸೂಕ್ತವಾದ ಉತ್ತರವನ್ನು ಕಳುಹಿಸತಕ್ಕದ್ದು. |
| IX | ಯಾವುದೇ ಇಲಾಖಾ ಮುಖ್ಯಸ್ಥರು, ಸಾರ್ವಜನಿಕ ಉದ್ದಿಮೆಗಳು, ಸಂಸದರು ಅಥವಾ ವಿಧಾನ ಮಂಡಲದ ಸದಸ್ಯರುಗಳಿಂದ ಸ್ವೀಕರಿಸುವ ಪತ್ರಗಳನ್ನು ಪರಿಶೀಲಿಸಿ ಉತ್ತರವನ್ನು ನೀಡತಕ್ಕದ್ದು. ಪತ್ರಗಳಲ್ಲಿ ಸರ್ಕಾರದ ನೀತಿಯ ವಿಷಯಗಳು ಒಳಗೊಂಡಿದ್ದಲ್ಲಿ ಅಂತಹ ಪತ್ರಗಳನ್ನು ಉತ್ತರಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆಯತಕ್ಕದ್ದು. |
| X | ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕೋರಿದಾಗ ಅಂತಹ ವಿವರಗಳನ್ನು ಒದಗಿಸಬೇಕಲ್ಲದೆ, ಸಂದೇಹಾಸ್ಪದ ಸಂದರ್ಭಗಳಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಪಡೆಯತಕ್ಕದ್ದು. |
| XI | ಸದನದಲ್ಲಿ ಉತ್ತರ, ತಿರಸ್ಕರಿಸುವ ಪ್ರಕರಣಗಳನ್ನು ಹೊರತುಪಡಿಸಿ ಸದಸ್ಯರಿಂದ ಮಾಹಿತಿ ಕೋರಿ ಸ್ವೀಕರಿಸುವ ಎಲ್ಲಾ ಪತ್ರಗಳಿಗೆ ಸ್ವೀಕೃತಿ ಪತ್ರವನ್ನು ಹಾಗೂ ಮುಂದಿನ 15 ದಿನಗಳಲ್ಲಿ ಕೈಗೊಂಡ ಕ್ರಮವನ್ನು ತಿಳಿಸತಕ್ಕದ್ದು. |
| XII | ಉತ್ತರ ನೀಡಲು ವಿಳಂಬವಾದಲ್ಲಿ ಅಂತಿಮ ಉತ್ತರವನ್ನು ಎಷ್ಟು ದಿನಗೊಳಗಾಗಿ ನೀಡಲಾಗುವುದು ಎಂಬುದನ್ನು ಒಳಗೊಂಡಂತೆ ಮಧ್ಯಂತರ ಉತ್ತರವನ್ನು ನೀಡತಕ್ಕದ್ದು. |
| XIII | ಸದಸ್ಯರಿಗೆ ಉತ್ತರವನ್ನು ಕಳುಹಿಸುವಾಗ ಸ್ಪುಟವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು, ಹಾಗೂ ಪೂರ್ವ ಮುದ್ರಿತ ಅಥವಾ ಸೈಕ್ಲೋಸ್ಟೈಲ್ ಮಾಡಿದ್ದ ಉತ್ತರವನ್ನು ಕಳುಹಿಸತಕ್ಕದ್ದಲ್ಲ. |
| XIV | ಮಾಜಿ ಸದಸ್ಯರು, ಸಚಿವರು ಅಥವಾ ಕಾರ್ಯದರ್ಶಿಯವರಿಗೆ ಪತ್ರ ಬರೆದಿದ್ದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಉತ್ತರವನ್ನು ಕಳುಹಿಸತಕ್ಕದ್ದು. |
| XV | ಕಾರ್ಯ ನೀತಿಯಲ್ಲದ ವಿಷಯಗಳಲ್ಲಿ ಕೆಳಹಂತದ ಅಧಿಕಾರಿಗಳು ಸ್ವೀಕರಿಸುವ ಸದಸ್ಯರ ಪತ್ರಗಳಿಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಉತ್ತರ ನೀಡಬಹುದು ಮತ್ತು ಸರ್ಕಾರದ ನೀತಿಯನ್ನು ಒಳಗೊಂಡಿರುವ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಉತ್ತರ ನೀಡತಕ್ಕದ್ದು. |
| XVI | ಸದಸ್ಯರು ಪತ್ರವನ್ನು ಸಂಬಂಧಪಟ್ಟ ಇಲಾಖೆಗೆ ಅಲ್ಲದೆ ಬೇರೆ ಇಲಾಖೆಗೆ ವಿಳಾಸಿಸಿದ್ದಲ್ಲಿ ಸದರಿ ಇಲಾಖೆಯು ಅಂತಹ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಗೆ ಒಂದು ವಾರದೊಳಗೆ ವರ್ಗಾಯಿಸತಕ್ಕದ್ದು. |
| XVII | ಪತ್ರ ಸ್ವೀಕರಿಸಿದ ದಿನಾಂಕ, ಸ್ವೀಕೃತಿ ನೀಡಿದ ದಿನಾಂಕ, ಪರಿಶೀಲನೆಯ ಮುಂದುವರಿದ ಹಂತ ಮತ್ತು ಅಂತಿಮ ಉತ್ತರವನ್ನು ಕಳುಹಿಸಿದ ದಿನಾಂಕವನ್ನು ಒಳಗೊಂಡ ವಿಶೇಷ ವಹಿಯನ್ನು ಪ್ರತಿ ಸಚಿವರ ಮತ್ತು ಕಾರ್ಯದರ್ಶಿಯವರ ಕಛೇರಿಯಲ್ಲಿ ನಿರ್ವಹಿಸುವುದಲ್ಲದೆ ತ್ವರಿತ ಕ್ರಮ ಕೈಗೊಂಡ ಕುರಿತು ಪ್ರತಿ ತಿಂಗಳು ಸದರಿ ಅಧಿಕಾರಿಗಳು ಪರಿಶೀಲಿಸತಕ್ಕದ್ದು. |
| XVIII | ಈ ಸೂಚನೆಗಳು ಸರ್ಕಾರದ ಇಲಾಖೆಗಳ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳಿಗೂ ಅನ್ವಯಿಸುತ್ತವೆ. |

| XIX | ಕರ್ನಾಟಕ ಸರ್ಕಾರ ಸಚಿವಾಲಯ ಕೈಪಿಡಿ ಕಂಡಿಕೆ 143ರನ್ವಯ ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಗಳು, 1966ರ ನಿಯಮ 26ರಲ್ಲಿ ನಿಗದಿಪಡಿಸಿರುವಂತೆ ಸರ್ಕಾರಿ ನೌಕರರು ಸೇವಾ ಷರತ್ತುಗಳಿಗೆ ಸಂಬಂಧಪಟ್ಟ ವಿಷಯಗಳಲ್ಲಿ ವಿಧಾನ ಮಂಡಲದ / ಸಂಸತ್ ಸದಸ್ಯರ ಅಥವಾ ಅಂತಹ ಇತರೆ ಪ್ರತಿಷ್ಠಿತರ ಬೆಂಬಲ ಅಥವಾ ಮಧ್ಯಸ್ಥಿಕೆ ಪಡೆಯುವುದಕ್ಕೆ ಅವಕಾಶ ಇರುವುದಿಲ್ಲ. ಕಾರ್ಯದರ್ಶಿಗಳು ವೈಯಕ್ತಿಕ ಸರ್ಕಾರಿ ನೌಕರರ ಪರವಾಗಿ ಅಂತಹ ನಿವೇದನೆಯನ್ನು ಅಂಗೀಕರಿಸದಿರುವುದೇ ಸಕ್ರಮವಾಗಿರುತ್ತದೆ. ಈ ಸಂವಾರ್ತೆಗಳನ್ನು ಸ್ವೀಕರಿಸಿದ ಬಗ್ಗೆ ಸ್ವೀಕೃತಿ ಪತ್ರವನ್ನು ಸಹ ನೀಡುವುದು ಅವಶ್ಯ ಇರುವುದಿಲ್ಲ. |
|---|---|

ಶಿಷ್ಟಾಚಾರ ಕುರಿತಾದ ಈ ಸೂಚನೆಗಳನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ತಮ್ಮ ಅಧೀನಕ್ಕೆ ಒಳಪಡುವ ಎಲ್ಲಾ ಅಧಿಕಾರಿ, ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ಕಡ್ಡಾಯವಾಗಿ ಪಾಲಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

**(ಎಸ್ ವಿ ರಂಗನಾಥ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**
1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
2. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನಸೌಧ.
3. ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ.
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
9. ಎಲ್ಲಾ ಉಪ ವಿಭಾಗಾಧಿಕಾರಿಗಳು.
10. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
11. ಎಲ್ಲಾ ಪುರಸಭಾ ಆಯುಕ್ತರು
12. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು / ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಹಣಾಧಿಕಾರಿಗಳು.
13. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
14. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

**ಮಾಹಿತಿಗಾಗಿ:**
1. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನಸೌಧ.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
4. ಪ್ರಧಾನ ಕಾರ್ಯದರ್ಶಿ, ಸಿಆಸುಇ ಇವರ ಆಪ್ತ ಕಾರ್ಯದರ್ಶಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 05 ರಾರಾಆ 2012

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:20.01.2012

## ಸುತ್ತೋಲೆ

**ವಿಷಯ:** ಸರ್ಕಾರಿ ಸಭೆಗಳನ್ನು ನಡೆಸುವ ಕುರಿತು ಸೂಚನೆಗಳನ್ನು ನೀಡುವ ಬಗ್ಗೆ.

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ: ಸಿಆಸುಇ 58 ರಾರಾಆ 2008, ದಿನಾಂಕ:29.09.2009
2. ಸುತ್ತೋಲೆ ಸಂಖ್ಯೆ: ಸಿಆಸುಇ 55 ರಾರಾಆ 2009, ದಿನಾಂಕ:23.06.2010
3. ಸುತ್ತೋಲೆ ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010, ದಿನಾಂಕ:07.12.2010.

******

ಸರ್ಕಾರಿ ಸಮಾರಂಭಗಳಲ್ಲಿ ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು ಮತ್ತು ವಿಧಾನ ಪರಿಷತ್‌ನ ಸದಸ್ಯರುಗಳಿಗೆ ಯಾವ ರೀತಿ ಸ್ಥಾನಮಾನಗಳನ್ನು ಶಿಷ್ಟಾಚಾರದೊಂದಿಗೆ ನೀಡಬೇಕು ಎಂಬುದರ ಬಗ್ಗೆ ರಾಜ್ಯ ಸರ್ಕಾರವು ಈಗಾಗಲೇ ಹಲವಾರು ನಿರ್ದೇಶನಗಳನ್ನು ನೀಡಿದೆ. ಮೇಲೆ ಉಲ್ಲೇಖ (1)ರಲ್ಲಿ ನಮೂದಿಸಿರುವ ಸುತ್ತೋಲೆ ದಿನಾಂಕ:29.09.2009ರಲ್ಲಿ ಈ ಎಲ್ಲಾ ಸುತ್ತೋಲೆಗಳ ಸಂಗ್ರಹದ ಪ್ರತಿಯನ್ನು ತಾಲ್ಲೂಕು ಮಟ್ಟದವರೆಗಿನ ಎಲ್ಲಾ ಅಧಿಕಾರಿಗಳಿಗೆ ಕಳುಹಿಸಿ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ಅರ್ಥಮಾಡಿಕೊಳ್ಳುವಂತೆ ಎಲ್ಲಾ ಅಧಿಕಾರಿಗಳಿಗೆ ಮನದಟ್ಟು ಮಾಡಬೇಕೆಂದು ತಪ್ಪಿದಲ್ಲಿ ಶಿಷ್ಟಾಚಾರದ ಉಲ್ಲಂಘನೆಯ ಪ್ರಕರಣಗಳಲ್ಲಿ ಅವರುಗಳನ್ನು ವೈಯಕ್ತಿಕ ಜವಾಬ್ದಾರರನ್ನಾಗಿ ಮಾಡುವುದಲ್ಲದೆ ಅಂಥವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ಸಂಬಂಧಿಸಿದವರೆಲ್ಲರಿಗೂ ತಿಳಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇತ್ತೀಚೆಗೆ ಮೀನುಗಾರಿಕೆ ಸಹಾಯಕ ನಿರ್ದೇಶಕರು, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಇವರು ಮತ್ಸ್ಯಾಶ್ರಯ-5, ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವ ಬಗೆಗಿನ ಸಭೆಯನ್ನು ಮಾನ್ಯ ವಿಧಾನ ಸಭಾ ಸದಸ್ಯರ ನಿವಾಸದಲ್ಲಿ ಏರ್ಪಡಿಸಿ ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ ಎಂದು ದೂರು ಬಂದಿದ್ದು, ಈ ವಿಷಯವು ವಿಧಾನ ಪರಿಷತ್ತಿನ ಹಕ್ಕು ಭಾದ್ಯತಾ ಸಮಿತಿಗೆ ವಹಿಸಲಾಗಿದೆ.

ಯಾವುದೇ ಸರ್ಕಾರಿ ಸಭೆಯನ್ನು ಖಾಸಗಿ ನಿವಾಸದಲ್ಲಿ ಏರ್ಪಡಿಸುವುದು ಸರಿಯಲ್ಲ. ಸರ್ಕಾರವು ಶಿಷ್ಟಾಚಾರ ಪಾಲನೆ ವಿಷಯದಲ್ಲಿ ಅನೇಕ ಸುತ್ತೋಲೆಗಳನ್ನು ಹೊರಡಿಸಿದ್ದರೂ ಅಧಿಕಾರಿಗಳು ಅದನ್ನು ಸರಿಯಾಗಿ ಪಾಲಿಸದೇ ಇರುವುದರಿಂದ ಮೇಲಿಂದ ಮೇಲೆ ಅನೇಕ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ವರದಿಯಾಗುತ್ತಿವೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಕೆಳಹಂತದ ಅಧಿಕಾರಿಗಳಿಗೆ ಶಿಷ್ಟಾಚಾರ ಪಾಲನೆ ವಿಷಯದಲ್ಲಿ ಸೂಕ್ತ ಮಾಗದರ್ಶನ ನೀಡಲು ಎಲ್ಲಾ ಜಿಲ್ಲಾಧಿಕಾರಿಗಳು, ಪ್ರತಿ ಆರು ತಿಂಗಳಿಗೊಮ್ಮೆ ಕಾರ್ಯಾಗಾರವನ್ನು ಏರ್ಪಡಿಸಿ ಶಿಷ್ಟಾಚಾರ ಪಾಲನೆ ವಿಷಯದಲ್ಲಿ ಸರ್ಕಾರದಿಂದ ಹೊರಡಿಸಿರುವ ಸುತ್ತೋಲೆಗಳ ಬಗ್ಗೆ ಮಾರ್ಗದರ್ಶನವನ್ನು ಕಡ್ಡಾಯವಾಗಿ ನೀಡಬೇಕು. ಯಾವುದೇ ಅಧಿಕಾರಿಗಳಿಗೆ ಶಿಷ್ಟಾಚಾರ ಪಾಲನೆ ವಿಷಯದಲ್ಲಿ ಅನುಮಾನಗಳಿದ್ದಲ್ಲಿ ತಕ್ಷಣವೇ ಸಂಬಂಧಿಸಿದ ಜಿಲ್ಲಾಧಿಕಾರಿಗಳನ್ನು ಕಂಡು ಮಾರ್ಗದರ್ಶನ ಪಡೆಯಬೇಕು ಎಂದು ತಿಳಿಸಲಾಗಿದೆ.

ಮೇಲ್ಕಂಡ ಸೂಚನೆಗಳನ್ನು ಹೊರಡಿಸಿದ್ದಾಗ್ಯೂ ಶಿಷ್ಟಾಚಾರ ಉಲ್ಲಂಘನೆ ಆದಲ್ಲಿ ಆಯಾ ಅದಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಹಾಗೂ ಅವರ ಮೇಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಯಪಡಿಸಲಾಗಿದೆ.

**(ಎಸ್ ವಿ ರಂಗನಾಥ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**
1. ಎಲ್ಲಾ ಪ್ರಾದೇಶಿಕ ಆಯುಕ್ತರು.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.
3. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
6. ಎಲ್ಲಾ ಉಪ ವಿಭಾಗಾಧಿಕಾರಿಗಳು.
7. ಎಲ್ಲಾ ಮಹಾನಗರ ಪಾಲಿಕೆಯ ಆಯುಕ್ತರು.
8. ಎಲ್ಲಾ ಪುರಸಭಾ ಆಯುಕ್ತರು.
9. ಎಲ್ಲಾ ತಹಶೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು.
10. ಶಾಖಾ ರಕ್ಷಾ ಕಡತ / ವಾರ್ಷಿಕ ಸಂಗ್ರಹ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 20 ರಾರಾಆ 2012 (ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:27.06.2012

## ಸುತ್ತೋಲೆ

**ವಿಷಯ:** ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ / ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ.

**ಉಲ್ಲೇಖ:**
1. ಸುತ್ತೋಲೆ ಸಂಖ್ಯೆ: ಸಿಆಸುಇ 02 ರಾರಾಆ 2004, ದಿನಾಂಕ:11.02.2004
2. ಸುತ್ತೋಲೆ ಸಂಖ್ಯೆ: ಸಿಆಸುಇ 58 ರಾರಾಆ 2008, ದಿನಾಂಕ:29.09.2009
3. ಸುತ್ತೋಲೆ ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010, ದಿನಾಂಕ:07.12.2010.

******

ಸರ್ಕಾರಿ ಸಮಾರಂಭಗಳಲ್ಲಿ ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್‌ನ ಸದಸ್ಯರುಗಳಿಗೆ ಯಾವ ರೀತಿ ಸ್ಥಾನಮಾನಗಳನ್ನು ಶಿಷ್ಟಾಚಾರದೊಂದಿಗೆ ನೀಡಬೇಕೆಂಬುದರ ಬಗ್ಗೆ, ರಾಜ್ಯ ಸರ್ಕಾರವು ಈಗಾಗಲೇ ಹಲವಾರು ಬಾರಿ ನಿರ್ದೇಶನಗಳನ್ನು ನೀಡಿರುವುದಲ್ಲದೆ, ದಿನಾಂಕ:29.09.2009ರ ಸುತ್ತೋಲೆಯೊಂದಿಗೆ ಎಲ್ಲಾ ಸುತ್ತೋಲೆಗಳ ಸಂಗ್ರಹಗಳ ಪ್ರತಿಯನ್ನು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಕಳುಹಿಸಲಾಗಿರುತ್ತದೆ. ಈಗಾಗಲೇ ನೀಡಿರುವ ಸೂಚನೆಗಳ ಕೆಲವು ಅಂಶಗಳನ್ನು ಪರಿಷ್ಕರಿಸುವ ಕುರಿತು ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಸೂಚನೆಗಳನ್ನು ನೀಡಲಾಗಿದೆ.

| | |
|---|---|
| 1 | ಚುನಾಯಿತ ಜನ ಪ್ರತಿನಿಧಿಗಳಲ್ಲದ ನಿಗಮ / ಮಂಡಲಿಗಳ ಅಧ್ಯಕ್ಷರುಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕೃತ ಕಾರ್ಯಕ್ರಮಕ್ಕೆ ಆಹ್ವಾನಿಸತಕ್ಕದ್ದು; |
| 2 | ರಾಜ್ಯ ಸರ್ಕಾರದ ಕಾರ್ಯಕ್ರಮಗಳಿಗೆ ಮಾನ್ಯ ವಿರೋಧ ಪಕ್ಷದ ನಾಯಕರನ್ನು ಆಹ್ವಾನಿಸತಕ್ಕದ್ದು; |
| 3 | ನೋಡಲ್ ತಾಲ್ಲೂಕುಗಳಾಗಿ ಆಯ್ಕೆ ಮಾಡಿಕೊಂಡಿರುವ ವಿಧಾನ ಪರಿಷತ್ತಿನ ಸದಸ್ಯರು ಸದರಿ ತಾಲ್ಲೂಕು ಸಮಿತಿಯ ಸಹ ಅಧ್ಯಕ್ಷರಾಗಿರತಕ್ಕದ್ದು. |
| 4 | ಜಿಲ್ಲಾ ಉಸ್ತುವಾರಿ ಸಚಿವರನ್ನು ಆಹ್ವಾನಿಸುವುದನ್ನು ಒಳಗೊಂಡಂತೆ ಸರ್ಕಾರದ ಆ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ, ಸಂಬಂಧಪಟ್ಟ ಇಲಾಖೆಯ ಸಚಿವರ ಅನುಮೋದನೆಯೊಂದಿಗೆ, ನಿಗದಿಪಡಿಸಿ ಕಾರ್ಯಕ್ರಮವನ್ನು ಏರ್ಪಡಿಸತಕ್ಕದ್ದು; |
| 5 | ಸರ್ಕಾರದ ಸಮಾರಂಭಗಳ ಆಮಂತ್ರಣ ಪತ್ರಿಕೆಯಲ್ಲಿ, ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು) ಮತ್ತು ಶಾಸಕರು (ವಿಧಾನ ಸಭೆ)" ಎಂದು ನಮೂದು ಮಾಡುವಂತೆ ಈಗಾಗಲೇ ಸೂಚಿಸಿರುವುದನ್ನು ಪುನರುಚ್ಚರಿಸಲಾಗಿದೆ. |

ಮೇಲ್ಕಂಡ ಸೂಚನೆಗಳನ್ನು ಹೊರಡಿಸಿದ್ದಾಗ್ಯೂ ಶಿಷ್ಟಾಚಾರ ಉಲ್ಲಂಘನೆಯಾದಲ್ಲಿ, ಆಯಾ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುವುದು ಹಾಗೂ ಅವರ ಮೇಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ತಿಳಿಯಪಡಿಸಲಾಗಿದೆ.

**(ಎಸ್ ವಿ ರಂಗನಾಥ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
2. ಕಾರ್ಯದರ್ಶಿ, ವಿಧಾನಸಭೆ, ವಿಧಾನಸೌಧ.

3. ಕಾರ್ಯದರ್ಶಿ, ವಿಧಾನ ಪರಿಷತ್ತು, ವಿಧಾನಸೌಧ.
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
9. ಎಲ್ಲಾ ಉಪ ವಿಭಾಗಾಧಿಕಾರಿಗಳು.
10. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
11. ಎಲ್ಲಾ ಪುರಸಭೆ ಆಯುಕ್ತರು.
12. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು / ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯ ನಿರ್ವಹಣಾಧಿಕಾರಿಗಳು.
13. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
14. ಹೆಚ್ಚುವರಿ ಪ್ರತಿಗಳು / ಶಾಖಾ ರಕ್ಷಾ ಕಡತ.

**ಮಾಹಿತಿಗಾಗಿ:**

1. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನಸೌಧ.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನ ಸೌಧ.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
4. ಪ್ರಧಾನ ಕಾರ್ಯದರ್ಶಿ, ಸಿಆಸುಇ ಇವರ ಆಪ್ತ ಕಾರ್ಯದರ್ಶಿ.

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:17.09.2012

## ಸುತ್ತೋಲೆ

**ವಿಷಯ:** ಸರ್ಕಾರದ ಸಭೆ ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಾಗ ಅನುಸರಿಸಬೇಕಾದ ಶಿಷ್ಟಾಚಾರ ಕುರಿತು.

**ಉಲ್ಲೇಖ:**
1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010, ದಿನಾಂಕ:07.12.2010
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 20 ರಾರಾಆ 2012 (ಭಾ), ದಿನಾಂಕ:27.06.2012.

ಉಲ್ಲೇಖ (1)ರ ಸರ್ಕಾರದ ಸುತ್ತೋಲೆಯಲ್ಲಿ ಸರ್ಕಾರದ ಸಮಾರಂಭಗಳಿಗೆ ಜನ ಪ್ರತಿನಿಧಿಗಳಿಗೆ ಅಂದರೆ, ಜಿಲ್ಲಾಮಂತ್ರಿ, ಸ್ಥಳೀಯ ಶಾಸಕರು, ಸಂಸತ್ ಸದಸ್ಯರು, ಇತರ ಸಚಿವರು, ಸಂಸದರು, ವಿಧಾನಸಭಾ / ವಿಧಾನ ಪರಿಷತ್ ಸದಸ್ಯರುಗಳನ್ನು ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ ಸೂಚನೆ ನೀಡಲಾಗಿರುತ್ತದೆ. ಈ ಸುತ್ತೋಲೆಯಲ್ಲಿ ಈ ಕೆಳಕಂಡಂತೆ ಆದ್ಯತೆ ಮೇಲೆ ಜನ ಪ್ರತಿನಿಧಿಗಳನ್ನು ಆಹ್ವಾನಿಸಬೇಕೆಂದು ಸೂಚಿಸಲಾಗಿರುತ್ತದೆ.

| | |
|---|---|
| 1 | ಉಸ್ತುವಾರಿ ಜಿಲ್ಲಾ ಮಂತ್ರಿಗಳು |
| 2 | ಇತರೆ ಆಹ್ವಾನಿತ ಮಂತ್ರಿಗಳು |
| 3 | ಸ್ಥಳೀಯ ಶಾಸಕರ ಅಧ್ಯಕ್ಷತೆ |
| 4 | ಕಾರ್ಯಕ್ರಮ ನಡೆಯುವ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸದರು |
| 5 | ಇತರೆ ಸಂಸದರು – ಲೋಕಸಭೆ ಮತ್ತು ರಾಜ್ಯಸಭೆ |
| 6 | ಇತರೆ ಶಾಸಕರು – ವಿಧಾನಸಭೆ |
| 7 | ಇತರೆ ಶಾಸಕರು – ವಿಧಾನ ಪರಿಷತ್ |

ಈ ಸೂಚನೆಗಳನ್ನು ಎಲ್ಲಾ ಹಂತಗಳಲ್ಲಿ ಅಂದರೆ ರಾಜ್ಯ / ಜಿಲ್ಲಾ / ತಾಲ್ಲೂಕು ಮಟ್ಟದ ಸಮಾರಂಭಗಳನ್ನು ನಡೆಸುವಲ್ಲಿ ತಪ್ಪದೇ ಆದ್ಯತೆ ಮೇಲೆ ಜನಪ್ರತಿನಿಧಿಗಳನ್ನು ಆಹ್ವಾನಸಬೇಕೆಂದು ಸೂಚನೆಗಳನ್ನು ನೀಡಲಾಗಿತ್ತು. ಇತರೆ ಸಂಸದರಲ್ಲಿ ಮೊದಲು ಲೋಕಸಭಾ ಸದಸ್ಯರನ್ನು ಹಾಗೂ ನಂತರ ರಾಜ್ಯಸಭಾ ಸದಸ್ಯರನ್ನು ಪರಿಗಣಿಸುವಂತೆ ಸೂಚಿಸಿದೆ.

ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿ ಹೆಚ್ಚುವರಿಯಾಗಿ ಕೆಲವೊಂದು ಸೂಚನೆಗಳನ್ನು ನೀಡಲಾಗಿತ್ತು. ಈ ಸುತ್ತೋಲೆಯಲ್ಲಿ ಚುನಾಯಿತ ಜನಪ್ರತಿನಿಧಿಗಳಲ್ಲದ ನಿಗಮ ಮತ್ತು ಮಂಡಳಿ ಅಧ್ಯಕ್ಷರನ್ನು ಸಂಬಂಧಪಟ್ಟ ಇಲಾಖೆಯ ಅಧಿಕೃತ ಕಾರ್ಯಕ್ರಮಗಳಿಗೆ ಆಹ್ವಾನಿಸತಕ್ಕದ್ದು ಎಂಬ ಸೂಚನೆಗಳನ್ನು ಕೊಡಲಾಗಿತ್ತು. ಆದಾಗ್ಯೂ, ಹಲವು ಜಿಲ್ಲೆಗಳಲ್ಲಿ ಈ ಸೂಚನೆಗಳನ್ನು ಪಾಲಿಸದೇ ಇರುವ ಬಗ್ಗೆ ದೂರುಗಳು ಬಂದಿರುತ್ತವೆ.

ಉಲ್ಲೇಖಿತ ಎರಡೂ ಸುತ್ತೋಲೆಗಳಲ್ಲಿ ನಮೂದಿಸಿದಂತೆ, ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತೊಮ್ಮೆ ನಿರ್ದೇಶನಗಳನ್ನು ಈ ಮೂಲಕ ನೀಡಲಾಗುತ್ತಿದೆ. ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರುಗಳಿಗೆ ಸಂಪುಟ ದರ್ಜೆ ಮತ್ತು ರಾಜ್ಯ ಸಚಿವ ದರ್ಜೆ ಸ್ಥಾನಮಾನಗಳನ್ನು ನೀಡಲಾದ ಸಂದರ್ಭಗಳಲ್ಲಿ ಯಾವ ರೀತಿ ಶಿಷ್ಟಾಚಾರ ಪಾಲಿಸಬೇಕೆನ್ನುವ ಬಗ್ಗೆ ಕೆಲವು ಜಿಲ್ಲಾಧಿಕಾರಿಗಳು ಸರ್ಕಾರದ ಸ್ಪಷ್ಟೀಕರಣವನ್ನು ನಿರೀಕ್ಷಿಸುತ್ತಿರುವುದನ್ನು ಗಮನಿಸಿದೆ. ಆದ್ದರಿಂದ, ಚುನಾಯಿತ ಪ್ರತಿನಿಧಿಗಳಲ್ಲದ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರನ್ನು ಅವರಿಗೆ ಸಂಪುಟ ದರ್ಜೆ / ರಾಜ್ಯ ಸಚಿವ ದರ್ಜೆ ಸ್ಥಾನಮಾನ ನೀಡಿದಾಗಲೂ ಸಹ ಮೇಲೆ ನೀಡಿದ ಆದ್ಯತಾ ಪಟ್ಟಿಯಲ್ಲಿ ಅವರನ್ನು ಅನುಕ್ರಮವಾಗಿ ಪ್ಯಾರಾ-1ರಲ್ಲಿನ ಕ್ರಮ ಸಂಖ್ಯೆ:7ರ ನಂತರ ಪರಿಗಣಿಸುವಂತೆ ಸೂಚಿಸಿದೆ. ಉಳಿದಂತೆ, ಉಲ್ಲೇಖಿತ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಚಾಚೂ ತಪ್ಪದೆ ಪಾಲಿಸಬೇಕೆಂದು ಮತ್ತೊಮ್ಮೆ ಸೂಚಿಸಲಾಗಿದೆ.

**(ಎಸ್ ವಿ ರಂಗನಾಥ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**
1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.

2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು.
4. ಕಾರ್ಯದರ್ಶಿ, ವಿಧಾನಸಭೆ, ವಿಧಾನಸೌಧ.
5. ಕಾರ್ಯದರ್ಶಿ, ವಿಧಾನ ಪರಿಷತ್ತು, ವಿಧಾನಸೌಧ.
6. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಎಲ್ಲಾ ಪ್ರಾದೇಶಿಕ ಆಯುಕ್ತರು.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
11. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
12. ಎಲ್ಲಾ ಉಪ ವಿಭಾಗಾಧಿಕಾರಿಗಳು.
13. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
14. ಎಲ್ಲಾ ಪುರಸಭಾ ಆಯುಕ್ತರು.
15. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು / ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು.
16. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
17. ಶಾಖಾ ರಕ್ಷಾ ಕಡತ / ವಾರ್ಷಿಕ ಸಂಗ್ರಹ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
4. ಪ್ರಧಾನ ಕಾರ್ಯದರ್ಶಿ, ಸಿಆಸುಇ ಇವರ ಆಪ್ತ ಕಾರ್ಯದರ್ಶಿ.
5. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – **ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.**

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ
ಬೆಂಗಳೂರು, ದಿನಾಂಕ:10.10.2012

## ಸುತ್ತೋಲೆ

**ವಿಷಯ:** ಸರ್ಕಾರದ ಸಭೆ ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಾಗ ಅನುಸರಿಸಬೇಕಾದ ಶಿಷ್ಟಾಚಾರ ಕುರಿತು.

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿನಾಂಕ:17.09.2012.

******

ಉಲ್ಲೇಖಿತ ಸುತ್ತೋಲೆಯಲ್ಲಿ ಚುನಾಯಿತ ಪ್ರತಿನಿಧಿಗಳಲ್ಲದ ನಿಗಮ ಮತ್ತು ಮಂಡಳಿ ಅಧ್ಯಕ್ಷರಿಗೆ ಸಂಪುಟ ದರ್ಜೆ / ರಾಜ್ಯ ಸಂಪುಟ ದರ್ಜೆ ಸ್ಥಾನಮಾನ ನೀಡಿದಾಗ ಅವರಿಗೆ ಶಿಷ್ಟಾಚಾರವನ್ನು ನೀಡುವಾಗ ಸದರಿ ಸುತ್ತೋಲೆಯ ಪ್ಯಾರಾ 1ರ ಕ್ರಮ ಸಂಖ್ಯೆ:7ರ ನಂತರದ ಆದ್ಯತೆಯನ್ನು ನೀಡುವಂತೆ ಸೂಚಿಸಲಾಗಿತ್ತು.

ಆದರೆ, ಶಾಸಕರನ್ನೇ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರನ್ನಾಗಿ ನೇಮಿಸಿದಂತಹ ಸಂದರ್ಭದಲ್ಲಿ ಅವರಿಗೆ ಶಿಷ್ಟಾಚಾರವನ್ನು ನೀಡುವಾಗ ಯಾವ ರೀತಿ ಆದ್ಯತೆ ನೀಡಬೇಕೆಂಬುದರ ಬಗ್ಗೆ ಕೆಲವು ಜಿಲ್ಲಾಧಿಕಾರಿಗಳು ಸ್ಪಷ್ಟನೆ ಕೋರಿರುವುದು ನನ್ನ ಗಮನಕ್ಕೆ ಬಂದಿದೆ.

ಶಾಸಕರು ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರಾಗಿದ್ದಂತಹ ಸಂದರ್ಭಗಳಲ್ಲಿ, ಅವರಿಗೆ ಶಿಷ್ಟಾಚಾರವನ್ನು ನೀಡುವಾಗ ಸದರಿ ಸುತ್ತೋಲೆಯ ಕ್ರಮ ಸಂಖ್ಯೆ:6 ಅಥವಾ 7ರಲ್ಲಿ ಯಾವುದು ಅನ್ವಯವಾಗುತ್ತದೋ ಅದರಂತೆ ಪರಿಗಣಿಸುವಂತೆ ಈ ಮೂಲಕ ಸ್ಪಷ್ಟೀಕರಣವನ್ನು ನೀಡಿದೆ.

**(ಎಸ್ ವಿ ರಂಗನಾಥ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
3. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು.
4. ಕಾರ್ಯದರ್ಶಿ, ವಿಧಾನಸಭೆ, ವಿಧಾನಸೌಧ.
5. ಕಾರ್ಯದರ್ಶಿ, ವಿಧಾನ ಪರಿಷತ್ತು, ವಿಧಾನಸೌಧ.
6. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
7. ಎಲ್ಲಾ ಪ್ರಾದೇಶಿಕ ಆಯುಕ್ತರು.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
10. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
11. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
12. ಎಲ್ಲಾ ಉಪ ವಿಭಾಗಾಧಿಕಾರಿಗಳು.
13. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
14. ಎಲ್ಲಾ ಪುರಸಭಾ ಆಯುಕ್ತರು.
15. ಎಲ್ಲಾ ತಾಲ್ಲೂಕುಗಳ ತಹಶೀಲ್ದಾರರು / ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು.
16. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
17. ಶಾಖಾ ರಕ್ಷಾ ಕಡತ / ವಾರ್ಷಿಕ ಸಂಗ್ರಹ / ಹೆಚ್ಚುವರಿ ಪ್ರತಿಗಳು.

**ಮಾಹಿತಿಗಾಗಿ:**

1. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನ ಸೌಧ.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ.
4. ಪ್ರಧಾನ ಕಾರ್ಯದರ್ಶಿ, ಸಿಆಸುಇ ಇವರ ಆಪ್ತ ಕಾರ್ಯದರ್ಶಿ.
5. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – **ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.**

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 5 ಹೆಚ್‌ಡಬ್ಲ್ಯೂಪಿ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:23.11.2012

## ಸುತ್ತೋಲೆ

ವಿಷಯ: ಸರ್ಕಾರದ ಸಭೆ ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 2 ಹೆಚ್‌ಡಬ್ಲ್ಯೂಪಿ 2010, ದಿ:07.12.2010
2. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 20 ರಾರಾಆ 2012 (ಭಾ), ದಿ:27.06.2012
3. ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 66 ಹೆಚ್‌ಡಬ್ಲ್ಯೂಪಿ 2012, ದಿ:17.09.2012

* * * * *

ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ಸರ್ಕಾರದ ಸಮಾರಂಭಗಳಿಗೆ ಜನ ಪ್ರತಿನಿಧಿಗಳನ್ನು ಆಹ್ವಾನಿಸುವಲ್ಲಿ ಅನುಸರಿಸಬೇಕಾದ ಶಿಷ್ಟಾಚಾರ ಕುರಿತು ಸೂಚನೆಗಳನ್ನು ನೀಡಿ ಈ ಸೂಚನೆಗಳನ್ನು ತಪ್ಪದೆ ಪಾಲಿಸಬೇಕೆಂದು ನಿರ್ದೇಶನಗಳನ್ನು ನೀಡಲಾಗಿದೆ. ಆದಾಗ್ಯೂ ಕೆಲವು ಕಡೆ ಸೂಚನೆಗಳನ್ನು ಪಾಲಿಸುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ, ಈ ಕೆಳಗಿನ ಸೂಚನೆಗಳನ್ನು ನೀಡಲಾಗಿದೆ.

1. ಸರ್ಕಾರದ ಯಾವುದೇ ಕಾರ್ಯಕ್ರಮವಿದ್ದರೂ ಆಯಾ ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿಯೇ ಕಾರ್ಯಕ್ರಮ ನಡೆಸುವುದು. ಸಂಬಂಧಪಟ್ಟ ಸಂಸದರನ್ನು ಇಂತಹ ಕಾರ್ಯಕ್ರಮಗಳಿಗೆ ಆಹ್ವಾನಿಸಿ ಶಿಷ್ಟಾಚಾರದನ್ವಯ ಸೂಕ್ತ ಕ್ರಮ ಕೈಗೊಳ್ಳುವುದು. ವಿಧಾನ ಪರಿಷತ್ತಿನ ಸದಸ್ಯರ ಕ್ಷೇತ್ರದಲ್ಲಿ ನಡೆಯುವ ಯಾವುದೇ ಸಮಾರಂಭಗಳಿಗೆ ಅವರನ್ನು ಸಮಾರಂಭಕ್ಕೆ ಆಹ್ವಾನಿಸುವುದು. ಸಂಪುಟ ದರ್ಜೆ ಸಚಿವರ ಸ್ಥಾನಮಾನ ಹೊಂದಿರುವ ನಿಗಮ ಮತ್ತು ಮಂಡಳಿಗಳ ಅಧ್ಯಕ್ಷರನ್ನು ಆಹ್ವಾನಿಸುವುದು. ಜಿಲ್ಲಾ ಪಂಚಾಯತ್‌ಗೆ ಸಂಬಂಧಪಟ್ಟಂತಹ ಕಾರ್ಯಕ್ರಮಕ್ಕೆ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಜಿಲ್ಲಾ ಪಂಚಾಯತ್ ಸದಸ್ಯರುಗಳನ್ನು ಆಹ್ವಾನಿಸುವುದು. ಅದರಂತೆ, ತಾಲ್ಲೂಕು ಪಂಚಾಯತ್‌ಗೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ತಾಲ್ಲೂಕು ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ತಾಲ್ಲೂಕು ಪಂಚಾಯತ್ ಸದಸ್ಯರನ್ನು ಆಹ್ವಾನಿಸುವುದು. ರಾಜ್ಯದ ಧನ ಸಹಾಯದಿಂದ ಸ್ಥಾಪಿಸಲ್ಪಟ್ಟ ರಾಜ್ಯ ಮಟ್ಟದ ಸಹಕಾರ ಸಂಘಗಳು ನಡೆಸುವ ಕಾರ್ಯಕ್ರಮಗಳಿಗೂ ಮೇಲೆ ನಮೂದಿಸಿದಂತೆ ಆಹ್ವಾನಿಸುವುದು. ನ್ಯಾಯಾಲಯಗಳಿಗೆ ಸಂಬಂದಿಸಿದ ಕಾರ್ಯಕ್ರಮ ಕುರಿತಾಗಿ ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನ್ವಯ ಕ್ರಮವನ್ನು ಕೈಗೊಳ್ಳಲು ಸೂಚಿಸಿದೆ.
2. ಶಿಷ್ಟಾಚಾರ ಉಲ್ಲಂಘನೆ ಮಾಡದಂತೆ ಅಧಿಕಾರಿಗಳಿಗೆ ಈಗಾಗಲೇ ಸುತ್ತೋಲೆಮೂಲಕ ಸೂಚನೆಗಳನ್ನು ನೀಡಿದ್ದು, ಶಿಷ್ಟಾಚಾರ ಉಲ್ಲಂಘನೆ ಮಾಡಿದಂತಹ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮ, 1957ರ ಪ್ರಕಾರ ಕ್ರಮ ಕೈಗೊಳ್ಳಲು ಸೂಚಿಸಿದೆ.
3. ಲೋಕಸಭಾ ಸದಸ್ಯರು ಪ್ರತಿನಿಧಿಸುವ ವ್ಯಾಪ್ತಿಯಲ್ಲಿನ ಕ್ಷೇತ್ರದ ಕಾರ್ಯಕ್ರಮದ ಬಗ್ಗೆ ಈಗಾಗಲೇ ಉಲ್ಲೇಖಿತ ಸುತ್ತೋಲೆಗಳನ್ನು ಸೂಚನೆಗಳನ್ನು ನೀಡಿದ್ದು, ಅವುಗಳನ್ನು ಚಾಚೂ ತಪ್ಪದೆ ಪಾಲಿಸುವುದು.
4. ಜಿಲ್ಲಾ ಸಚಿವರು, ಸ್ಥಳೀಯ ಶಾಸಕರೊಂದಿಗೆ ಸಮಾಲೋಚನೆ ಮಾಡಿ ಕಾರ್ಯಕ್ರಮ ದಿನಾಂಕವನ್ನು ನಿಗದಿಪಡಿಸುವುದು.
5. ಮಂತ್ರಿಗಳು ಭಾಗವಹಿಸುವ ಕಾರ್ಯಕ್ರಮದಲ್ಲಿ ಅಧಿಕಾರಿಗಳು ವೇದಿಕೆ ಮೇಲೆ ಉಪಸ್ಥಿತರಿರಬಾರದು ಎನ್ನುವ ಬಗ್ಗೆ ಸುತ್ತೋಲೆ ಸಂಖ್ಯೆ: ಸಿಆಸುಇ 97 ಶಿಸನೆ 1996, ದಿನಾಂಕ:04.03.1997ರಲ್ಲಿ ಸೂಚನೆಗಳನ್ನು ನೀಡಿದ್ದು ಇದನ್ನು ತಪ್ಪದೆ ಪಾಲಿಸುವುದು.
6. ವಿರೋಧ ಪಕ್ಷದ ನಾಯಕರು ಯಾವುದೇ ಕ್ಷೇತ್ರಕ್ಕೆ ಭೇಟಿ ನೀಡಿದಾಗ, ಅವರನ್ನು ಶಿಷ್ಟಾಚಾರದಂತೆ ಅಧಿಕಾರಿಗಳು ಸ್ವಾಗತಿಸಲು, ಜಿಲ್ಲಾಧಿಕಾರಿಗಳು ಮತ್ತು ಕಾರ್ಯನಿರ್ವಾಹಣ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಅವರು ಕ್ರಮ ಕೈಗೊಳ್ಳುವುದು.
7. ತಾಲ್ಲೂಕು ಮಟ್ಟದ ಕೆ.ಡಿ.ಪಿ. ಸಭೆಗಳಿಗೆ ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಕೆ.ಡಿ.ಪಿ. ಸಭೆಗಳಿಗೆ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಸಭೆಗೆ ಹಾಜರಿರಬೇಕು. ತಾಲ್ಲೂಕು ಮಟ್ಟದ ಕೆ.ಡಿ.ಪಿ. ಮತ್ತು ಜಿಲ್ಲಾ ಮಟ್ಟದ ಕೆ.ಡಿ.ಪಿ. ಸಭೆಗೆ ಹಾಜರಾಗದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.

8. ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನಾಚರಣೆ ದಿನಗಳಂದು ಯಾರು ಧ್ವಜಾರೋಹಣ ಮಾಡಬೇಕು ಎನ್ನುವ ಬಗ್ಗೆ ಭಾರತ ಸರ್ಕಾರ ಹೊರಡಿಸಿದ ಧ್ವಜ ಸಂಹಿತೆಯನ್ವಯ ನೀಡಲಾದ ನಿರ್ದೇಶನವನ್ನು ಮುಂದುವರೆಸಿಕೊಂಡು ಹೋಗುವುದು.
9. ನಿಗಮ ಮತ್ತು ಮಂಡಳಿಗಳ ಕಾರ್ಯಕ್ರಮಗಳಿಗೆ ಆಯಾ ನಿಗಮ ಮತ್ತು ಮಂಡಳಿಯ ಅಧ್ಯಕ್ಷರುಗಳನ್ನು ಆಹ್ವಾನಿಸುವುದು. ಜೊತೆಗೆ, ಇತರೆ ಕಾರ್ಯಕ್ರಮಗಳಿಗೆ ಆಯಾ ಜಿಲ್ಲೆಗಳಿಂದ ನಿಗಮ/ಮಂಡಳಿಗೆ ಅಧ್ಯಕ್ಷರುಗಳಾಗಿರುವವರನ್ನು ಸಹ ಆಹ್ವಾನಿಸುವುದು. ಬೇರೆ ಕಾರ್ಯಕ್ರಮಗಳಿಗೂ ಕೂಡ ಅವರನ್ನು ಆಹ್ವಾನಿಸಲು ಸೂಚಿಸಿದೆ.
10. ಜಿಲ್ಲೆಯಲ್ಲಿ ಒಬ್ಬರಿಗಿಂತ ಹೆಚ್ಚು ಜನ ಮಂತ್ರಿಗಳಾಗಿದ್ದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಂಬಂಧಪಟ್ಟ ಜಿಲ್ಲೆಯ ಎಲ್ಲಾ ಸಚಿವರುಗಳನ್ನು ಆಹ್ವಾನಿಸುವುದು.
11. ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಸದ್ಯಕ್ಕೆ ಇರುವ ಆದ್ಯತಾ ಪಟ್ಟಿ ಪ್ರಕಾರ ಪ್ರತಿ ಪಕ್ಷದ ನಾಯಕರಿಗೆ ಆದ್ಯತೆಯನ್ನು ನೀಡುವುದು.
12. ಶಂಕು ಸ್ಥಾಪನೆ ಸಮಾರಂಭಗಳಲ್ಲಿ ಕಲ್ಲಿನ ಮೇಲೆ ಆಹ್ವಾನ ಪತ್ರಿಕೆಯಲ್ಲಿರುವವರ ಹೆಸರನ್ನು ಹಾಕುವುದು.

ಮೇಲೆ ನೀಡಿದ ಸೂಚನೆಗಳಿಗೆ ಯಾವುದೇ ಉಲ್ಲಂಘನೆ ಆಗದಂತೆ ಸೂಚನೆಗಳನ್ನು ತಪ್ಪದೆ ಪಾಲಿಸಲು ಮತ್ತೊಮ್ಮೆ ತಿಳಿಸಲಾಗಿದೆ.

**ಎಸ್.ವಿ. ರಂಗನಾಥ್**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
2. ಕಾರ್ಯದರ್ಶಿ, ವಿಧಾನಸಭೆ, ವಿಧಾನಸೌಧ.
3. ಕಾರ್ಯದರ್ಶಿ, ವಿಧಾನ ಪರಿಷತ್ತು, ವಿಧಾನಸೌಧ.
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ಎಲ್ಲಾ ಜಿಲ್ಲಾಧಿಕಾರಿಗಳು.
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
8. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
9. ಎಲ್ಲಾ ಸಚಿವರ ಆಪ್ತ ಕಾರ್ಯದರ್ಶಿಗಳು.
10. ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.

**ಮಾಹಿತಿಗಾಗಿ:**

1. ಮಾನ್ಯ ಸಭಾಧ್ಯಕ್ಷರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ, ವಿಧಾನಸೌಧ.
2. ಮಾನ್ಯ ಸಭಾಪತಿಯವರ ಆಪ್ತ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು, ವಿಧಾನಸೌಧ.
3. ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ ಇವರ ಆಪ್ತ ಕಾರ್ಯದರ್ಶಿ.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 55 ರಾರಾಆ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:23.06.2010

## ಸುತ್ತೋಲೆ

ವಿಷಯ: ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ / ವಿಧಾನ ಪರಿಷತ್ ಸದಸ್ಯರಿಗೆ ಸರ್ಕಾರಿ ಸಮಾರಂಭಗಳಲ್ಲಿ ನೀಡುವ ಸ್ಥಾನಮಾನಗಳ ಬಗ್ಗೆ.

* * * * *

ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು, ಹಾಗೂ ವಿಧಾನ ಪರಿಷತ್ ಸದಸ್ಯರುಗಳು ಇವರುಗಳನ್ನು ಸರ್ಕಾರದ ವತಿಯಿಂದ ಏರ್ಪಡಿಸುವ ಸಮಾರಂಭಗಳಿಗೆ ಆಹ್ವಾನಿಸುವುದಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರವು ಅನೇಕ ಸುತ್ತೋಲೆಗಳನ್ನು / ಆದೇಶಗಳನ್ನು ಅಧಿಕಾರಿಗಳಿಗೆ ಮಾರ್ಗಸೂಚಿಯಾಗಿ ನೀಡಿ ಸಾರ್ವಜನಿಕ ಸಮಾರಂಭಗಳಲ್ಲಿ ಮಾನ್ಯ ಸದಸ್ಯರಿಗೆ ಯಾವ ರೀತಿ ಸ್ಥಾನಮಾನ ನೀಡಬೇಕೆಂಬುದರ ಬಗ್ಗೆ ಉಲ್ಲೇಖಿಸಲಾಗಿದೆ. ಈ ವಿಚಾರವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜಕೀಯ ಶಾಖೆ) ಯಿಂದ ಸುತ್ತೋಲೆಗಳು / ಆದೇಶಗಳ Compendium ಮತ್ತು Table of Precedence in Karnataka State (DPAR 2 HWP 91, dated:20.09.1994) ಅನ್ನೂ ಸಹ ತಮ್ಮೆಲ್ಲರಿಗೂ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಈಗಾಗಲೇ ನೀಡಲಾಗಿದೆ. ಮತ್ತೊಮ್ಮೆ ಅದರ ಪ್ರತಿಯನ್ನು ಸುತ್ತೋಲೆ ಸಂ:ಸಿಆಸುಇ 58 ರಾರಾಆ 2008, ದಿನಾಂಕ:20.09.2009ರಲ್ಲಿ ರಾಜ್ಯದ ಎಲ್ಲಾ ಅಧಿಕಾರಿಗಳಿಗೂ ಕಳುಹಿಸಿ ಕೊಡಲಾಗಿದೆ. ಆದಾಗ್ಯೂ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳು ಮೇಲಿಂದ ಮೇಲೆ ವರದಿಯಾಗುತ್ತಿರುವುದು ಕಂಡು ಬಂದಿದೆ.

ಇತ್ತೀಚೆಗೆ ದಿನಾಂಕ:08.04.2010 ರಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಬಂಗಾರುಪೇಟೆ ಬಸ್ ನಿಲ್ದಾಣದ ಉದ್ಘಾಟನಾ ಸಮಾರಂಭ ಹಮ್ಮಿಕೊಂಡಿತ್ತು. ಸರ್ಕಾರವು ಪತ್ರ ಸಂ:ಸಿಆಸುಇ 48 ರಾರಾಆ 2007, ದಿನಾಂಕ:15.07.2009ರಲ್ಲಿ ಪ್ರೊ. ಎಸ್.ಆರ್. ಲೀಲಾ ಅವರು ಬಂಗಾರುಪೇಟೆಯನ್ನು ತಮ್ಮ ನೋಡಲ್ ತಾಲ್ಲೂಕೆಂದು ಪರಿಗಣಿಸಿರುವುದನ್ನು ತಿಳಿಸುತ್ತಾ ಮಾನ್ಯ ಸದಸ್ಯರಿಗೆ ರಾಜ್ಯ ಶಿಷ್ಟಾಚಾರದನ್ವಯ ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿ ನಡೆಯುವ ಸಮಾರಂಭಕ್ಕೆ ಆಹ್ವಾನಿಸಲು ಸಂಬಂಧಪಟ್ಟವರಿಗೆಲ್ಲರಿಗೂ ತಿಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋಲಾರ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿತ್ತು. ಈ ಪತ್ರವು ಕೋಲಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ದಿನಾಂಕ:28.07.2009ರಂದು ಸ್ವೀಕೃತವಾಗಿದೆ. ಈ ಪತ್ರವನ್ನು ವಿಷಯ ನಿರ್ವಾಹಕರು ಜಿಲ್ಲೆಯ ಎಲ್ಲಾ ಅಧಿಕಾರಿಗಳ ಗಮನಕ್ಕೆ ತರುವ ಸಲುವಾಗಿ ಕಡತ ಮಂಡಿಸದೇ ಇದ್ದ ಕಾರಣ, ದಿನಾಂಕ:08.04.2010ರಂದು ನಡೆದ ಮೇಲ್ಕಂಡ ಸಮಾರಂಭಕ್ಕೆ ಮಾನ್ಯ ಸದಸ್ಯರನ್ನು ಆಹ್ವಾನಿಸಿಲ್ಲ. ಇದರಿಂದ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಈ ಪ್ರಕರಣವು ದಿನಾಂಕ:08.06.2010ರಂದು ನಡೆದ ವಿಧಾನ ಪರಿಷತ್ತಿನ ಹಕ್ಕುಬಾಧ್ಯತಾ ಸಮಿತಿಯ ಸಭೆಯಲ್ಲಿ ಪ್ರಸ್ತಾಪವಾಯಿತು. ಈ ಸಭೆಯಲ್ಲಿ, ಈ ವಿಚಾರದಲ್ಲಿ ಮತ್ತೊಮ್ಮೆ ಕಟ್ಟುನಿಟ್ಟಿನ ಸೂಚನೆ ನೀಡಬೇಕೆಂದು ನಿರ್ಣಯವಾಗಿದೆ.

ಮೇಲ್ಕಂಡ ಹಿನ್ನೆಯಲ್ಲಿ, ಸರ್ಕಾರವು ದಿನಾಂಕ:29.09.2009ರ ಸುತ್ತೋಲೆಯಲ್ಲಿ ಸೂಚನೆ ನೀಡಿರುವಂತೆ, ಮಾನ್ಯ ಸಂಸತ್ ಸದಸ್ಯರು, ವಿಧಾನಸಭೆ / ವಿಧಾನ ಪರಿಷತ್ತಿನ ಸದಸ್ಯರಿಗೆ ಸರ್ಕಾರಿ ಸಮಾರಂಭಕ್ಕೆ ಆಹ್ವಾನಿಸುವುದರ ಜೊತೆಗೆ ಸೂಕ್ತ ಸ್ಥಾನಮಾನ ನೀಡಲು ಅವಶ್ಯಕ ಕ್ರಮ ಕೈಗೊಳ್ಳಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ಅದರ ಜೊತೆಗೆ ಪ್ರತಿ ಮೂರು ತಿಂಗಳಿಗೊಮ್ಮೆ ಜಿಲ್ಲೆಯ ಎಲ್ಲಾ ಅಧಿಕಾರಿಗಳ ಸಭೆ ಕರೆದು ಶಿಷ್ಟಾಚಾರದ ಪಾಲನೆ ಬಗ್ಗೆ ವಿಮರ್ಶೆ ನಡೆಸಿ ಮಾನ್ಯ ಸದಸ್ಯರ ನೋಡಲ್ ತಾಲ್ಲೂಕು ಬದಲಾವಣೆ ಆಗಿದ್ದಲ್ಲಿ ಆ ಬಗ್ಗೆ ಅವಶ್ಯಕ ಮಾಹಿತಿಯನ್ನು ಎಲ್ಲಾ ಅಧಿಕಾರಿಗಳಿಗೂ ನೀಡಿ ಮಾನ್ಯ ಸಂಸತ್ ಸದಸ್ಯರು ವಿಧಾನ ಸಭೆ / ವಿಧಾನ ಪರಿಷತ್ ಸದಸ್ಯರಿಗೆ ಸರ್ಕಾರದ ಸಮಾರಂಭಕ್ಕೆ ಆಹ್ವಾನ ನೀಡುವಲ್ಲಿ ಮತ್ತು ಸೂಕ್ತ ಸ್ಥಾನಮಾನ ನೀಡುವಲ್ಲಿ ಯಾವುದೇ ಶಿಷ್ಟಾಚಾರ ಉಲ್ಲಂಘನೆ ಆಗದಂತೆ ಕ್ರಮ ವಹಿಸಬೇಕೆಂದೂ ತಿಳಿಸಲಾಗಿದೆ. ಈ ವಿಚಾರದಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಪಟ್ಟ ಜಿಲ್ಲೆಯ

ಜಿಲ್ಲಾಧಿಕಾರಿಗಳನ್ನೇ ಇದಕ್ಕೆ ಜವಾಬ್ದಾರರನ್ನಾಗಿ ಮಾಡಿ ಅವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳಾಗುವುದೆಂದು ತಿಳಿಯಪಡಿಸಲಾಗಿದೆ.

ಕೆ.ಆರ್. ಶ್ರೀನಿವಾಸ
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಇವರಿಗೆ:**

1. ಎಲ್ಲಾ ಪ್ರಾದೇಶಿಕ ಆಯುಕ್ತರು.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು,
3. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
6. ಎಲ್ಲಾ ಉಪ ವಿಭಾಗಾಧಿಕಾರಿಗಳು.
7. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
8. ಎಲ್ಲಾ ಪುರಸಭಾ ಆಯುಕ್ತರು.
9. ಎಲ್ಲಾ ತಹಶೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು.
10. ಶಾಖಾ ರಕ್ಷಾ ಕಡತ / ವಾರ್ಷಿಕ ಸಂಗ್ರಹ.

**ಪ್ರತಿ:**

ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ಇವರಿಗೆ ಮಾಹಿತಿಗಾಗಿ .

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 02 ಹೆಚ್‌ಡಬ್ಲ್ಯೂಪಿ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:07.12.2010

## ಸುತ್ತೋಲೆ

ವಿಷಯ: ಜಿಲ್ಲಾ ಮಂತ್ರಿಗಳು, ಸ್ಥಳೀಯ ಶಾಸಕರು ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರು, ಇತರೆ ಸಚಿವರು / ಸಂಸದರು / ವಿಧಾನ ಸಭಾ ಸದಸ್ಯರು / ವಿಧಾನ ಪರಿಷತ್ತಿನ ಸದಸ್ಯರನ್ನು ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ.

* * * * *

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರುಗಳು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಸರ್ಕಾರದ ವತಿಯಿಂದ ರಾಜ್ಯ ಮಟ್ಟದಲ್ಲಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಏರ್ಪಡಿಸುವ ರಾಷ್ಟ್ರೀಯ ಹಾಗೂ ಇತರೆ ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸಿದಾಗ ಅವರಿಗೆ ಯಾವ ರೀತಿ ಆಸನದ ವ್ಯವಸ್ಥೆಯನ್ನು ಮಾಡಬೇಕೆಂಬ ಬಗ್ಗೆ ವಿಸ್ತೃತ ಸೂಚನೆಗಳನ್ನು ಸುತ್ತೋಲೆಗಳಲ್ಲಿ ಸರ್ಕಾರವು ನೀಡಿದೆ.

ಸರ್ಕಾರದ ಇಲಾಖೆಗಳು ಏರ್ಪಡಿಸುವಂತಹ ಸಮಾರಂಭಗಳಿಗೆ ಜಿಲ್ಲಾ ಮಂತ್ರಿಗಳು, ಸ್ಥಳೀಯ ಶಾಸಕರು ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರು, ಇತರೆ ಸಚಿವರು / ಸಂಸದರು / ವಿಧಾನಸಭಾ ಸದಸ್ಯರು / ವಿಧಾನ ಪರಿಷತ್ತಿನ ಸದಸ್ಯರನ್ನು ತಪ್ಪದೇ ಆಹ್ವಾನಿಸಲು ಈ ಮೂಲಕ ಸೂಚಿಸಲಾಗಿದೆ.

ಸರ್ಕಾರದ ಎಲ್ಲಾ ಸೂಚನೆಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಪ್ಪದೇ ಪಾಲಿಸಬೇಕಾಗುತ್ತದೆ. ಆದುದರಿಂದ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ತಮ್ಮ ಆಡಳಿತ್ಕೊಳಪಡುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಈಗಾಗಲೇ ಹೊರಡಿಸಲಾಗಿರುವ ಆದ್ಯತಾ ಪಟ್ಟಿಯನ್ವಯ ಈ ಕೆಳಗೆ ಸೂಚಿಸಿದ ಮಾರ್ಪಾಡಿಗೊಳಪಟ್ಟು ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಸಮಾರಂಭಗಳು ಮತ್ತು ಇತರೆ ಸಮಾರಂಭಗಳಿಗೆ / ಕಾರ್ಯಕ್ರಮಗಳಿಗೆ ಈ ಕೆಳಕಂಡಂತೆ ಆದ್ಯತೆಯ ಮೇರೆಗೆ ತಪ್ಪದೇ ಆಹ್ವಾನಿಸಬೇಕೆಂದು ಸೂಚಿಸಲಾಗಿದೆ:

1. ಉಸ್ತುವಾರಿ ಜಿಲ್ಲಾ ಮಂತ್ರಿಗಳು.
2. ಇತರೆ ಆಹ್ವಾನಿತ ಮಂತ್ರಿಗಳು.
3. ಸ್ಥಳೀಯ ಶಾಸಕರ ಅಧ್ಯಕ್ಷತೆ.
4. ಕಾರ್ಯಕ್ರಮ ನಡೆಯುವ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸದರು.
5. ಇತರೆ ಸಂಸದರು.
6. ಇತರೆ ಶಾಸಕರು – ವಿಧಾನಸಭೆ.
7. ಇತರೆ ಶಾಸಕರು – ವಿಧಾನ ಪರಿಷತ್ತು

ಈ ಸೂಚನೆಗಳನ್ನು ತಪ್ಪದೇ ಪಾಲಿಸುವಂತೆ ಅವರುಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಕೋರಲಾಗಿದ್ದು, ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಈ ಬಗ್ಗೆ ಉಸ್ತುವಾರಿ ಸಚಿವರು / ಸಂಸತ್ ಸದಸ್ಯರಿಂದಾಗಲೀ ಅಥವಾ ಶಾಸಕರುಗಳಿಂದಾಗಲೀ ಯಾವುದೇ ದೂರುಗಳು ರಾಜ್ಯ ಸರ್ಕಾರಕ್ಕೆ ಬಂದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

**ಕೆ.ಆರ್. ಶ್ರೀನಿವಾಸ**

ಸರ್ಕಾರದ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಇವರಿಗೆ:**

**ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರಲಾಗಿದೆ.**

**ಪ್ರತಿ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು.
3. ನಿವಾಸಿ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
4. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು / ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು.
5. ಎಲ್ಲಾ ಪ್ರಾದೇಶಿಕ ಆಯುಕ್ತರು.
6. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಎಲ್ಲಾ ಇಲಾಖೆಗಳ ಇಲಾಖಾ ಮುಖ್ಯಸ್ಥರು.
8. ಎಲ್ಲಾ ಜಿಲ್ಲಾಧಿಕಾರಿಗಳು.
9. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
10. ಎಲ್ಲಾ ಉಪ ವಿಭಾಗಾಧಿಕಾರಿಗಳು.
11. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು.
12. ಎಲ್ಲಾ ಪುರಸಭಾ ಆಯುಕ್ತರು.
13. ಎಲ್ಲಾ ತಹಶೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು.
14. ಶಾಖಾ ರಕ್ಷಾ ಕಡತ / ವಾರ್ಷಿಕ ಸಂಗ್ರಹ.

**ಪ್ರತಿ ಮಾಹಿತಿಗಾಗಿ:**

ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ ಇವರಿಗೆ

## ಕರ್ನಾಟಕ ಸರ್ಕಾರದ ನಡವಳಿಗಳು

ಸಂಖ್ಯೆ: ಸಿಆಸುಇ 36 ರಾರಾಆ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:20.08.2009

ವಿಷಯ: ಶಿಷ್ಟಾಚಾರ ಪಾಲನೆ ಬಗ್ಗೆ ಸಚಿವಾಲಯದ ಮಟ್ಟದಲ್ಲಿ ಮೇಲ್ವಿಚಾರಣಾ ಕೋಶ (Monitoring Cell) ರಚನೆ ಕುರಿತು.

**ಪ್ರಸ್ತಾವನೆ:**

ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯ 36ನೇ ವರದಿಯಲ್ಲಿ ಮಾಡಲಾದ ಶಿಫಾರಸ್ಸುಗಳನ್ವಯ ಕೈಗೊಂಡಿರುವ ಕ್ರಮಗಳ ಬಗ್ಗೆ ದಿನಾಂಕ:03.06.2009 ರಂದು ನಡೆದ ಹಕ್ಕು ಬಾಧ್ಯತಾ ಸಮಿತಿಯ ಸಭೆಯಲ್ಲಿ ಪರಿಶೀಲನೆ ಮಾಡಲಾಗಿದೆ. ಶಿಷ್ಟಾಚಾರ ಪಾಲನೆ ಕುರಿತಂತೆ ಪರಿಶೀಲಿಸಿದ ಸಮಿತಿಯು ಈ ಶಿಷ್ಟಾಚಾರ ಪ್ರಕರಣಗಳನ್ನು ಕುರಿತಂತೆ ಮೇಲುಸ್ತುವಾರಿ ಮಾಡಲು ಸರ್ಕಾರದ ಮಟ್ಟದಲ್ಲಿ ಒಂದು ಮೇಲುಸ್ತುವಾರಿ ಕೋಶವನ್ನು ರಚಿಸುವಂತೆ ಮಾಡಿದ ಶಿಫಾರಸ್ಸಿನ ಮೇಲೆ ಕೈಗೊಂಡಿರುವ ಕ್ರಮದ ಕುರಿತಂತೆ ವಿವರ ನೀಡುವಂತೆ ಸದರಿ ಸಮಿತಿಯು ಕೋರಿದೆ. ಈ ಸಂಬಂಧ ಶಿಫಾರಸ್ಸನ್ನು ಪರಿಶೀಲಿಸಿ ಶಿಷ್ಟಾಚಾರ ಪಾಲನೆ ಬಗ್ಗೆ ಪರಿಶೀಲಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ, ಯಾವ ಇಲಾಖೆಯ ವ್ಯಾಪ್ತಿಯಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣ ಆಗಿರುತ್ತದೆಯೋ ಅದಕ್ಕೆ ಸಂಬಂಧಪಟ್ಟ ಇಲಾಖೆಗಳ ಕಾರ್ಯದರ್ಶಿಗಳನ್ನು ಒಳಗೊಂಡಂತೆ ಸರ್ಕಾರದ ಮಟ್ಟದಲ್ಲಿ ಒಂದು ಮೇಲ್ವಿಚಾರಣಾ ಕೋಶ (Monitoring Cell) ರಚಿಸಲು ತೀರ್ಮಾನಿಸಿ ಈ ಮುಂದಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 36 ರಾರಾಆ 2009, ಬೆಂಗಳೂರು ದಿನಾಂಕ:20.08.2009**

ಮೇಲೆ ವಿವರಿಸಲ್ಪಟ್ಟ ಅಂಶಗಳ ಹಿನ್ನೆಲಯಲ್ಲಿ ಕೆಳಗೆ ನಮೂದಿಸಿರುವ ಸದಸ್ಯರನ್ನೊಳಗೊಂಡ ಒಂದು ಮೇಲ್ವಿಚಾರಣಾ ಕೋಶವನ್ನು (Monitoring Cell) ರಚಿಸಲಾಗಿದೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ — **ಅಧ್ಯಕ್ಷರು**
2. ಯಾವ ಇಲಾಖೆಯ ವ್ಯಾಪ್ತಿಯಲ್ಲಿ ಶಿಷ್ಟಾಚಾರ ಉಲ್ಲಂಘನೆ ಪ್ರಕರಣ ಆಗಿರುತ್ತದೆಯೋ ಅದಕ್ಕೆ ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳು — **ಸದಸ್ಯರು**
3. ಸರ್ಕಾರದ ಉಪ ಕಾರ್ಯದರ್ಶಿ ಸಿಆಸುಇ (ಕಾರ್ಯಕಾರಿ) — **ಸಂಚಾಲಕರು (ಕನ್ವೀನರ್)**

ಸರ್ಕಾರಕ್ಕೆ ಬಂದ ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳನ್ನು ಮೂರು ತಿಂಗಳಿಗೊಮ್ಮೆ ಸೇರುವ ಮೇಲ್ವಿಚಾರಣ ಕೋಶದ ಸಭೆಯಲ್ಲಿ ಪರಿವೀಕ್ಷಿಸಲಾಗುವುದು. ಶಿಷ್ಟಾಚಾರ ಉಲ್ಲಂಘನೆ ಆಗಿರುವ ಪ್ರಕರಣಗಳ ಕುರಿತಂತೆ ತಮ್ಮ ಇಲಾಖೆಯಿಂದ ವರದಿ / ಉತ್ತರಗಳನ್ನು ತರಿಸಿ ಸಭೆ ನಡೆಯುವ 3 ದಿನಗಳ ಮುಂಚಿತವಾಗಿ ಕಳುಹಿಸಬೇಕೆಂದು, ಹಾಗೂ ಸದರಿ ತ್ರೈಮಾಸಿಕ ಸಭೆಗೆ ಹಾಜರಾಗಿ ಸಭೆಯ ಸೂಚನೆಗಳನ್ವಯ ನಿರ್ದಿಷ್ಟ ಕ್ರಮಗಳನ್ನು ಸಂಬಂಧಪಟ್ಟ ಇಲಾಖಾ ಕಾರ್ಯದರ್ಶಿಗಳು ಕೈಗೊಳ್ಳಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಬಿ. ವೀರಣ್ಣ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಇವರಿಗೆ:**
1. ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಕಾರ್ಯಕಾರಿ).
4. ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಆಸುಇ (ರಾಜ್ಯ ಶಿಷ್ಟಾಚಾರ) ಇವರ ಆಪ್ತ ಸಹಾಯಕರು.

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 33 ರಾರಾಆ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:02.09.2009

## ಅನಧಿಕೃತ ಟಿಪ್ಪಣಿ

ವಿಷಯ: 2003-04ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ 36ನೇ ವರದಿಯಲ್ಲಿನ ಶಿಫಾರಸ್ಸಿನ ಬಗ್ಗೆ.

ಉಲ್ಲೇಖ: ದಿನಾಂಕ:26.10.2005ರ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಿಆಸುಇ 71 ರಾರಾಆ 2005 (ಪ್ರತಿ ಲಗತ್ತಿಸಿದೆ).

* * * * *

ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸುವಾಗ ಜಿಲ್ಲಾ ಸಚಿವರುಗಳ ಆದೇಶದಂತೆ ಹಲವಾರು ಸಂದರ್ಭಗಳಲ್ಲಿ 24 ಗಂಟೆಗಳ ಸಮಯಾವಕಾಶವನ್ನು ಕೂಡ ಕೊಡದೆ ಒಮ್ಮೆಲೇ ದಿಢೀರಾಗಿ ಜಿಲ್ಲಾ ಸಚಿವರುಗಳ ಪ್ರವಾಸಕ್ಕೆ ಹೊಂದಿಕೊಂಡು ಕಾರ್ಯಕ್ರಮಗಳನ್ನು ನಡೆಸುವಂತೆ ಮಾಡಲು ಅಧಿಕಾರಿಗಳಿಗೆ ಕೇಂದ್ರ ಸ್ಥಾನದಿಂದ ದೂರವಾಣಿ ಮೂಲಕ ಸಂಪರ್ಕಿಸಿ, ಅಧಿಕಾರಿಗಳಿಗೂ ಸರ್ಕಾರಿ ಕಾರ್ಯಕ್ರಮಗಳನ್ನು ಶಿಷ್ಟಾಚಾರವನ್ನು ಪಾಲಿಸಿಕೊಂಡು ಅರ್ಥಪೂರ್ಣವಾಗಿ ನಡೆಸಲು ಮತ್ತು ಅಧಿಕಾರಿಗಳಿಗೆ ಸ್ಥಳೀಯ ಶಾಸಕರುಗಳನ್ನು ಸಂಪರ್ಕಿಸಿ ಅವರನ್ನು ಆಹ್ವಾನಿಸಲು ಮತ್ತು ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಶಾಸಕರಿಗೆ ತಲುಪಿಸುವಂತೆ ಮಾಡಲು ಅವಕಾಶವೇ ಇಲ್ಲದಂತಾಗುವ ಅನೇಕ ಪರಿಸ್ಥಿತಿಗಳ ಬಗ್ಗೆ ಹಲವಾರು ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಇದರ ಪರಿಣಾಮವಾಗಿ ಸಮಿತಿಯು ಯಾವುದೇ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ಮಟ್ಟದ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸಲು ಕನಿಷ್ಠ ೭ (ಏಳು) ದಿವಸಗಳ ಕಾಲಾವಧಿಯನ್ನು ನಿಗದಿ ಮಾಡಿ ಸರ್ಕಾರದಿಂದಲೇ ಸುತ್ತೋಲೆಯ ಮಾರ್ಗಸೂಚಿಯನ್ನು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೂಡಲೇ ಕಳುಹಿಸಬೇಕೆಂದು ಶಿಫಾರಸ್ಸು ಮಾಡಿದ್ದ ಹಿನ್ನಲೆಯಲ್ಲಿ ಈ ಶಿಫಾರಸ್ಸನ್ನು ಮಾನ್ಯ ಸಚಿವರುಗಳ ಅವಗಾಹನೆಗೆ ತರುವಂತೆ ಉಲ್ಲೇಖಿತ ಪತ್ರದಲ್ಲಿ ಎಲ್ಲಾ ಸಚಿವರುಗಳ ಆಪ್ತ ಕಾರ್ಯದರ್ಶಿಗಳಿಗೆ ತಿಳಿಸಲಾಗಿತ್ತು. (ಅದರ ಪ್ರತಿ ಲಗತ್ತಿಸಿದೆ).

ಆದರೆ, ಇತ್ತೀಚೆಗೆ ಸರ್ಕಾರಿ ಸಮಾರಂಭಗಳಲ್ಲಿ ಪದೇಪದೇ ಶಿಷ್ಟಾಚಾರ ಉಲ್ಲಂಘನೆಯಾಗುತ್ತಿರುವ ಬಗ್ಗೆ ದೂರುಗಳು ಬರುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಸರ್ಕಾರಿ ಸಮಾರಂಭಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಅರ್ಥಪೂರ್ಣವಾಗಿ ಶಿಷ್ಟಾಚಾರ ಪಾಲನೆಯಿಂದ ನಡೆಸಲು ಮತ್ತು ಶಿಷ್ಟಾಚಾರ ಉಲ್ಲಂಘನೆಗೆ ಅವಕಾಶ ಉಂಟಾಗದಂತೆ ನೋಡಿಕೊಳ್ಳಲು ವಿಧಾನ ಪರಿಷತ್ ಹಕ್ಕು ಬಾಧ್ಯತಾ ಸಮಿತಿಯು ಶಿಫಾರಸ್ಸು ಮಾಡಿರುವಂತೆ ಸರ್ಕಾರಿ ಸಮಾರಂಭಗಳನ್ನು ನಡೆಸಲು ಈ ಹಿಂದೆ ಕೋರಿರುವಂತೆ ಕನಿಷ್ಠ ಪಕ್ಷ 7 (ಏಳು) ದಿವಸಗಳ ಕಾಲಾವಧಿಯನ್ನು ನಿಗದಿಪಡಿಸಬೇಕೆಂದು ಈ ಮೂಲಕ ಮತ್ತೆ ಕೋರಲಾಗಿದೆ. ಈ ಅಂಶಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬೇಕೆಂದು ಈ ಮೂಲಕ ಎಲ್ಲ ಮಾನ್ಯ ಸಚಿವರುಗಳ ಆಪ್ತ ಕಾರ್ಯದರ್ಶಿಗಳನ್ನು ಮತ್ತೊಮ್ಮೆ ಕೋರಲಾಗಿದೆ.

**(ಬಿ. ವೀರಣ್ಣ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಇವರಿಗೆ:**

1. ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2. ಮಾನ್ಯ ಸಚಿವರುಗಳ ಎಲ್ಲಾ ಆಪ್ತ ಕಾರ್ಯದರ್ಶಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 58 ರಾರಾಆ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:29.09.2009

# ಸುತ್ತೋಲೆ

ವಿಷಯ: ವಿಧಾನ ಸಭಾ / ಪರಿಷತ್ ಸದಸ್ಯರಿಗೆ ಸರ್ಕಾರಿ ಸಮಾರಂಭಗಳಲ್ಲಿ ನೀಡುವ ಸ್ಥಾನಮಾನಗಳ ಬಗ್ಗೆ.

* * * * *

ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು, ಹಾಗೂ ವಿಧಾನ ಪರಿಷತ್ ಸದಸ್ಯರುಗಳು ಸರ್ಕಾರದ ವತಿಯಿಂದ ಏರ್ಪಡಿಸುವ ಸಮಾರಂಭಗಳಿಗೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರವು ಅನೇಕ ಸುತ್ತೋಲೆಗಳನ್ನು / ಆದೇಶಗಳನ್ನು ಅಧಿಕಾರಿಗಳಿಗೆ ಮಾರ್ಗಸೂಚಿಯಾಗಿ ಸದರಿ ಸುತ್ತೋಲೆಗಳಲ್ಲಿ ಸಾರ್ವಜನಿಕ ಸಮಾರಂಭಗಳಲ್ಲಿ ಮಾನ್ಯ ಸದಸ್ಯರಿಗೆ ಯಾವ ರೀತಿ ಸ್ಥಾನಮಾನ ನೀಡಬೇಕೆಂಬುದರ ಬಗ್ಗೆ ಉಲ್ಲೇಖಿಸಲಾಗಿದೆ. ಈ ವಿಚಾರವಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜಕೀಯ) ಶಾಖೆಯಿಂದ ಸುತ್ತೋಲೆಗಳು / ಆದೇಶಗಳ Compendium ಹಾಗೂ Table of Precedence in Karnataka State (DPAR 2 HWP 91, dated:20.09.1994) ಮಾಡಿ ತಮ್ಮೆಲ್ಲರಿಗೂ ಮಾಹಿತಿ ಹಾಗೂ ಸೂಕ್ತವಾದ ಸ್ಥಾನಮಾನಗಳನ್ನು ಶಿಷ್ಟಾಚಾರದೊಂದಿಗೆ ಕಟ್ಟುನಿಟ್ಟಾಗಿ ಪಾಲಿಸಲು ನಿರ್ದೇಶನವನ್ನು ಈಗಾಗಲೇ ನೀಡಲಾಗಿದೆ. ಇದರ ಪ್ರತಿಯನ್ನು ಮತ್ತೊಮ್ಮೆ ಇದರೊಂದಿಗೆ ಲಗತ್ತಿಸಲಾಗಿದೆ. ಈ ಬಗ್ಗೆ ಇಷ್ಟೊಂದು ಸುತ್ತೋಲೆ ನೀಡಿದಾಗ್ಯೂ ಕೂಡ ಅನೇಕ ಲೋಪದೋಷಗಳು ಆಗುತ್ತಿರುವುದು ಕಂಡುಬರುತ್ತಿದೆ ಎಂದು ಕರ್ನಾಟಕ ವಿಧಾನ ಸಭೆಯ ಅಧ್ಯಕ್ಷರು ಹಾಗೂ ಇತರ ಶಾಸಕರು ಪತ್ರ ಮುಖೇನ ತಿಳಿಸಿರುತ್ತಾರೆ. ಈ ವಿಚಾರವಾಗಿ ವಿವರಿಸಲು ಹಕ್ಕು ಬಾಧ್ಯತೆ ಸಮಿತಿ ಸಭೆಯನ್ನು ಕೂಡ ಕರೆದಿರುತ್ತಾರೆ.

ಶಿಷ್ಟಾಚಾರ ಉಲ್ಲಂಘನೆಯ ಬಗ್ಗೆ ಬಂದ ದೂರುಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

1. ದಿನಾಂಕ:17.08.2008 ರಂದು ನಡೆದ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ, ಪೋಲೀಸ್ ಠಾಣೆಯ ಉದ್ಘಾಟನಾ ಸಮಾರಂಭ ಹಾಗೂ ಮೈಸೂರು ಕಲಾಮಂದಿರದಲ್ಲಿ ನಡೆದ ಭಾರತ ಸ್ವಾತಂತ್ರ ಸಂಗ್ರಾಮದ 150ನೇ ವರ್ಷಾಚರಣೆ ಮತ್ತು ಟಿಪ್ಪುಸುಲ್ತಾನರ ಸ್ಮರಣಾರ್ಥ ಸಮಾರೋಪ ಸಮಾರಂಭಗಳ ಆಹ್ವಾನ ಪತ್ರಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯವರ ಹೆಸರನ್ನು ಮುದ್ರಿಸದೆ ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಶ್ರೀ ಎಸ್.ಎ. ರಾಮದಾಸ್, ಮಾನ್ಯ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಇವರಿಂದ ದೂರು.
2. ಮೈಸೂರು ದಸರಾ ಮಹೋತ್ಸವ 2008 ರಾಜ್ಯ ದಸರಾ ಕ್ರೀಡಾಕೂಟ ದಿನಾಂಕ:05.10.2008ರ ಮ್ಯಾರಾಥಾನ್ ಓಟ – 08 ದಿನಾಂಕ:06.10.2008ರ ಸಮಾರೋಪ ಸಮಾರಂಭದ ಆಹ್ವಾನ ಪತ್ರಿಕೆ ಹಾಗೂ ದಿನಾಂಕ:05.10.2008ರ ಕರ್ನಾಟಕ ರಾಜ್ಯ ಪೋಲೀಸ್ ಸಮೂಹ ವಾದ್ಯಮೇಳ ಕಾರ್ಯಕ್ರಮದ ಆಹ್ವಾನ ಪತ್ರಿಕೆಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯವರ ಹೆಸರನ್ನು ನಮೂದಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಶ್ರೀ ಎಸ್.ಎ. ರಾಮದಾಸ್, ಮಾನ್ಯ ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಇವರಿಂದ ದೂರು.
3. ದಿನಾಂಕ:09.09.2008 ರಂದು ನಡೆದ ಭದ್ರಾವತಿ ತಾಲ್ಲೂಕು ಕಲ್ಲಿಹಾಳ್ ಗ್ರಾಮದಲ್ಲಿರುವ ಪದವಿಪೂರ್ವ ಕಾಲೇಜಿನ ಉದ್ಘಾಟನಾ ಸಮಾರಂಭಕ್ಕೆ ಮಾನ್ಯ ಶಾಸಕರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಶ್ರೀ ಕೆ.ಜಿ. ಕುಮಾರಸ್ವಾಮಿ, ಮಾನ್ಯ ಶಾಸಕರು, ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ಇವರಿಂದ ದೂರು.
4. ದಿನಾಂಕ:15.07.2008 ರಂದು ತೋರಣಗಲ್ಲು ಗ್ರಾಮದಲ್ಲಿ ಮಾದರಿ ಪೋಲೀಸ್ ಠಾಣೆ ಶಿಲಾನ್ಯಾಸ ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಮಾನ್ಯ ಶಾಸಕರ ಹೆಸರನ್ನು ಮುದ್ರಿಸದೆ ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಶ್ರೀ ತುಕಾರಾಂ, ಮಾನ್ಯ ಶಾಸಕರು, ಸಂಡೂರು ವಿಧಾನಸಭಾ ಕ್ಷೇತ್ರ, ಬಳ್ಳಾರಿ ಜಿಲ್ಲೆ ಇವರಿಂದ ದೂರು.
5. ದಿನಾಂಕ:15.07.2008ರಂದು ಹುಣಸೂರು ಕ್ಷೇತ್ರದಲ್ಲಿ ನಡೆದ ಅಂಗವಿಕಲ ಮಕ್ಕಳ ಉಚಿತ ವೈದ್ಯಕೀಯ ತಪಾಸಣಾ ಶಿಬಿರದ ಆಹ್ವಾನ ಪತ್ರಿಕೆಯಲ್ಲಿ ಮಾನ್ಯ ಶಾಸಕರ ಹೆಸರನ್ನು ಮುದ್ರಿಸದೆ ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಶ್ರೀ ಹೆಚ್.ಪಿ. ಮಂಜುನಾಥ್, ಮಾನ್ಯ ಶಾಸಕರು, ಹುಣಸೂರು ವಿಧಾನಸಭಾ ಕ್ಷೇತ್ರ, ಇವರಿಂದ ದೂರು.
6. ದಿವಂಗತ ಡಾ|| ರಾಜ್‌ಕುಮಾರ್ ರವರ ಸ್ಮಾರಕ ಭವನ ನಿರ್ಮಾಣ ಸಮಾರಂಭದಲ್ಲಿ ಮಾನ್ಯ ಶಾಸಕರನ್ನು ಆಮಂತ್ರಿಸದೇ ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಶ್ರೀ ನೆ.ಲ. ನರೇಂದ್ರಬಾಬು, ಮಾನ್ಯ ಶಾಸಕರು, ಮಹಾಲಕ್ಷ್ಮೀ ಬಡಾವಣೆ ಕ್ಷೇತ್ರ, ಇವರಿಂದ ದೂರು.

7. ದಿನಾಂಕ:02.11.2008ರಂದು ಭದ್ರಾವತಿಯಲ್ಲಿ ನಡೆದ ಪೌರ ಸನ್ಮಾನ ಕಾರ್ಯಕ್ರಮದಲ್ಲಿ ಮಾನ್ಯ ಶಾಸಕರ ಭಾವಚಿತ್ರದ ಕೆಳಗಡೆ ಮಾಜಿ ಶಾಸಕರು ಭದ್ರಾವತಿ ಕ್ಷೇತ್ರ ಎಂದು ನಮೂದಿಸಿ ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಶ್ರೀ ಬಿ.ಕೆ. ಸಂಗಮೇಶ್ವರ, ಮಾನ್ಯ ಶಾಸಕರು, ಭದ್ರಾವತಿ ವಿಧಾನಸಭಾ ಕ್ಷೇತ್ರ, ಇವರಿಂದ ದೂರು.
8. ದಿನಾಂಕ:16.11.2008ರಂದು ನಡೆದ ಹಜ್ ಕ್ಯಾಂಪ್ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ವಿಧಾನ ಪರಿಷತ್ ಸದಸ್ಯರನ್ನು ಕಡೆಗಣಿಸಿ, ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಶ್ರೀ ಅಬ್ದುಲ್ ಅಜೀಂ, ಮಾನ್ಯ ವಿಧಾನ ಪರಿಷತ್ ಸದಸ್ಯರು, ಬೆಂಗಳೂರು ಇವರಿಂದ ದೂರು.
9. ದಿನಾಂಕ:15.01.2009 ರಂದು ಹಗರಿಬೊಮ್ಮನಹಳ್ಳಿಯಲ್ಲಿ ನಡೆದ ಕಾಮಗಾರಿಗಳ ಚಾಲನೆ, ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಶ್ರೀ ಅನಿಲ್ ಹೆಚ್. ಲಾಡ್ ಮಾನ್ಯ ರಾಜ್ಯ ಸಭಾ ಸದಸ್ಯರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಮನವಿ.
10. ದಿನಾಂಕ:09.02.2009 ರಂದು ಚಿತ್ರದುರ್ಗದಲ್ಲಿ ನಡೆದ ಭದ್ರಾ ಮೇಲ್ದಂಡೆ ಯೋಜನೆ, ವಲಯ ಕಚೇರಿ ಕಟ್ಟಡದ ಶಂಕುಸ್ಥಾಪನಾ ಸಮಾರಂಭಕ್ಕೆ ಶ್ರೀ ಎಸ್.ಕೆ. ಬಸವರಾಜನ್, ಮಾನ್ಯ ಶಾಸಕರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘಿಸಿರುವ ಬಗ್ಗೆ ಮನವಿ.
11. ದಿನಾಂಕ:17.02.2009ರಂದು ಚಿಕ್ಕಮಗಳೂರಿನಲ್ಲಿ ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಕಾರ್ಯಕ್ರಮವನ್ನು ರಾಜ್ಯ ಬಿಜೆಪಿ ಅಧ್ಯಕ್ಷರಿಂದ ನೆರವೇರಿಸಿ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಡಾ|| ಬಿ.ಎಲ್. ಶಂಕರ್, ಮಾಜಿ ವಿಧಾನ ಪರಿಷತ್ ಸಭಾಪತಿ ಇವರ ಮನವಿ.
12. ದಿನಾಂಕ:14.02.2009ರಂದು ಅಫಜಲಪುರದಲ್ಲಿ ನಡೆದ ಸಂತೆ ಮಾರುಕಟ್ಟೆ ಕಾಮಗಾರಿಯ ಅಡಿಗಲ್ಲು ಸಮಾರಂಭಕ್ಕೆ ಶ್ರೀ ಮಾಲೀಕಯ್ಯ ವಿ. ಗುತ್ತೇದಾರ, ಮಾನ್ಯ ಶಾಸಕರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಮಾನ್ಯ ಶಾಸಕರ ಮನವಿ.
13. ದಿನಾಂಕ:22.02.2009ರಂದು ಹಿರಿಯೂರು ತಾಲ್ಲೂಕು, ದೇವರಕೊಟ್ಟ ಗ್ರಾಮದಲ್ಲಿ ನಡೆದ ಮೊರಾರ್ಜಿ ವಸತಿ ಶಾಲೆಯ ಕಟ್ಟಡ ನಿರ್ಮಾಣ ಶಿಲಾನ್ಯಾಸ ಸಮಾರಂಭಕ್ಕೆ ಸ್ಥಳೀಯ ಸಂಸದರಾದ ಜಸ್ಟಿಸ್ ಶ್ರೀ ಎನ್.ವೈ. ಹನುಮಂತಪ್ಪ, ಇವರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಮಾನ್ಯ ಸಂಸದರ ಮನವಿ.
14. ದಿನಾಂಕ:15.02.2009 ರಂದು ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು, ವಿಜಯನಗರ ವಿಧಾನ ಸಭಾ ಕ್ಷೇತ್ರದಲ್ಲಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ಸಮಾರಂಭಕ್ಕೆ ಶ್ರೀ ಕೆ. ವಿರೂಪಾಕ್ಷಪ್ಪ, ಮಾನ್ಯ ಸಂಸದರು, ಇವರನ್ನು ಆಹ್ವಾನಿಸದೆ ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಬಗ್ಗೆ ಮನವಿ.

ಈ ಮೇಲ್ಕಂಡ ನ್ಯೂನ್ಯತೆಗಳು ಇಷ್ಟೆಲ್ಲ ಆದೇಶಗಳು / ಸುತ್ತೋಲೆಗಳು ನೀಡಿದ್ದರೂ ಕೂಡ ಪುನರಾವರ್ತನೆ ಆಗುತ್ತಿದ್ದು, ಈ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳಿಗೆ ಹೆಚ್ಚಿನ ಮಾಹಿತಿ ಹಾಗೂ ತರಬೇತಿ ನೀಡುವ ಅವಶ್ಯಕತೆ ಇದೆ. ಆದುದರಿಂದ, ಸಂಬಂಧಪಟ್ಟ ಅಧಿಕಾರಿಗಳು ಕಾರ್ಯ ಪ್ರವೃತ್ತರಾಗಲು ಸರಿಯಾದ ಮಾರ್ಗದರ್ಶನ ನೀಡಬೇಕಾಗಿರುತ್ತದೆ.

ಶಿಷ್ಟಾಚಾರ ಪಾಲನೆಯ ಬಗ್ಗೆ ಇಷ್ಟೆಲ್ಲಾ ರಾಜ್ಯ ಸರ್ಕಾರದ ನಿರ್ದೇಶನ / ಸುತ್ತೋಲೆಗಳಲ್ಲಿ ಸ್ಪಷ್ಟ ಆಗಿದ್ದಾಗ್ಯೂ ಕೂಡ ತಪ್ಪುಗಳು ಪದೇ ಪದೇ ಸಂಭವಿಸುತ್ತಿರುವುದಕ್ಕೆ ಮೂಲ ಕಾರಣ ಬಹುಶಃ ಸದರಿ ಸುತ್ತೋಲೆಗಳನ್ನು ಗಮನಿಸದೇ ಕಾರ್ಯಕ್ರಮಗಳನ್ನು ಏರ್ಪಾಡು ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

- ➢ ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಸಮಾರಂಭ ಏರ್ಪಡಿಸುವ ಮುನ್ನ ಆಹ್ವಾನ ಪತ್ರಿಕೆಗೆ ಆಯಾ ಜಿಲ್ಲಾಧಿಕಾರಿಗಳ / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆ ಪಡೆಯಬೇಕು.
- ➢ ಸಚಿವರು ಪಾಲ್ಗೊಳ್ಳುವ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವುದು ಮತ್ತು ವೇದಿಕೆ ಮೇಲೆ ಉಪಸ್ಥಿತರಿರುವುದನ್ನು ಸುತ್ತೋಲೆ ಸಂಖ್ಯೆ: ಸಿಆಸುಇ 97 ಶಿಸಸೇ 96, ದಿನಾಂಕ:04.03.1997ರ ಪ್ರಕಾರ ನಿಷೇಧಿಸಲಾಗಿದೆ. ಆದಾಗ್ಯೂ ಈ ಬಗ್ಗೆ ಉಲ್ಲಂಘನೆಯಾಗಿರುವುದರ ಬಗ್ಗೆ ವಿಧಾನ ಪರಿಷತ್ ಹಕ್ಕು ಬಾಧ್ಯತಾ ಸಮಿತಿಯು ಸರ್ಕಾರದ ಗಮನಕ್ಕೆ ತಂದಿದೆ. ಮಾನ್ಯ ಮುಖ್ಯಮಂತ್ರಿಗಳು, ಸಚಿವರು ಪಾಲ್ಗೊಳ್ಳುವ ಸರ್ಕಾರಿ ಸಮಾರಂಭಗಳಲ್ಲಿ ಸರ್ಕಾರಿ ಅಧಿಕಾರಿಗಳು ಅಧ್ಯಕ್ಷತೆ ವಹಿಸಬಾರದೆಂದು ಮತ್ತು ವೇದಿಕೆ ಮೇಲೆ ಉಪಸ್ಥಿತರಿರಬಾರದೆಂದು ಮತ್ತೊಮ್ಮೆ ಸಂಬಂಧಪಟ್ಟವರಿಗೆಲ್ಲ ಈ ಮೂಲಕ ನಿರ್ದೇಶಿಸಲಾಗಿದೆ.

ಜನ ಪ್ರತಿನಿಧಿಗಳಿಗೆ ಸಲ್ಲಿಸಬೇಕಾದ ಗೌರವ ಹಾಗೂ ಅವರೊಡನೆ ಸೌಜನ್ಯದಿಂದ ನಡೆದುಕೊಳ್ಳುವ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವ ಬಗ್ಗೆ ಹಾಗೂ ಸಭೆ ಸಮಾರಂಭಗಳು ನಡೆಯುವಾಗ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು / ನೌಕರರಿಗೂ ಜಿಲ್ಲಾ ಮಟ್ಟದಲ್ಲಿ ತಿಳುವಳಿಕೆ ನೀಡುವ ಬಗ್ಗೆ ಕಾರ್ಯಾಗಾರವನ್ನು ಮಾಡಿ ಅವರಿಗೆ ತಮ್ಮ ಜವಾಬ್ದಾರಿಗಳ ಬಗ್ಗೆ ಮನದಟ್ಟು

ಮಾಡಿಕೊಡಬೇಕಾಗಿ ಈ ಮೂಲಕ ನಿರ್ದೇಶಿಸಲಾಗಿದೆ. ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಿದ ಅಧಿಕಾರಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಈ ಕಛೇರಿಗೆ ತಿಳಿಸಲು ನಿರ್ದೇಶಿಸಲಾಗಿದೆ.

ಈ ಶಿಷ್ಟಾಚಾರ ಕುರಿತಂತೆ ಸರ್ಕಾರದಿಂದ ಹೊರಡಿಸಲಾದ ಆದೇಶ / ಸುತ್ತೋಲೆಗಳ ಸಂಗ್ರಹದ ಒಂದು ಪ್ರತಿಯನ್ನು ಇದಕ್ಕೆ ಲಗತ್ತಿಸಿದೆ. ಈ ಪ್ರತಿಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ತಮ್ಮ ಹಂತದಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ತಲುಪುವಂತೆ ವ್ಯವಸ್ಥೆ ಮಾಡುವುದು. ಈ ಸಂಗ್ರಹದ ಪ್ರತಿಯನ್ನು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಕಳುಹಿಸಿ ಶಿಷ್ಟಾಚಾರದ ಬಗ್ಗೆ ಪೂರ್ಣವಾಗಿ ಅರ್ಥ ಮಾಡಿಕೊಳ್ಳುವಂತೆ ಎಲ್ಲಾ ಅಧಿಕಾರಿಗಳಿಗೆ ಮನದಟ್ಟು ಮಾಡಬೇಕೆಂದು, ತಪ್ಪಿದಲ್ಲಿ ಶಿಷ್ಟಾಚಾರ ಪ್ರಕರಣಗಳಲ್ಲಿ ಸಂಬಂಧಪಟ್ಟವರನ್ನು ವೈಯಕ್ತಿಕ ಜವಾಬ್ದಾರರನ್ನಾಗಿ ಮಾಡುವುದಲ್ಲದೆ ಅಂಥವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ಸಂಬಂಧಪಟ್ಟವರಿಗೆಲ್ಲ ತಿಳಿಸಬೇಕೆಂದು ಸೂಚಿಸಿದೆ. ಸಂಬಂಧಪಟ್ಟ ಅಧಿಕಾರಗಳಲ್ಲದೇ ಶಿಷ್ಟಾಚಾರ ಪಾಲಿಸುವುದರಲ್ಲಿ ವಿಫಲರಾದ, ಹಿರಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು. ಶಿಷ್ಟಾಚಾರ ಕುರಿತಂತೆ ಈ ಸುತ್ತೋಲೆ / ಆದೇಶದ ಸಂಗ್ರಹದ* ಪ್ರತಿಗಳು ಎಲ್ಲಾ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ತಲುಪಿದ್ದಕ್ಕೆ ಸ್ವೀಕೃತ ದಾಖಲೆ ಪಡೆದು ಅದರ ಪ್ರತಿಯನ್ನು ಈ ಸುತ್ತೋಲೆ ತಲುಪಿದ ಎರಡು ವಾರದೊಳಗಾಗಿ ಕಾರ್ಯದರ್ಶಿಗಳು, ಸಿಆಸುಇ, ೨ನೇ ಮಹಡಿ, ವಿಧಾನ ಸೌಧ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸಿಕೊಡಬೇಕೆಂದು ಸೂಚಿಸಿದೆ.

**(ಸುಧಾಕರ್ ರಾವ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**
1. ಎಲ್ಲಾ ಪ್ರಾದೇಶಿಕ ಆಯುಕ್ತರು.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
3. ಎಲ್ಲಾ ಇಲಾಖಾ ಮುಖ್ಯಸ್ಥರು.
4. ಎಲ್ಲಾ ಜಿಲ್ಲಾಧಿಕಾರಿಗಳು.
5. ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
6. ಎಲ್ಲಾ ಉಪ ವಿಭಾಗಾಧಿಕಾರಿಗಳು.
7. ಎಲ್ಲಾ ಮಹಾನಗರ ಪಾಲಿಕೆಗಳ ಆಯುಕ್ತರು
8. ಎಲ್ಲಾ ಪುರಸಭಾ ಆಯುಕ್ತರು
9. ಎಲ್ಲಾ ತಹಶೀಲ್ದಾರರು, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು
10. ಶಾಖಾ ರಕ್ಷಾ ಕಡತ / ವಾರ್ಷಿಕ ಸಂಗ್ರಹ.

* ಸುತ್ತೋಲೆ / ಆದೇಶಗಳ ಸಂಗ್ರಹವನ್ನು www.dpar.nic.in-dpar-services ಅಂತರ್ಜಾಲದಲ್ಲಿ ಸಹ ಪಡೆಯಬಹುದು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 34 ರಾರಾಆ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:30.06.2009

**ಸುತ್ತೋಲೆ**

ವಿಷಯ: ವಿಧಾನ ಮಂಡಲದ ಸದಸ್ಯರ ಮತ್ತು ಸಂಸತ್ ಸದಸ್ಯರ ಬಗ್ಗೆ ಶಿಷ್ಟಾಚಾರ ಪಾಲನೆಯಲ್ಲಿ ಆದ ಉಲ್ಲಂಘನೆ ಕುರಿತು ವರದಿ ಸಲ್ಲಿಸುವ ಬಗ್ಗೆ.

*****

ಕರ್ನಾಟಕ ವಿಧಾನ ಪರಿಷತ್ತಿನ 2003-04ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ 36ನೇ ವರದಿಯಲ್ಲಿ ಇನ್ನಿತರ ಶಿಫಾರಸ್ಸುಗಳ ಜೊತೆ ವಿಧಾನ ಮಂಡಲದ ಸದಸ್ಯರ ಮತ್ತು ಸಂಸತ್ ಸದಸ್ಯರ ಶಿಷ್ಟಾಚಾರ ಪಾಲನೆಯಲ್ಲಿ ಆದ ಉಲ್ಲಂಘನೆ ಕುರಿತಂತೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗಿತ್ತು:

> "ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾ ಸೆಷನ್ಸ್ ನ್ಯಾಯಾಧೀಶರುಗಳು ಮತ್ತು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳಲ್ಲದೆ ಇತರೆ ಯಾವ ಅಧಿಕಾರಿಗಳು ಕೆಂಪು ದೀಪಗಳನ್ನು ತಮ್ಮ ವಾಹನಗಳಲ್ಲಿ ಅಳವಡಿಸದಂತೆ ಈಗಿರುವ ಸುತ್ತೋಲೆಗೆ ಸೂಕ್ತ ತಿದ್ದುಪಡಿಯನ್ನು ಮಾಡಿ ಆದೇಶ ಹೊರಡಿಸಬೇಕೆಂದು ಸಮಿತಿಯು ಸರ್ಕಾರಕ್ಕೆ ಶಿಫಾರಸ್ಸು ಮಾಡುವುದರ ಜೊತೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗಳು ಮೂರು ತಿಂಗಳಿಗೊಮ್ಮೆ ವಿಧಾನ ಮಂಡಲದ ಸದಸ್ಯರುಗಳ ಶಿಷ್ಟಾಚಾರ ಪಾಲನೆ ಬಗ್ಗೆ ಅಧಿಕಾರಿಗಳ ಸಭೆ ಕರೆದು ಶಿಷ್ಟಾಚಾರ ಅನುಷ್ಠಾನದ ಬಗ್ಗೆ ಚರ್ಚಿಸಿ ಅದರ ಅನುಷ್ಠಾನದಲ್ಲಿ ಏನಾದರೂ ಉಲ್ಲಂಘನೆ ಆಗಿದೆಯೇ ಇಲ್ಲವೇ ಎಂಬುದರ ಬಗ್ಗೆ ಪ್ರತಿ ಮೂರು ತಿಂಗಳಿಗೊಮ್ಮೆ ವಿಧಾನ ಮಂಡಲದ ಸಭಾಪತಿಯವರು ಮತ್ತು ಸಭಾಧ್ಯಕ್ಷರಿಗೂ ಹಾಗೂ ಹಕ್ಕು ಬಾಧ್ಯತಾ ಸಮಿತಿಯ ಅಧ್ಯಕ್ಷರಿಗೂ ಕೂಡ ವರದಿಯನ್ನು ಸಲ್ಲಿಸುವಂತೆ ಸಮಿತಿಯು ಶಿಫಾರಸ್ಸು ಮಾಡುತ್ತದೆ."

ಈ ಶಿಫಾರಸ್ಸಿನ ಬಗ್ಗೆ ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯು ದಿನಾಂಕ:02.06.2009ರಂದು ಸಭೆ ಸೇರಿ ಮೇಲ್ಕಂಡಂತೆ ಮೂರು ತಿಂಗಳಿಗೊಮ್ಮೆ ಜಿಲ್ಲಾಧಿಕಾರಿಗಳ ಸಭೆ ಕರೆದು ಶಿಷ್ಟಾಚಾರ ಅನುಷ್ಠಾನದ ಬಗ್ಗೆ ಚರ್ಚಿಸಿ ಈ ದಿಸೆಯಲ್ಲಿ ಏನಾದರೂ ಶಿಷ್ಟಾಚಾರ ಉಲ್ಲಂಘನೆ ಆಗಿದೆಯೇ ಎಂಬುದರ ಬಗ್ಗೆ ಪ್ರತಿ ಮೂರು ತಿಂಗಳಿಗೊಮ್ಮೆ ವರದಿ ನೀಡಬೇಕೆಂದು ಒತ್ತಾಯಿಸಿದೆ. ಆದರೆ, ಪ್ರತಿ ಮೂರು ತಿಂಗಳಿಗೊಮ್ಮೆ ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆಯುವುದು ಕಷ್ಟಸಾಧ್ಯವಾಗಿರುವ ಕಾರಣ, ಇದಕ್ಕೆ ಪರ್ಯಾಯವಾಗಿ ಈ ವಿಚಾರದಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಂದ ಮೂರು ತಿಂಗಳಿಗೊಮ್ಮೆ ತ್ರೈಮಾಸಿಕ ವರದಿಯನ್ನು ತರಿಸಿ, ಅದನ್ನು ಕ್ರೋಢೀಕರಿಸಿ, ವಿಧಾನ ಸಭೆಯ ಸಭಾಧ್ಯಕ್ಷರಿಗೆ, ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಹಾಗೂ ಹಕ್ಕು ಬಾಧ್ಯತಾ ಸಮಿತಿಯ ಅಧ್ಯಕ್ಷರಿಗೆ ಕಳುಹಿಸಿಕೊಡುವಂತೆ ನಿರ್ಧರಿಸಲಾಗಿದೆ. ಆದಕಾರಣ, ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಯಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳು ಪ್ರತಿ ಮೂರು ತಿಂಗಳಿಗೊಮ್ಮೆ ವಿಧಾನ ಮಂಡಲದ ಸದಸ್ಯರುಗಳು ಮತ್ತು ಸಂಸತ್ ಸದಸ್ಯರ ಬಗೆಗಿನ ಶಿಷ್ಟಾಚಾರ ಪಾಲನೆಯಲ್ಲಿ ಉಲ್ಲಂಘನೆಯಾದ ಪ್ರಕರಣಗಳಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಆಯಾ ತ್ರೈಮಾಸಿಕ ಅವಧಿಯು ಮುಕ್ತಾಯಗೊಂಡ ನಂತರ 15 ದಿನಗಳೊಳಗೆ ತಪ್ಪದೇ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಇವರಿಗೆ ಕಳುಹಿಸಿ ಕೊಡಬೇಕೆಂದು ಕೋರಲಾಗಿದೆ.

(ಮುಖ್ಯ ಕಾರ್ಯದರ್ಶಿಯವರಿಂದ ಅನುಮೋದಿತ)

**(ಬಿ. ವೀರಣ್ಣ)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಇವರಿಗೆ:**

ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಎಲ್ಲಾ ವಿಭಾಗಗಳ ಪ್ರಾದೇಶಿಕ ಆಯುಕ್ತರುಗಳಿಗೆ.

**ವಿಧಾನ ಮಂಡಲದ ಸದಸ್ಯರ ಮತ್ತು ಸಂಸತ್ ಸದಸ್ಯರ ಬಗೆಗಿನ ಶಿಷ್ಟಾಚಾರ ಪಾಲನೆಯಲ್ಲಿ**

**ಉಲ್ಲಂಘನೆ ಪ್ರಕರಣಗಳು ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮದ ಬಗ್ಗೆ**

ಮಾರ್ಚ್ 31, ಜೂನ್ 30, ಸೆಪ್ಟಂಬರ್ 30 ಮತ್ತು ..........................ಜಿಲ್ಲೆ
ಡಿಸೆಂಬರ್ 31ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಅವಧಿಗೆ ವರದಿ

| ಕ್ರಮ ಸಂಖ್ಯೆ | ದೂರು ನೀಡಿದ ಶಾಸಕರ / ಸಂಸತ್ ಸದಸ್ಯರ ಹೆಸರು / ಕ್ಷೇತ್ರ / ಪತ್ರದ ದಿನಾಂಕ | ದೂರಿನ ಸಂಕ್ಷಿಪ್ತ ವಿವರ | ತೆಗೆದುಕೊಂಡ ಕ್ರಮ | ಷರಾ |
|---|---|---|---|---|
| 1. | | | | |
| 2. | | | | |
| 3. | | | | |
| 4. | | | | |
| 5. | | | | |
| 6. | | | | |

ದಿನಾಂಕ:...................

ಜಿಲ್ಲಾಧಿಕಾರಿ,
...................... ಜಿಲ್ಲೆ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 33 ರಾರಾಆ 2009

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:06.07.2009

## ಸುತ್ತೋಲೆ

ವಿಷಯ: ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯ 36ನೇ ವರದಿಯಲ್ಲಿನ ಶಿಫಾರಸ್ಸು – ಸರ್ಕಾರಿ ಸಮಾರಂಭಗಳಿಗೆ ಆಹ್ವಾನಿಸುವುದು, ಶಿಲಾಫಲಕಗಳಲ್ಲಿ ಬರೆಸುವುದು ಮತ್ತು ಶಿಷ್ಟಾಚಾರ ಉಲ್ಲಂಘನೆ ಪ್ರಕರಣಗಳಲ್ಲಿ ಹೊಣೆಗಾರಿಕೆ ಬಗ್ಗೆ.

*****

ಸರ್ಕಾರಿ ಸಮಾರಂಭಗಳಲ್ಲಿ ಬಾಗವಹಿಸುವ ಎಲ್ಲಾ ಚುನಾಯಿತ ಪ್ರತಿನಿಧಿಗಳ ಹೆಸರುಗಳನ್ನು ಶಿಲಾನ್ಯಾಸದಲ್ಲಿ ಬರೆಸಬೇಕೆಂದು, ಜಿಲ್ಲಾ ಮಟ್ಟದಲ್ಲಿ ನಡೆಯುವ ಎಲ್ಲಾ ಅಧಿಕೃತ ಸರ್ಕಾರಿ ಕಾರ್ಯಕ್ರಮಗಳಿಗೆ ಆಯಾಯ ಜಿಲ್ಲೆಯಿಂದ ಆಯ್ಕೆಯಾದ ಅಥವಾ ಆಯಾಯ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡ ವಿಧಾನ ಪರಿಷತ್ತಿನ ಶಾಸಕರುಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕೆಂದು, ಶಿಷ್ಟಾಚಾರ ಉಲ್ಲಂಘನೆ ಪ್ರಕರಣ ಕುರಿತಂತೆ ಉನ್ನತ ಅಧಿಕಾರಿಗಳ ಮೇಲೆ ಶಿಷ್ಟಾಚಾರ ಉಲ್ಲಂಘನೆ ಹೊಣೆಯನ್ನು ನಿಗದಿಪಡಿಸಬೇಕೆಂದು ಮತ್ತು ಕೇಂದ್ರ ಸರ್ಕಾರ ನೀಡುವ ಅನುದಾನದ ಕಾರ್ಯಕ್ರಮಗಳ ಉದ್ಘಾಟನೆಗೆ ಸ್ಥಳೀಯ ಚುನಾಯಿತ ಪ್ರತಿನಿಧಿಗಳಾದ ವಿಧಾನ ಮಂಡಲದ ಸದಸ್ಯರುಗಳನ್ನು ಆಹ್ವಾನಿಸದೆ ಉದ್ಘಾಟನೆ ಕಾರ್ಯಕ್ರಮಗಳು ನಡೆಯುತ್ತಿದ್ದು, ವಿಧಾನ ಮಂಡಲ ಸದಸ್ಯರುಗಳನ್ನು ಕಡ್ಡಾಯವಾಗಿ ಆಹ್ವಾನಿಸಬೇಕೆಂದು ಸಹ ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯು 36ನೇ ವರದಿಯಲ್ಲಿ ತಿಳಿಸಿರುತ್ತದೆ.

ಈ ಬಗ್ಗೆ ಪರಿಶೀಲಿಸಲಾಗಿದ್ದು, ಈ ಕೆಳಗಿನಂತೆ ಸೂಚನೆಗಳನ್ನು ನೀಡಲಾಗಿದೆ:

- ಸರ್ಕಾರಿ ಸಮಾರಂಭಗಳಲ್ಲಿ ಭಾಗವಹಿಸುವ ಚುನಾಯಿತ ಪ್ರತಿನಿಧಿಗಳ ಹೆಸರುಗಳನ್ನು, ಶಿಲಾಫಲಕಗಳಲ್ಲಿ ಬರೆಸುವಾಗ ರಾಜ್ಯ/ಜಿಲ್ಲಾ/ತಾಲ್ಲೂಕು ಮಟ್ಟ, ಹೀಗೆ ಸಂದರ್ಭಕ್ಕೆ ತಕ್ಕಂತೆ ಶಿಷ್ಟಾಚಾರ ಉಲ್ಲಂಘನೆ ಆಗದಂತೆ ನೋಡಿಕೊಳ್ಳಬೇಕೆಂದು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ತಿಳಿಸಲಾಗಿದೆ.
- ಜಿಲ್ಲಾ ಮಟ್ಟದಲ್ಲಿ ನಡೆಯುವ ಸರ್ಕಾರಿ ಕಾರ್ಯಕ್ರಮಗಳಿಗೆ ಆಯಾಯ ಜಿಲ್ಲೆಗಳಿಂದ ಆಯ್ಕೆಯಾದ ಅಥವಾ ಆಯಾ ನೋಡಲ್ ತಾಲ್ಲೂಕನ್ನು ಆಯ್ಕೆ ಮಾಡಿಕೊಂಡ ವಿಧಾನ ಪರಿಷತ್ತಿನ ಶಾಸಕರುಗಳನ್ನು ಶಿಷ್ಟಾಚಾರದನ್ವಯ ಆಹ್ವಾನಿಸಬೇಕು, ಯಾವುದೇ ಪ್ರಕರಣದಲ್ಲಿ ಶಿಷ್ಟಾಚಾರ ಉಲ್ಲಂಘನೆ ಆದಲ್ಲಿ ಆ ಪ್ರಕರಣಕ್ಕೆ ಸಂಬಂಧಿಸಿದಂತೆ ಆಯಾ ಇಲಾಖೆಯ ಮೇಲಾಧಿಕಾರಿಗಳೇ ಜವಾಬ್ದಾರರಾಗುತ್ತಾರೆ.
- ಕೇಂದ್ರ ಸರ್ಕಾರದ ಸಮಾರಂಭಗಳಿಗೆ ಸಂಸತ್ ಸದಸ್ಯರನ್ನು ಆಹ್ವಾನಿಸುವ ರೀತಿಯಲ್ಲಿಯೇ ಸ್ಥಳೀಯ ಚುನಾಯಿತ ಪ್ರತಿನಿಧಿಗಳಾದ ವಿಧಾನ ಮಂಡಲದ ಸದಸ್ಯರುಗಳನ್ನು ಶಿಷ್ಟಾಚಾರದನ್ವಯ ತಪ್ಪದೇ ಆಹ್ವಾನಿಸಬೇಕೆಂದು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹಾಗೂ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಲಿಗೆ ಈ ಮೂಲಕ ಸೂಚನೆಗಳನ್ನು ನೀಡಲಾಗಿದೆ.

**ಬಿ. ವೀರಣ್ಣ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.
2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು.
3. ಕಾರ್ಯದರ್ಶಿಗಳು, ರಾಜ್ಯ ವಿಧಾನ ಸಭೆ ಸಚಿವಾಲಯ.

4. ಕಾರ್ಯದರ್ಶಿಗಳು, ರಾಜ್ಯ ವಿಧಾನ ಪರಿಷತ್ ಸಚಿವಾಲಯ.

5. ಎಲ್ಲಾ ಪ್ರಾದೇಶಿಕ ಆಯುಕ್ತರು.

6. ಎಲ್ಲಾ ಇಲಾಖಾ ಮುಖ್ಯಸ್ಥರು
   ಬರುವ ತಾಲ್ಲೂಕು

7. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

8. ಎಲ್ಲಾ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು
   ನಿರ್ದೇಶನ ಜಿಲ್ಲಾ ಪಂಚಾಯತ್ ನೀಡುವಂತೆ ಕೋರಿದೆ.

ನಿಮ್ಮ ವ್ಯಾಪ್ತಿಯಡಿ
ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಈ
ಸುತ್ತೋಲೆಯನ್ವಯ ಸೂಕ್ತ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 68 ರಾರಾಆ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:31.12.2008

## ಸುತ್ತೋಲೆ

ವಿಷಯ: ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರವನ್ನು ಸರ್ಕಾರದ ಎಲ್ಲಾ ಕಚೇರಿಗಳಲ್ಲಿಯೂ ಅಳವಡಿಸುವ ಬಗ್ಗೆ.

* * * * *

ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್‌ರವರ 52ನೇ ಪುಣ್ಯ ತಿಥಿ ಅಂಗವಾಗಿ ದಿನಾಂಕ:06.12.2008ರಂದು ವಿಧಾನಸೌಧದ ಮುಂಭಾಗದಲ್ಲಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಡಾ: ಬಿ.ಆರ್. ಅಂಬೇಡ್ಕರ್‌ರವರು ಭಾರತ ಸಂವಿಧಾನ ರಚಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದು ದೀನದಲಿತರ ಏಳಿಗೆಗಾಗಿ ಅಪಾರವಾಗಿ ಶ್ರಮಿಸಿರುವುದರಿಂದ, ಮುಂದಿನ ಪೀಳಿಗೆಯು ಅವರ ಈ ಸೇವೆಯನ್ನು ಸ್ಮರಿಸುವ ಸಲುವಾಗಿ ಅವರ ಭಾವಚಿತ್ರವನ್ನು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಕಡ್ಡಾಯವಾಗಿ ಹಾಕಬೇಕೆಂದು ಸೂಚನೆ ನೀಡಿದ್ದರು. ಆದುದರಿಂದ ಎಲ್ಲಾ ಸರ್ಕಾರಿ ಕಚೇರಿಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸಂವಿಧಾನ ಶಿಲ್ಪಿ ಡಾ: ಬಿ.ಆರ್. ಅಂಬೇಡ್ಕರ್‌ರವರ ಭಾವಚಿತ್ರವನ್ನು ಕಡ್ಡಾಯವಾಗಿ ಹಾಕುವಂತೆ ಈ ಮೂಲಕ ಸೂಚಿಸಲಾಗಿದೆ. ಭಾವಚಿತ್ರದ ಪ್ರತಿಗಳನ್ನು ವಾರ್ತಾ ಮತ್ತು ಪ್ರಚಾರ ಇಲಾಖೆಯಿಂದ ಪಡೆದು ಅದಕ್ಕೆ ಕಟ್ಟು ಹಾಕಿಸಿ ತಮ್ಮ ಇಲಾಖೆಯ ಎಲ್ಲಾ ಕಚೇರಿಗಳನ್ನು ಅಳವಡಿಸಲು ತಕ್ಷಣವೇ ಕ್ರಮವಹಿಸಬೇಕೆಂದು ಕೋರಲಾಗಿದೆ.

**ಎಂ.ಆರ್. ಪ್ರಹ್ಲಾದ್**
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರ)
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ರಾಜಕೀಯ)

**ಇವರಿಗೆ:**

1. ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿ: ಕಾರ್ಯದರ್ಶಿಗಳು. (ತಮ್ಮ ಅಧೀನದಲ್ಲಿ ಬರುವ ಇಲಾಖೆಗಳಿಗೆ ಈ ಬಗ್ಗೆ ಸೂಚನೆ ನೀಡುವ ಸಲುವಾಗಿ).
2. ಎಲ್ಲಾ ಇಲಾಖೆಗಳ ಮುಖ್ಯಸ್ಥರುಗಳು.
3. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
4. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು.
5. ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸ್ಸುಇ 31 ರಾರಾಆ 2006

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:06.02.2007

**ಇಂದ:**
ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನ ಸೌಧ,
ಬೆಂಗಳೂರು.

**ಗೆ:**

1. ಎಲ್ಲಾ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು: ಅಪರ ಕಾರ್ಯದರ್ಶಿಗಳು.
2. ಎಲ್ಲಾ ಜಿಲ್ಲಾಧಿಕಾರಿಗಳು : ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
3. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಎಲ್ಲಾ ಜಿಲ್ಲಾ ಪೋಲೀಸ್ ಅಧೀಕ್ಷಕರುಗಳು.
5. ಮುಖ್ಯ ಕಾರ್ಯದರ್ಶಿ / ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು.
6. ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಗಳು.

**ಮಾನ್ಯರೆ,**

**ವಿಷಯ:** ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ.

* * * * *

ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ : ಸಮಾರಂಭಗಳಿಗೆ ವಿಧಾನ ಮಂಡಲದ ಮಾನ್ಯ ಸದಸ್ಯರುಗಳನ್ನು ಆಹ್ವಾನಿಸುವಲ್ಲಿ ಪಾಲಿಸಬೇಕಾದ ಶಿಷ್ಟಾಚಾರಗಳ ಬಗ್ಗೆ ಆಗಿಂದಾಗ್ಗೆ ನಿರ್ದಿಷ್ಟವಾದ ಸುತ್ತೋಲೆ : ಸೂಚನೆ : ಆದೇಶಗಳನ್ನು ಹೊರಡಿಸಿದ್ದಾಗ್ಯೂ ಸಹ ವಿಧಾನ ಮಂಡಲದ ಸದಸ್ಯರಿಗೆ ಶಿಷ್ಟಾಚಾರದ ಪ್ರಕಾರ ಸಲ್ಲಿಸಬೇಕಾದ ಸ್ಥಾನಮಾನಗಳು ಸೂಕ್ತವಾಗಿ ಪಾಲನೆಯಾಗುತ್ತಿಲ್ಲದಿರುವ ವಿಷಯವನ್ನು ಕರ್ನಾಟಕ ವಿಧಾನ ಪರಿಷತ್ತಿನ 2003-04ನೇ ಸಾಲಿನ ಹಕ್ಕುಭಾದ್ಯತಾ ಸಮಿತಿಯು 36ನೇ ವರದಿಯಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪಿಸಿದೆ. ಈ ಹಿನ್ನಲೆಯಲ್ಲಿ ಶಿಷ್ಟಾಚಾರ ಅನುಸರಿಸುವ ಕುರಿತಂತೆ ಹೊರಡಿಸಲಾಗಿರುವ ಸುತ್ತೋಲೆ : ಆದೇಶಗಳ ಸಂಗ್ರಹವನ್ನು ಇದರೊಡನೆ ಲಗತ್ತಿಸಿ ಕಳುಹಿಸಲಾಗಿದೆ. ಈ ಆದೇಶ : ಸುತ್ತೋಲೆಗಳಲ್ಲಿರುವ ಎಲ್ಲಾ ಅಂಶಗಳನ್ನು ತಪ್ಪದೇ ಪಾಲಿಸಬೇಕೆಂದು ಸರ್ಕಾರವು ಆದೇಶಿಸಿದೆ.

ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಬದಲಾಗಿ ಶಾಸಕರು, ಸಂಸತ್ ಸದಸ್ಯರು ಹಾಗೂ ಸಾರ್ವಜನಿಕರೇ ಕಾರ್ಡ್‌ಗಳನ್ನು ಮುದ್ರಿಸಿ, ನಿಯಮಬಾಹಿರವಾಗಿ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸುತ್ತಿರುವರೆಂದು ಸರ್ಕಾರದ ಗಮನಕ್ಕೆ ತರಲಾಗಿದೆ. ಇಂತಹ ನಿಯಮ ಬಾಹಿರ ಕ್ರಮಗಳು ಮುಂದೆ ಜರುಗದಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ತೀವ್ರ ನಿಗಾವಹಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ತಮ್ಮ ನಂಬುಗೆಯ,
ಸಹಿ/-
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 1 ಹೆಚ್‌ಡಬ್ಲ್ಯೂಪಿ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:22.02.2007

**<u>ಸೇರ್ಪಡೆ</u>**

ಕರ್ನಾಟಕ ರಾಜ್ಯದ ಆಧ್ಯತಾ ಪಟ್ಟಿಯ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 2 ಹೆಚ್‌ಡಬ್ಲ್ಯೂಪಿ 91, ದಿನಾಂಕ:11-11-93ಕ್ಕೆ ಹೊರಡಿಸಲಾದ ತಿದ್ದೋಲೆ ಸಂಖ್ಯೆ: ಸಿಆಸುಇ 2 ಹೆಚ್‌ಡಬ್ಲ್ಯೂಪಿ 91, ದಿನಾಂಕ:20-09-94ರಲ್ಲಿನ ಕ್ರಮ ಸಂಖ್ಯೆ:19ರಲ್ಲಿರುವ ಕರ್ನಾಟಕ ರಾಜ್ಯ ಉಪಸಚಿವರು ಇದರ ಕೆಳಗೆ 19(ಎ), **ಅಧ್ಯಕ್ಷರು, ಜಿಲ್ಲಾ ಪಂಚಾಯತ್** ಎಂದು ಈ ಕೆಳಗಿನಂತೆ ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು.

19(ಎ) – ಅಧ್ಯಕ್ಷರು ಜಿಲ್ಲಾ ಪಂಚಾಯತ್.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**ಎನ್. ಆರ್. ಸುಧಾಕರ್**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ರಾಜ್ಯ ಶಿಷ್ಟಾಚಾರ)

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿಯನ್ನು:**

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು.
2. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು / ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು.
3. ಜಂಟಿ ಕಾರ್ಯದರ್ಶಿಗಳು, ಕೇಂದ್ರ ಒಳಾಡಳಿತ ಮಂತ್ರಾಲಯ, ನವದೆಹಲಿ.
4. ಅಕೌಂಟೆಂಟ್ ಜನರಲ್ (1 ಮತ್ತು 2) ಕರ್ನಾಟಕ, ಬೆಂಗಳೂರು.
5. ಎಲ್ಲಾ ಪ್ರಾದೇಶಿಕ ಆಯುಕ್ತರು.
6. ಎಲ್ಲಾ ಇಲಾಖಾ ಮುಖ್ಯಸ್ಥರು.
7. ಘನತವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು.
8. ಕಾರ್ಯದರ್ಶಿಗಳು, ರಾಜ್ಯ ವಿಧಾನ ಸಭೆ ಸಚಿವಾಲಯ.
9. ಕಾರ್ಯದರ್ಶಿಗಳು, ರಾಜ್ಯ ವಿಧಾನ ಪರಿಷತ್ ಸಚಿವಾಲಯ.
10. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
11. ಎಲ್ಲಾ ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್.
12. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಹೈಕೋರ್ಟ್ ಬೆಂಗಳೂರು.
13. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
14. ನಿವಾಸಿ ಆಯುಕ್ತರು, ಕರ್ನಾಟಕ ಸರ್ಕಾರ, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ಚಾಣಿಕ್ಯ ಪುರಿ, ನವದೆಹಲಿ-21.
15. ರಿಜಿಸ್ಟ್ರಾರ್ ಲೋಕಾಯುಕ್ತ / ಸಿಎಟಿ / ಕೆಎಟಿ.

16. ಸಬ್ ಏರಿಯಾ ಕಮಾಂಡರ್ (ಬ್ರಿಗೇಡಿಯರ್), ಕರ್ನಾಟಕ ಮತ್ತು ಗೋವಾ ಸಬ್ ಏರಿಯಾ, ಬೆಂಗಳೂರು.
17. ಏರ್ ಆಫೀಸರ್ ಕಮಾಂಡಿಂಗ್, ಏರ್ ಫೋರ್ಸ್ ಕಮಾಂಡ್, ಹೆಬ್ಬಾಳ.
18. ಚೇರಮನ್, ಎಸ್.ಎಸ್.ಬಿ. (ನೇವಿ), ಬೆಂಗಳೂರು.
19. ಮಾನ್ಯ ಮುಖ್ಯಮಂತ್ರಿಗಳ ಉಪ ಕಾರ್ಯದರ್ಶಿಗಳು / ಆಪ್ತ ಕಾರ್ಯದರ್ಶಿಗಳು.
20. ಮಾನ್ಯ ಉಪಮುಖ್ಯಮಂತ್ರಿಗಳ ಉಪ ಕಾರ್ಯದರ್ಶಿಗಳು / ಆಪ್ತ ಕಾರ್ಯದರ್ಶಿಗಳು.
21. ಮಾನ್ಯ ಸಭಾಪತಿಗಳ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ / ಚೇರ್ಮನ್, ಕರ್ನಾಟಕ ವಿಧಾನ ಪರಿಷತ್ತು / ಎಲ್ಲಾ ಸಚಿವರುಗಳು / ವಿರೋಧಪಕ್ಷದ ನಾಯಕರು / ರಾಜ್ಯ ಸಚಿವರುಗಳು / ಉಪಾಧ್ಯಕ್ಷರು, ವಿಧಾನ ಸಭೆ / ಉಪ ಸಭಾಪತಿಗಳು, ವಿಧಾನ ಸಭೆ / ಮುಖ್ಯ ಸಚೇತಕರು, ವಿಧಾನಸಭೆ, ವಿಧಾನ ಪರಿಷತ್ತು.
22. ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
23. ಉಪ ಮಹಾಪೌರರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
24. ಎಲ್ಲಾ ವಿಶ್ವವಿದ್ಯಾನಿಲಯಗಳ ರಿಜಿಸ್ಟ್ರಾರ್‌ಗಳು, ಕರ್ನಾಟಕ.
25. ಮುಖ್ಯ ಕಾರ್ಯದರ್ಶಿಯವರ ಹಾಗೂ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
26. ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 28 ರಾರಾಲ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:02.07.2007

## ಸುತ್ತೋಲೆ

ಮಾನ್ಯ ಸಂಸತ್ ಸದಸ್ಯರು, ವಿಧಾನ ಸಭಾ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರುಗಳ ಪತ್ರಗಳಿಗೆ ಶೀಘ್ರವಾಗಿ ಉತ್ತರಿಸುವ ಬಗ್ಗೆ ಹಾಗೂ ಅವರು ಕಚೇರಿಗಳಿಗೆ ಭೇಟಿ ನೀಡಿದಾಗ ಸೌಜನ್ಯದಿಂದ ವರ್ತಿಸುವ ಬಗ್ಗೆ, ಸರ್ಕಾರದ ವತಿಯಿಂದ ಏರ್ಪಡಿಸಲಾಗುವ ಸಭೆ / ಸಮಾರಂಭಗಳಿಗೆ ಆಹ್ವಾನಿಸುವುದು ಹಾಗೂ ಆದ್ಯತಾ ಪಟ್ಟಿಗೆ ಅನುಗುಣವಾಗಿ ಆಹ್ವಾನ ಪತ್ರಿಕೆಗಳಲ್ಲಿ ಅವರುಗಳ ಹೆಸರುಗಳನ್ನು ಮುದ್ರಿಸುವುದು ಮತ್ತು ಅವರುಗಳಿಗೆ ಸಮಾರಂಭಗಳಲ್ಲಿ ಸ್ಥಾನ-ಮಾನ ನೀಡುವ ಬಗ್ಗೆ, ಮತ್ತಿತರ ಶಿಷ್ಟಾಚಾರವನ್ನು ನಿಯಮಿತವಾಗಿ ಅನುಸರಿಸುವ ಬಗ್ಗೆ ಕಾಲಕಾಲಕ್ಕೆ ಸೂಚನೆಗಳನ್ನು ನೀಡಿ ಹಲವಾರು ಸುತ್ತೋಲೆ / ಆದೇಶಗಳನ್ನು ಸರ್ಕಾರದಿಂದ ಹೊರಡಿಸಿದ್ದು, ಅವುಗಳ ಸಂಗ್ರಹದ ಪುಸ್ತಕವನ್ನು ಸಂಬಂಧಪಟ್ಟವರಿಗೆಲ್ಲಾ ದಿನಾಂಕ:06.02.2007ರ ಪತ್ರದಲ್ಲಿ ಮತ್ತೊಮ್ಮೆ ಕಳುಹಿಸಲಾಗಿದೆ. ಈ ಸುತ್ತೋಲೆ / ಆದೇಶಗಳ ಸಂಗ್ರಹವನ್ನು dpar.kar.nic.in ವೆಬ್ ಸೈಟ್‌ನಲ್ಲೂ ಸಹ ಅಳವಡಿಸಲಾಗಿದೆ.

ಶಿಷ್ಟಾಚಾರ ಪಾಲನೆ ಕುರಿತಂತೆ, ಕೇಂದ್ರ ಸರ್ಕಾರದ ಮಾರ್ಗಸೂಚಿಗಳನ್ನು ಹಾಗೂ ಮೇಲೆ ತಿಳಿಸಲಾದ ಸುತ್ತೋಲೆಗಳಲ್ಲಿ ನೀಡಲಾದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹ ಅಧಿಕಾರಿಗಳು ಹಾಗೂ ಅವರ ಮೇಲಾಧಿಕಾರಿಗಳ ವಿರುದ್ಧ ಉಗ್ರ ಶಿಸ್ತಿನ ಕ್ರಮವನ್ನು ನಿಯಮಾನುಸಾರ ತೆಗೆದುಕೊಳ್ಳಲಾಗುವುದು.

ಸಹಿ:-
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಆಸುಇ (ರಾಜಕೀಯ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 91 ರಾರಾಆ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:25.04.2006

**ಸುತ್ತೋಲೆ**

ವಿಷಯ: ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಉತ್ತರಿಸಲು ಇಲಾಖಾ ವರಿಷ್ಠರು ಶಿಷ್ಟಾಚಾರ ಪಾಲಿಸಿ ಕ್ರಮ ಕೈಗೊಳ್ಳುವುದರ ಕುರಿತು.

ಉಲ್ಲೇಖ:
1) ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳು ಹಾಗೂ ನಿವೃತ್ತಿ ಮತ್ತು ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವರ ಪತ್ರ ದಿನಾಂಕ:20.09.2005
2) ಕೇಂದ್ರ ಸಚಿವ ಸಂಪುಟ ಕಾರ್ಯದರ್ಶಿಯವರ ದಿನಾಂಕ:23.01.2006ರ ಅರೆ ಸರ್ಕಾರಿ ಪತ್ರ ಸಂಖ್ಯೆ: 1/95/2/2005-CAV.

* * * * *

ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ ಉತ್ತರಿಸುವಲ್ಲಿ ರಾಜ್ಯ ಸರ್ಕಾರದ ಇಲಾಖೆಗಳಿಂದ ತಡವಾಗುತ್ತಿರುವ ವಿಚಾರವು ಗಮನಕ್ಕೆ ಬಂದಿರುವುದಾಗಿ ಕೇಂದ್ರ ಸರ್ಕಾರವು ದಿನಾಂಕ:20.09.2005ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಬರೆದಿರುವ ಉಲ್ಲೇಖಿತ (1)ರ ಪತ್ರದಲ್ಲಿ ತಿಳಿಸಿದ ನಂತರ ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಸ್ವೀಕೃತಿ ಪತ್ರವನ್ನು ಹಾಗೂ ಮುಂದಿನ 15 ದಿನಗಳಲ್ಲಿ ಕೈಗೊಂಡ ಕ್ರಮವನ್ನು ತಿಳಿಸಬೇಕಾದುದು ಇಲಾಖೆಗಳ ಜವಾಬ್ದಾರಿಯಾಗಿರುತ್ತದೆ ಎಂದು ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 91 ರಾರಾಆ 2005, ದಿನಾಂಕ:05.11.2005ರಲ್ಲಿ ಈಗಾಗಲೇ ತಿಳಿಸಲಾಗಿತ್ತು. ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ ಇಲಾಖೆಗಳು ಉತ್ತರಿಸುವಲ್ಲಿ ವಿಳಂಬವಾಗುತ್ತಿರುವ ಬಗ್ಗೆ ಕೇಂದ್ರ ಸಚಿವ ಸಂಪುಟ ಕಾರ್ಯದರ್ಶಿಗಳು ಉಲ್ಲೇಖಿತ (೨)ರ ಪತ್ರದಲ್ಲಿ ಪ್ರಸ್ತಾಪಿಸಿದ್ದಾರೆ.

ಆದ್ದರಿಂದ, ಲೋಕಸಭಾ ಸದಸ್ಯರುಗಳಿಂದ ಬರುವ ಎಲ್ಲಾ ಪತ್ರಗಳಿಗೂ ಈ ಹಿಂದೆ ತಿಳಿಸಿರುವಂತೆ 15 ದಿನಗಳಲ್ಲಿ ಸ್ವೀಕೃತಿ ಪತ್ರ ಕಳುಹಿಸುವುದು ಹಾಗೂ ನಿಗದಿತ ಅವಧಿಯಲ್ಲಿ ಉತ್ತರಿಸಿ ಶಿಷ್ಟಾಚಾರ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಮತ್ತೊಮ್ಮೆ ಈ ಮೂಲಕ ಸೂಚಿಸಿದೆ.

ಸಹಿ/-
ಸರ್ಕಾರದ ಮುಖ್ಯ ಕಾರ್ಯದರ್ಶಿ

**No. 15/10/2005-Public**
**Government of India / Bharat Sarkar**
**Ministry of Home Affairs / Grih Mantralaya**

North Block, New Delhi
Dated the 27th September, 2005,

To,

Shri Mohamed Allam K.
Under Secretary (D.P.A.R. (Political))
Government of Karnataka
Karnataka Government Secretariat
Vidhana Soudha, Bangalore

Subject: Presiding over the Flag hoisting functions by MLAs on Independence Day & Republic Day - reg.

Sir,

I am directed to refer to your letter number DPAR 60 HCR 2005, dated the 11th August, 2005 on the subject mentioned above and to say that the instructions issued by Ministry of Home Affairs on the eve of Republic Day / Independence Day relate to flag hoisting ceremony only (including presentation of guard of honour and speech by the dignitary unfurling the national flag). The instructions envisage ceremonial hoisting of the national flag by Minister / Commissioner / District Magistrate / Sub Divisional Magistrate Sarpanch at District / Sub-Division / Block / Panchayat level at the 'official' function. As regards other functions at local levels, it is for the concerned State Governments to decide the manner in which such functions are to be organized (including the dignitaries who should preside over such functions).

Yours faithfully,

**S.K. Bhatnagar**
Deputy Secretary to the Govt. of India
Tel. No. 23092035

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 71 ರಾರಾಆ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:26.10.2005

**<u>ಅನಧಿಕೃತ ಟಿಪ್ಪಣಿ</u>**

**ವಿಷಯ:** 2003-04ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ 36ನೇ ವರದಿಯಲ್ಲಿನ ಶಿಫಾರಸ್ಸಿನ ಬಗ್ಗೆ.

* * * * *

2003-04ನೇ ಸಾಲಿನ ಕರ್ನಾಟಕ ವಿಧಾನ ಪರಿಷತ್ತಿನ ಹಕ್ಕು ಬಾಧ್ಯತಾ ಸಮಿತಿಯು ದಿನಾಂಕ:09.02.2004 ರಂದು ನೀಡಿರುವ ವರದಿಯಲ್ಲಿ ಈ ಕೆಳಕಂಡಂತೆ ಶಿಫಾರಸ್ಸು ಮಾಡಿರುತ್ತದೆ.

"ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸುವಾಗ ಜಿಲ್ಲಾ ಸಚಿವರುಗಳ ಆದೇಶದಂತೆ ಹಲವಾರು ಸಂದರ್ಭಗಳಲ್ಲಿ 24 ಗಂಟೆಗಳ ಸಮಯಾವಕಾಶವನ್ನು ಕೊಡದೆ ದಿಢೀರಾಗಿ ಜಿಲ್ಲಾ ಸಚಿವರುಗಳ ಪ್ರವಾಸಕ್ಕೆ ಹೊಂದಿಕೊಂಡು ಕಾರ್ಯಕ್ರಮಗಳನ್ನು ನಡೆಸುವಂತೆ ಮಾಡಲು ಅಧಿಕಾರಿಗಳಿಗೆ ಕೇಂದ್ರ ಸ್ಥಾನದಿಂದ ದೂರವಾಣಿ ಮೂಲಕ ಸಂಪರ್ಕಿಸಿ, ಅಧಿಕಾರಿಗಳಿಗೂ ಸರ್ಕಾರಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ನಡೆಸಲು ಮತ್ತು ಅಧಿಕಾರಿಗಳಿಗೆ ಸ್ಥಳೀಯ ಶಾಸಕರುಗಳನ್ನು ಸಂಪರ್ಕಿಸಿ ಅವರನ್ನು ಆಹ್ವಾನಿಸಲು ಮತ್ತು ಆಹ್ವಾನ ಪತ್ರಿಕೆಗಳನ್ನು ಮುದ್ರಿಸಿ ಶಾಸಕರಿಗೆ ತಲುಪಿಸುವಂತೆ ಮಾಡಲು ಅವಕಾಶವೇ ಇಲ್ಲದಂತಾಗುವ ಪರಿಸ್ಥಿತಿಗಳ ಬಗ್ಗೆ ಹಲವಾರು ಅಧಿಕಾರಿಗಳು ಸಮಿತಿಯ ಗಮನಕ್ಕೆ ತಂದು, ಇದರ ಪರಿಣಾಮವಾಗಿ ಸ್ಥಳೀಯ ಶಾಸಕರುಗಳಿಗೆ ಆಹ್ವಾನ ಪತ್ರಿಕೆಗಳು ಸಮಯಕ್ಕೆ ಸರಿಯಾಗಿ ತಲುಪದೆ ಮತ್ತು ಹಲವಾರು ಸಂದರ್ಭಗಳಲ್ಲಿ ಕಾರ್ಯಕ್ರಮಗಳು ನಡೆದ ಮೇಲೆ ಆಹ್ವಾನ ಪತ್ರಿಕೆಗಳು ಶಾಸಕರ ಕೈ ಸೇರುವುದರಿಂದ ಸ್ಥಳೀಯ ಶಾಸಕರುಗಳು ಈ ಒಂದು ವಿಚಾರದ ಬಗ್ಗೆ ಶಿಷ್ಟಾಚಾರದ ಉಲ್ಲಂಘನೆಯಾಗಿದೆಯೆಂದು ಸ್ಥಳೀಯ ಅಧಿಕಾರಿಗಳನ್ನು ಹಿಗ್ಗಾಮುಗ್ಗ ತರಾಟೆಗೆ ತೆಗೆದುಕೊಳ್ಳುತ್ತಿರುವುದರ ಬಗ್ಗೆಯೂ ಕೂಡ, ಸಮಿತಿಯ ಗಮನಕ್ಕೆ ತಂದು ಈ ಒಂದು ವಿಚಾರಕ್ಕೆ ಸಂಬಂಧಪಟ್ಟ ಹಾಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸುವಾಗ, ಅಧಿಕಾರಿಗಳಿಗೆ ಕನಿಷ್ಠ ಒಂದು ವಾರದ ಸಮಯಾವಕಾಶವನ್ನಾದರೂ ಕೊಡುವ ಹಾಗೆ ಸಮಿತಿಯು ಮಾರ್ಗದರ್ಶನ ನೀಡಬೇಕೆಂದು ಹಲವಾರು ಅಧಿಕಾರಿಗಳು ಸಮಿತಿಯಲ್ಲಿ ಮೌಖಿಕವಾಗಿ ಮನವಿ ಮಾಡಿಕೊಂಡಿದ್ದಾರೆ.

ಈ ಒಂದು ವಿಚಾರದ ಬಗ್ಗೆ ಸಮಿತಿ ಕೂಲಂಕಷವಾಗಿ ಚರ್ಚಿಸಿ, ಜಿಲ್ಲಾ ಮಂತ್ರಿಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಸರ್ಕಾರಿ ಕಾರ್ಯಕ್ರಮಗಳನ್ನು ತಮ್ಮ ಪ್ರವಾಸಕ್ಕೆ ಅನುಕೂಲವಾಗುವಂತೆ ಕೇಂದ್ರ ಸ್ಥಾನದಿಂದ ದೂರವಾಣಿ ಮುಖಾಂತರ ಅಧಿಕಾರಿಗಳಿಗೆ ಆದೇಶಿಸಿ ಹಲವಾರು ಸಂದರ್ಭಗಳಲ್ಲಿ ತಮ್ಮ ಜಿಲ್ಲೆಗೆ ತಲುಪಿದ ಮಾರನೆಯ ದಿವಸ ಇಂತಹ ಸರ್ಕಾರಿ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಆದೇಶಿಸುವುದರ ಪರಿಣಾಮ ಸ್ಥಳೀಯ ಶಾಸಕರುಗಳಿಗೆ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿಕ್ಕಾಗದಂತಹ ಪರಿಸ್ಥಿತಿ ಉದ್ಭವಿಸಿ, ಅಧಿಕಾರಿಗಳು ಇಕ್ಕಟ್ಟಿನಲ್ಲಿ ಸಿಲುಕುವ ಪರಿಸ್ಥಿತಿ ಬಗ್ಗೆ ಸಮಿತಿಯ ಗಮನ ಹರಿಸಿದೆ. ಜಿಲ್ಲೆಯ ಯಾವ ತಾಲ್ಲೂಕಿನ ಯಾವ ಗ್ರಾಮ ಪಂಚಾಯಿತಿಯ ಯಾವುದೇ ಸರಕಾರಿ ಕಾರ್ಯಕ್ರಮವನ್ನು ನಡೆಸುವುದಕ್ಕೆ ಮತ್ತು ಅಂತಹ ಜನಪರ ಕಾರ್ಯಕ್ರಮಗಳಲ್ಲಿ ಸ್ಥಳೀಯರು ಹೆಚ್ಚು ಜನಸಂಖ್ಯೆಯಲ್ಲಿ ಭಾಗವಹಿಸಲು ಮತ್ತು ಅಂತಹ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಅರ್ಥಪೂರ್ಣವಾಗಿ ನಡೆಸುವಂತಾಗಲು ಮತ್ತು ಅಂತಹ ಎಲ್ಲಾ ಕಾರ್ಯಕ್ರಮಗಳಲ್ಲಿ ಸ್ಥಳೀಯ ಶಾಸಕರುಗಳೆಲ್ಲರೂ ಭಾಗವಹಿಸುವಂತಾಗಲು ಮತ್ತು ಸ್ಥಳೀಯ ಅಧಿಕಾರಿಗಳಿಗೆ ಅಂತಹ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ನಡೆಸಲು ಸಮಯದ

ಅವಕಾಶ ಅಗತ್ಯವಾಗಿ ಬೇಕಾಗಿರುವುದರಿಂದ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಶಿಷ್ಟಾಚಾರದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಅಗತ್ಯವಾದ ಸಮಯದ ಅವಕಾಶ ಬೇಕಾಗಿರುವುದರಿಂದ, ಯಾವುದೇ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಸರ್ಕಾರಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸಮಾರಂಭ ನಡೆಯುವ ದಿವಸಕ್ಕಿಂತ ಮುನ್ನಾ 7 ದಿವಸಗಳ ಸಮಯಾವಕಾಶವನ್ನು ಕಡ್ಡಾಯವಾಗಿ ಕೊಡುವಂತೆ ಮತ್ತು ದಿಢೀರಾಗಿ 24 ಗಂಟೆಯೊಳಗೆ ಸರ್ಕಾರಿ ಸಮಾರಂಭಗಳನ್ನು ನಡೆಸುತ್ತಿರುವ ಈಗಿನ ಪರಿಪಾಠಗಳಿಗೆ ಸಂಪೂರ್ಣ ವಿರಾಮವನ್ನು ಹಾಕಬೇಕಾದ ಅವಶ್ಯಕತೆ ಇರುವುದರಿಂದ ಮತ್ತು ಇಂತಹ ದಿಢೀರ್ ಸರ್ಕಾರಿ ಸಮಾರಂಭಗಳನ್ನು ನಡೆಸುವುದರಿಂದ ಜನಪ್ರತಿನಿಧಿಗಳು ಮತ್ತು ಸ್ಥಳೀಯ ಶಾಸಕರುಗಳಿಗೆ ಸಮಾರಂಭಗಳಲ್ಲಿ ಭಾಗವಹಿಸಲು ಅವಕಾಶ ಸಿಗದೆ ಇದ್ದು, ಇಂತಹ ಪ್ರಕರಣಗಳು ಹಕ್ಕುಚ್ಯುತಿ ಪ್ರಕರಣಗಳಾಗಿ ಚರ್ಚೆಗೆ ಬರುವುದನ್ನು ತಪ್ಪಿಸುವುದಕ್ಕೋಸ್ಕರ ಸರ್ಕಾರ ಇಂತಹ ಸರ್ಕಾರಿ ಸಮಾರಂಭಗಳನ್ನು ನಡೆಸಲು ಕನಿಷ್ಠ 7 ದಿವಸಗಳ ಕಾಲಾವಧಿಯನ್ನು ನಿಗದಿ ಮಾಡಿ, ಸರ್ಕಾರ ಮಧ್ಯದಿಂದಲೇ ಮಾರ್ಗಸೂಚಿಯನ್ನು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೂಡಲೇ ಕಳುಹಿಸಬೇಕೆಂದು ಶಿಫಾರಸ್ಸು ಮಾಡುತ್ತದೆ."

ಸಮಿತಿಯ ಮೇಲಿನ ಶಿಫಾರಸ್ಸನ್ನು ಮಾನ್ಯ ಸಚಿವರುಗಳ ಅವಗಾಹನೆಗೆ ತರುವಂತೆ ಕೋರಲಾಗಿದೆ.

ಸಹಿ/-
(ಮೊಹಮದ್ ಅಲ್ಲಾಂ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಪ್ರತಿ:**

ಮಾನ್ಯ ಎಲ್ಲಾ ಸಚಿವರುಗಳ ಆಪ್ತ ಕಾರ್ಯದರ್ಶಿಗಳಿಗೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 62 ರಾರಾಆ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:05-09-2005

**ಸುತ್ತೋಲೆ**

ವಿಷಯ: Official Dealings between the Administration and Members of Parliament and State Legislatures-Observance of Proper Procedure-Invitation to Public functions.

ಉಲ್ಲೇಖ: 1. ಕೇಂದ್ರ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳ (ಸಿಬ್ಬಂದಿ ಮತ್ತು ತರಬೇತಿ) ಇಲಾಖೆಯ ನಿರ್ದೇಶಕರ ಕಚೇರಿ ಜ್ಞಾಪನ ಪತ್ರ ಸಂಖ್ಯೆ:11013/2/2000-ESTT(A) ದಿನಾಂಕ : 25.8.2000.

2. ಕೇಂದ್ರ ಸರ್ಕಾರದ ಸಿಬ್ಬಂದಿ, ಸಾರ್ವಜನಿಕ ಕುಂದುಕೊರತೆಗಳ (ಸಿಬ್ಬಂದಿ ಮತ್ತು ತರಬೇತಿ) ಇಲಾಖೆಯ ನಿರ್ದೇಶಕರ ಕಚೇರಿ ಜ್ಞಾಪನ ಪತ್ರ ಸಂಖ್ಯೆ: 11013/6/2005-ESTT(A) ದಿನಾಂಕ:27.6.2005.

* * * * *

ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರುಗಳನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಪೂರ್ವಭಾವಿಯಾಗಿ ತಲುಪಿಸುವ ಬಗ್ಗೆ ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಗಳನ್ನು ಏರ್ಪಡಿಸುವ ಬಗ್ಗೆ ಹಲವಾರು ಸುತ್ತೋಲೆ / ಅಧಿಕೃತ ಜ್ಞಾಪನ/ಆದೇಶಗಳಲ್ಲಿ ಈಗಾಗಲೇ ಸೂಚಿಸಲಾಗಿದೆ.

ಮೇಲ್ಕಂಡ ಉಲ್ಲೇಖಿತ (1) ಮತ್ತು (2)ರ ಕೇಂದ್ರ ಸರ್ಕಾರದ ಕಚೇರಿ ಜ್ಞಾಪನ ಪತ್ರದ ಪ್ರತಿಗಳನ್ನು ಇದರೊಂದಿಗೆ ಲಗತ್ತಿಸಿದೆ. ಕೇಂದ್ರ ಸಚಿವಾಲಯದ ಸಿಬ್ಬಂದಿ ಸಾರ್ವಜನಿಕ ಕುಂದುಕೊರತೆಗಳು ಮತ್ತು ವಿಶ್ರಾಂತಿ ವೇತನ ಇಲಾಖೆಯ (ಸಿಬ್ಬಂದಿ ಮತ್ತು ತರಬೇತಿ) ಕಚೇರಿ ಜ್ಞಾಪನದಂತೆ ಮಾನ್ಯ ಲೋಕಸಭಾ ಸದಸ್ಯರುಗಳಿಗೆ ಹಾಗೂ ವಿಧಾನ ಮಂಡಲದ ಸದಸ್ಯರುಗಳಿಗೆ ಸರ್ಕಾರಿ ಸಮಾರಂಭಗಳಲ್ಲಿ ಆಹ್ವಾನಿಸುವ ಶಿಷ್ಟಾಚಾರವನ್ನು ಪಾಲಿಸುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೂ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

(ಮೊಹಮದ್ ಅಲ್ಲಾಂ ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**No. 11013/6/2005-Estt.(A)**
**Government of India**
**Ministry of Personnel. P.G & Pensions**
**(Department of, Personnel & Training).**

New Delhi,
Dated the 27th June, 2005,

## OFFICE MEMORANDUM

Subject: Official dealings between the Administration and Members of Parliament and State Legislatures-Observance of proper procedure-Invitation to public functions.

The undersigned is directed to refer to this Department's O.M. No: 11013/2/2000-Estt. (A) dated 25th August, 2000(copy enclosed) on the subject mentioned above wherein Ministries/ Departments were requested to ensure that Members of Parliament/State Legislatures of the area are invariably invited to public functions organised by a Government office and that proper and comfortable seating arrangements at public functions should be made for the Members. These Instructions also provide that intimations/invitations regarding public meetings/functions should be sent through speedier modes or communication and devices to the MPs so that these are received by them well in time. The receipt of the intimation by the Member was required to be confirmed by the officer/official concerned.

2. The Secretary General, Lok Sabha has pointed out that despite these instructions, complaints have been received from the Members of Parliament that they are not invited to the functions held by Government agencies in the MPs Parliamentary constituencies. Hon'ble Speaker has desired the Ministry of Personnel, Public Grievances and Pensions to take up the matter with all the Ministries/Departments/Government functionaries. It needs to be reiterated that Members of Parliament/State Legislatures of the area should be invariably invited to public functions organized by Government Departments, their Subordinate Offices and Public Undertakings under those Departments and intimation regarding such public meetings/functions should be sent to the Members concerned well in advance. It may also be ensured that receipt of such intimation by the Members is confirmed by the officer/official concerned. Such functions should be held, as far as possible, when Parliament is not in session.

3. All Ministries/Departments are again requested to ensure that the instructions referred to above are scrupulously followed in letter and spirit by all concerned which should leave no room for complaints by the Members of Parliament in the future.

Sd/-
**(HARI KUMAR)**
Director (E-II)

**No. 11013/2/2000-Estt.(A)**
**Government of India**
**Ministry of Personnel. P.G & Pensions**
**(Department of, Personnel & Training).**

New Delhi,
Dated the 25th August, 2000,

## OFFICE MEMORANDUM

Subject: Official dealings between the Administration and Members of Parliament and State Legislatures-Observance of proper procedure.

The undersigned is directed to refer to this Department's O.M. of even No. dated 23rd May, 2000 on the subject mentioned above wherein a gist of the previous instructions on the subject matter has been reiterated. In Para 2(v) it has been specified that Members of Parliament/State Legislature of the area are to be invariably invited to public functions organised by a Government office and that proper and comfortable seating arrangements at public functions should be made for the Members who appear above the officers of the rank of Secretaries to the Government of India in the Warrant of Precedence. In the context of a notice of question of privilege given by an Hon. Member of Parliament that he was not sent the invitation to a public function in advance, the Hon. Speaker, Lok Sabha desired that the requisite instructions/guidelines be reiterated with suitable amendments. In order to ensure that the same are strictly adhered to in the right spirit, by the concerned executive functionaries.

2. Attention of the Ministries/Departments is invited in this connection to Ministry of Home Affair's OM No. 25/6/68-Ests. (A) dated 27.3.1968 wherein it has been emphasised that where any meeting convened by the Government is to be attended by members of Parliament, special care should be taken to see that notice is given to them in good time regarding the date, time, venue etc., of the meeting, and it should be ensured that there is no slip in any matter of detail, however, minor it may be. Ministries/Departments are, therefore, requested to ensure that-

   (i) intimations regarding public meetings/functions be sent through speedier communication devices to the Hon'ble Members, so that they are received by them well in time.

   (ii) It may also be ensured that receipt of intimation by the Member is confirmed by the officer/ official concerned.

3. It is requested that the above instructions may be brought to the notice of all concerned for strict compliance.

Sd/-
**(SMT. S BANDOPADHYAY)**
Director

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 02 ರಾರಾಆ 2004

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:11.02.2004

## ಸುತ್ತೋಲೆ

ವಿಷಯ: ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ:25.08.1977ರ ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 17 ಪಿಎಲ್ಎಕ್ಸ್ 77.
2. ದಿನಾಂಕ:08.02.1985ರ ಆದೇಶ ಸಂಖ್ಯೆ:ಡಿಪಿಎಆರ್ 119 ಪಿಎಲ್ಎಕ್ಸ್ 84.
3. ದಿನಾಂಕ:08.01.1992ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 18 ರಾರಾಆ 91.
4. ದಿನಾಂಕ:15.01.1996ರ ಸುತ್ತೋಲೆ ಸಂಖ್ಯೆ: ಸಿಆಸುಇ 2 ರಾರಾಆ 93.
5. ದಿನಾಂಕ:12.07.2001ರ ಆದೇಶ ಸಂಖ್ಯೆ: ಸಿಆಸುಇ 09 ರಾರಾಆ 2001.

* * * * *

ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರುಗಳನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ತಲುಪಿಸುವ ಬಗ್ಗೆ ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಯನ್ನು ಏರ್ಪಡಿಸುವ ಬಗ್ಗೆ ಉಲ್ಲೇಖಿತ ಸುತ್ತೋಲೆ / ಅಧಿಕೃತ ಜ್ಞಾಪನ/ಆದೇಶಗಳಲ್ಲಿ ಈಗಾಗಲೇ ಸೂಚಿಸಲಾಗಿದೆ.

ಸರ್ಕಾರದ ಎಲ್ಲಾ ಸಮಾರಂಭಗಳಲ್ಲಿ ಸಂಬಂಧಪಟ್ಟಂತಹ ಜಿಲ್ಲಾ ಅಧಿಕಾರಿಗಳು ಒಂದೇ ಆಮಂತ್ರಣ ಪತ್ರಿಕೆಯಲ್ಲಿ ವಿಧಾನಸಭೆ ಸದಸ್ಯರಿಗೆ "ಶಾಸಕ" ರಂತಲೂ ವಿಧಾನ ಪರಿಷತ್ ಸದಸ್ಯರನ್ನು "ವಿಧಾನ ಪರಿಷತ್ ಸದಸ್ಯ" ರೆಂದೂ ಮುದ್ರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇನ್ನು ಮುಂದೆ ಆಮಂತ್ರಣ ಪತ್ರಿಕೆಗಳಲ್ಲಿ ವಿಧಾನ ಪರಿಷತ್ತು ಮತ್ತು ವಿಧಾನ ಸಭೆಯ ಸದಸ್ಯರ ಹೆಸರುಗಳನ್ನು ನಮೂದು ಮಾಡುವ ಸಂದರ್ಭಗಳಲ್ಲಿ "ಶಾಸಕರು (ವಿಧಾನ ಪರಿಷತ್ತು)" ಮತ್ತು "ಶಾಸಕರು (ವಿಧಾನಸಭೆ)" ಎಂದು ನಮೂದನೆ ಮಾಡುವಂತೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

**ಆರ್. ನಾರಯಣ ಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 91 ರಾರಾಆ 2005

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:05.11.2005

**ಸುತ್ತೋಲೆ**

ವಿಷಯ: ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಉತ್ತರಿಸಲು ಇಲಾಖಾ ವರಿಷ್ಠರು ಶಿಷ್ಟಾಚಾರ ಪಾಲಿಸಿ ಕ್ರಮ ಕೈಗೊಳ್ಳುವುದರ ಕುರಿತು.

ಉಲ್ಲೇಖ: ಕೇಂದ್ರ ಸಿಬ್ಬಂದಿ, ಸಾರ್ವಜನಿಕ ಕುಂದು ಕೊರತೆಗಳು ಹಾಗೂ ನಿವೃತ್ತಿ ಮತ್ತು ಸಂಸದೀಯ ವ್ಯವಹಾರಗಳ ಖಾತೆ ರಾಜ್ಯ ಸಚಿವರ ಪತ್ರ ದಿನಾಂಕ:20.09.2005

*****

ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ ಉತ್ತರಿಸುವಲ್ಲಿ ಸರ್ಕಾರದ ಇಲಾಖೆಗಳಿಂದ ತಡವಾಗುತ್ತಿರುವ ವಿಚಾರವು ಗಮನಕ್ಕೆ ಬಂದಿರುವುದಾಗಿ ಕೇಂದ್ರ ಸರ್ಕಾರವು ದಿನಾಂಕ:20.09.2005ರಂದು ಮಾನ್ಯ ಮುಖ್ಯಮಂತ್ರಿಯವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿರುತ್ತದೆ.

ಮಾನ್ಯ ಲೋಕಸಭಾ ಸದಸ್ಯರುಗಳ ಪತ್ರಗಳಿಗೆ 15 ದಿನಗಳಲ್ಲಿ ಸ್ವೀಕೃತಿ ಪತ್ರವನ್ನು ಹಾಗೂ ಮುಂದಿನ 15 ದಿನಗಳಲ್ಲಿ ಕೈಗೊಂಡ ಕ್ರಮವನ್ನು ತಿಳಿಸಬೇಕಾದುದು ಇಲಾಖೆಗಳ ಜವಾಬ್ದಾರಿಯಾಗಿರುತ್ತದೆಂದು ಮೇಲ್ಕಂಡ ಉಲ್ಲೇಖಿತ ಪತ್ರದಲ್ಲಿ ತಿಳಿಸಿದ್ದು ಅದರ ಪ್ರತಿ ಇದರೊಂದಿಗೆ ಲಗತ್ತಿಸಿದೆ.

ಆದ್ದರಿಂದ, ಇನ್ನು ಮುಂದೆ ಲೋಕಸಭಾ ಸದಸ್ಯರುಗಳಿಂದ ಬರುವ ಎಲ್ಲಾ ಪತ್ರಗಳಿಗೂ ನಿಗದಿತ ಅವಧಿಯಲ್ಲಿ ಉತ್ತರಿಸಿ ಶಿಷ್ಟಾಚಾರ ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈ ಮೂಲಕ ಸೂಚಿಸಿದೆ.

ಸಹಿ/-
ಸರ್ಕಾರದ ಮುಖ್ಯ ಕಾರ್ಯದರ್ಶಿ

**MINISTER OF STATE FOR PERSONNEL
PUBLIC GRIEVANCES & PENSIONS
AND PARLIAMENTARY AFFAIRS
GOVERNMENT OF INDIA**

20.09.2005

Dear Shri Dharam Singhji.

We have been receiving references from the Members of Parliament regarding delay in responding to their letters. This issue has been repeatedly raised within and outside the Parliament.

Guidelines laid down in the Central Secretariat Manual of Office Procedure for handling the communications received from the Members of Parliament specify that such communications should be attended to promptly and acknowledged within 15 days, followed by a reply within the next 15 days. In cases where delay is anticipated, an interim reply should be given indicating the possible date for a final reply. This is to ensure that prompt attention is given to the communications received from the Members of Parliament.

As the complaint of delayed responses to the letters of Members of the Parliament are regularly being received. I would be grateful if you could issue suitable instructions to ensure prompt reply to the letters of the Members of Parliament. In this regard, you may also like to consider setting up of mechanism to constantly monitor progress in disposal of references received from the Members of the Parliament.

With regards,

Yours Sincerely,

Sd/-
(SURESH PACHOURI)

**No. 2/9/2001 - Public**
**Government of India / Bharat Sarkar**
**Ministry of Home Affairs / Grih Mantralaya**

New Delhi,
Dated the 9th January, 2002

To,

All State Governments

All Governments/Administrations of Union Territories

**Subject:** Celebrations on the Republic Day, 26th January, 2002.

Sir,

I am directed to enclose a copy of this Ministry's Office Memorandum No. 2/9/2001-Public dated: 9.1.2002 on the subject noted above for information of the State Governments/Administrations of Union Territories. The Government of India hope that the State Governments etc., will issue appropriate instructions to ensure that the Republic Day (26th January 2002) is suitably celebrated throughout the country keeping in view the need for effecting economy in the expenditure. The Ministry of Defence have issued standing instructions to the local Defence authorities to extend all facilities and Co-operation to the Civil Authorities.

Yours faithfully,

**G.B. Singh**
Under Secretary to the Govt. of India
Tel: 3012421

No. 2/9/2001-Public Dated, the 9th January, 2002

Copy with 30 spare copies, forwarded to the Ministry of Defence (D-Ceremonials), South Block, New Delhi.

**G.B. Singh**
Under Secretary to the Govt. of India
Tel: 3012421

No. 2/9/2001-Public Dated, the 9th January, 2002

Copy, for information and necessary action, to the Secretary to the Governor / Lt. Governor of all States/UT Administrations.

**G.B. Singh**
Under Secretary to the Govt. of India
Tel: 3012421

**No. 2/9/2001 - Public**
**Government of India / Bharat Sarkar**
**Ministry of Home Affairs / Grih Mantralaya**

New Delhi,
Dated the 9th January, 2002

**OFFICE MEMORANDUM**

**Subject:** Republic Day Ceremony, 2002.

The undersigned is directed to say that the following will be the pattern of Celebrations in Delhi on the forthcoming Republic Day i.e. 26th January, 2002.-

1. On the morning of 26th January 2002, the Prime Minister will lay a wreath at the Amar Jawan Jyoti at India Gate as in the past. An Inter-Services Guard will give national salute and, thereafter, two minutes silence will be observed. War widows and the children of war casualties will be seated in a special enclosure near India Gate.
2. The President will drive in State to Rajpath and take the salute at a ceremonial march past which will consist of units drawn from Para Military forces and other Auxiliary Civil Forces, National Cadet Corps, National Service Scheme and also a contingent of Ex-servicemen. As in the past, BSF Camel contingent will be included in the Parade.
3. 4 Helicopters would precede the Parade Commander, two of which would shower rose petals over the spectators at Rajpath, the third will fly the National Flag and fourth an Inter-Service Ensign.
4. 28 tableaux from various States and Central Government Departments on developmental, cultural and historical themes will be participating in this year's Republic Day Parade. Some of the tableaux on cultural themes will have integrated folk dances.
5. As usual, National Bravery Award winning children (21 (4 posthumous) this year) seated on elephants will also form part of the cultural pageant. As regards children's items, apart from 7 items of children from Delhi schools, one group of children from each of the 2 Zonal Cultural Centers viz., West Zone Cultural Centre and East Zone Cultural Centre will also form the part of the children's component of the Parade. Each group of children will give a performance of about 2.5 minutes in front of the Presidential dais.
6. After the National Anthem and before the departure of the President, balloons of three colours of the National Flag would be released from three booths at different locations at Rajpath set up for the purpose. Some balloons will be released on 23rd January, 2002 also. A brief flypast

subject to weather conditions at the end will provide grand final to the Republic Day Parade.

7. On behalf of the Government of India, 52 Tribal guests from various parts of the country have been invited to witness the Republic Day Celebrations, 2002 in Delhi. These representatives and Tableaux Artists will call on the President, the Vice President, the Prime Minister and the Minister for Tribal Affairs and will be taken on sightseeing tours in and around Delhi.

8. A reception on a restricted scale will be held at RashtraPati Bhavan on 26th January, 2002 to which prominent members of the Public, the Diplomatic Corps and the Senior Government Officials will be invited.

9. Running trophy will be awarded for the best marching contingent from amongst the marching contingents of the Para Military Forces / Police.

10. The tableaux and the school children's items will continue to be adjudged on merit for first, second and third prizes.

11. The school children participating in the Republic Day Parade will be presented with souvenirs and certificates in token of their participation.

12. A Full Dress Rehearsal of the Republic Day Parade will be held on 23rd January, 2002. Entry to the seating enclosures on either side of the Rajpath on this occasion will be regulated by admit cards to be issued by the Ministry of Defence.

13. As in the past, admission to the seating enclosures for the Republic Day Parade, 2002 will be regulated partly by priced tickets and partly by invitations / admit cards. Invitation cards will be issued to such category as State Guests, persons included in the Warrant of Precedence (including Members of Parliament), members of Press corps, Defence and Police Personnel, Public Servants of entitled categories and their spouses. Entry of all others to the seating enclosures for the Republic Day Parade will be regulated on the basis of priced tickets of the denominations of Rs. 10/-, Rs. 50/-, Rs. 100/- and Rs. 200/-(seats in Rs. 100/- and Rs. 200/- denominations will be earmarked).

    Invitation and admit card holders will be allowed to bring their children below 10 years of age. The children will be seated on the durries in front of the seating enclosures The existing facility given to the general public to witness the Parade, except in the area on Rajpath between Rafi Marg and Man Singh Road, where admission is regulated by priced tickets and invitations/admit cards, will be continued.

    The duration of the Republic Day Parade, 2002 will be about 100 minutes.

14. A Hindi Kavi Sammelan, Urdu Mushaira and Punjabi Kavi Darbar will be organised by the Government of National Capital Territory of Delhi as in the past.

15. Beating Retreat will be organised at Vijay Chowk on the following dates:

27th January, 2002 (Full Dress Rehearsal)

28th January, 2002 (Special Show)

29th January, 2002 (Actual Ceremony)

There will be illumination of the buildings visible from Vijay Chowk, viz., Rashtrapati Bhavan, North and South Blocks and Parliament House and buildings on both sides of Rajpath. These buildings will be illuminated on 29th January, 2002 from 6.00p.m. to 10p.m.

The Ministry of External Affairs are requested to issue suitable instructions to the Indian Missions / Posts etc., abroad.

G.B. Singh
Under Secretary to the Govt. of India
Tel: 3012421

To,

All Ministers / Departments of the Government of India.

No. 2/9/2001-Public — New Delhi, 9th January, 2002

Copy forwarded for information to:-

1. The President's Secretariat
2. The Vice President Secretariat
3. The Prime Minister's Office
4. Cabinet Secretariat
5. Lok Sabha Secretariat
6. Rajya Sabha Secretariat
7. The Registrar, Supreme Court of India
8. Comptroller and Auditor General of India
9. Central Vigilance Commission
10. Union Public Service Commission
11. All Attached and Subordinate Offices and Commissions etc., of the Ministry of Home Affairs / Department of Personnel & Training
12. Deputy Principal Information Officer, MHA
13. Secretariat for Commemoration of 50th Anniversary of India's Independence, Vignan Bhavan Annexe, New Delhi
14. All Officers / Sections / Desks of the Ministry of Home Affairs and DoPT.

G.B. Singh
Under Secretary to the Govt. of India
Tel: 3012421

**No. 2/7/95 - Public**
**Government of India / Bharat Sarkar**
**Ministry of Home Affairs / Grih Mantralaya**

North Block, New Delhi,
Dated the 28th February, 2002

To,

Shri S.V. Satyanarayana Murthy
Under Secretary to the Govt. of Karnataka
D.P.A.R. (Political)
Vidhana Soudha, Bangalore, Karnataka

**Subject:** Independence Day and Republic Day Celebrations-reg.

Sir,

I am directed to refer to your letter No. DPAR 24 HCR 96, dated 24.2.2002 on the subject mentioned above and to enclose a copy of the instructions issued by this Ministry for Independence Day celebration. These instructions provide that the flag should be unfurled on this occasion by a Minister / Commissioner / District Magistrate at District level, by a Minister / Sub Divisional Magistrate at Sub Divisional level / Block level and by the Sarpanch/ village Head-man at Panchayat Head Quarter level. It is further clarified that the senior most of the officials / dignitaries specified above and present at the ceremony should unfurl the flag..

Yours faithfully,
**G.B. Singh**
Under Secretary to the Govt. of India
Tel: 3012421

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 50 ರಾರಾಆ 2001

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:20-09-2001

**ಸುತ್ತೋಲೆ**

ವಿಷಯ: ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ:
1. ದಿನಾಂಕ:19.5.75ರ ಅನಧಿಕೃತ ಜ್ಞಾಪನ ಸಂಖ್ಯೆ:ಜಿಎಡಿ 4 ಪಿಎಲ್‌ಎಕ್ಸ್ 75.
2. ದಿನಾಂಕ:20.3.98ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 98.
3. ದಿನಾಂಕ:1.3.2000ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 2000

ದಿನಾಂಕ:19.5.75ರ ಅಧಿಕೃತ ಜ್ಞಾಪನದಲ್ಲಿ, ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದಲ್ಲದೆ, ಅಂತಹ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಅವುಗಳಿಗೆ ಉತ್ತರಿಸತಕ್ಕದೆಂದು ಸೂಚನೆಯನ್ನು ನೀಡಲಾಗಿದೆ. ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು, ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕೋರಿದಾಗ, ಅಧಿಕಾರಿಗಳು ಅಂತಹ ವಿವರಗಳನ್ನು ಅವರಿಗೆ ಒದಗಿಸಬೇಕಲ್ಲದೆ ಸಂದೇಹಾಸ್ಪದ ಸಂದರ್ಭಗಳಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಕೂಡ ಪಡೆಯಬೇಕೆಂದು ಕೂಡ ಸೂಚಿಸಲಾಗಿದೆ.

2. ದಿನಾಂಕ:20.3.98ರ ಸುತ್ತೋಲೆಯಲ್ಲಿ ಸಂಸತ್ ಸದಸ್ಯರಿಂದ ಹಾಗೂ ಶಾಸಕರುಗಳಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದ್ದಲ್ಲದೆ ಎಲ್ಲಾ ಪತ್ರಗಳಿಗೂ ತಕ್ಷಣ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ. ಉತ್ತರ ನೀಡಲು ತಡವಾದಲ್ಲಿ ಮಧ್ಯಂತರ ಉತ್ತರವನ್ನು ಕಳುಹಿಸಿ, ಅಂತಿಮ ಉತ್ತರವನ್ನು ಎಷ್ಟು ದಿನಗಳೊಳಗಾಗಿ ನೀಡಲಾಗುವುದೆಂದು ಮಧ್ಯಂತರ ಉತ್ತರದಲ್ಲಿ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

3. ದಿನಾಂಕ:1.3.2000ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 2000ರಲ್ಲಿ ಈ ಸೂಚನೆಗಳನ್ನು ಪುನರುಚ್ಛರಿಸಿ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು, ತಮ್ಮ ಅಧೀನಕ್ಕೆ ಒಳಪಡಿಸುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಸಂಸತ್ ಸದಸ್ಯರು ಮತ್ತು ಶಾಸಕರುಗಳು ಪತ್ರ ಬರೆದಾಗ, ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

4. ಸಂಸತ್ ಹಾಗೂ ವಿಧಾನ ಮಂಡಲದ ಸದಸ್ಯರಿಂದ ಬರುವ ಪತ್ರಗಳಿಗೆ ಸಂಬಂಧಿಸಿದಂತೆ ಈಗಾಗಲೇ ನೀಡಿರುವ ಸೂಚನೆಗಳನ್ನು ಪುನರ್ ಉಚ್ಛರಿಸುತ್ತಾ, ಮಾನ್ಯ ಸಂಸತ್ ಸದಸ್ಯರುಗಳು ಹಾಗೂ ವಿಧಾನ ಮಂಡಲದ ಸದಸ್ಯರುಗಳು ಬರೆದ ಪತ್ರಗಳಿಗೆ ಸಂಬಂಧಪಟ್ಟಂತೆ ಅವುಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮದ ವಿವರವನ್ನು ಸಂಬಂಧಿಸಿದ ಇಲಾಖೆಯ ಪ್ರಧಾನ ಕಾರ್ಯದರ್ಶಿ: ಕಾರ್ಯದರ್ಶಿಗಳು ಅಥವಾ ಇಲಾಖಾ ಮುಖ್ಯಸ್ಥರುಗಳು (ಆಯುಕ್ತರು: ನಿರ್ದೇಶಕರು, ವ್ಯವಸ್ಥಾಪಕ ನಿರ್ದೇಶಕರು) ಸ್ವತಃ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ ಹಾಗೂ ಸಂಸತ್ ಸದಸ್ಯರುಗಳು ಮತ್ತು ವಿಧಾನ ಮಂಡಲದ ಸದಸ್ಯರುಗಳಿಂದ ಬಂದ ಪತ್ರಗಳ ಸ್ವೀಕೃತಿ: ಕೈಗೊಂಡ ಕ್ರಮದ ವಿವರಗಳನ್ನು ಪ್ರತ್ಯೇಕ ರಿಜಿಸ್ಟರ್‌ನಲ್ಲಿ ದಾಖಲಿಸಿ ನಿರ್ವಹಿಸಬೇಕೆಂದೂ ಸಹ ಸೂಚಿಸಲಾಗಿದೆ.

**ಎಸ್.ವಿ. ಸತ್ಯನಾರಾಯಣ ಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 24 ರಾರಾಆ 2001

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:02-03-2002

## ತಿದ್ದೋಲೆ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 9 ರಾರಾಆ 2001, ದಿನಾಂಕ: 12.7.2001ರ ಆದೇಶ ಭಾಗದ 2ನೇ ಕಂಡಿಕೆಯ 3ನೇ ಸಾಲಿನಲ್ಲಿ ನಮೂದಿಸಿರುವ "ಚುನಾವಣಾ ಕ್ಷೇತ್ರವ ನಿರ್ದಿಷ್ಟವಾಗಿರದ ಕಾರಣ" ಎಂಬ ಪದಗಳಿಗೆ ಬದಲಾಗಿ "ಚುನಾವಣಾ ಕ್ಷೇತ್ರವು ಯಾವುದೇ ತಾಲ್ಲೂಕಿಗೆ ನಿರ್ದಿಷ್ಟವಾಗಿರದ ಕಾರಣ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಎಸ್.ವಿ. ಸತ್ಯನಾರಾಯಣ ಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 10 ರಾರಾಆ 2002

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:25-02-2002

**ಸುತ್ತೋಲೆ**

ವಿಷಯ: ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ:25.8.1997ರ ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 17 ಪಿಎಲ್ಎಕ್ಸ್ 77
2. ದಿನಾಂಕ: 8.2.1985ರ ಆದೇಶ ಸಂಖ್ಯೆ: ಡಿಪಿಎಆರ್ 119 ಪಿಎಲ್ಎಕ್ಸ್ 84.
3. ದಿನಾಂಕ: 8.1.1992ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 18 ರಾರಾಆ 91.
4. ದಿನಾಂಕ: 15.1.93ರ ಸುತ್ತೋಲೆ ಸಂಖ್ಯೆ: ಸಿಆಸುಇ 2 ರಾರಾಜಿ 93.
5. ದಿನಾಂಕ:17.4.2000ರ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 29 ರಾರಾಆ 2000.
6. ದಿನಾಂಕ:12.7.2001ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 09 ರಾರಾಆ 2001.

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರ, ವಿಧಾನ ಪರಿಷತ್ತಿನ ಸದಸ್ಯರ ಮತ್ತು ವಿಧಾನ ಸಭೆಯ ಸದಸ್ಯಯ ಸ್ಥಾನವು ಮಹತ್ವಪೂರ್ಣವಾಗಿದ್ದು ಅವರು ಸಾರ್ವಜನಿಕ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ.

ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಯನ್ನು ಸೂಕ್ತ ರೀತಿಯಲ್ಲಿ ಮಾಡುವಂತೆ ಉಲ್ಲೇಖಿತ ಸುತ್ತೋಲೆ : ಅಧಿಕೃತ ಜ್ಞಾಪನ ಮತ್ತು ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿದೆ.

ಇತ್ತೀಚೆಗೆ, ವಿಧಾನ ಪರಿಷತ್ತಿನ ಸದಸ್ಯರುಗಳು, ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ ತಮ್ಮನ್ನು ಆಹ್ವಾನಿಸುತ್ತಿಲ್ಲವೆಂದು ಹಾಗೂ ತಮ್ಮ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸದೇ ಅಧಿಕಾರಿಗಳು ಅಗೌರವದಿಂದ ನಡೆಸಿಕೊಳ್ಳುತ್ತಿರುವ ವಿಷಯವನ್ನು ಸದನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಇದನ್ನು ಸರ್ಕಾರವು ತೀವ್ರವಾಗಿ ಪರಿಗಣಿಸಿದೆ.

ಆದ್ದರಿಂದ, ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಮಾರಂಭಗಳಿಗೆ ಸ್ಥಳೀಯ ಸಂಸತ್ ಸದಸ್ಯರು, ಪರಿಷತ್ತಿನ ಸದಸ್ಯರು ಮತ್ತು ವಿಧಾನ ಸಭೆಯ ಸದಸ್ಯರನ್ನು ತಪ್ಪದೇ ಆಹ್ವಾನಿಸುವುದಲ್ಲದೇ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

**ತೆರೆಸಾ ಭಟ್ಟಾಚಾರ್ಯ**
ಸರ್ಕಾರದ ಮುಖ್ಯ ಕಾರ್ಯದರ್ಶಿ

**No. 02/07/2001 - Public**
**Government of India / Bharat Sarkar**
**Ministry of Home Affairs / Grih Mantralaya**

New Delhi, Dated the 12th July, 2001

To,

The Chief Secretaries
All State Governments, Union territory Administrations

**Subject:** Independence Day Celebrations on 15th August.

Sir,

The Independence Day Celebrations in Delhi, as usual, shall consist of the following:

(a) The Ceremony at Red Fort consisting of the presentation of a Guard of Honour by the Armed Forces and the Delhi Police to the Prime Minister (Pradhan Mantri), unfurling of the National Flag accompanied by playing of the National Anthem and firing of 21 gun salute, speech by the Prime Minister, singing of the National Anthem by school children / NCC Cadets immediately after PM's speech and release of coloured balloons at the end.
(b) A reception at Rashtrapati Bhavan.

2. The functions in the State / Union territory Administrations may consist of the following:

**Ceremonial Hoisting of Flag:**
**State Level:**
A ceremony in the morning (after 9.00 A.M.) in the State / Union territory Capitals consisting of unfurling of the National Flag by the Chief Minister, playing of the National Anthem, presentation of Guard of Honour by the Police including Para-Military Forces, Home Guards, NCC, Scouts etc., speech by the Chief Minister and singing of the National Anthem.
**District Level:**
A similar ceremony in the morning (after 9.00 A.M.) at the District level which inter-alia, consist of unfurling of the National Flag by Minister / Commissioner/District Magistrate ; playing of the National Anthem, by State Police Personnel, Home Guards / NCC / Scouts, speech by Minister / Commissioner / District Magistrate explaining the significance of 15th August and exhorting the audience to work for the unity and integrity of the country and singing of the National Anthem.
**Sub-Divisional Level / Block Level:**
Ceremonial hoisting of the National Flag by a Minister/Sub-Divisional Magistrate accompanied by singing of the National Anthem, speech by the VIP, unfurling of the Flag, singing of the National Anthem, etc.
**Panchayat Headquarters / Bigger Villages:**
Ceremonial hoisting of National Flag by the Sarpanch / Village Head-man accompanied by singing of the National Anthem, speech by the Sarpanch /Village Head-man (explaining the significance of 15th August and exhorting the audience to work for the unity and integrity of the country), singing of the National Anthem, etc.

Other functions of the day may include items like sports (including rural sports). P.T. display or display of other skills by college/ school students, planting of trees, inter-school/inter-college debates, community work, launching of any important scheme of rural development, talks by selected boys / girls on the significance of 15th August, cultural programme, distribution of prizes / certificates / medals for work in fields like national integration, small savings, afforestation, family planning or any other aspect of rural development or any other item which the State Government / Union territory Administration may consider for inclusion in the day's programme befitting the occasion.

3. As regards holding of reception at Raj Bhavan / Raj Niwas by the Governor / Lt., Governor on the Independence Day, the matter is left to the discretion of Governors / Lt. Governors.

Yours faithfully,

**Yashwant Raj**
Joint Secretary to the Govt. of India

No. 2/7/2001-Public Dated, the 12th July, 2001

Copy for information to Secretaries of Governors / Lt. Governors of all States / Union territories.

**Yashwant Raj**
Joint Secretary to the Govt. of India

No. 2/7/2001-Public Dated, the 12th July, 2001

Copy for information to the Ministry of Defence (D-Ceremonials).

**Yashwant Raj**
Joint Secretary to the Govt. of India
Tel: 3015785

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ.

ಓದಲಾಗಿದೆ:

1. ದಿನಾಂಕ: 25-8-1977ರ ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 17 ಪಿಎಲ್‌ಎಕ್ಸ್ 77
2. ದಿನಾಂಕ:8-2-1985ರ ಆದೇಶ ಸಂಖ್ಯೆ:ಡಿಪಿಎಆರ್ 119 ಪಿಎಲ್‌ಎಕ್ಸ್ 84.
3. ದಿನಾಂಕ:8-1-1992ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 18 ರಾರಾಆ 91
4. ದಿನಾಂಕ:15-1-1993ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 93.

**ಪ್ರಸ್ತಾವನೆ:**

ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ, ಸಂಸತ್ ಸದಸ್ಯರು ಹಾಗೂ ಶಾಸಕರನ್ನು ಕಡ್ಡಾಯವಾಗಿ ಆಹ್ವಾನಿಸಲು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಹಾಗೂ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದಲ್ಲದೆ, ಆಸನದ ವ್ಯವಸ್ಥೆಯನ್ನು ಮಾಡುವಂತೆ ಉಲ್ಲೇಖಿತ ಸುತ್ತೋಲೆ: ಅಧಿಕೃತ ಜ್ಞಾಪನ ಮತ್ತು ಸರ್ಕಾರದ ಆದೇಶದಲ್ಲಿ ಸೂಚಿಸಲಾಗಿದೆ.

ವಿಧಾನ ಮಂಡಲದ ಸದಸ್ಯರುಗಳನ್ನು ಸರ್ಕಾರದ ಅಧಿಕೃತ ಸಮಾರಂಭಗಳಿಗೆ ಸಂಬಂಧಪಟ್ಟಂತೆ ಆಹ್ವಾನಿಸದಿರುವ ಹಾಗೂ ಅವರುಗಳ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸವಿರುವ ಬಗ್ಗೆ ಲೋಪದೋಷಗಳು ಅನೇಕ ಬಾರಿ ಸಂಭವಿಸಿದ್ದು ಇದರಿಂದ ಚುನಾಯಿತ ಪ್ರತಿನಿಧಿಗಳಿಗೆ ಅಗೌರವವನ್ನು ತೋರಿಸಿದಂತಾಗುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ, ಈಗಾಗಲೇ ಈ ಹಿಂದೆ ಈ ವಿಷಯದಲ್ಲಿ ಸೂಚನೆಗಳನ್ನು ನೀಡಿ ಹೊರಡಿಸಿರುವ ಮೇಲೆ ಓದಲಾದ ಅಧಿಕೃತ ಜ್ಞಾಪನ: ಆದೇಶ: ಸುತ್ತೋಲೆಗಳನ್ನು ಉಲ್ಲೇಖಿಸಿ, ಹೊಸ ಸೂಚನೆಗಳನ್ನೊಳಗೊಂಡ ಮಾರ್ಗ ಸೂಚನೆಗಳನ್ನು ಹೊರಡಿಸಲು ಸರ್ಕಾರವು ನಿರ್ಧರಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 09 ರಾರಾಆ 2001,**

**ಬೆಂಗಳೂರು, ದಿನಾಂಕ:12ನೇ ಜುಲೈ 2001.**

ಅದಕ್ಕನುಸಾರವಾಗಿ ಈ ಮುಂದಿನ ಮಾರ್ಗಸೂಚಿಗಳನ್ನು ಹೊರಡಿಸಿದೆ.

(ಅ) ಸರ್ಕಾರದ ಸಮಾರಂಭಗಳನ್ನು ಏರ್ಪಡಿಸುವ ಜವಾಬ್ದಾರಿ ಇರುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿ: ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು, ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸಿರುವುದನ್ನು ಖಚಿತಪಡಿಸಿಕೊಳ್ಳುವದಲ್ಲದೆ ದಿನಾಂಕ: 19-5-1975ರ ಅಧಿಕೃತ ಜ್ಞಾಪನದ ಕಂಡಿಕೆ 5ರಲ್ಲಿರುವ ಸೂಚನೆಗಳಂತೆ ಆಸನದ ವ್ಯವಸ್ಥೆಯನ್ನು ಮಾಡಬೇಕು.

(ಆ) ಸರ್ಕಾರದ ಇಲಾಖೆಗಳು ಏರ್ಪಡಿಸುವಂತಹ ಸಮಾರಂಭಗಳಲ್ಲಿ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು, ವಿಧಾನ ಪರಿಷತ್ತಿನ ಸದಸ್ಯರು ಮತ್ತು ವಿಧಾನಸಭಾ ಸದಸ್ಯರನ್ನು ತಪ್ಪದೆ ಆಹ್ವಾನಿಸಬೇಕು. ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಮತ್ತು ಇತರ ಸನ್ನಿವೇಶಗಳನ್ನು ಆಧರಿಸಿ ಸಚಿವರು: ರಾಜ್ಯ ಸಚಿವರು: ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ, ಅಧ್ಯಕ್ಷರು: ಮುಖ್ಯ ಅತಿಥಿ: ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು ಮತ್ತು ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಬೇಕು.

(ಇ) ಸರ್ಕಾರದ ಸಮಾರಂಭಗಳನ್ನು ಏರ್ಪಡಿಸುವ ಎಲ್ಲಾ ಇಲಾಖಾ ಮುಖ್ಯಸ್ಥರು ಮತ್ತು ಜಿಲ್ಲಾಧಿಕಾರಿಗಳು, ಸಂಸತ್ತಿನ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೆ

ಅಹ್ವಾನ ಪತ್ರಿಕೆಗಳನ್ನು ಕಳುಹಿಸುವ ವ್ಯವಸ್ಥೆ ಮಾಡತಕದ್ದಲ್ಲದೆ, ಇಲಾಖೆಯ ಹಿರಿಯ ಅಧಿಕಾರಿಗಳ ಮುಖಾಂತರ ಅವರುಗಳಿಗೆ ಆಹ್ವಾನ ಪತ್ರಿಕೆಗಳನ್ನು ಖುದ್ದಾಗಿ ತಲುಪಿಸಲು ಏರ್ಪಾಡು ಮಾಡಬೇಕು. ಆಹ್ವಾನ ಪತ್ರಿಕೆಗಳನ್ನು ಮುದ್ರಿಸದಿದ್ದ ಪಕ್ಷದಲ್ಲಿ ಕನಿಷ್ಟ ಪಕ್ಷ ಪತ್ರದ ಮುಖೇನ ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ ಸದಸ್ಯರನ್ನು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಸಮಾರಂಭಕ್ಕೆ ಆಹ್ವಾನಿಸಬೇಕು.

(ಈ) ವಿಧಾನ ಪರಿಷತ್ತಿನ ಹಾಗೂ ವಿಧಾನಸಭಾ ಸದಸ್ಯರ ನಡುವೆ ತಾರತಮ್ಯ ಮಾಡಲಾಗುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದ ಪ್ರಯುಕ್ತ ಈ ಎರಡು ಸದನಗಳ ಸದ್ಯಸರ ನಡುವೆ ಯಾವುದೇ ರೀತಿಯ ತಾರತಮ್ಯ ಮಾಡಬಾರದೆಂದು ಸೂಚಿಸಿದೆ. ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಲು ಬಂದಾಗ ಅವರನ್ನು ಗೌರವ ಪೂರ್ವಕವಾಗಿ ಕಾಣಬೇಕು ಹಾಗೂ ಅವರುಗಳೊಡನೆ ಅಧಿಕಾರಿಗಳು ಸೌಜನ್ಯಪೂರ್ವಕವಾಗಿ ವರ್ತಿಸಬೇಕು. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

ವಿಧಾನ ಪರಿಷತ್ತಿನ ಸದಸ್ಯರುಗಳಲ್ಲಿ ಕೆಲವರು ಪದವೀಧರ ಕ್ಷೇತ್ರದಿಂದ ಶಿಕ್ಷಣ ಕ್ಷೇತ್ರಗಳಿಂದ ಹಾಗೂ ಲೋಕಲ್ ಅಥಾರಿಟೀಸ್‌ಗಳಿಂದ ವಿಧಾನ ಪರಿಷತ್ತಿಗೆ ಆಯ್ಕೆಯಾಗಿದ್ದು ಅವರುಗಳ ಚುನಾವಣಾ ಕ್ಷೇತ್ರವು ನಿರ್ದಿಷ್ಟವಾಗಿರದ ಕಾರಣ, ಸ್ಥಳೀಯ ಶಾಸಕರೆಂದು ಗುರುತಿಸಲು ಅವರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ, ಅವರು ಇಷ್ಟಪಡುವ ಯಾವುದಾದರೊಂದು ತಾಲ್ಲೂಕನ್ನು ನೋಡಲ್ ತಾಲ್ಲೂಕೆಂದೂ ಮತ್ತು ನಾಮನಿರ್ದೇಶನ ಹೊಂದಿದ ವಿಧಾನ ಪರಿಷತ್ ಸದಸ್ಯರುಗಳು ಹಾಗೂ ವಿಧಾನ ಸಭೆಯಿಂದ ಆಯ್ಕೆಯಾದ ವಿಧಾನ ಪರಿಷತ್ತಿನ ಸದಸ್ಯರು ಅವರು ಇಷ್ಟಪಡುವ ಯಾವುದಾದರೊಂದು ತಾಲ್ಲೂಕನ್ನು ನೋಡಲ್ ತಾಲ್ಲೂಕೆಂದು ಪರಿಗಣಿಸಿ ಅವರನ್ನು ಸರ್ಕಾರದ ಅಧಿಕೃತ ಸಮಾರಂಭಕ್ಕೆ ಆದ್ಯತೆ ಮೇಲೆ ಆಹ್ವಾನಿಸಲು ಹಾಗೂ ಅವರುಗಳ ಹೆಸರನ್ನು ಆಹ್ವಾನ ಪತ್ರಿಕೆಗಳಲ್ಲಿ ಮುದ್ರಿಸಲು ಕ್ರಮ ಕೈಗೊಳ್ಳಬೇಕು.

ರಾಜ್ಯಸಭಾ ಸದಸ್ಯರುಗಳು ತಾವು ಅಂಗೀಕರಿಸುವ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವುದರಿಂದ ಸರ್ಕಾರದ ಅಧಿಕೃತ ಸಮಾರಂಭಗಳಿಗೆ ಅವರನ್ನು ಆಹ್ವಾನಿಸಲು ಅವರುಗಳೊಡನೆ ಚರ್ಚಿಸಿ, ಆಯಾ ಜಿಲ್ಲೆಯ ಅಧಿಕಾರಿಗಳು ವ್ಯವಸ್ಥೆ ಮಾಡಬೇಕೆಂದು, ಲೋಪದೋಷಗಳಿಗೆ ಆಸ್ಪದ ನೀಡಬಾರದೆಂದು ಈ ಮೂಲಕ ಸೂಚಿಸಿದೆ. ಸಂಬಂಧಪಟ್ಟ ವಿಧಾನ ಪರಿಷತ್ತಿನ ಸದಸ್ಯರುಗಳು ಹಾಗೂ ರಾಜ್ಯಸಭಾ ಸದಸ್ಯರುಗಳು ಅವರುಗಳು ಇಷ್ಟಪಡುವ ತಾಲ್ಲೂಕು: ಜಿಲ್ಲೆಯನ್ನು ನೋಡಲ್ ತಾಲ್ಲೂಕು ನೋಡಲ್ ಜಿಲ್ಲೆ ಎಂದು ಕ್ರಮವಾಗಿ ಆಯ್ಕೆ ಮಾಡಿಕೊಂಡು ಅದನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ತಿಳಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಎಸ್.ವಿ. ಸತ್ಯನಾರಾಯಣ ಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 52 ರಾರಾಆ 2000

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:30-9-2000

## ಸುತ್ತೋಲೆ

ವಿಷಯ: ಸರ್ಕಾರದ ವತಿಯಿಂದ ಏರ್ಪಡಿಸುವ ಜಿಲ್ಲಾ ಪಂಚಾಯತ್ ಸಭೆ, ಜಿಲ್ಲಾಧಿಕಾರಿಗಳ ಸಭೆ ಹಾಗೂ ಸರ್ಕಾರಿ ಕಾರ್ಯಕ್ರಮಗಳಿಗೆ ಸರ್ಕಾರಿ ಮುಖ್ಯ ಸಚೇತಕರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ದಿ:8-2-85ರ ಆದೇಶ ಸಂಖ್ಯೆ:ಸಿಆಸುಇ 119 ಪಿಎಲ್‌ಎಕ್ಸ್ 84.
2. ದಿ: 23-4-92ರ ಸುತ್ತೋಲೆ ಸಂಖ್ಯೆ: ಸಿಆಸುಇ 8 ರಾರಾಆ 92.
3. ದಿ: 15-1-92ರ ಸುತ್ತೋಲೆ ಸಂಖ್ಯೆ: ಡಿಪಿಎಆರ್ 2 ರಾರಾಆ 93.
4. ದಿ: 16-4-93ರ ಸುತ್ತೋಲೆ ಸಂಖ್ಯೆ: ಸಿಆಸುಇ 2 ರಾರಾಜಿ 93.
5. ದಿ:03-7-93ರ ಸುತ್ತೋಲೆ ಸಂಖ್ಯೆ:ಸಿಆಸುಇ 49 ರಾರಾಆ 93.

ದಿನಾಂಕ:8-2-85ರ ಆದೇಶ ಸಂಖ್ಯೆ:ಡಿಪಿಎಆರ್ 119 ಪಿಎಲ್‌ಎಕ್ಸ್ 84ರಲ್ಲಿ ಸರ್ಕಾರಿ ಇಲಾಖೆಯು ಏರ್ಪಡಿಸುವಂತಹ ಸರ್ಕಾರಿ ಸಮಾರಂಭದಲ್ಲಿ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಹಾಗೂ ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರನ್ನು ಆಹ್ವಾನಿಸಲು ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಮತ್ತು ಇತರೆ ಸನ್ನಿವೇಶಗಳನ್ನು ಆಧರಿಸಿ ಮಂತ್ರಿ: ರಾಜ್ಯ ಮಂತ್ರಿ: ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ ಅಧ್ಯಕ್ಷರು: ಮುಖ್ಯ ಅತಿಥಿ: ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು ಮತ್ತು ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗೆ ಹಾಕಿಸಬೇಕೆಂದು ಈ ಸೂಚನೆಗಳನ್ನು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ.

ಸಚಿವರು, ರಾಜ್ಯ ಸಚಿವರು, ವಿಧಾನ ಮಂಡಲದ ವರಿಷ್ಠರು, ಸಂಸತ್ ಸದಸ್ಯರು, ವಿಧಾನ ಮಂಡಲದ ಸದಸ್ಯರುಗಳು ಹಾಗೂ ಸರ್ಕಾರದ ಮುಖ್ಯ ಸಚೇತಕರುಗಳಿಗೆ ತೋರಿಸಬೇಕಾದ ಗೌರವ, ನೀಡಬೇಕಾದ ಸ್ಥಾನಮಾನ, ಪಾಲಿಸಬೇಕಾದ ಶಿಷ್ಟಾಚಾರದ ಬಗ್ಗೆ ದಿನಾಂಕ:3-7-93ರ ಸುತ್ತೋಲೆಯಲ್ಲಿ ಸೂಚನೆಯನ್ನು ನೀಡಲಾಗಿದೆ. ಈ ಸೂಚನೆಗಳನ್ನು ದಿ:17-4-2000ರ ಸುತ್ತೋಲೆಯಲ್ಲಿಯೂ ಕೂಡ ಪುನರುಚ್ಚರಿಸಲಾಗಿದೆ.

ಕರ್ನಾಟಕ ಸರ್ಕಾರದ ಮುಖ್ಯ ಸಚೇತಕರು ಇತ್ತೀಚಿನ ಜಿಲ್ಲಾ ಪಂಚಾಯತ್‌ನ ಸಭೆ, ಜಿಲ್ಲಾಧಿಕಾರಿಗಳ ಸಭೆ ಹಾಗೂ ಹಲವಾರು ಸರ್ಕಾರಿ ಕಾರ್ಯಕ್ರಮಗಳಲ್ಲಿ, ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುತ್ತಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಆದುದರಿಂದ, ಉಲ್ಲೇಖಿತ ಸರ್ಕಾರದ ಸುತ್ತೋಲೆಗಳಲ್ಲಿ ಈಗಾಗಲೇ ತಿಳಿಸಿರುವಂತೆ, ವರಿಷ್ಠರಿಗೆ ಸಲ್ಲಬೇಕಾದ ಸ್ಥಾನಮಾನದ ಶಿಷ್ಟಾಚಾರಗಳನ್ನು ಈಗಾಗಲೇ ಸೂಚನೆಗಳನ್ನು ಕೊಟ್ಟಿರುವಂತೆ, ವಿಧಾನ ಸಭೆಯ ಸರ್ಕಾರಿ ಮುಖ್ಯ ಸಚೇತಕರಿಗೂ ತಪ್ಪದೇ ಸಲ್ಲಿಸಬೇಕೆಂದು ಸೂಚಿಸಿದೆ. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

**ಎಸ್.ವಿ. ಸತ್ಯನಾರಾಯಣ ಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 2 ರಾರಾಆ 2000

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:1-3-2000

**ಸುತ್ತೋಲೆ**

ವಿಷಯ: ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ:
1. ದಿನಾಂಕ:19.5.75ರ ಅನಧಿಕೃತ ಜ್ಞಾಪನ ಸಂಖ್ಯೆ:ಜಿಎಡಿ 4 ಪಿಎಲ್ಎಕ್ಸ್ 75.
2. ದಿನಾಂಕ:20.3.98ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 98.

* * * * *

ದಿನಾಂಕ:19.5.1975ರ ಅಧಿಕೃತ ಜ್ಞಾಪನದಲ್ಲಿ, ಸಂಸತ್ ಸದಸ್ಯ0.ರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದಲ್ಲದೆ, ಅಂತಹ ಎಲ್ಲಾ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಅವುಗಳಿಗೆ ಉತ್ತರಿಸತಕ್ಕದೆಂದು ಸೂಚನೆಗಳನ್ನು ನೀಡಲಾಗಿದೆ. ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು, ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕೋರಿದಾಗ, ಅಧಿಕಾರಿಗಳು ಅಂತಹ ವಿವರಗಳನ್ನು ಅವರಿಗೆ ಒದಗಿಸಬೇಕಲ್ಲದೆ ಸಂದೇಹಾಸ್ಪದ ಸಂದರ್ಭಗಳಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಪಡೆಯಬೇಕೆಂದು ಕೂಡ ಸೂಚಿಸಲಾಗಿದೆ.

ದಿನಾಂಕ:20.3.98ರ ಸುತ್ತೋಲೆಯಲ್ಲಿ ಸಂಸತ್ ಸದಸ್ಯರಿಂದ ಹಾಗೂ ಶಾಸಕರುಗಳಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದ್ದಲ್ಲದೆ ಆ ಎಲ್ಲಾ ಪತ್ರಗಳಿಗೂ ತಕ್ಷಣ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ. ಉತ್ತರ ನೀಡಲು ತಡವಾದಲ್ಲಿ ಮಧ್ಯಂತರ ಉತ್ತರವನ್ನು ಅವರಿಗೆ ಕಳುಹಿಸಿ, ಅಂತಿಮ ಉತ್ತರವನ್ನು ಎಷ್ಟು ದಿನಗಳೊಳಗಾಗಿ ನೀಡಲಾಗುವುದೆಂದು ಮಧ್ಯಂತರ ಉತ್ತರದಲ್ಲಿ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

ಪ್ರಜಾಪ್ರಭುತ್ವದಲ್ಲಿ, ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರ ಹಾಗೂ ಶಾಕಸರ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಈಗಾಗಲೇ, ಈ ಬಗ್ಗೆ ನೀಡಿರುವ ಸೂಚನೆಗಳನ್ನು ಪುನರುಚ್ಚರಿಸುತ್ತಾ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು, ತಮ್ಮ ಅಧೀನಕ್ಕೆ ಒಳಪಡುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಸಂಸತ್ ಸದಸ್ಯರು ಮತ್ತು ಶಾಸಕರುಗಳು ಪತ್ರ ಬರೆದಾಗ, ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

**ಹೆಚ್. ಕೃಷ್ಣಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 13 ರಾರಾಆ 99

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:27-4-2000

**ಸುತ್ತೋಲೆ**

ವಿಷಯ: ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದಂತಹ ದೂರವಾಣಿ ಕರೆಗಳನ್ನು ಹಿಂತಿರುಗಿಸುವ ಬಗ್ಗೆ.

*****

ಇತ್ತೀಚೆಗೆ, ವಿಧಾನ ಮಂಡಲದಲ್ಲಿ, ಸದಸ್ಯರು ಸರ್ಕಾರದ ಅಧಿಕಾರಿಗಳು ಜನರ ಪ್ರತಿನಿಧಿಗಳಿಗೆ ಗೌರವ ನೀಡುತ್ತಿಲ್ಲವೆಂದು ಹಾಗೂ ಅವರ ದೂರವಾಣಿ ಕರೆಗಳಿಗೆ ಸ್ಪಂದಿಸುತ್ತಿಲ್ಲವೆಂಬ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಸಂಸತ್ ಸದಸ್ಯರು ಹಾಗೂ ಶಾಸಕರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುವುದರಿಂದ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ಸಭೆಯಲ್ಲಿದ್ದಾಗ, ಅವರ ಆಪ್ತ ಕಾರ್ಯದರ್ಶಿಗಳು: ಆಪ್ತ ಸಹಾಯಕರುಗಳು, ಅವರುಗಳಿಗೆ ಬಂದಂತಹ ದೂರವಾಣಿ ಕರೆಗಳನ್ನು ಪಟ್ಟಿ ಮಾಡುವುದಲ್ಲದೆ, ಅವರುಗಳು ಹಿಂತಿರುಗಿ ಬಂದ ನಂತರ ಅವರಿಗೆ ಅದನ್ನು ತೋರಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಸಚಿವರುಗಳು, ಸಂಸತ್ ಸದಸ್ಯರುಗಳು, ಶಾಸಕರುಗಳು, ಅತಿಗಣ್ಯ ವ್ಯಕ್ತಿಗಳು ಮತ್ತು ಹಿರಿಯ ಅಧಿಕಾರಿಗಳಿಂದ ಬಂದಂತಹ ದೂರವಾಣಿ ಕರೆಗಳನ್ನು ಕಡ್ಡಾಯವಾಗಿ ಹಿಂತಿರುಗಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳಿಗೆ ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದೆ.

**ಹೆಚ್. ಕೃಷ್ಣಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 29 ರಾರಾಆ 2000

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:17-4-2000

### ಸುತ್ತೋಲೆ

ವಿಷಯ: ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಮಾರಂಭಗಳಿಗೆ ಸಂಸತ್ ಸದಸ್ಯರುಗಳು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ:8-1-1992ರ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 18 ರಾರಾಆ 91.
2. ದಿನಾಂಕ:23-4-1992ರ ಸುತ್ತೋಲೆ ಸಂಖ್ಯೆ: ಸಿಆಸುಇ 8 ರಾರಾಆ 92.
3. ದಿನಾಂಕ:15-1-1993ರ ಸುತ್ತೋಲೆ ಸಂಖ್ಯೆ: ಸಿಆಸುಇ 2 ರಾರಾಆ 93.
4. ದಿನಾಂಕ:16-4-1993ರ ಸುತ್ತೋಲೆ ಸಂಖ್ಯೆ: ಸಿಆಸುಇ 2 ರಾರಾಆ 93.

* * * * *

ಪ್ರಜಾಪ್ರಭುತ್ವದಲ್ಲಿ, ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರ, ವಿಧಾನ ಪರಿಷತ್ತಿನ ಸದಸ್ಯರ ಮತ್ತು ವಿಧಾನ ಸಭೆಯ ಸದಸ್ಯರ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುತ್ತಿಲ್ಲವೆಂದು ಹಾಗೂ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆ.

ಇತ್ತೀಚೆಗೆ, ವಿಧಾನ ಪರಿಷತ್ತಿನ ಸದಸ್ಯರುಗಳು, ಸರ್ಕಾರದ ವತಿಯಿಂದ ಏರ್ಪಡಿಸುತ್ತಿರುವ ಸಮಾರಂಭಗಳಿಗೆ ತಮ್ಮನ್ನು ಆಹ್ವಾನಿಸುತ್ತಿಲ್ಲವೆಂದು ಹಾಗೂ ತಮ್ಮ ಹೆಸರನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸದೇ ಅಧಿಕಾರಿಗಳು ಅಗೌರವದಿಂದ ನಡೆಸಿಕೊಳ್ಳುತ್ತಿರುವ ವಿಷಯವನ್ನು ಸದನದಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಮುಖ್ಯ ಮಂತ್ರಿಗಳು ಈ ವಿಷಯವನ್ನು ತೀವ್ರವಾಗಿ ಪರಿಗಣಿಸಿದ್ದಾರೆ.

ಆದ್ದರಿಂದ, ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಮಾರಂಭಗಳಿಗೆ ಸಂಸತ್ ಸದಸ್ಯರನ್ನು, ವಿಧಾನ ಪರಿಷತ್ತಿನ ಸದಸ್ಯರನ್ನು ಮತ್ತು ವಿಧಾನಸಭೆಯ ಸದಸ್ಯರನ್ನು ತಪ್ಪದೇ ಆಹ್ವಾನಿಸುವುದಲ್ಲದೇ ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಆ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು.

**ಬಿ.ಕೆ. ಭಟ್ಟಾಚಾರ್ಯ**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 46 ರಾರಾಆ 99

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:28-4-2000

## ಸುತ್ತೋಲೆ

**ವಿಷಯ:** ಮುಖ್ಯಮಂತ್ರಿಯವರು ಹಾಗೂ ಇತರೆ ಸಚಿವರುಗಳ ಪ್ರವಾಸ ಸಮಯದಲ್ಲಿ ಅಧಿಕಾರಿಗಳು ಶಿಷ್ಟಾಚಾರವನ್ನು ಪಾಲಿಸುವ ಬಗ್ಗೆ.

ಉಲ್ಲೇಖ:
1. ದಿ:18-5-82ರ ಸುತ್ತೋಲೆ ಸಂಖ್ಯೆ: ಸಿಆಸುಇ 55 ಎಎಆರ್ 85.
2. ದಿ:25-11-92ರ ಸುತ್ತೋಲೆ ಸಂಖ್ಯೆ: ಸಿಆಸುಇ 73 ಜಿಎಎಂ 95.
3. ದಿ:17-3-97ರ ಸುತ್ತೋಲೆ ಸಂಖ್ಯೆ: ಸಿಆಸುಇ 16 ರಾರಾಆ 97.

* * * * *

ದಿನಾಂಕ: 18-5-82ರ ಸುತ್ತೋಲೆಯಲ್ಲಿ, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರು, ತಮ್ಮ ಜಿಲ್ಲೆಯ ಮುಖಾಂತರ ಮುಖ್ಯಮಂತ್ರಿಯವರು ತಮ್ಮ ಪ್ರವಾಸದ ಸಮಯದಲ್ಲಿ ಹಾದು ಹೋದಲ್ಲಿ ಅಥವಾ ಪ್ರವಾಸ ಮಾಡಿದಲ್ಲಿ, ಅವರನ್ನು ತಮ್ಮ ಜಿಲ್ಲೆಯ ಗಡಿಯಲ್ಲಿ ಭೇಟಿ ಮಾಡುವುದಲ್ಲದೆ, ತಮ್ಮ ಜಿಲ್ಲೆಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಯನ್ನು ಅವರಿಗೆ ಒದಗಿಸುವಂತೆ ಸೂಚಿಸಲಾಗಿತ್ತು. ಸಚಿವರು ಪ್ರವಾಸದ ಸಮಯದಲ್ಲಿ ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ರವರು ಕೇಂದ್ರ ಸ್ಥಾನದಲ್ಲಿದ್ದಲ್ಲಿ ಮಾತ್ರ ಸಚಿವರನ್ನು ಭೇಟಿ ಮಾಡುವಂತೆ ಸೂಚಿಸಲಾಗಿತ್ತು. ಹಾಗೆಯೇ, ಸಚಿವರು ಪ್ರವಾಸ ಮಾಡಿದಾಗ, ಅವರ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಅಧಿಕಾರಿಗಳು, ಅವರುಗಳನ್ನು ಸ್ವಾಗತಿಸುವುದಲ್ಲದೆ, ಬೀಳ್ಕೊಡಬೇಕಾಗಿರುತ್ತದೆ. ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಪಸ್ಥಿತಿಯಲ್ಲಿ ಅವರ ನಂತರದ ಹಿರಿಯ ಅಧಿಕಾರಿಗಳು ಉಪಸ್ಥಿತರಿರುವುದಲ್ಲದೆ, ಸಚಿವರುಗಳು ಕೋರಿದ್ದಲ್ಲಿ, ಅವರುಗಳೊಡನೆ ಪ್ರವಾಸ ಮಾಡುವಂತೆ ಕೂಡ ಸೂಚಿಸಲಾಗಿದೆ. ಸಚಿವರ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳು, ಸಚಿವರ ಪ್ರವಾಸದ ಸಮಯದಲ್ಲಿ, ಅವರಿಗೆ ಹಾಗೂ ಅವರೊಂದಿಗೆ ಪ್ರವಾಸ, ಮಾಡುವ ಇತರ ಅಧಿಕಾರಿಗಳಿಗೆ, ಅವರು ಹಣ ಸಂದಾಯ ಮಾಡುವ ಷರತ್ತಿಗೊಳಪಟ್ಟು, ವಸತಿ, ಆಹಾರ ಪೂರೈಕೆ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಬೇಕೆಂದು ಸೂಚಿಸಲಾಗಿತ್ತು. ಈ ಸೌಲಭ್ಯಗಳನ್ನು ಒದಗಿಸಿದ್ದಕ್ಕಾಗಿ ತಕ್ಷಣ ಬಿಲ್ಲುಗಳನ್ನು ತಯಾರು ಮಾಡಿ ವಸೂಲಿ ಮಾಡಬೇಕೆಂದು ಕೂಡ ಸೂಚಿಸಲಾಗಿದೆ.

ದಿನಾಂಕ: 25-11-92ರ ಸುತ್ತೋಲೆಯಲ್ಲಿ ಹೊರಡಿಸಿರುವ ಸಚಿವರುಗಳ ನೀತಿ ಸಂಹಿತೆಯಂತೆ ಸಚಿವರು ತಮ್ಮ ಪ್ರವಾಸದ ಸಮಯದಲ್ಲಿ ತಮ್ಮ ವಸತಿ ಮತ್ತು ಇತರ ವ್ಯವಸ್ಥೆಗಳಿಗೆ ಹಣ ಸಂದಾಯ ಮಾಡಬೇಕೆಂದು ಸೂಚಿಸಲಾಗಿದೆ.

ದಿನಾಂಕ: 17-3-97ರ ಸುತ್ತೋಲೆಯಲ್ಲಿ ಮುಖ್ಯಮಂತ್ರಿಯವರು ಪ್ರವಾಸ ಮಾಡಿದಾಗ ಅಧಿಕಾರಿಗಳು ಅವರಿಗೆ ಸಲ್ಲಿಸಬೇಕಾದ ಶಿಷ್ಟಾಚಾರದ ವ್ಯವಸ್ಥೆಯನ್ನು ಮಾಡಿಲ್ಲವೆಂದು ದೂರು ಬಂದಾಗ, ಇಂತಹ ದೂರುಗಳಿಗೆ ಅವಕಾಶ ಕೊಡದೆ, ಮುಖ್ಯಮಂತ್ರಿಯವರು ಇತರ ಸಚಿವರು ರಾಜ್ಯದ ಒಳಗಡೆ ಪ್ರವಾಸ ಮಾಡಿದಾಗ, ಅವರಿಗೆ ಸಲ್ಲಬೇಕಾದ ಎಲ್ಲಾ ಶಿಷ್ಟಾಚಾರದ ವ್ಯವಸ್ಥೆಯನ್ನು ಮಾಡುವಂತೆ ಸೂಚಿಸಲಾಗಿದೆ.

ಇಷ್ಟೆಲ್ಲಾ ಸೂಚನೆಗಳನ್ನು ನೀಡಿದ್ದರೂ ಕೂಡ, ಸಚಿವರುಗಳು ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ, ಜಿಲ್ಲಾಧಿಕಾರಿಗಳು, ಜಿಲ್ಲಾ ಸೂಪರಿಂಟೆಂಡೆಂಟ್ ಆಫ್ ಪೊಲೀಸ್‌ರವರು, ಮಾನ್ಯ ಸಚಿವರನ್ನು ಭೇಟಿ ಆಗುತ್ತಿಲ್ಲವೆಂಬ ದೂರು ಸರ್ಕಾರಕ್ಕೆ ಬರುತ್ತಿದೆ. ಇನ್ನು ಮುಂದೆ, ಇಂತಹ ದೂರುಗಳಿಗೆ, ಅವಕಾಶ ಕೊಡದೆ, ಮುಖ್ಯಮಂತ್ರಿಯವರು ಮತ್ತು ಇತರ ಸಚಿವರು ರಾಜ್ಯದ ಒಳಗಡೆ ಪ್ರವಾಸ ಮಾಡಿದಾಗ, ಉಲ್ಲೇಖಿತ ಸುತ್ತೋಲೆಗಳಲ್ಲಿನ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಸಲ್ಲಬೇಕಾದ ಎಲ್ಲಾ ಶಿಷ್ಟಾಚಾರದ ವ್ಯವಸ್ಥೆ ಮಾಡುವಂತೆ ಸೂಚಿಸಲಾಗಿದೆ..

**ಜಿ. ರಾಜು ಪ್ರೇಮ ಕುಮಾರ್**
ಸರ್ಕಾರದ ಕಾರ್ಯದರ್ಶಿ
ಸಿ.ಆ.ಸು. ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 2 ರಾರಾಆ 98

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:20-03-98

**ಸುತ್ತೋಲೆ**

ವಿಷಯ: ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ:19.5.75ರ ಅಧಿಕೃತ ಜ್ಞಾಪನ ಸಂಖ್ಯೆ:ಜಿಎಡಿ 4 ಪಿಎಲ್ಎಕ್ಸ್ 75.

* * * * *

ದಿನಾಂಕ:19.5.75ರ ಅಧಿಕೃತ ಜ್ಞಾಪನದಲ್ಲಿ, ಸಂಸತ್ ಸದಸ್ಯರ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದಲ್ಲದೆ, ಅಂತಹ ಎಲ್ಲಾ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ, ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಅವುಗಳಿಗೆ ಉತ್ತರಿಸತಕ್ಕದೆಂದು ಸೂಚನೆಗಳನ್ನು ನೀಡಲಾಗಿದೆ. ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು, ಕೂಡಲೇ ದೊರೆಯುವ ಮತ್ತು ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ, ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕೋರಿದಾಗ, ಅಧಿಕಾರಿಗಳು ಅಂತಹ ವಿವರಗಳನ್ನು ಅವರಿಗೆ ಒದಗಿಸಬೇಕಲ್ಲದೆ ಸಂದೇಹಾಸ್ಪದ ಸಂದರ್ಭಗಳಲ್ಲಿ ಅವರ ಕೋರಿಕೆಯನ್ನು ತಿರಸ್ಕರಿಸುವ ಮೊದಲು ಉನ್ನತ ಅಧಿಕಾರಿಗಳಿಂದ ಸೂಚನೆಗಳನ್ನು ಪಡೆಯಬೇಕೆಂದು ಕೂಡ ಸೂಚಿಸಲಾಗಿದೆ.

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರ ಹಾಗೂ ಶಾಸಕರ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಆದ್ದರಿಂದ ಸಂಸತ್ ಸದಸ್ಯರಿಂದ ಹಾಗೂ ಶಾಸಕರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತಿ ನೀಡತಕ್ಕದ್ದಲ್ಲದೆ ಆ ಎಲ್ಲಾ ಪತ್ರಗಳಿಗೂ ತಕ್ಷಣ ಉತ್ತರ ನೀಡಬೇಕೆಂದು ಸೂಚಿಸಲಾಗಿದೆ. ಉತ್ತರ ನೀಡಲು ತಡವಾದಲ್ಲಿ, ಮಧ್ಯಂತರ ಉತ್ತರವನ್ನು ಅವರಿಗೆ ಕಳುಹಿಸಿ, ಅಂತಿಮ ಉತ್ತರವನ್ನು ಎಷ್ಟು ದಿನಗಳೊಳಗಾಗಿ ಕೊಡಲಾಗುವುದೆಂದು ಮಧ್ಯಂತರ ಉತ್ತರದಲ್ಲಿ ತಿಳಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ. ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿ ವರ್ಗ ಮತ್ತು ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಪತ್ರ ಬರೆದಾಗ ಮೇಲ್ಕಂಡ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

**ಹೆಚ್. ಕೃಷ್ಣಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 50 ರಾರಾಆ 97

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:28-7-97

**ಸುತ್ತೋಲೆ**

**ವಿಷಯ:** ವಿರೋಧ ಪಕ್ಷದ ನಾಯಕರುಗಳಿಗೆ ಸೌಜನ್ಯ ತೋರಿಸುವ ಬಗ್ಗೆ.

* * * * *

ವಿರೋಧ ಪಕ್ಷದ ನಾಯಕರುಗಳಿಗೆ ಸರ್ಕಾರದ ಅಧಿಕಾರಿಗಳು ನೇರವಾಗಿ ಪತ್ರ ಬರೆದು ಶಿಷ್ಟಾಚಾರದ ಉಲ್ಲಂಘನೆ ಮಾಡುತ್ತಿದ್ದಾರೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ವಿಧಾನ ಪರಿಷತ್ತಿನ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕರುಗಳಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನವನ್ನು ನೀಡಿದ್ದು, ಅವರುಗಳಿಗೆ ನೇರವಾಗಿ ಪತ್ರ ಬರೆಯುವುದು ಶಿಷ್ಟಾಚಾರವನ್ನು ಉಲ್ಲಂಘಿಸಿದಂತಾಗುತ್ತದೆ. ಆದ್ದರಿಂದ, ಇನ್ನು ಮುಂದೆ ವಿಧಾನ ಪರಿಷತ್ತಿನ ಮತ್ತು ವಿಧಾನ ಸಭೆಯ ವಿರೋಧ ಪಕ್ಷದ ನಾಯಕರುಗಳಿಗೆ ನೇರವಾಗಿ ಪತ್ರವನ್ನು ಬರೆಯುವುದಾಗಲಿ ಅಥವಾ ಸಭೆಯ ಸೂಚನಾ ಪತ್ರವನ್ನು ಕಳುಹಿಸಬಾರದೆಂದು ಸೂಚಿಸಲಾಗಿದೆ. ವಿಧಾನ ಪರಿಷತ್ತಿನ ಮತ್ತು ವಿಧಾನಸಭೆಯ ವಿರೋಧ ಪಕ್ಷದ ನಾಯಕರುಗಳಿಗೆ ಪತ್ರಗಳನ್ನಾಗಲೀ ಅಥವಾ ಸಭೆಯ ಸೂಚನಾ ಪತ್ರಗಳನ್ನಾಗಲೀ, ಕಳುಹಿಸಬೇಕಾಗಿದ್ದಲ್ಲಿ, ಅವುಗಳನ್ನು ಅವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸಿ, ವಿಷಯವನ್ನು ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವಂತೆ ಕೋರಲು ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.

**ಬಿ.ಆರ್. ಪ್ರಭಾಕರ**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 97 ಶಿಸನೇ 96

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:04.03.1997

**ಸುತ್ತೋಲೆ**

**ವಿಷಯ:** ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ವೇದಿಕೆಯ ಮೇಲೆ ಉಪಸ್ಥಿತರಿರುವ ಬಗ್ಗೆ.

ಉಲ್ಲೇಖ: ಸರ್ಕಾರಿ ಸುತ್ತೋಲೆ ಸಂಖ್ಯೆ:ಡಿಪಿಎಆರ್ 73 ಜಿಎಎಂ 92, ದಿನಾಂಕ:25.11.92.

* * * * *

ಸಚಿವರು ಪಾಲ್ಗೊಳ್ಳುವ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವ ಪರಿಪಾಠವನ್ನು ನಿಲ್ಲಿಸಬೇಕೆಂದು ಉಲ್ಲೇಖಿತ ಸುತ್ತೋಲೆಯಲ್ಲಿ ಸರ್ಕಾರವು ಸೂಚನೆಯನ್ನು ನೀಡಲಾಗಿದೆ.

ಹೀಗಿದ್ದಾಗ್ಯೂ ಅಂಥ ಸಾರ್ವಜನಿಕ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸಚಿವರು ಪಾಲ್ಗೊಳ್ಳುವ ಸಮಾರಂಭಗಳಲ್ಲಿ ಅಧಿಕಾರಿಗಳು ಅಧ್ಯಕ್ಷತೆ ವಹಿಸುವುದು ಹಾಗೂ ಅಧಿಕಾರಿಗಳು ವೇದಿಕೆಯ ಮೇಲೆ ಉಪಸ್ಥಿತರಿರುವುದನ್ನು ಸರ್ಕಾರವು ಈ ಮೂಲಕ ನಿಷೇಧಿಸಿದೆ.

ಸರ್ಕಾರದ ಈ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಇಲಾಖಾ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳಿಗೆ ಸೂಚಿಸಲಾಗಿದೆ.

ಸಹಿ/-

**ಎನ್. ರಾಮಕೃಷ್ಣ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ರಾಜ್ಯ ಶಿಷ್ಟಾಚಾರ)

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 75 ರಾರಾಆ 96

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:15-11-96

## ಸುತ್ತೋಲೆ

ವಿಷಯ: ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಅಧಿಕಾರಿಗಳನ್ನು ಭೇಟಿ ಮಾಡಿದಾಗ ಅವರಿಗೆ ಸೌಜನ್ಯ ಮತ್ತು ಗೌರವ ತೋರಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ:19.5.75ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 4 ಪಿಎಲ್ಎಕ್ಸ್ 75
2. ದಿನಾಂಕ:25.8.77ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 17 ಪಿಎಲ್ಎಕ್ಸ್ 77
3. ದಿನಾಂಕ:29.3.78ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 31 ಪಿಎಲ್ಎಕ್ಸ್ 78
4. ದಿನಾಂಕ:21.6.79ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 53 ಎಎಆರ್ 79
5. ದಿನಾಂಕ:8.2.85ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 110 ಪಿಎಲ್ಎಕ್ಸ್ 84
6. ದಿನಾಂಕ:6.12.85ರ ಸುತ್ತೋಲೆ ಸಂಖ್ಯೆ:ಸಿಆಸುಇ 113 ಎಎಆರ್ 85
7. ದಿನಾಂಕ:23.9.86ರ ಸುತ್ತೋಲೆ ಸಂಖ್ಯೆ:ಸಿಆಸುಇ 115 ಪಿಎಲ್ಎಕ್ಸ್ 86
8. ದಿನಾಂಕ:25.3.87ರ ಸುತ್ತೋಲೆ ಸಂಖ್ಯೆ:ಸಿಆಸುಇ 44 ಪಿಎಲ್ಎಕ್ಸ್ 86
9. ದಿನಾಂಕ:21.6.90ರ ಸುತ್ತೋಲೆ ಸಂಖ್ಯೆ:ಸಿಆಸುಇ 23 ರಾಕಾವ್ಯ 90
10. ದಿನಾಂಕ:20.7.91ರ ಸುತ್ತೋಲೆ ಸಂಖ್ಯೆ:ಸಿಆಸುಇ 35 ರಾಕಾವ್ಯ 91
11. ದಿನಾಂಕ:8.1.92ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 18 ರಾರಾಆ 91
12. ದಿನಾಂಕ:23.4.92ರ ಸುತ್ತೋಲೆ ಸಂಖ್ಯೆ:ಸಿಆಸುಇ 8 ರಾರಾಆ 92
13. ದಿನಾಂಕ:15.1.93ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 93
14. ದಿನಾಂಕ:16.4.93ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 93
15. ದಿನಾಂಕ:10.4.95ರ ಸುತ್ತೋಲೆ ಸಂಖ್ಯೆ:ಸಿಆಸುಇ 28 ರಾರಾಆ 95
16. ದಿನಾಂಕ:24.2.96ರ ಸುತ್ತೋಲೆ ಸಂಖ್ಯೆ:ಸಿಆಸುಇ 10 ರಾರಾಆ 96

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ಶಾಸಕರ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಸರ್ಕಾರದ ಕಛೇರಿಗಳಿಗೆ ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಭೇಟಿ ನೀಡಿದಾಗ, ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ ಅವರುಗಳೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ ವಿಸ್ತೃತವಾದ ಸೂಚನೆಗಳನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಸರ್ಕಾರವು ಈಗಾಗಲೇ ನೀಡಿದೆ.

ಸರ್ಕಾರವು, ಇಷ್ಟೆಲ್ಲಾ ಸುತ್ತೋಲೆಗಳನ್ನು ಹೊರಡಿಸಿದ್ದರೂ ಕೂಡ ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಲು ಬಂದಾಗ, ಅವರುಗಳನ್ನು ಗೌರವಪೂರ್ವಕವಾಗಿ ಕಾಣುತ್ತಿಲ್ಲವೆಂದು ಹಾಗೂ ಅವರುಗಳೊಡನೆ ಕೆಲವು ಅಧಿಕಾರಿಗಳು, ಸೌಜನ್ಯಪೂರ್ವಕವಾಗಿ ವರ್ತಿಸುತ್ತಿಲ್ಲವೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಇನ್ನು ಮುಂದೆ ಇಂತಹ ದೂರುಗಳಿಗೆ ಅವಕಾಶ ಕೊಡದೆ, ಸಂಸತ್ ಸದಸ್ಯರಾಗಲೀ ಅಥವಾ ಶಾಸಕರಾಗಲೀ, ಸರ್ಕಾರದ ಕಛೇರಿಗೆ ಭೇಟಿ ನೀಡಿದಾಗ, ಅವರಿಗೆ ಸಲ್ಲತಕ್ಕ ಗೌರವಾದರಗಳೊಂದಿಗೆ ಸ್ವಾಗತಿಸಬೇಕಲ್ಲದೆ, ಅವರು, ಭೇಟಿಗಾಗಿ ಕೋರಿದಾಗ ಆದ್ಯತೆ ಮೇಲೆ ಅವಕಾಶ ನೀಡತಕ್ಕದ್ದು ಅವರು ಕ್ಷೇತ್ರವೊಂದರ ಪ್ರತಿನಿಧಿ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು, ಅವರು ನೀಡುವ ಮನವಿ ಹಾಗೂ ಸಲಹೆಗಳನ್ನು ಪರಿಗಣಿಸಬೇಕೆಂದು ಸೂಚಿಸಲಾಗಿದೆ. ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೋರಲಾಗಿದೆ.

**ಬಿ.ಆರ್. ಪ್ರಭಾಕರ**
ಮುಖ್ಯ ಕಾರ್ಯದರ್ಶಿಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 28 ರಾರಾಆ 95

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:10.4.95

## ಸುತ್ತೋಲೆ

ವಿಷಯ: ಸಂಸತ್ ಸದಸ್ಯರು ಹಾಗೂ ಶಾಸಕರುಗಳಿಗೆ ಸೌಜನ್ಯ ಮತ್ತು ಗೌರವ ನೀಡುವ ಬಗ್ಗೆ.

ಉಲ್ಲೇಖ:
1. ದಿನಾಂಕ:19.5.75ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 4 ಪಿಎಲ್ಎಕ್ಸ್ 75
2. ದಿನಾಂಕ:25.8.77ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 17 ಪಿಎಲ್ಎಕ್ಸ್ 77
3. ದಿನಾಂಕ:29.3.78ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 31 ಪಿಎಲ್ಎಕ್ಸ್ 78
4. ದಿನಾಂಕ:21.6.79ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 53 ಎಎಆರ್ 79
5. ದಿನಾಂಕ:8.2.85ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 119 ಪಿಎಲ್ಎಕ್ಸ್ 84
6. ದಿನಾಂಕ:6.12.85ರ ಸುತ್ತೋಲೆ ಸಂಖ್ಯೆ:ಸಿಆಸುಇ 113 ಎಎಆರ್ 85
7. ದಿನಾಂಕ:23.9.86ರ ಸುತ್ತೋಲೆ ಸಂಖ್ಯೆ:ಸಿಆಸುಇ 115 ಪಿಎಲ್ಎಕ್ಸ್ 86
8. ದಿನಾಂಕ:25.3.87ರ ಸುತ್ತೋಲೆ ಸಂಖ್ಯೆ:ಸಿಆಸುಇ 44 ಪಿಎಲ್ಎಕ್ಸ್ 87
9. ದಿನಾಂಕ:21.6.90ರ ಸುತ್ತೋಲೆ ಸಂಖ್ಯೆ:ಸಿಆಸುಇ 23 ರಾಕಾವ್ಯ 90
10. ದಿನಾಂಕ:20.7.91ರ ಸುತ್ತೋಲೆ ಸಂಖ್ಯೆ:ಸಿಆಸುಇ 35 ರಾಕಾವ್ಯ 91
11. ದಿನಾಂಕ:8.1.92ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 18 ರಾರಾಆ 91
12. ದಿನಾಂಕ:23.4.92ರ ಸುತ್ತೋಲೆ ಸಂಖ್ಯೆ:ಸಿಆಸುಇ 8 ರಾರಾಆ 92
13. ದಿನಾಂಕ:15.1.93ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 93
14. ದಿನಾಂಕ:16.4.93ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 93

* * * * *

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು ಅವರುಗಳು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಸರ್ಕಾರದ ಕಛೇರಿಗಳಿಗೆ, ಸಂಸತ್ ಸದಸ್ಯರ ಹಾಗೂ ಶಾಸಕರುಗಳು ಭೇಟಿ ನೀಡಿದಾಗ, ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ ಅವರುಗಳೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ ವಿಸ್ತೃತವಾದ ಸೂಚನೆಗಳನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಸರ್ಕಾರವು ನೀಡಿದೆ.

ಇಷ್ಟೆಲ್ಲಾ ಸುತ್ತೋಲೆಗಳನ್ನು ಹೊರಡಿಸಿದ್ದರೂ ಕೂಡ, ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಲು ಬಂದಾಗ, ಅವರನ್ನು ಗೌರವಪೂರ್ವಕವಾಗಿ ಕಾಣುತ್ತಿಲ್ಲ ಮತ್ತು ಅವರುಗಳೊಡನೆ ಅಧಿಕಾರಿಗಳು ಸೌಜನ್ಯಪಾರ್ವಕವಾಗಿ ವರ್ತಿಸುತ್ತಿಲ್ಲವೆಂಬ ಅಂಶವನ್ನು ಸರ್ಕಾರದ ಗಮನಕ್ಕೆ ತರಲಾಗಿದೆ. ಅಲ್ಲದೆ, ಈ ವಿಷಯವನ್ನು ಇತ್ತೀಚೆಗೆ ಉಭಯ ಸದನಗಳಲ್ಲೂ ಕೂಡ ವಿವರವಾಗಿ ಪ್ರಸ್ತಾಪಿಸಲಾಗಿದೆ. ಸರ್ಕಾರವು ಇಷ್ಟೆಲ್ಲಾ ಸೂಚನೆಗಳನ್ನು ನೀಡಿದ್ದರೂ ಸಹ ಅವುಗಳನ್ನು ಉಲ್ಲಂಘಿಸಿ, ಸಂಸತ್ ಸದಸ್ಯರು ಮತ್ತು ಶಾಸಕರುಗಳಿಗೆ, ಅಧಿಕಾರಿಗಳು ಗೌರವ ತೋರಿಸುತ್ತಿಲ್ಲವೆಂಬುದು ನಿಜವಾಗಲೂ ವಿಷಾದನೀಯ.

ಸರ್ಕಾರದ ಎಲ್ಲಾ ಸೂಚನೆಗಳನ್ನು ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು ತಪ್ಪದೇ ಪಾಲಿಸಬೇಕಾಗುತ್ತದೆ. ಆದುದರಿಂದ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರುಗಳು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗಗಳು, ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ಶಾಸಕರುಗಳು ತಮ್ಮ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವಂತೆ ಮತ್ತು ಅವರುಗಳೊಡನೆ ಸೌಜನ್ಯಪೂರ್ವಕವಾಗಿ ನಡೆದುಕೊಳ್ಳಲು ಸೂಚಿಸಲಾಗಿದೆ. ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

**ಎಸ್.ಬಿ. ಮುದ್ದಪ್ಪ**
ಮುಖ್ಯ ಕಾರ್ಯದರ್ಶಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 2 ರಾರಾಆ 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:15-1-93

**ಸುತ್ತೋಲೆ**

ವಿಷಯ: ಸ್ಥಳೀಯ ಶಾಸಕರನ್ನು ಹಾಗೂ ಸಂಸತ್ ಸದಸ್ಯರನ್ನು ಸರ್ಕಾರದ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸುವ ಬಗ್ಗೆ.

*****

ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯದ ಸಮಾರಂಭಗಳಿಗೆ ಜನತೆಯ ಅಧಿಕೃತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಆಹ್ವಾನಿಸುವ ವಿಷಯದಲ್ಲಿ ಈಗಾಗಲೇ ಹಲವಾರು ಬಾರಿ ವಿವರವಾದ ಸೂಚನೆಗಳನ್ನು ನೀಡಲಾಗಿದೆ. ಹಾಗೆ ನೀಡಿದ ಸುತ್ತೋಲೆಗಳ ಪ್ರತಿಗಳನ್ನು ಲಗತ್ತಿಸಲಾಗಿದೆ.

ಆದರೂ, ಈ ಹಿಂದೆ ನೀಡಿರುವ ಸೂಚನೆಗಳನ್ನು ಅನುಸರಿಸದೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತು ಸದಸ್ಯರ ನಡುವೆ ತಾರತಮ್ಯ ಮಾಡಲಾಗುತ್ತಿದೆ ಎಂಬ ದೂರು ಸರ್ಕಾರಕ್ಕೆ ಆಗಾಗ್ಗೆ ಬರುತ್ತಲೇ ಇದೆ.

ಈ ರೀತಿ ತಾರತಮ್ಯಕ್ಕೆ ಯಾವ ರೀತಿಯಲ್ಲೂ ಅವಕಾಶ ಮಾಡದೆ, ಸರ್ಕಾರದ ವತಿಯಿಂದ ಏರ್ಪಡಿಸುವ ಸಭೆ ಮತ್ತು ಸಮಾರಂಭಗಳಲ್ಲಿ ಅನುಸರಿಸಬೇಕಾದ ಶಿಷ್ಟಾಚಾರದ ವ್ಯವಸ್ಥೆಯನ್ನು ಈ ಹಿಂದೆ ಹೊರಡಿಸಿರುವ ಸರ್ಕಾರದ ಸುತ್ತೋಲೆಗಳಲ್ಲಿ ನೀಡಿರುವ ಸೂಚನೆಯಂತೆ ತಪ್ಪದೆ ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಮತ್ತೊಮ್ಮೆ ಸೂಚಿಸಲಾಗಿದೆ.

**ಜಾ.ಕ್ರಿ. ಲಿನ್**
ಸರ್ಕಾರದ ಮುಖ್ಯ
ಕಾರ್ಯದರ್ಶಿಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 2 ರಾರಾಆ 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:16-4-93

**ಸುತ್ತೋಲೆ**

ವಿಷಯ: ಸ್ಥಳೀಯ ಶಾಸಕರನ್ನು ಹಾಗೂ ಚುನಾವಣಾ ಕ್ಷೇತ್ರದ ಸಂಸತ್ ಸದಸ್ಯರನ್ನು ಸರ್ಕಾರದ ಸಮಾರಂಭಗಳಲ್ಲಿ ಮುಖ್ಯ ಅತಿಥಿಗಳನ್ನಾಗಿ ಆಹ್ವಾನಿಸುವ ಬಗ್ಗೆ ಹಾಗೂ ಅವರುಗಳಿಗೆ ತೋರಿಸಬೇಕಾದ ಗೌರವ ಮತ್ತು ಸೌಜನ್ಯತೆಯ ಬಗ್ಗೆ.

ಉಲ್ಲೇಖ:
1. ದಿನಾಂಕ:19.5.75ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 4 ಪಿಎಲ್ಎಕ್ಸ್ 75
2. ದಿನಾಂಕ:25.8.77ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 17 ಪಿಎಲ್ಎಕ್ಸ್ 77
3. ದಿನಾಂಕ:29.3.78ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 31 ಪಿಎಲ್ಎಕ್ಸ್ 78
4. ದಿನಾಂಕ:21.6.79ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 53 ಎಎಆರ್ 79
5. ದಿನಾಂಕ:8.2.85ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 119 ಪಿಎಲ್ಎಕ್ಸ್ 84
6. ದಿನಾಂಕ:6.12.85ರ ಸುತ್ತೋಲೆ ಸಂಖ್ಯೆ:ಸಿಆಸುಇ 113 ಎಎಆರ್ 85
7. ದಿನಾಂಕ:23.9.86ರ ಸುತ್ತೋಲೆ ಸಂಖ್ಯೆ:ಸಿಆಸುಇ 115 ಪಿಎಲ್ಎಕ್ಸ್ 86
8. ದಿನಾಂಕ:25.3.87ರ ಸುತ್ತೋಲೆ ಸಂಖ್ಯೆ:ಸಿಆಸುಇ 44 ಪಿಎಲ್ಎಕ್ಸ್ 87
9. ದಿನಾಂಕ:21.6.90ರ ಸುತ್ತೋಲೆ ಸಂಖ್ಯೆ:ಸಿಆಸುಇ 23 ರಾಕಾವ್ಯ 90
10. ದಿನಾಂಕ:20.7.91ರ ಸುತ್ತೋಲೆ ಸಂಖ್ಯೆ:ಸಿಆಸುಇ 35 ರಾಕಾವ್ಯ 91
11. ದಿನಾಂಕ:8.1.92ರ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 18 ರಾರಾಆ 91
12. ದಿನಾಂಕ:23.4.92ರ ಸುತ್ತೋಲೆ ಸಂಖ್ಯೆ:ಸಿಆಸುಇ 8 ರಾರಾಆ 92
13. ದಿನಾಂಕ:15.1.93ರ ಸುತ್ತೋಲೆ ಸಂಖ್ಯೆ:ಸಿಆಸುಇ 2 ರಾರಾಆ 93
14. ದಿನಾಂಕ:5-1-93ರ ಕೇಂದ್ರ ಸಚಿವ ಸಂಪುಟದ ಕಾರ್ಯದರ್ಶಿಯವರ ಅರೆ ಸರ್ಕಾರಿ ಪತ್ರ ಸಂಖ್ಯೆ: 71:2:1:92 ಸಿಎಬಿ (11)

* * * * *

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಸ್ಥಾನವು ಮಹತ್ವಪೂರ್ಣವಾಗಿದ್ದು, ಅವರುಗಳು ಸಾರ್ವಜನಿಕರ ಹಾಗೂ ಆಡಳಿತ ವ್ಯವಸ್ಥೆಯ ನಡುವೆ ಪ್ರಮುಖ ಕೊಂಡಿಯಾಗಿರುತ್ತಾರೆ. ಸರ್ಕಾರದ ವತಿಯಿಂದ ರಾಜ್ಯಮಟ್ಟದಲ್ಲಿ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಏರ್ಪಡಿಸುವ ರಾಷ್ಟ್ರೀಯ ಹಾಗೂ ಇತರ ಸರ್ಕಾರದ ಸಮಾರಂಭ ಮತ್ತು ಕಾರ್ಯಕ್ರಮಗಳಿಗೆ ಸಂಸತ್ ಸದಸ್ಯರನ್ನು ಹಾಗೂ ಶಾಸಕರನ್ನು ಆಹ್ವಾನಿಸುವಾಗ, ಸರ್ಕಾರದ ಕಛೇರಿಗಳಿಗೆ ಅವರು ಬೇಟಿ ನೀಡಿದಾಗ ಅಧಿಕಾರಿಗಳು ಅವರಿಗೆ ಯಾವ ರೀತಿಯ ಗೌರವ ತೋರಿಸಬೇಕು ಹಾಗೂ ಅವರುಗಳೊಡನೆ ಹೇಗೆ ವರ್ತಿಸಬೇಕು ಮತ್ತು ಅವರುಗಳನ್ನು ಸರ್ಕಾರದ ಸಮಾರಂಭಗಳಿಗೆ ಆಹ್ವಾನಿಸಿದಾಗ ಅವರಿಗೆ ಯಾವರೀತಿಯ ಆಸನದ ವ್ಯವಸ್ಥೆಯನ್ನು ಮಾಡಬೇಕೆಂಬ ಬಗ್ಗೆ ವಿಸ್ತೃತ ಸೂಚನೆಗಳನ್ನು ಉಲ್ಲೇಖಿತ ಸುತ್ತೋಲೆಗಳಲ್ಲಿ ಸರ್ಕಾರವು ನೀಡಿದೆ.

ಆದಾಗ್ಯೂ ಸಹ ಸರ್ಕಾರದಿಂದ ಏರ್ಪಡಿಸುವ ಸಮಾರಂಭಗಳಿಗೆ ಚುನಾವಣಾ ಕ್ಷೇತ್ರಗಳನ್ನು ಪ್ರತಿನಿಧಿಸುವ ಸಂಸತ್ ಸದಸ್ಯರನ್ನು ಹಾಗೂ ಸ್ಥಳೀಯ ಶಾಸಕರುಗಳನ್ನು ಆಹ್ವಾನಿಸದೇ ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಹಾಗೂ ಈ ಬಗ್ಗೆ ಸದನದಲ್ಲಿಯೂ ಸಹ ಪ್ರಸ್ತಾಪಿಸಲ್ಪಟ್ಟಿದೆ. ಸರ್ಕಾರವು ಇಷ್ಟೆಲ್ಲಾ ಸೂಚನೆಗಳನ್ನು ನೀಡಿದ್ದರೂ ಸಹ ಶಾಸಕರು ಮತ್ತು ಸಂಸತ್ ಸದಸ್ಯರುಗಳಿಗೆ ಗೌರವ ತೋರಿಸುತ್ತಿಲ್ಲವೆಂಬ ವಿಷಯವು ವಿಷಾದನೀಯ.

ಸರ್ಕಾರದ ಎಲ್ಲಾ ಸೂಚನೆಗಳನ್ನು ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ತಪ್ಪದೇ ಪಾಲಿಸಬೇಕಾಗುತ್ತದೆ ಆದುದರಿಂದ, ಸರ್ಕಾರದ ಆಯುಕ್ತರು ಮತ್ತು ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರು ತಮ್ಮ ಆಡಳಿತಕ್ಕೊಳಪಡುವ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು, ಸರ್ಕಾರದ ಸ್ವಾಮ್ಯಕ್ಕೊಳಪಡುವ ಎಲ್ಲಾ ಸಂಸ್ಥೆಗಳು, ಚುನಾವಣಾ ಕ್ಷೇತ್ರವನ್ನು

ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ಶಾಸಕರು ತಮ್ಮ ಕಛೇರಿಗಳಿಗೆ ಭೇಟಿ ನೀಡಿದಾಗ ಅವರುಗಳಿಗೆ ಸೂಕ್ತ ಗೌರವ ನೀಡುವುದಲ್ಲದೇ, ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಸಮಾರಂಭಗಳು ಮತ್ತು ಇತರ ಸಮಾರಂಭಗಳಿಗೆ: ಕಾರ್ಯಕ್ರಮಗಳಿಗೆ ಅವರುಗಳನ್ನು ತಪ್ಪದೇ ಆಹ್ವಾನಿಸಬೇಕೆಂದು ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ. ಆ ಎಲ್ಲಾ ಸೂಚನೆಗಳನ್ನು ತಪ್ಪದೇ ಪಾಲಿಸುವಂತೆ ಅವರುಗಳಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಕೋರಲಾಗಿದ್ದು, ಈ ಸೂಚನೆಗಳನ್ನು ಪಾಲಿಸದಿದ್ದಲ್ಲಿ, ಈ ಬಗ್ಗೆ ಸಂಸತ್ ಸದಸ್ಯರಿಂದಾಗಲೀ ಅಥವಾ ಶಾಸಕರುಗಳಿಂದಾಗಲೀ ಯಾವುದೇ ದೂರುಗಳು ರಾಜ್ಯ ಸರ್ಕಾರಕ್ಕೆ ಬಂದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಲಾಗಿದೆ.

**ಜಾ.ಕ್ರಿ. ಲಿನ್**

ಮುಖ್ಯ ಕಾರ್ಯದರ್ಶಿಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 63 ಇಆಸು 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:24-4-93

**ಸುತ್ತೋಲೆ**

ವಿಷಯ: ಮುಖ್ಯಮಂತ್ರಿಗಳು: ಮಂತ್ರಿಗಳು: ರಾಜ್ಯ ಮಂತ್ರಿಗಳು ಪ್ರವಾಸದಲ್ಲಿದ್ದಾಗ ವಿಹಿತಾಚಾರಗಳ ಬಗ್ಗೆ ಅಧಿಕಾರಿಗಳಿಗೆ ಸೂಚನೆಗಳು.

*****

ದಿನಾಂಕ: 18-5-1982ರಂದು ಹೊರಡಿಸಲಾದ ಸರ್ಕಾರಿ ಸುತ್ತೋಲೆ ಸಂಖ್ಯೆ: ಸಿಆಸುಇ 55 ಎಎಆರ್ 82ರಲ್ಲಿ, ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳು ಪ್ರವಾಸದಲ್ಲಿರಬೇಕಾದರೆ ಯಾವ ವಿಧವಾಗಿ ಸೌಜನ್ಯವನ್ನು ತೋರಿಸಬೇಕು ಮತ್ತು ವಿಹಿತಾಚಾರಗಳನ್ನು ಅನುಸರಿಸಬೇಕೆಂಬ ಬಗ್ಗೆ ಸ್ವಯಂ ವೇದಿತವಾದ ಸೂಚನೆಗಳನ್ನು ನೀಡಲಾಗಿದ್ದಿತು. ಸದರಿ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಶೀಘ್ರ ಮಾಹಿತಿಗಾಗಿ ಲಗತ್ತಿಸಲಾಗಿದೆ.

ಎಲ್ಲಾ ವಿಭಾಗಾಧಿಕಾರಿಗಳೂ, ಇಲಾಖಾ ಮುಖ್ಯಸ್ಥರೂ, ಜಿಲ್ಲಾಧಿಕಾರಿಗಳೂ, ಪೊಲೀಸ್ ಸೂಪರಿಂಟೆಂಡೆಂಟ್‌ಗಳೂ ಮತ್ತು ಅವರ ಅಧೀನದಲ್ಲಿರುವ ಅಧಿಕಾರಿಗಳೂ ದಿನಾಂಕ:18-5-1982ರ ಸುತ್ತೋಲೆಯಲ್ಲಿರುವ ಸೌಜನ್ಯ ಸೂಚನೆಗಳನ್ನು ಮುಖ್ಯಮಂತ್ರಿಗಳು, ಮಂತ್ರಿಗಳು ಮತ್ತು ರಾಜ್ಯ ಮಂತ್ರಿಗಳು ಪ್ರವಾಸದಲ್ಲಿದ್ದಾಗ, ಚಾಚೂ ತಪ್ಪದೆ ಅನುಸರಿಸುವಂತೆ ಸೂಚಿಸಲಾಗಿದೆ.

**ಜಾ.ಕ್ರಿ. ಲಿನ್**
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 47 ರಾರಾಅ 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:25ನೇ ಜೂನ್ 93

**<u>ಸುತ್ತೋಲೆ</u>**

ವಿಷಯ: ಸಂಸತ್ ಸದಸ್ಯರು ಶಾಸಕರಿಗೆ ಸೌಜನ್ಯ ಹಾಗೂ ಗೌರವ ನೀಡುವುದು ಮತ್ತು ಅವರ ಅಭಿಪ್ರಾಯಗಳನ್ನು ಪಡೆಯುವುದರ ಬಗ್ಗೆ.

* * * * *

ನಮ್ಮ ದೇಶವು ಚುನಾಯಿತ ಪ್ರತಿನಿಧಿಗಳಿಂದ ಸರ್ಕಾರ ನಡೆಸುವಂಥ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಆಯ್ಕೆಮಾಡಿಕೊಂಡಿದೆ. ಆದಕಾರಣ, ನಮ್ಮ ದೇಶದ ಆಡಳಿತ ವ್ಯವಸ್ಥೆಯಲ್ಲಿ ಸಂಸತ್ ಸದಸ್ಯರು ಮತ್ತು ಶಾಸಕರು ವಿಶೇಷ ಮತ್ತು ಪ್ರಮುಖ ವಹಿಸುತ್ತಾರೆಂಬುದನ್ನು ನಾವು ಮನಗಾಣಬೇಕು.

2. ಈ ಬಗ್ಗೆ ಅನೇಕ ಸುತ್ತೋಲೆಗಳನ್ನು ಹೊರಡಿಸಿದ್ದಾಗ್ಯೂ, ಸಂಸತ್ ಸದಸ್ಯರು ಹಾಗೂ ಶಾಸಕರು ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಆ ಅಧಿಕಾರಿಗಳು ಅವರಿಗೆ ಸಾಕಷ್ಟು ಗೌರವ ಕೊಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದಲ್ಲದೆ ಶಾಸಕರುಗಳ ಮತಕ್ಷೇತ್ರಗಳಲ್ಲಿ ಕೈಗೊಳ್ಳಲಿರುವ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಅಧಿಕಾರಿಗಳು ಆ ಶಾಸಕರ ಅಭಿಪ್ರಾಯಗಳನ್ನು ಪಡೆಯುತ್ತಿಲ್ಲದಿರುವುದು ಅಥವಾ ಅವರ ಅಭಿಪ್ರಾಯಗಳಿಗೆ ಕಿವಿಗೊಡದೆ ಕಡೆಗಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತೆ. ಆದಕಾರಣ, ಈ ವಿಷಯದಲ್ಲಿ ಮತ್ತೆ ಸೂಚನೆಗಳನ್ನು ನೀಡುವುದು ಅತ್ಯಾವಶ್ಯಕವಾಗಿದೆ.

3. ಸಂಸತ್ ಸದಸ್ಯರಾಗಲೀ ಅಥವಾ ಶಾಸಕರಾಗಲಿ ಸರ್ಕಾರಿ ಕಛೇರಿಗೆ ಭೇಟಿ ನೀಡಿದಾಗ ಅವರಿಗೆ ಸಲ್ಲತಕ್ಕ ಗೌರವಾದರಗಳೊಂದಿಗೆ ಅವರನ್ನು ಸ್ವಾಗತಿಸಲೇಬೇಕು. ಮತ್ತು ಅವರು ಕ್ಷೇತ್ರವೊಂದರ ಪ್ರತಿನಿಧಿ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಅವರು ನೀಡುವಂಥ ಮನವಿ ಹಾಗೂ ಸಲಹೆ ಸೂಚನೆಗಳನ್ನು ಪರಿಗಣಿಸಬೇಕು.

4. ಜಿಲ್ಲಾ ಮಟ್ಟದ ಅಧಿಕಾರಿಗಳು ಸಂಸತ್ ಸದಸ್ಯರು ಹಾಗೂ ಶಾಸಕರುಗಳು ಅವರ ಮತಕ್ಷೇತ್ರದ ಅಭಿವೃದ್ಧಿ ಕಾರ್ಯ ಕುರಿತಂತೆ ನೀಡುವ ಸಲಹೆ ಸೂಚನೆಗಳನ್ನು ಸಾಮಾನ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು ಮತ್ತು ಅವುಗಳನ್ನು ಲಭ್ಯವಿರುವ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಎಷ್ಟರ ಮಟ್ಟಿಗೆ ಕಾರ್ಯಗತಗೊಳಿಸಲು ಸಾಧ್ಯವೋ ಅಷ್ಟರ ಮಟ್ಟಿಗೆ ಅನುಷ್ಠಾನಗೊಳಿಸಬೇಕು.

5. ಈ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕೋರಲಾಗಿದೆ.

**ಜಾ.ಕ್ರಿ. ಲಿನ್**

ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 49 ರಾರಾಆ 93

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:3-7-1993

**ಸುತ್ತೋಲೆ**

ಸಚಿವರುಗಳು, ರಾಜ್ಯ ಸಚಿವರುಗಳು, ವಿಧಾನ ಮಂಡಲದ ವರಿಷ್ಠರು, ಲೋಕಸಭೆ, ರಾಜ್ಯ ಸಭೆ ಸದಸ್ಯರು, ವಿಧಾನ ಪರಿಷತ್ತಿನ, ಹಾಗೂ ವಿಧಾನ ಸಭೆಯ ಸದಸ್ಯರುಗಳಿಗೆ ತೋರಿಸಬೇಕಾದ ಶಿಷ್ಟಾಚಾರ ಸ್ಥಾನಮಾನ, ಗೌರವಗಳ ಬಗ್ಗೆ ಈಗಾಗಲೇ ಪದೇ ಪದೇ ಸೂಚನೆಗಳನ್ನು ನೀಡಲಾಗಿದೆ.

ಇತ್ತೀಚೆಗೆ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳು ಭಾಗವಹಿಸಿದ ಸಮಾರಂಭವೊಂದಕ್ಕೆ ಸಂಬಂಧಪಟ್ಟ ಆಹ್ವಾನ ಪತ್ರಿಕೆಯಲ್ಲಿ ಅವರ ಹೆಸರನ್ನು ಮುಖ್ಯ ಮಂತ್ರಿಗಳು ಹಾಗೂ ಇತರ ಸಚಿವರುಗಳು ಹಾಗೂ ಮತ್ತಿತರರ ನಂತರ ಕೊನೆಯಲ್ಲಿ ಸೇರಿಸಲಾಗಿತ್ತೆಂದು, ಅದೇ ರೀತಿ ಸಮಾರಂಭಕ್ಕೆ ಸಂಬಂಧಪಟ್ಟ ಶಿಲೆಯಲ್ಲೂ ಸಹ ಅವರ ಹೆಸರನ್ನು ಕೊನೆಯಲ್ಲಿ ಸೇರಿಸಿ ಅವರಿಗೆ ಸಲ್ಲಬೇಕಾದ ಶಿಷ್ಟಾಚಾರ ಮತ್ತು ಗೌರವ ಸಲ್ಲಿಸುವುದರಲ್ಲಿ ಲೋಪದೋಷ ಉಂಟಾಗಿರುವ ಬಗ್ಗೆ ಅವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿರುತ್ತಾರೆ.

ರಾಜ್ಯ ಸರ್ಕಾರವು ವಿವಿಧ ವರಿಷ್ಠರಿಗೆ ಸಲ್ಲಬೇಕಾದ ಸ್ಥಾನಮಾನ ಶಿಷ್ಟಾಚಾರ ವ್ಯವಸ್ಥೆಯ ಆದ್ಯತೆಯ ಬಗ್ಗೆ ಹೊರಡಿಸಿರುವ ಅದ್ಯತಾ ಪಟ್ಟಿಯ ಪ್ರಕಾರ (ಟೇಬಲ್ ಆಫ್ ಪ್ರಿಸಿಡೆನ್ಸ್) ಕೇಂದ್ರ ಸರ್ಕಾರ: ರಾಜ್ಯ ಸರ್ಕಾರದ ಸಚಿವರುಗಳ, ಇತರ ವರಿಷ್ಠರುಗಳ ಸ್ಥಾನಮಾನಗಳು ಈ ಕೆಳಕಂಡಂತೆ ಇರುತ್ತದೆ:-

| | | |
|---|---|---|
| 1. | ಮುಖ್ಯಮಂತ್ರಿಗಳು, ಭಾರತ ಸರ್ಕಾರದ ಮಂತ್ರಿಗಳು ಲೋಕಸಭೆ: ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು | ಕ್ರಮಾಂಕ 7 |
| 2. | ರಾಜ್ಯಸಭೆ, ಲೋಕಸಭೆಗಳ ಉಪ ಸಭಾಪತಿಗಳು, ಉಪಾಧ್ಯಕ್ಷರು, ಕೇಂದ್ರ ಸರ್ಕಾರದ ರಾಜ್ಯ ಮಂತ್ರಿಗಳು | -"- 10 |
| 3. | ವಿಧಾನ ಪರಿಷತ್ತಿನ ಸಭಾಪತಿಗಳು ಮತ್ತು ವಿಧಾನ ಸಭೆಯ ಅಧ್ಯಕ್ಷರು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು | -"- 14 |
| 4. | ರಾಜ್ಯದ ಸಚಿವ ಸಂಪುಟ ದರ್ಜೆಯ ಮಂತ್ರಿಗಳು, ವಿರೋಧ ಪಕ್ಷದ ನಾಯಕರುಗಳು, ಕೇಂದ್ರ ಸರ್ಕಾರದ ಉಪ ಮಂತ್ರಿಗಳು, ಮಾಜಿ ಮುಖ್ಯಮಂತ್ರಿಗಳು | -"- 15 |
| 5. | ಉಚ್ಚ ನ್ಯಾಯಾಲಯ ನ್ಯಾಯಾಧೀಶರುಗಳು | -"- 17 |
| 6. | ರಾಜ್ಯ ಸರ್ಕಾರದ ರಾಜ್ಯ ಸಚಿವರುಗಳು ಹಾಗೂ ಸರ್ಕಾರಿ ಮುಖ್ಯ ಸಚೇತಕರುಗಳು | -"- 18 |
| 7. | ರಾಜ್ಯಸಭೆ, ಲೋಕಸಭೆ ಸದಸ್ಯರು, ವಿಧಾನ ಪರಿಷತ್ತಿನ, ವಿಧಾನಸಭೆಯ ಸದಸ್ಯರು | -"- 21 |

ರಾಜ್ಯ ಸರ್ಕಾರದ ವತಿಯಿಂದ ಏರ್ಪಡಿಸಿದ ಎಲ್ಲ ಸಭೆ ಸಮಾರಂಭಗಳಲ್ಲಿ ಮೇಲ್ಕಂಡ ಆದ್ಯತಾ ಪಟ್ಟಿಯ ಪ್ರಕಾರ ಅವರಿಗೆ ಸಲ್ಲಬೇಕಾದ ಸ್ಥಾನಮಾನಗಳನ್ನು ಆಯಾ ವರಿಷ್ಠರಿಗೆ ತಪ್ಪದೇ ಸಲ್ಲಿಸಬೇಕು. ಆಸನ ವ್ಯವಸ್ಥೆ ಮಾಡುವಾಗಲೂ ಇದೇ ಕ್ರಮವನ್ನು ಅನುಸರಿಸಬೇಕು. ಸಮಾರಂಭಗಳಲ್ಲಿ ಆಗುವ ಶಂಕುಸ್ಥಾಪನೆ ಅಥವಾ ಪ್ರಾರಂಭೋತ್ಸವ ಇತ್ಯಾದಿಗಳಿಗೆ ಸಂಬಂಧಪಟ್ಟ ಶಿಲೆಗಳಲ್ಲೂ ಸಹ ಇದೇ ಆದ್ಯತೆಯ ಕ್ರಮಗಳನ್ನು ಅನುಸರಿಸಿ ಅವರ ಹೆಸರುಗಳನ್ನು ನಮೂದಿಸಬೇಕು. ರಾಜ್ಯ ಸರ್ಕಾರದ ಪರವಾಗಿ ನಡೆಯುವ ಯಾವುದೇ ಸಭೆ ಸಮಾರಂಭಕ್ಕೆ ಸಂಬಂಧಪಟ್ಟ ಆಹ್ವಾನ ಪತ್ರಿಕೆಗಳಲ್ಲೂ ಸಹ ಇದೇ ಆದ್ಯತೆಯ ಕ್ರಮವನ್ನು ಅನುಸರಿಸಿ ಅವರ ಹೆಸರುಗಳನ್ನು ನಮೂದಿಸಬೇಕು. ಈ ಬಗ್ಗೆ ಯಾವುದೇ ಲೋಪದೋಷಗಳು ಇನ್ನು ಮುಂದೆ ವರದಿ ಆದಲ್ಲಿ ಸಂಬಂಧಪಟ್ಟವರ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳುವುದು ಅನಿವಾರ್ಯವಾಗುವುದು.

**ರಿನ್ ಸಾಂಗ**

ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 18 ರಾರಾಆ 1991

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:8-1-92

**ಅಧಿಕೃತ ಜ್ಞಾಪನಾ ಪತ್ರ**

ವಿಷಯ: ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ - ನಿರ್ದೇಶನ.

* * * * *

ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳು ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಜನತೆಯ ಅಧಿಕೃತ ಪ್ರತಿನಿಧಿಗಳಿಂದ ಅತೀ ಮಹತ್ವದ ಸ್ಥಾನವನ್ನು ಪಡೆದಿದ್ದಾರೆ.

ಸರ್ಕಾರದ ವತಿಯಿಂದ ಜಿಲ್ಲೆಗಳಲ್ಲಿ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯ ಸಮಾರಂಭಗಳಿಗೆ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುತ್ತಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ.

ಇನ್ನು ಮುಂದೆ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸಲು ಜವಾಬ್ದಾರರಾದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಮತ್ತು ಜಿಲ್ಲಾಧಿಕಾರಿಗಳು, ಸಂಸತ್ತಿನ ಎಲ್ಲಾ ಸದಸ್ಯರು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೇ ಅಹ್ವಾನ ಪತ್ರಿಕೆಗಳನ್ನು ಕಳುಹಿಸುವ ಬಗ್ಗೆ ಸೂಕ್ತ ವ್ಯವಸ್ಥೆ ಮಾಡತಕ್ಕದ್ದು ಮತ್ತು ಈ ನಿಟ್ಟಿನಲ್ಲಿ ತಪ್ಪು ತಿಳುವಳಿಕೆಗೆ ಅನಪೇಕ್ಷಿತ ಘಟನೆಗಳಿಗೆ ಅವಕಾಶ ಕಲ್ಪಿಸದಿರಲು ಕೋರಿದೆ. ಪ್ರತಿಯೊಂದು ಇಲಾಖೆಗೆ ಸಂಬಂಧಪಟ್ಟಂತೆ ಹಿರಿಯ ಅಧಿಕಾರಿಯನ್ನು ಗೊತ್ತುಪಡಿಸಿ ಅವರ ಮುಖಾಂತರ ಸಂಸತ್ ಸದಸ್ಯರು ಮತ್ತು ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನಪತ್ರಿಕೆಯನ್ನು ಖುದ್ದಾಗಿ ತಲುಪಿಸುವ ಬಗ್ಗೆ ಸೂಕ್ತ ರೀತಿಯಲ್ಲಿ ವ್ಯವಸ್ಥೆ ಮಾಡುವುದು. ಆಹ್ವಾನ ಪತ್ರಿಕೆಗಳನ್ನು ಮುದ್ರಿಸದಿದ್ದ ಸಂದರ್ಭಗಳಲ್ಲಿ ಕನಿಷ್ಠ ಪಕ್ಷ ಪತ್ರದ ಮುಖೇನ: ಅನೌಪಚಾರಿಕವಾಗಿ ಜವಾಬ್ದಾರಿಯುತ ಅಧಿಕಾರಿಗಳ ಮುಖಾಂತರ ಸಂಸತ್ತಿನ ಸದಸ್ಯರನ್ನು ಮತ್ತು ರಾಜ್ಯ ವಿಧಾನಸಭಾ: ವಿಧಾನ ಪರಿಷತ್ತಿನ ಸದಸ್ಯರನ್ನು ಸಭೆಯ ಸಮಾರಂಭ : ಕಾರ್ಯಕ್ರಮಗಳಿಗೆ ಆಹ್ವಾನಿಸಲು ಮತ್ತೊಮ್ಮೆ ಕೋರಿದೆ.

ಈ ವಿಷಯದ ಬಗ್ಗೆ ಈಗಾಗಲೇ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಸಿಆಸುಇ 35 ರಾಕಾವ್ಯ 91, ದಿನಾಂಕ: 20-7-90ರತ್ತ ಗಮನ ಸೆಳೆದಿದೆ.

**ಗುರುಮೂರ್ತಿ ಹೆಗಡೆ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಚಿವಸಂಪುಟ ವ್ಯವಹಾರಗಳು ಹಾಗೂ ಸಿಬ್ಬಂದಿ
ಮತ್ತು ಆಡಳಿತ ಸುಧಾರಣೆ ಇಲಾಖೆ (ರಾಜಕೀಯ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 8 ರಾರಾಆ 1992

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:23-4-92

**ಸುತ್ತೋಲೆ**

**ವಿಷಯ:** ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಹಾಗೂ ರಾಜ್ಯದ ಸಮಾರಂಭಗಳಿಗೆ ಸಂಸತ್ ಸದಸ್ಯರು ಹಾಗೂ ವಿಧಾನ ಮಂಡಲದ ಸದಸ್ಯರನ್ನು ನಿಯಮಿತವಾಗಿ ಆಹ್ವಾನಿಸುವ ಬಗ್ಗೆ.

*****

ಸರ್ಕಾರದ ವತಿಯಿಂದ ಏರ್ಪಡಿಸುವ ರಾಷ್ಟ್ರೀಯ ಮತ್ತು ರಾಜ್ಯದ ಸಮಾರಂಭಗಳಿಗೆ ಜನತೆಯ ಅಧಿಕೃತ ಪ್ರತಿನಿಧಿಗಳಾದ ಸಂಸತ್ ಸದಸ್ಯರು ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಆಹ್ವಾನಿಸುವ ಬಗ್ಗೆ ಸವಿಸ್ತಾರವಾದ ಸೂಚನೆಗಳನ್ನು ಸಂಖ್ಯೆ: ಸಿಆಸುಇ 18 ರಾರಾಆ 91, ದಿನಾಂಕ:8-1-1992ರ ಅಧಿಕೃತ ಜ್ಞಾಪನದಲ್ಲಿ ನೀಡಿದೆ.

ಆದರೂ, ಆಹ್ವಾನಪತ್ರಿಕೆಗಳನ್ನು ಕಳುಹಿಸುವಾಗ ವಿಧಾನಸಭೆಯ ಮತ್ತು ವಿಧಾನ ಪರಿಷತ್ತಿನ ಸದಸ್ಯರ ನಡುವೆ ತಾರತಮ್ಯ ತೋರಿಸಲಾಗುತ್ತಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆ.

ಪ್ರಸ್ತುತ ವಿಧಾನಸಭಾ ಮತ್ತು ವಿಧಾನ ಪರಿಷತ್ತಿನ ಸದಸ್ಯರ ನಡುವೆ ಅಂತಸ್ತಿನ ತಾರತಮ್ಯವಿಲ್ಲದ ಪ್ರಯುಕ್ತ ಅವರ ನಡುವೆ ಭೇದಭಾದ ಮಾಡುವುದು ಸರಿಯಾಗುವುದಿಲ್ಲ. ಆದ್ದರಿಂದ, ಇನ್ನು ಮುಂದೆ ಇಂತಹ ಭೇದಭಾವಗಳಿಗೆ ಅವಕಾಶ ಮಾಡದೆ ದಿನಾಂಕ: 8-1-1992ರ ಅಧಿಕೃತ ಜ್ಞಾಪನದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತೊಮ್ಮೆ ಸೂಚಿಸಲಾಗಿದೆ.

**ಬಿ. ಪಾರ್ಥಸಾರಥಿ**
ಸರ್ಕಾರದ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 35 ರಾಕಾವ್ಯ 1991

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:20-7-1991.

**ಸುತ್ತೋಲೆ**

ವಿಷಯ: ಸಂಸತ್ ಸದಸ್ಯರುಗಳಿಗೆ, ಶಾಸಕರುಗಳಿಗೆ ಅಧಿಕಾರಿಗಳು ತೋರಿಸಬೇಕಾದ **ಗೌರವ ಮತ್ತು** ಸೌಜನ್ಯತೆಯ ಬಗ್ಗೆ.

* * * * *

ಪ್ರಜಾಪ್ರಭುತ್ವದಲ್ಲಿ ಚುನಾಯಿತ ಪ್ರತಿನಿಧಿಗಳಾದ ಸಂಸತ್ ಸದಸ್ಯರುಗಳು, ಶಾಸಕರುಗಳ ಸ್ಥಾನ ಬಹಳ ಪ್ರಾಮುಖ್ಯವಾದುದು. ಅವರು ಜನತೆಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸರ್ಕಾರಿ ಕಛೇರಿಗಳಿಗೆ ಭೇಟಿ ನೀಡಿದಾಗ ಅಧಿಕಾರಿಗಳು ಅವರೊಂದಿಗೆ ಜವಾಬ್ದಾರಿಯುತರಾಗಿ ಕ್ರಿಯಾಶೀಲತೆ, ಕರ್ತವ್ಯಪ್ರಜ್ಞೆ, ಗೌರವ ಮತ್ತು ಸೌಜನ್ಯಗಳಿಂದ ವರ್ತಿಸಿ, ಸರ್ಕಾರಿ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಮೂಡಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಯತ್ನಿಸುವ ಬಗ್ಗೆ ಸವಿಸ್ತಾರವಾದ ಮಾರ್ಗದರ್ಶನವನ್ನು ಈಗಾಗಲೇ ಅಧಿಕೃತ ಜ್ಞಾಪನ ಸಂಖ್ಯೆ:ಜಿಎಡಿ 4 ಪಿಎಲ್ ಎಕ್ಸ್ 75, ದಿನಾಂಕ: 19-5-1975, ಸಂಖ್ಯೆ: ಡಿಪಿಎಆರ್ 17 ಪಿಎಲ್‌ಎಕ್ಸ್ 77, ದಿನಾಂಕ:25-8-77 ಮತ್ತು ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 31 ಪಿಎಲ್‌ಎಕ್ಸ್ 78, ದಿನಾಂಕ:29-2-78ಗಳಲ್ಲಿ ನೀಡಿರುವುದನ್ನು ಮುಂದೆಯೂ ತಪ್ಪದೇ ಪರಿಪಾಲಿಸಲು ಈ ಮೂಲಕ ಪುನರುಚ್ಚರಿಸಿದೆ ಮತ್ತು ಅವುಗಳ ಪ್ರತಿಗಳನ್ನು ಸಹ ಇದರೊಂದಿಗೆ ಲಗತ್ತಿಸಲಾಗಿದೆ. ಈ ವಿಷಯದಲ್ಲಿ ಯಾವುದೇ ಲೋಪದೋಷಗಳಿಗೆ ಅವಕಾಶ ಕಲ್ಪಿಸದೆ ಸರ್ಕಾರದ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಲು ಮೇಲ್ಕಾಣಿಸಿದ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಎಲ್ಲರಿಗೂ ಪುನರುಚ್ಚರಿಸಿ ಮನವರಿಕೆ ಮಾಡಲು ಕೋರಲಾಗಿದೆ.

**ಗುರುಮೂರ್ತಿ ಹೆಗಡೆ**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸು ಇಲಾಖೆ (ರಾಜಕೀಯ)

## ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 23 ರಾಕಾವ್ಯ 1990

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:21-6-1990.

### ಸುತ್ತೋಲೆ

ವಿಷಯ: ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ-ಶಾಸಕರು ಮತ್ತು ಸಂಸತ್ ಸದಸ್ಯರುಗಳ ಆಸನ ವ್ಯವಸ್ಥೆ-ಗೌರವದಿಂದ ಕಂಡು ವಿಳಂಬ ಮಾಡದೆ ಕೆಲಸ ಮಾಡಿಕೊಡುವ ಬಗ್ಗೆ- ಸೂಚನೆಗಳು.

*****

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:(1) ಜಿಎಡಿ 4 ಪಿಎಲ್ ಎಕ್ಸ್ 75, ದಿನಾಂಕ: 19-5-1975, (೨) ಡಿಪಿಎಆರ್ 17 ಪಿಎಲ್‌ಎಕ್ಸ್ 77, ದಿನಾಂಕ:25-8-77, (3) ಡಿಪಿಎಆರ್ 53 ಎಎಆರ್ 79 ದಿನಾಂಕ:21-6-1979, (೪) ಸರ್ಕಾರಿ ಆಜ್ಞೆ ಡಿಪಿಎಆರ್ 119 ಪಿಎಲ್‌ಎಕ್ಸ್ 84 ದಿನಾಂಕ:8-2-1985, (೫) ಸುತ್ತೋಲೆ ಸಂಖ್ಯೆ: ಡಿಪಿಎಆರ್ 113 ಎಎಆರ್ 85 ದಿನಾಂಕ:6-12-1985, (೬) ಸುತ್ತೋಲೆ ಸಂಖ್ಯೆ: ಡಿಪಿಎಆರ್ 115 ಪಿಎಲ್‌ಎಕ್ಸ್ 86 ದಿನಾಂಕ:23-9-1986 ಹಾಗೂ (೭) ಸುತ್ತೋಲೆ ಸಂಖ್ಯೆ: ಡಿಪಿಎಆರ್ 44 ಪಿಎಲ್‌ಎಕ್ಸ್ 87, ದಿನಾಂಕ:25-3-1987 (ಆದೇಶಗಳ ಪ್ರತಿ ಲಗತ್ತಿಸಿದೆ). ಈ ಆದೇಶಗಳಲ್ಲಿ ಸರ್ಕಾರದ ಅಧಿಕಾರಿಗಳು ಮತ್ತು ನೌಕರರು ಸಂಸತ್ತಿನ ಸದಸ್ಯರು, ಶಾಸಕರು ಹಾಗೂ ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಸರ್ಕಾರಿ ಕಛೇರಿಗಳಿಗೆ ಭೇಟಿ ಇತ್ತಾಗ ಅವರೊಡನೆ ಸೌಜನ್ಯದಿಂದ ವರ್ತಿಸುವ ಬಗ್ಗೆ ಮತ್ತು ಅವರಿಗೆ ಗೌರವ ನೀಡುವ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ ಹಾಗೂ ಈ ಗಣ್ಯರನ್ನು ಸರ್ಕಾರದ ಇಲಾಖೆಗಳು ಏರ್ಪಡಿಸುವ ಸಾರ್ವಜನಿಕ ಸಮಾರಂಭಗಳಿಗೆ ಆಹ್ವಾನಿಸುವಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಕೂಡ ನಿರ್ದೇಶನ ನೀಡಲಾಗಿದೆ.

ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ನಡೆಯುವಾಗ ಜಿಲ್ಲಾಧಿಕಾರಿಗಳು ಸಭಾಂಗಣದ ಮೇಲಿನ ಕುರ್ಚಿಯಲ್ಲಿ ಆಸೀನರಾಗಿ ಶಾಸಕರು: ಸಂಸತ್ ಸದಸ್ಯರುಗಳನ್ನು ಕೆಳಗೆ ಕೂಡಿಸುವ ವ್ಯವಸ್ಥೆಯಿದೆಯೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಇದು ಸರಿಯಾದ ವ್ಯವಸ್ಥೆಯಲ್ಲ. ಆದ್ದರಿಂದ ಇನ್ನು ಮುಂದೆ, ಜಿಲ್ಲಾಧಿಕಾರಿಗಳೂ ಸಹ ಶಾಸಕರು: ಸಂಸತ್ ಸದಸ್ಯರುಗಳ ಜೊತೆಯಲ್ಲಿಯೇ ಕುಳಿತುಕೊಂಡು ಸಭೆ ನಡೆಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ನಿರ್ದೇಶಿಸಲಾಗಿದೆ.

ಜಿಲ್ಲಾಧಿಕಾರಿಗಳಿಗೆ, ಅವರ ಕಛೇರಿ, ತಾಲ್ಲೂಕು ಕಛೇರಿ ಹಾಗೂ ಉಪ ವಿಭಾಗಾಧಿಕಾರಿಗಳ ಕಛೇರಿಗಳಲ್ಲಿನ ನೌಕರರು: ಅಧಿಕಾರಿಗಳಿಗೆ, ಶಾಸಕರು ಹಾಗೂ ಸಂಸತ್ ಸದಸ್ಯರುಗಳನ್ನು ಗೌರವದಿಂದ ಕಾಣುವುದರ ಜೊತೆಗೆ ಅವರ ಕೆಲಸಗಳನ್ನು ವಿಳಂಬ ಮಾಡದೆ ಜರೂರಾಗಿ ಮಾಡಿಕೊಡುವಂತೆ ತಿಳುವಳಿಕೆ ನೀಡಲು ಸಹ ನಿರ್ದೇಶಿಸಲಾಗಿದೆ.

**ಎಂ. ಶಂಕರನಾರಾಯಣನ್**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಪಿಎಆರ್ 44 ಪಿಎಲ್ಎಕ್ಸ್ 87

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:25ನೇ ಮಾರ್ಚ್ 1987.

## <u>ಸುತ್ತೋಲೆ</u>

ವಿಷಯ: ಸಂಸತ್ ಸದಸ್ಯರುಗಳಿಗೆ: ಶಾಸಕರುಗಳಿಗೆ ಅಧಿಕಾರಿಗಳು ತೋರಿಸುವ ಸೌಜನ್ಯದ ಬಗ್ಗೆ ಮತ್ತು ಸರ್ಕಾರದ ಎಲ್ಲಾ ಸಮಾರಂಭಗಳಿಗೆ ಸಂಸತ್ ಸದಸ್ಯರುಗಳನ್ನು: ಶಾಸಕರುಗಳನ್ನು ಆಹ್ವಾನಿಸುವ ಬಗ್ಗೆ-ಸೂಚನೆಗಳು.

* * * * *

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:(1) ಜಿಎಡಿ 4 ಪಿಎಲ್ ಎಕ್ಸ್ 75, ದಿನಾಂಕ: 19-5-1975, (೨) ಡಿಪಿಎಆರ್ 17 ಪಿಎಲ್ಎಕ್ಸ್ 77, ದಿನಾಂಕ:25-8-1977 (3) ಡಿಪಿಎಆರ್ 53 ಎಎಆರ್ 79 ದಿನಾಂಕ:21-6-1979, (೪) ಸರ್ಕಾರಿ ಆಜ್ಞೆ ಡಿಪಿಎಆರ್ 119 ಪಿಎಲ್ಎಕ್ಸ್ 84 ದಿನಾಂಕ:6-12-1985, (೫) ಸುತ್ತೋಲೆ ಸಂಖ್ಯೆ: ಡಿಪಿಎಆರ್ 113 ಎಎಆರ್ 85 ದಿನಾಂಕ:6-12-1985, ಹಾಗೂ (೬) ಸುತ್ತೋಲೆ ಸಂಖ್ಯೆ:ಡಿಪಿಎಆರ್ 115 ಪಿಎಲ್ಎಕ್ಸ್ 86 ದಿನಾಂಕ:23-9-1986 (ಆದೇಶಗಳ ಪ್ರತಿ ಲಗತ್ತಿಸಿದೆ). ಈ ಆದೇಶಗಳಲ್ಲಿ ಸರ್ಕಾರದ ಅಧಿಕಾರಿಗಳು ಮತ್ತು ನೌಕರರು ಸಂಸತ್ತಿನ ಸದಸ್ಯರು, ಹಾಗೂ ಶಾಸಕರು ಸರ್ಕಾರಿ ಕಚೇರಿಗಳಿಗೆ ಭೇಟಿ ಇತ್ತಾಗ ಅವರೊಡನೆ ಸೌಜನ್ಯದಿಂದ ವರ್ತಿಸುವ ಬಗ್ಗೆ ಮತ್ತು ಅವರಿಗೆ ಗೌರವ ನೀಡುವ ಬಗ್ಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ ಹಾಗೂ ಈ ಗಣ್ಯರನ್ನು ಸರ್ಕಾರದ ಇಲಾಖೆಗಳು ಏರ್ಪಡಿಸುವ ಸಾರ್ವಜನಿಕ ಸಮಾರಂಭಗಳಿಗೆ ಆಹ್ವಾನಿಸುವಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಕೂಡ ನಿರ್ದೇಶನ ನೀಡಲಾಗಿದೆ.

ಆದರೆ ಇತ್ತೀಚೆಗೆ ರಾಜ್ಯದ ಹಿರಿಯ ಅಧಿಕಾರಿಗಳು ಅಂದರೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್‌ಗಳು ತಮ್ಮ ಕಛೇರಿಗಳಿಗೆ ಶಾಸಕರು ಹಾಗೂ ಸಂಸತ್ ಸದಸ್ಯರು ಭೇಟಿ ನೀಡಿದಾಗ ಅವರನ್ನು ಗೌರವಪೂರ್ಣವಾಗಿ ಕಾಣುತ್ತಿಲ್ಲ ಮತ್ತು ಸೌಜನ್ಯವನ್ನು ತೋರಿಸುತ್ತಿಲ್ಲವೆಂಬ ಅಂಶವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಮುಖ್ಯಮಂತ್ರಿಗಳು ಈ ವಿಷಯವನ್ನು ತೀವ್ರವಾಗಿ ಪರಿಗಣಿಸಿದ್ದಾರೆ.

ಆದ್ದರಿಂದ, ಸರ್ಕಾರದ ಅಧಿಕಾರಿಗಳು, ಸಂಸತ್ ಸದಸ್ಯರಾಗಲೀ, ಶಾಸಕರಾಗಲೀ, ಜಿಲ್ಲಾ ಪರಿಷತ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಾಗಲೀ ಸರ್ಕಾರಿ ಕಚೇರಿಗಳಿಗೆ ಭೇಟಿ ನೀಡಿದಾಗ ಅವರನ್ನು ಗೌರವದಿಂದ ಕಾಣಬೇಕಾಗಿ ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.

**ಟಿ.ಆರ್. ಸತೀಶ್ ಚಂದ್ರನ್**
ಸರ್ಕಾರದ ಮುಖ್ಯ ಕಾರ್ಯದರ್ಶಿ

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 115 ಪಿಎಲ್ಎಕ್ಸ್ 86

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:ಸೆಪ್ಟೆಂಬರ್ 23, 1986.

**ಸುತ್ತೋಲೆ**

ವಿಷಯ: ಸರ್ಕಾರದ ಮತ್ತು ಸಂಸತ್ ಹಾಗೂ ರಾಜ್ಯದ ಶಾಸಕಾಂಗ ಸದಸ್ಯರ ನಡುವಿನ ಅಧಿಕೃತ ಕಲಾಪಗಳು ಸಾರ್ವಜನಿಕ ಸಮಾರಂಭಗಳಿಗೆ ಆಹ್ವಾನಿಸುವ ಬಗ್ಗೆ- ಸೂಚನೆಗಳು.

ಉಲ್ಲೇಖ:
1. ಅಧಿಕೃತ ಜ್ಞಾಪನ ಸಂಖ್ಯೆ: ಜಿಎಡಿ 4 ಪಿಎಲ್ ಎಕ್ಸ್ 75, ದಿನಾಂಕ: 19-5-1975,
2. ಅಧಿಕೃತ ಜ್ಞಾಪನ ಸಂಖ್ಯೆ ಡಿಪಿಎಆರ್ 17 ಪಿಎಲ್ಎಕ್ಸ್ 77, ದಿನಾಂಕ:25-8-1977
3. ಸರ್ಕಾರಿ ಆಜ್ಞೆ ಡಿಪಿಎಆರ್ 119 ಪಿಎಲ್ಎಕ್ಸ್ 84 ದಿನಾಂಕ:8-2-1985
4. ಸುತ್ತೋಲೆ ಸಂಖ್ಯೆ: ಡಿಪಿಎಆರ್ 113 ಎಎಆರ್ 85 ದಿನಾಂಕ:6-12-1985

* * * * *

ಸರ್ಕಾರದ ಇಲಾಖೆಗಳು ಏರ್ಪಡಿಸುವ ಸಾರ್ವಜನಿಕ ಸಮಾರಂಭಗಳಿಗೆ ಸ್ಥಳೀಯ ಕ್ಷೇತ್ರದ ಸದಸ್ಯರುಗಳ ಹಾಗೂ ಶಾಸಕಾಂಗದ ಸದಸ್ಯರನ್ನು ಆಹ್ವಾನಿಸುವ ಬಗ್ಗೆ ನಿರ್ದೇಶನಗಳನ್ನು ಉಲ್ಲೇಖ (1)ರಲ್ಲಿನ ಅಧಿಕೃತ ಜ್ಞಾಪನದಲ್ಲಿ ನೀಡಲಾಗಿದೆ. ಅಲ್ಲದೆ, ಅವರ ಪೀಠಾಸನ ವ್ಯವಸ್ಥೆಯನ್ನು ಕ್ರಮಾಂಕ ಜಿಎಡಿ 4 ಪಿಎಲ್ಎಕ್ಸ್, 75 ದಿನಾಂಕ 19-5-75ರ ಅಧಿಕೃತ ಜ್ಞಾಪನ ಕಂಡಿಕೆ 5ರ ಅನುಸಾರವಾಗಿ ಮಾಡಬೇಕೆಂದು ನಿರ್ದೇಶಿಸಲಾಗಿದೆ. ಕ್ರಮಾಂಕ ಡಿಪಿಎಆರ್ 119 ಪಿಎಲ್ಎಕ್ಸ್ 84 ದಿನಾಂಕ:8-2-85ರ ಆದೇಶದಲ್ಲಿ ಸರ್ಕಾರದ ಅಥವಾ ಸಾರ್ವಜನಿಕ ಸಮಾರಂಭಗಳನ್ನು ನಡೆಸುವಲ್ಲಿ ಸ್ಥಳೀಯ ಪ್ರಜಾ ಪ್ರತಿನಿಧಿಗಳಿಗೆ ಯಾವ ರೀತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಕೂಡ ನಿರ್ದೇಶನಗಳನ್ನು ನೀಡಲಾಗಿದೆ ಹಾಗೂ ಕ್ರಮಾಂಕ: ಡಿಪಿಎಆರ್ 113 ಎಎಆರ್ 85 ದಿನಾಂಕ:6-12-85ರ ಸುತ್ತೋಲೆಯಲ್ಲಿ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಶಾಸಕರೇ ಅದಿಯಾಗಿ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮೀಕ್ಷಣಾ ಸಮಿತಿಗಳ ಸಭೆಗಳಿಗೆ, ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟ ಸಮೀಕ್ಷಣಾ ಸಭೆಗಳನ್ನು ಇವರು ನಡೆಸಬಹುದೆಂದು ಸ್ಪಷ್ಟೀಕರಿಸಲಾಗಿದೆ.

ಆದಾಗ್ಯೂ, ಇತ್ತೀಚೆಗೆ ಸ್ಥಳೀಯ ವಿಧಾನಸಭಾ ಸದಸ್ಯರೊಬ್ಬರನ್ನು ಅವರ ಚುನಾವಣಾ ಕ್ಷೇತ್ರದಲ್ಲಿ ನಡೆದ ಸಾರ್ವಜನಿಕ ಸಮಾರಂಭಕ್ಕೆ ಸಕಾಲದಲ್ಲಿ ಆಹ್ವಾನಿಸಲಿಲ್ಲವೆಂಬ ದೂರು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆದುದರಿಂದ, ಪ್ರಜಾ ಪ್ರತಿನಿಧಿಗಳನ್ನು ಮೇಲೆ ಹೇಳಿದ ಸಮಾರಂಭಗಳಿಗೆ ಆಹ್ವಾನಿಸುವ ಸಂದರ್ಭದಲ್ಲಿ ಈವರೆವಿಗೂ ಹೊರಡಿಸಿದ ಸರ್ಕಾರದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಹೇಳುತ್ತಾ, ಆಹ್ವಾನ ಪತ್ರಿಕೆಗಳನ್ನು ಸಾಕಷ್ಟು ಮುಂಚಿತವಾಗಿ ತಲುಪಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಿಹೇಳಲಾಗಿದೆ. ಹಾಗೂ ಇನ್ನು ಮುಂದೆ ಇಂತಹ ದೂರುಗಳು ಬರದಂತೆ ಜಾಗ್ರತೆ ವಹಿಸಬೇಕೆಂದು ವಿನಂತಿಸಲಾಗಿದೆ.

**ಟಿ.ಆರ್. ಸತೀಶ್ ಚಂದ್ರನ್**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಕರ್ನಾಟಕ ಸರ್ಕಾರದ ವ್ಯವಹರಣೆಗಳು**

ವಿಷಯ: ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳ ನಡುವಣ ಸರ್ಕಾರ ವ್ಯವಹಾರಗಳು – ಸರ್ಕಾರಿ ಸಮಾರಂಭಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವುದು – ಸೂಚನೆಗಳು- ಕುರಿತು..

**ಪ್ರಸ್ತಾವನೆ:**

ಅಧಿಕೃತ ಜ್ಞಾಪನ ಸಂಖ್ಯೆ:ಡಿಪಿಎಆರ್ 17 ಪಿಎಲ್ಎಕ್ಸ್ 77, ದಿನಾಂಕ:25-8-1977ರಲ್ಲಿ ಸಂಸತ್ತಿನ ಎಲ್ಲ ಸ್ಥಳೀಯ ಸದಸ್ಯರುಗಳಿಗೆ ಹಾಗೂ ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ತಪ್ಪದೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ಸಲುವಾಗಿ ಸರ್ಕಾರಿ ಸಮಾರಂಭ, ಸರ್ಕಾರಿ ಇಲಾಖೆಗಳು ಏರ್ಪಡಿಸುವ ಸಮಾರಂಭಗಳನ್ನು, ಏರ್ಪಡಿಸಲು ಜವಾಬ್ದಾರರಾದ ಎಲ್ಲ ಇಲಾಖಾ ಮತ್ತು ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ನೀಡಲಾಗಿದೆ. ಅಲ್ಲದೆ, ಸದರಿ ಅಧಿಕೃತ ಜ್ಞಾಪನ ಪತ್ರದಲ್ಲಿ, ಆಜ್ಞಾ. ಸಂ.ಜಿಎಡಿ 4 ಪಿಎಲ್ಎಕ್ಸ್ 75, ದಿನಾಂಕ:19-5-1975ನೇ ಪ್ಯಾರಾಕ್ಕನುಸಾರವಾಗಿ ಆಸನ ವ್ಯವಸ್ಥೆಗಳನ್ನು ಮಾಡಬೇಕೆಂದು ಸೂಚನೆಗಳನ್ನು ನೀಡಲಾಗಿದೆ. ಈ ವಿಷಯವನ್ನು 29-9-1982ರಂದು ದೊಡ್ಡಹಳ್ಳಿಯಲ್ಲಿ ಸಂಭವಿಸಿದ ಪೋಲಿಸ್ ಗೋಲಿಬಾರ್ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ಆಯೋಗದ ವರದಿಯಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ. ಅಷ್ಟೇ ಅಲ್ಲದೆ, ಸರ್ಕಾರಿ ಆದೇಶ ಸಂಖ್ಯೆ: ಹೆಚ್‌ಡಿ 93 ಪಿಸಿಇ 83, ದಿನಾಂಕ:15-3-1984ರಲ್ಲಿ ಇತರ ವಿಷಯಗಳ ಜನತೆ ಸ್ಥಳೀಯ ಜನತೆಯ ಪ್ರತಿನಿಧಿಗಳು, ವಿಚಾರಣಾ ಆಯೋಗವು ಶಿಫಾರಸು ಮಾಡಿರುವ ಪ್ರಕಾರ, ಸರ್ಕಾರಿ ನಡವಳಿಯಲ್ಲಿ ಅಥವಾ ಸರ್ಕಾರಿ ಸಮಾರಂಭಗಳಲ್ಲಿ ಯಾವ ರೀತಿ ಪಾಲ್ಗೊಳ್ಳಬೇಕೆಂಬುದನ್ನು ವಿವರಿಸುವ ಮತ್ತು ನಿರ್ದೇಶಿಸುವ ಸ್ಪಷ್ಟವಾದ ಸರ್ಕಾರಿ ಆದೇಶವೊಂದನ್ನು ಹೊರಡಿಸುವಂತೆ ನಿರ್ದೇಶನ ನೀಡಲಾಗಿದೆ.

**ಆದೇಶ ಸಂಖ್ಯೆ: ಡಿಪಿಎಆರ್ 119 ಪಿಎಲ್ಎಕ್ಸ್ 84,**
**ಬೆಂಗಳೂರು, ದಿನಾಂಕ:8ನೇ ಫೆಬ್ರವರಿ 1985.**

ಅದಕ್ಕನುಸಾರವಾಗಿ ಈ ಮುಂದಿನ ಆದೇಶಗಳನ್ನು ಹೊರಡಿಸಲಾಗಿದೆ.

1. ಸರ್ಕಾರಿ ಇಲಾಖೆಯು ಏರ್ಪಡಿಸುವಂತಹ ಸರ್ಕಾರಿ ಸಮಾರಂಭಗಳಲ್ಲಿ ಚುನಾವಣಾ ಕ್ಷೇತ್ರವನ್ನು ಪ್ರತಿನಿಧಿಸುವ ಸಂಸತ್ ಸದಸ್ಯರು ಮತ್ತು ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳನ್ನು ತಪ್ಪದೆ ಆಹ್ವಾನಿಸಬೇಕು.

2. ಅ.ಜ್ಞಾ.ಸಂ.ಜಿಎಡಿ 4 ಪಿಎಲ್ಎಕ್ಸ್ 75, ದಿನಾಂಕ:19ನೇ ಮೇ 1975ರಲ್ಲಿ ತಿಳಿಸಿರುವಂತೆ ಅವರೆಲ್ಲರಿಗೂ ಆಸನ ವ್ಯವಸ್ಥೆಗಳನ್ನು ಮಾಡಬೇಕು.

3. ಸಮಾರಂಭದಲ್ಲಿ ಪಾಲ್ಗೊಳ್ಳುವಂತಹ ಸಂದರ್ಭ ಮತ್ತು ಇತರ ಸನ್ನಿವೇಶಗಳನ್ನು ಆಧರಿಸಿ, ಮಂತ್ರಿ: ರಾಜ್ಯ ಮಂತ್ರಿ ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳಿಗೆ ಅಧ್ಯಕ್ಷರು: ಮುಖ್ಯ ಅತಿಥಿ: ವಿಶೇಷ ಆಹ್ವಾನಿತರು ಹೀಗೆ ಸ್ಥಾನಗಳನ್ನು ನೀಡಬೇಕು ಮತ್ತು ಅವರ ಹೆಸರುಗಳನ್ನು ಆಹ್ವಾನ ಪತ್ರಿಕೆಗಳಲ್ಲಿ ಹಾಕಿಸಬೇಕು.

ಈ ಸೂಚನೆಗಳನ್ನು ಎಲ್ಲ ಇಲಾಖೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಟಿ. ರಾಮಚಂದ್ರಬಾದ್ಯ**
ಸರ್ಕಾರದ ಉಪಕಾರ್ಯದರ್ಶಿ
ಡಿಸಿಎ ಮತ್ತು ಡಿಪಿಎಆರ್ (ಪ್ರಾರೂಪ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 113 ಎಎಆರ್ 85

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:6-12-1985.

**ಸುತ್ತೋಲೆ**

ವಿಷಯ: ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮೀಕ್ಷಣಾ ಸಭೆಗಳು.

* * * * *

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ರಾಜ್ಯ ಸರ್ಕಾರದ ನಾನಾ ಇಲಾಖೆಗಳ ಅಭಿವೃದ್ಧಿ ಮತ್ತು ಇತರ ಕಾರ್ಯಕ್ರಮಗಳ ಸಮೀಕ್ಷಣಾ ಸಭೆಗಳನ್ನು ಶಾಸಕರೇ ಆದಿಯಾಗಿ ಖಾಸಗಿ ಪ್ರಮುಖರುಗಳ ಅಧ್ಯಕ್ಷತೆಯಲ್ಲಿ ನಡೆಸಬಹುದೇ ಎಂಬುವ ಪ್ರಶ್ನೆ ಉದ್ಭವಿಸಿದೆ. ಈ ವಿಚಾರದಲ್ಲಿ ಸರ್ಕಾರದ ದಿನಾಂಕ:29-11-1985ರಂದು ಟೆಲಿಪ್ರಿಂಟರ್ ಮುಖಾಂತರ ಕಳುಹಿಸಲಾದ ಆದೇಶವನ್ನು ಕೆಳಕಂಡಂತೆ ವಿಶದೀಕರಿಸಿದೆ:

(ಅ) ಕ್ರಮ ಸಂಖ್ಯೆ: ಪಿಡಿ 209 ಪಿಎಂಎಂ 80, ದಿನಾಂಕ:23-4-80 ರಂದು ಹೊರಡಿಸಿರುವ ಸರ್ಕಾರಿ ಆದೇಶ ಮತ್ತು ಇದೇ ರೀತಿಯ ಇತರೆ ಆದೇಶಗಳಲ್ಲಿ ಖಾಸಗಿ ಪ್ರಮುಖರ ಅಧ್ಯಕ್ಷತೆಯಲ್ಲಿ ಹಲವು ಸಮಿತಿಗಳನ್ನು ನೇಮಕ ಮಾಡಲಾಗಿದೆ. ಆಯಾ ಸಮಿತಿಯ ಕಾರ್ಯವ್ಯಾಪ್ತಿಗೆ ಒಳಪಟ್ಟ ಸಮೀಕ್ಷಣಾ ಸಭೆಗಳನ್ನು ಇವರು ನಡೆಸಬಹುದು.

(ಆ) ಮೇಲೆ (ಅ) ದಲ್ಲಿ ಸೂಚಿಸಿರುವಂತಹ ಪ್ರಸಂಗಗಳ ಹೊರತು ಶಾಸಕರೇ ಆಗಲಿ ಇತರ ಖಾಸಗಿ ಪ್ರಮುಖರೇ ಆಗಲಿ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದಲ್ಲಿ ಸಮೀಕ್ಷಣಾ ಸಭೆಗಳನ್ನು ನಡೆಸುವ ಹಾಗಿಲ್ಲ. ಅಂತಹ ಸಭೆಗಳನ್ನು ನಡೆಸಲು ಮಾನ್ಯ ಸಚಿವರು ಮತ್ತು ಅಧಿಕಾರಿಗಳಿಗೆ ಮಾತ್ರ ಅವಕಾಶವಿರುತ್ತದೆ.

ಈ ಸ್ಪಷ್ಟನೆಯನ್ನು ತಮ್ಮ ಆಡಳಿತಾಧೀನದಲ್ಲಿರುವ ಎಲ್ಲಾ ಅಧಿಕಾರಿಗಳ ಗಮನ ಮತ್ತು ಅನುಸರಣೆಗೆ ಕೂಡಲೇ ತರಬೇಕೆಂದು ಸರ್ಕಾರ ಈ ಮೂಲಕ ಆದೇಶಿಸುತ್ತದೆ.

**ಟಿ.ಆರ್. ಸತೀಶ್ ಚಂದ್ರನ್**
ಸರ್ಕಾರದ ಮುಖ್ಯ ಕಾರ್ಯದರ್ಶಿ

GOVERNMENT OF KARNATAKA

No. DPAR 55 AAR 82

Karnataka Government Secretariat
Vidhana Soudha
Bangalore, dated:18th May 1982

## CIRCULAR

**Subject:** Tours of Chief Minister/Ministers/Ministers of State- Instructions to officers

**Ref:** 1. Circular No. GAD 89 OOM 68 dated: 17-8-1968
2. Circular No. GAD 23 MAR 72 dated: 9-5-1972
3 Circular No. GAD 69 MAR 72 dated: 27-9-1972
4. Circular No. GAD 10 MAR 74 dated: 18-2-1974
5. Circular No. GAD 47 MAR 75 dated. 10-7-1975

Government have issued detailed instructions from time to time regarding the courtesies to be shown by Government Officers during the tours of Ministers and Ministers of State. It is considered desirable to consolidate all these instructions and issue them in a single circular to facilitate reference and adherence to these instructions in day to day working accordingly, in super-session of the (circulars) referred to above, the following self-contained instructions are issued

1. (a) Whenever any Minister visits any place in a District, the District Officer (s) of the Department (s) comprised in the portfolio of the Minister should receive him on arrival and see him off at the time of his departure. in the unavoidable absence of the District Officer, the next senior most officer should be present. If desired by the Minister, these officers should accompany him during his tour within their jurisdiction

(b) The Divisional Commissioner, Deputy Commissioner and the Superintendent of Police will call on the Minister if they are in Headquarters. Unless specifically desired by the Minister, they should not accompany him during his tour. It is also not necessary for them to make a Special trip to the place of visit or in case of visit to Headquarters, break camp and return specially to Headquarters to receive the Ministers. However, when intimation is received of a Minister's visit to Headquarters well in advance, the Divisional Commissioner, Deputy Commissioner, Superintendent of Police should so arrange their tour programme as to be available, if possible, at Headquarters at the time of the ministers visit, these instructions will apply equally to the subordinate Revenue Officers like Assistant Commissioners and the Tahasildars. The Superintendent of Police will, however, make the usual security arrangements on such occasions.

(c) The Heads of Department and District Heads are instructed not to take with them junior officers whenever they accompany the Ministers.

(d) While on tour in the districts, Ministers and Ministers of State may require information about various matters from district officers Whenever officers are called upon to furnish information pertaining to their departments by the Ministers and Ministers of State, they should do so promptly

(e) It will be the duty of the Officer (s) of the Department comprised in the portfolio of the Minister to assist him and the officer travelling with him on Government duty to procure accommodation, supply of food and other reasonable necessities on payment. Bills for supply should be presented for payment immediately and not delayed.

(f) To ensure economy in the use of Government vehicles, the District Officers of the Departments comprised in the portfolio of the Minister are instructed to regulate the use of their Departmental vehicles by mutual consultation and arrangement to the minimum extent possible. Depending upon the capacity of the vehicle, as far as possible, four to five officers belonging to the different departments should travel in one vehicle,

(g) Copies of tour programmes of the Ministers should be communicated in time to the concerned officers by the Deputy Commissioners so as to enable the officers to call on the Ministers.

2. In respect of tours of the Chief Minister, it is considered necessary that the Deputy Commissioners of districts and the Superintendents of Police should invariably meet him at the border of their districts as and when he passes through the districts irrespective of the fact whether he breaks his journey or not in the district, to keep him appraised of the latest information about the district. Accordingly, they are directed to do so.

3. When Ministers undertake tours on the eve of the Elections, Government Officers while they should make the usual arrangements to enable the Ministers to carry on their responsibilities as Ministers should not themselves organise any Election Meetings, nor be present during such meetings except when their duties enjoin them to be present in order to maintain law and order or to make security arrangements.

4. No guard of honour by the Reserve or other Police should be arranged in honour of Ministers or Ministers of State when they are on tour. Erection of pendals, green buntings and offering of garlands should be avoided. Tea, lunch on or dinner parties should not be got up by the officers on such occasions.

5. The Divisional Commissioners and Deputy Commissioners are requested to ensure that these instructions are strictly adhered to

**M.K. VENKATESHAN**

Additional Chief Secretary to Government

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಆಸುಇ 53 ಎಎಆರ್ 79

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:21ನೇ ಜೂನ್ 1979

## ಅಧಿಕೃತ ಜ್ಞಾಪನ ಪತ್ರ

ವಿಷಯ: ಶಾಸಕರುಗಳು, ಸಚಿವರ ಆಪ್ತ ಕಾರ್ಯದರ್ಶಿ ಮತ್ತು ಆಪ್ತ ಸಹಾಯಕರುಗಳಿಗೆ ಸೂಚನೆಗಳು.

*****

ಶಾಸಕರುಗಳು ಸಚಿವರುಗಳ ಕಚೇರಿಗಳಿಗೆ ಭೇಟಿ ಕೊಟ್ಟಾಗ, ಅಲ್ಲಿನ ಸಚಿವರುಗಳ ಆಪ್ತ ಕಾರ್ಯದರ್ಶಿ ಮತ್ತು ಆಪ್ತ ಸಹಾಯಕರುಗಳು ಅವರಿಗೆ ಸೌಜನ್ಯತೆ ತೋರಿಸದೆ ಮತ್ತು ಅವರಿಗೆ ಕೂರಲು ಕುರ್ಚಿಗಳನ್ನು ಸಹ ಕೊಡದೇ ಇದ್ದುದರ ಬಗೆಗೆ ಕೆಲವು ವಿಧಾನಸಭಾ ಸದಸ್ಯರುಗಳು ಇತ್ತೀಚೆಗೆ ಸರ್ಕಾರಕ್ಕೆ ದೂರು ಸಲ್ಲಿಸಿದ್ದಾರೆ.

2. ಸಚಿವರುಗಳನ್ನು ನೋಡಲು ಬರುವ ಸಂದರ್ಶಕರುಗಳಿಗೆ ಮತ್ತು ಅದರಲ್ಲೂ ಸಂಸತ್ ಮತ್ತು ವಿಧಾನ ಮಂಡಲದ ಸದಸ್ಯರುಗಳಿಗೆ ತೋರಬೇಕಾದ ಸೌಜನ್ಯತೆಯ ಬಗ್ಗೆ ಈ ಹಿಂದೆ ಸೂಚನೆಗಳನ್ನು ನೀಡಲಾಗಿದೆ, ಮತ್ತು ಈ ಸೂಚನೆಗಳನ್ನು ಮೇಲಿಂದ ಮೇಲೆ ಕಾಲಕಾಲಕ್ಕೆ ನೀಡಲಾಗಿದೆ. ಆದಾಗ್ಯೂ ಸಚಿವರನ್ನು ನೋಡಲು ಬರುವ ಸಂಸತ್ ವಿಧಾನ ಮಂಡಲದ ಸದಸ್ಯರುಗಳು ಮತ್ತು ಇತರ ವ್ಯಕ್ತಿಗಳನ್ನು ಸರಿಯಾಗಿ ಉಪಚರಿಸದಿರುವ ಬಗ್ಗೆ ಈಗಲೂ ದೂರುಗಳು ಬರುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

3. ಸಂದರ್ಶಕರನ್ನು ಎಲ್ಲ ರೀತಿಯ ಗೌರವದಿಂದ ಸ್ವಾಗತಿಸಬೇಕು ಮತ್ತು ಅವರಿಗೆ ಅಸನಗಳನ್ನು ನೀಡಿ ಕೂರಿಸುವುದೇ ಅಲ್ಲದೆ ಅವರ ಆಗಮನವನ್ನು ಸಚಿವರುಗಳ ಗಮನಕ್ಕೆ ತರಬೇಕು ಮತ್ತು ಸಚಿವರುಗಳ ಇತರ ಕಾರ್ಯಕಲಾಪಗಳ ಗೊತ್ತು ಪಾಡುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಸಾಧ್ಯವಾದಷ್ಟು ಬೇಗನೆ ಸಂದರ್ಶನದ ಏರ್ಪಾಡು ಮಾಡಬೇಕು. ಇನ್ನು ಮುಂದೆ ಈ ತರಹ ದೂರುಗಳು ಬರದಂತೆ ನೋಡಿಕೊಳ್ಳುವಂತೆ ಸಚಿವರುಗಳ ಆಪ್ತ ಕಾರ್ಯದರ್ಶಿ ಮತ್ತು ಆಪ್ತ ಸಹಾಯಕರುಗಳನ್ನು ವಿನಂತಿಸಲಾಗಿದೆ ಈ ಬಗ್ಗೆ ಯಾವುದೇ ದೂರುಗಳು ಬಂದರೆ ತೀವ್ರ ಕ್ರಮವನ್ನು ಕೈಗೊಳ್ಳಲಾಗುವುದು.

**ಎನ್. ನರಸಿಂಹರಾವ್**
ಮುಖ್ಯ ಕಾರ್ಯದರ್ಶಿ

GOVERNMENT OF KARNATAKA

No. DPAR 31 PLX 78

Karnataka Government Secretariat,
Vidhana Soudha,
Bangalore, dated: 29th March 1978

**OFFICIAL MEMORANDUM**

Subject: Official dealings between the Administration and Members of Parliament and State Legislatures-Observance of proper procedure-

Ref:
1. O.M. No. GAD 4 PLX 75 dated 19-5-75, (copy enclosed)
2. O.M. No. DPAR 17 PLX 77 dated 25-8-77, (copy enclosed)

It has been brought to the notice of Government that some of the officers of the Sate Government are not extending adequate courtesy and consideration to Members of Parliament and of the State Legislature as well as the other representatives of the people.

2. Attention is invited to the instructions and guidelines issued in O.M. No. GAD 4 PLX 75 dated 19-5-1975. The Secretaries to Government and Heads of Departments are requested to issue necessary instructions to all the subordinate officers coming under their administrative control to ensure that these instructions are strictly adhered to and that no room is given for any complaint regarding absence of decorum or courtesy in their behaviour with the elected representatives.

**THERESA BHATTACHARYA**
Joint Secretary to Government,
Dept. of Personnel and Administrative Reforms.

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 17 ಪಿಎಲ್‌ಎಕ್ಸ್ 77

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:25ನೇ ಆಗಸ್ಟ್ 1977

**ಸರ್ಕಾರಿ ಜ್ಞಾಪನ ಪತ್ರ**

ವಿಷಯ: ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳ ನಡುವಣ ಸರ್ಕಾರಿ ವ್ಯವಹಾರಗಳು ಸರ್ಕಾರಿ ಸಮಾರಂಭಗಳಿಗೆ ಆಹ್ವಾನ ಪತ್ರಿಕೆಗಳನ್ನು ಕಳುಹಿಸುವ ಬಗೆಗಿನ ಸೂಚನೆಗಳನ್ನು ಕುರಿತು.
ಉಲ್ಲೇಖ: ಅ.ಜ್ಞಾ.ಸಂ: ಜಿಎಡಿ 4 ಪಿಎಲ್‌ಎಕ್ಸ್ 75, ದಿನಾಂಕ:19-5-1975

* * * * *

ಸರ್ಕಾರಿ ಇಲಾಖೆಗಳು ಏರ್ಪಡಿಸುವ ಸರ್ಕಾರಿ ಸಮಾರಂಭಗಳಿಗೆ ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳನ್ನು ನಿಯಮಿತವಾಗಿ ಆಹ್ವಾನಿಸುತ್ತಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತರಲಾಗಿದೆ.

ಅಂಥ ಸರ್ಕಾರಿ ಸಮಾರಂಭಗಳನ್ನು ಏರ್ಪಡಿಸಲು ಜವಾಬ್ದಾರರಾದ ಎಲ್ಲಾ ಇಲಾಖಾ ಮತ್ತು ಜಿಲ್ಲಾಧಿಕಾರಿಗಳು ಸಂಸತ್ತಿನ ಎಲ್ಲ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರುಗಳಿಗೆ ಆಹ್ವಾನ ಪತ್ರಿಕೆಗಳನ್ನು ತಪ್ಪದೆ ಕಳುಹಿಸುವುದಾಗಿ ಖಚಿತಪಡಿಸಬೇಕು. ಆಸನ ವ್ಯವಸ್ಥೆಗಳು ಮುಂತಾದವುಗಳನ್ನು ಸರ್ಕಾರಿ ಜ್ಞಾಪನಪತ್ರ ಸಂಖ್ಯೆ ಜಿಎಡಿ 4 ಪಿಎಲ್‌ಎಕ್ಸ್ 75, ದಿನಾಂಕ:19-5-75ರ (ಪ್ರತಿಯನ್ನು ಲಗತ್ತಿಸಿದೆ) 5ನೇ ಪ್ಯಾರಾದಲ್ಲಿಯ ಸೂಚನೆಗಳಿಗನುಸಾರವಾಗಿ ಮಾಡಬೇಕು.

ಈ ಬಗ್ಗೆ ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರನ್ನು ತಮ್ಮ ಆಡಳಿತ ನಿಯಂತ್ರಣದಲ್ಲಿರುವ ಸಂಬಂಧಪಟ್ಟ ಎಲ್ಲಾ ಅಧೀನ ಕಚೇರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡುವಂತೆ ವಿನಂತಿಸಿಕೊಳ್ಳಲಾಗಿದೆ.

**ಬಿ.ಎನ್.ಪಿ. ಅಲ್ವಕರ್ಕ್**
ಸರ್ಕಾರದ ಉಪಕಾರ್ಯದರ್ಶಿ,
ಸಚಿವ ಸಂಪುಟದ ವ್ಯವಹಾರಗಳ ಇಲಾಖೆ ಮತ್ತು
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಪ್ರಾರೂಪ)

**ಕರ್ನಾಟಕ ಸರ್ಕಾರ**

ಸಂಖ್ಯೆ: ಜಿಎಡಿ 4 ಪಿಎಲ್‌ಎಕ್ಸ್ 75

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ:19ನೇ ಮೇ 1975

**ಸರ್ಕಾರಿ ಜ್ಞಾಪನ ಪತ್ರ**

ವಿಷಯ: ಆಡಳಿತ ವರ್ಗ ಮತ್ತು ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ನಡುವಣ ಸರ್ಕಾರಿ ವ್ಯವಹಾರಗಳು-ಸೂಕ್ತ ಕಾರ್ಯ ವಿಧಾನದ ಪಾಲನೆ- ಸೂಚನೆಗಳು ಕುರಿತು.

*****

ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳು ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರತಿನಿಧಿಗಳಾಗಿ ಅತೀ ಮಹತ್ವದ ಸ್ಥಾನವನ್ನು ಪಡೆದಿದ್ದಾರೆಂದು ತಿಳಿಸಲು ಈ ಕೆಳಗೆ ಸಹಿ ಮಾಡಿರುವವರಿಗೆ ನಿರ್ದೇಶನ ದೊರೆತಿದೆ. ಸಂವಿಧಾನದ ಮೇರೆಗೆ ಅವರು ನಿರ್ವಹಿಸಬೇಕಾದ ಮಹತ್ವದ ಕರ್ತವ್ಯಗಳಿಗೆ ಮತ್ತು ತಮ್ಮ ಸಂಸದೀಯ ಹಾಗೂ ಸಂಬಂಧಪಟ್ಟ ಸಾರ್ವಜನಿಕ ಕರ್ತವ್ಯಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಇಲಾಖೆಗಳಿಂದ ಮಾಹಿತಿ ಕೋರುವುದು ಅಥವಾ ಅವರ ಪರ್ಯಾಲೋಚನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುವುದು ಅಧಿಕಾರಿಗಳ ಸಂದರ್ಶನಗಳಿಗಾಗಿ ಕೋರುವುದು ಅವಶ್ಯವೆಂದು ಅವರಿಗೆ ಸಂದರ್ಭಕ್ಕನುಸಾರವಾಗಿ ಕಂಡುಬರಬಹುದು. ಇದಕ್ಕೆ ಸಂಬಂಧಿಸಿದಂತೆ ಸಂಸತ್ ಹಾಗೂ ವಿಧಾನ ಮಂಡಲಗಳ ಸದಸ್ಯರುಗಳು ಮತ್ತು ಸರ್ಕಾರಿ ನೌಕರರ ನಡುವಣ ಸಂಬಂಧಗಳನ್ನು ಕ್ರಮಪಡಿಸಲು ಯುಕ್ತವಾಗಿ ಪರಿಗಣಿಸಿದ ತತ್ವಗಳು ಮತ್ತು ನಡವಳಿಗಳನ್ನು ರಣಾಗಲೇ ರಚಿಸಲಾಗಿದೆ.

ಆದಾಗ್ಯೂ, ಸ್ಥಿತಿಗತಿಗಳನ್ನು ಪರಿಶೀಲಿಸಿದ ತರುವಾಯ ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರು ಮತ್ತು ಸರ್ಕಾರ ನೌಕರರ ನಡುವಣ ಸಂಬಂಧಗಳನ್ನು ಕ್ರಮಪಡಿಸುವಂಥ ತತ್ವಗಳು ಮತ್ತು ಪದ್ಧತಿಗಳನ್ನು ಸ್ವಲ್ಪಮಟ್ಟಿಗೆ ವಿವರವಾಗಿ ಮೇಲಿಂದ ಮೇಲೆ ಸ್ಪಷ್ಟವಾಗುವಂತೆ ತಿಳಿಸುವುದು ಅಗತ್ಯವೆಂದು ಭಾವಿಸಲಾಗಿದೆ. ಈ ಕುರಿತ ಸೂಚನೆಗಳು ಮುಂದಿನ ಪ್ಯಾರಾಗಳಲ್ಲಿದೆ.

1. ಗಮನದಲ್ಲಿಡಬೇಕಾದ 2 ಮೂಲಭೂತ ತತ್ವಗಳು ಎಂದರೆ (1) ಸಂಸತ್ ಮತ್ತು ರಾಜ್ಯ ವಿಧಾನ ಮಂಡಲಗಳ ಸದಸ್ಯರ ಬಗ್ಗೆ ಸರ್ಕಾರಿ ನೌಕರರು ಸೌಜನ್ಯದಿಂದ ಹಾಗೂ ಗೌರವದಿಂದ ವರ್ತಿಸಬೇಕು ಮತ್ತು (2) ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರುಗಳು ಏನು ಹೇಳಬಹುದು ಎಂಬುದನ್ನು ಎಚ್ಚರಿಕೆಯಿಂದ ಪರ್ಯಾಲೋಚಿಸಿ ಅಥವಾ ತಾಳ್ಮೆಯಿಂದ ಆಲಿಸಿ ಅವರು ಯಾವಾಗಲೂ ತಮ್ಮ ಸ್ವಂತ ವಿವೇಚನಾನುಸಾರವಾಗಿ ವರ್ತಿಸಬೇಕು.
2. ಸಂಸತ್ ಹಾಗೂ ವಿಧಾನ ಮಂಡಲದ ಸದಸ್ಯರುಗಳು ಸಂವಿಧಾನದ ಮೇರೆಗೆ ತಮ್ಮ ಪ್ರಮುಖ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸಾಧ್ಯವಾದ ಎಲ್ಲಾ ನೆರವನ್ನು ನೀಡುವುದು ಪ್ರತಿಯೊಬ್ಬ ಅಧಿಕಾರಿಯ ಕರ್ತವ್ಯವಾಗಬೇಕು. ಆದಾಗ್ಯೂ, ಒಬ್ಬ ಸದಸ್ಯನ ಕೋರಿಕೆ ಅಥವಾ ಸಲಹೆಯನ್ನು ಒಪ್ಪಿಕೊಳ್ಳಲು ಒಬ್ಬ ಅಧಿಕಾರಿಗೆ ಸಾಧ್ಯವಾಗದೆ ಇರುವಂಥ ಸಂದರ್ಭಗಳಲ್ಲಿ ಆ ರೀತಿ ಮಾಡಲು ಸಾಧ್ಯವಾಗದಿರುವಂಥ ಅಧಿಕಾರಿಯ ಅಸಹಾಯಕತೆಯ ಕಾರಣಗಳನ್ನು ಆ ಸದಸ್ಯರಿಗೆ ಸೌಜನ್ಯದಿಂದ ವಿವರಿಸಬೇಕು.
3. ಅನೇಕ ಅಧಿಕಾರಿಗಳು ಅತಿ ಮಹತ್ತರವಾದ ಸಾರ್ವಜನಿಕ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ಹೊಂದಿರುವುದು ಮನವರಿಕೆಯಾಗಿದೆಮತ್ತು ಅವರು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕಾದರೆ ಸ್ವಲ್ಪ ಎಚ್ಚರಿಕೆಯಿಂದ ತಮ್ಮ ದೈನಂದಿನ ಕಾರ್ಯದ ಬಗ್ಗೆ ಯೋಜನೆಯನ್ನು ಹಾಕಿಕೊಳ್ಳಲು ಮತ್ತು ಯೋಜನೆಗಳಿಗನುಸಾರವಾಗಿ ನಡೆಯಲು ಅವರಿಗೆ ಅನುಮತಿ ನೀಡಬೇಕು. ಅಧಿಕಾರಿಗೆ ಕೆಲವು ಗಂಟೆಗಳ ಕಾಲ ವಿಶ್ರಾಂತಿಯ ಅಗತ್ಯವಿರುವುದರಿಂದ ಅವರು ಅಸೌಜನ್ಯತೆ, ಅವಿಚಾರ ಇವೇ ಮೊದಲಾದವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಸಂದರ್ಶಕರನ್ನು ಸಂದರ್ಶಿಸಲು ನಿರಾಕರಿಸಬಹುದು. ಆದಾಗ್ಯೂ ಅವರನ್ನು ಯಾರಾದರೂ ಸಂದರ್ಶಿಸಲು ಬರಬಹುದಾದ್ದರಿಂದ ಪ್ರತಿದಿನ ಅವರು ಕೆಲವು ಗಂಟೆಗಳ ಕಾಲವನ್ನು ಅದಕ್ಕಾಗಿಯೇ ಮೀಸಲಿಡಬೇಕು ಮತ್ತು ಆ ಸಮಯಗಳಲ್ಲಿ ಮತ್ತು ಸಂದರ್ಶಕರನ್ನು ಅವನು ಭೇಟಿಯಾಗುವ ಕಚೇರಿಯ ಇತರ ಸಮಯಗಳಲ್ಲಿ ಮುಂಚಿತವಾಗಿಯೇ ಸಂದರ್ಶನ ಸಮಯವನ್ನು ಗೊತ್ತುಪಡಿಸಿಕೊಂಡು ಬಂದಂಥ ಸಂದರ್ಶಕರನ್ನು ಮತ್ತು ಮುಂಚಿತವಾಗಿಯೇ ಸಮಯವನ್ನು ಗೊತ್ತುಪಡಿಸಿಕೊಳ್ಳದೆ. ಸಂಸತ್ ಅಥವಾ ವಿಧಾನ ಮಂಡಲದ ಸದಸ್ಯರನ್ನು ಹೊರತು ಪಡಿಸಿ, ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರಿಗೆ ಅವನು ಆದ್ಯತೆಯನ್ನು ನೀಡಬೇಕು. ಅಂಥ ಸಂದರ್ಭದಲ್ಲಿ ಮುಂಚಿತವಾಗಿಯೇ ಸಂದರ್ಶನ ಸಮಯವನ್ನು

ಗೊತ್ತುಪಡಿಸಿಕೊಂಡು ಬಂದ ಸಂದರ್ಶಕರನ್ನು ಭೇಟಿಯಾದ ಕೂಡಲೇ ಸಂಸತ್ ಸದಸ್ಯ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯರನ್ನು ಸಂದರ್ಶಿಸಬೇಕು, ಸಂಸತ್ ಸದಸ್ಯ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯರೊಂದಿಗೆ ಅಥವಾ ವಾಸ್ತವವಾಗಿ ಇತರ ಯಾರೇ ವ್ಯಕ್ತಿಗಳೊಂದಿಗೆ ಮಾಡಿಕೊಂಡಿದ್ದ ಸಂದರ್ಶನ ವ್ಯವಸ್ಥೆ ಯಾವುದೇ ಅನಾನುಕೂಲತೆಯಿಂದಾಗಿ ತಪ್ಪಿಹೋದಲ್ಲಿ ಅವರೊಂದಿಗೆ ಸಮಾಲೋಚಿಸಿ ಹೊಸದಾಗಿ ಸಂದರ್ಶನ ಸಮಯವನ್ನು ನಿಗದಿಪಡಿಸಬೇಕು.

4. ಸಂಸತ್ ಸದಸ್ಯ ಅಥವಾ ರಾಜ್ಯ ವಿಧಾನ ಮಂಡಲ ಸದಸ್ಯರು ಅಧಿಕಾರಿಯನ್ನು ನೋಡಲು ಬಂದಾಗ ಅವರನ್ನು ಸ್ವಾಗತಿಸಲು ತಮ್ಮ ಸ್ಥಳದಲ್ಲಿ ಎದ್ದು ನಿಲ್ಲಬೇಕು. ಅಧಿಕಾರಿಗಳ ಸಣ್ಣಪುಟ್ಟ ಚಲನವಲನಗಳಿಗೂ ಸಾಂಕೇತಿಕ ಮೌಲ್ಯವಿರುತ್ತದೆ. ಆದ್ದರಿಂದ ಸಂಸತ್ ಸದಸ್ಯರು ಮತ್ತು **ರಾಜ್ಯ ವಿಧಾನ ಮಂಡಲದ ಸದಸ್ಯರುಗಳೊಂದಿಗೆ ಅವರು** ವ್ಯವಹರಿಸುವಾಗ ಸೂಕ್ಷ್ಮ ವಿವರಗಳನ್ನು ಸಮರ್ಪಕವಾಗಿ ಹಾಗೂ ಸೌಜನ್ಯದಿಂದ ತಿಳಿಸಬೇಕು.

5. ಹಾಗೆಯೇ ಸರ್ಕಾರಿ ಸಮಾರಂಭಗಳ ಆಸನ ವ್ಯವಸ್ಥೆಯನ್ನು ಎಲ್ಲಾ ಸಮಯದಲ್ಲೂ ತುಂಬಾ ಎಚ್ಚರಿಕೆಯಿಂದ ಮಾಡಬೇಕು ಮತ್ತು ಈ ನಿಟ್ಟಿನಲ್ಲಿ ಯುವುದೇ ತಪ್ಪು ತಿಳಿವಳಿಕೆಗೆ ಅವಕಾಶವಿಲ್ಲವೆಂದು ಖಚಿತಪಡಿಸಬೇಕು. ಸಂಸತ್ ಸದಸ್ಯರ ಸ್ಥಾನಮಾನವನ್ನು ಅಧ್ಯಕ್ಷರಿಂದ ಅನುಮೋದಿತವಾದ ಅಧ್ಯಕ್ಷರ ವಾರಂಟಿನಲ್ಲಿಯೇ ಸ್ಪಷ್ಟವಾಗಿ ಸೂಚಿಸಲಾಗಿದೆ. ಅನುಚ್ಛೇದ 80ರಲ್ಲಿರುವಂತೆ ಸಂಸತ್ ಸದಸ್ಯರು ಪೂರ್ಣ ಪ್ರಮಾಣದ ಸಾಮಾನ್ಯ ದರ್ಜೆಯ ಅಧಿಕಾರಿಗಳು ಅಥವಾ ಭಾರತ ಸರ್ಕಾರದ ಕಾರ್ಯದರ್ಶಿಗಳು ಮೊದಲಾದವನ್ನು ಸಮವಾಗಿ ಪರಿಗಣಿಸಲ್ಪಡುತ್ತಾರೆ. ರಾಜ್ಯದ ಪ್ರಮುಖ ಸಭೆಗಳಲ್ಲಿ ಪಾಲ್ಗೊಳ್ಳಲು ಸಂಸತ್ ಸದಸ್ಯರನ್ನು ಆಹ್ವಾನಿಸಿದಾಗ ಅಧ್ಯಕ್ಷರ ವಾರಂಟಿನ ಜೊತೆಗೆ ಅನುಬಂಧಿಸಲ್ಪಟ್ಟ ಸೂಚನೆಗಳಲ್ಲಿ ರಾಜ್ಯಪಾಲರು, ಮುಖ್ಯ ನ್ಯಾಯಾಧೀಶರು, ಲೋಕಸಭೆಯ ಸಭಾಧ್ಯಕ್ಷರು, ರಾಯಬಾರಿ ಮೊದಲಾದವರ ನಂತರವೇ ಅವರಿಗೆ ಆಸನಗಳನ್ನು ಕಾದಿರಿಸತಕ್ಕದ್ದು ಎಂದು ತಿಳಿಸಲಾಗಿದೆ. ಆ ಸೂಚನೆಗಳಲ್ಲಿರುವ ಮತ್ತೊಂದು ಉಪಬಂಧವೆಂದರೆ ಸರ್ಕಾರಿ ಸಮಾರಂಭಗಳಿಗಾಗಿ ಆಮಂತ್ರಿತರಾಗಿ ದೆಹಲಿಯಲ್ಲಿ ತಂಗಿರುವ ರಾಜ್ಯ ವಿಧಾನ ಮಂಡಲಗಳ ಸದಸ್ಯರಿಗೆ, ಸಂಸತ್ ಸದಸ್ಯರಿಗೆ ನೀಡುವ ಸ್ಥಾನಮಾನದ ನಂತರದ ಸ್ಥಾನಮಾನವನ್ನು ನೀಡತಕ್ಕದ್ದು ತಡವಾಗಿ ಬರುವ ಸಂಸತ್ ಹಾಗೂ ರಾಜ್ಯ ವಿಧಾನ ಮಂಡಲಗಳ ಸದಸ್ಯರಿಗಾಗುವ ಅನಾನುಕೂಲತೆಗಳನ್ನು ನಿವಾರಿಸುವ ಸಲುವಾಗಿ ಅವರಿಗಾಗಿ ಪ್ರತ್ಯೇಕವಾಗಿರಿಸಿದ ಆಸನಗಳನ್ನು ಸಮಾರಂಭ ಮುಗಿಯುವವರೆಗೂ ಕಾದಿರಿಸತಕ್ಕುದು ಹಾಗೂ ಆ ಆಸನಗಳು ಖಾಲಿಯಿದ್ದಾಗ್ಯೂ ಅವುಗಳನ್ನು ಇತರರು ಉಪಯೋಗಿಸಿಕೊಳ್ಳತಕ್ಕುದಲ್ಲ. ಅವರಿಗೆ ಒದಗಿಸಲಾದ ಆಸನಗಳು ಕನಿಷ್ಠ ಪಕ್ಷ ಸರ್ಕಾರಿ ನೌಕರರಿಗಾಗಿ ಇರಿಸಲಾದ ಅನುಕೂಲಕರ ಹಾಗೂ ಎದ್ದು ಕಾಣಿಸುವಂದ ಆಸನಗಳಿಗೆ ಸಮನಾಗಿರತಕ್ಕದ್ದು.

6. ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರಿಂದ ಬಂದ ಪತ್ರಗಳಿಗೆ ಕೂಡಲೇ ಸ್ವೀಕೃತ ನೀಡತಕ್ಕದ್ದು. ಅಂಥ ಎಲ್ಲ ಪತ್ರಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ಸೂಕ್ತ ಮಟ್ಟದಲ್ಲಿ ಮತ್ತು ತ್ವರಿತವಾಗಿ ಇವುಗಳಿಗೆ ಉತ್ತರಿಸತಕ್ಕುದು. ಸಂಸತ್ ಸದಸ್ಯರು ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರು ಕೂಡಲೇ ದೊರೆಯುವ ಹಾಗೂ ರಹಸ್ಯವಲ್ಲದ ಸ್ಥಳೀಯ ಮಹತ್ವದ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಅಥವಾ ಅಂಕಿಅಂಶಗಳನ್ನು ಕೋರಿದಾಗ ಅಧಿಕಾರಿಗಳು ಅಂಥ ವಿವರಗಳನ್ನು ಅವರಿಗೆ ಒದಗಿಸಬೇಕು.

7. ಸಂಸತ್ ಮತ್ತು ರಾಜ್ಯ ವಿಧಾನ ಮಂಡಲದ ಸದಸ್ಯರೊಂದಿಗೆ ಸರ್ಕಾರಿ ನೌಕರರ ಸರ್ಕಾರಿ ವ್ಯವಹಾರಗಳ ಬಗ್ಗೆ ಈ ಹಿಂದಿನ ಪ್ಯಾರಾಗಳಲ್ಲಿ ಹೇಳಿದಂತೆ ಕ್ರಮಬದ್ಧಗೊಳಿಸುವಲ್ಲಿ ಸರ್ಕಾರಿ ನೌಕರರ ಸೇವಾ ಷರತ್ತುಗಳ ವಿಷಯದಲ್ಲಿ ತಮ್ಮ ಸ್ವಂತ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಅವರ ವೈಯಕ್ತಿಕ ಸಾಮರ್ಥ್ಯದಲ್ಲಿ ಅವರಿಂದ ಏನನ್ನು ನಿರೀಕ್ಷಿಸಬಹುದು ಎಂಬ ಅಂಶವನ್ನು ಅವರ ಗಮನಕ್ಕೆ ತರುವುದು ಅಗತ್ಯವಾಗಿದೆ. ಅವರನ್ನು ನಿಯಂತ್ರಿಸಿದ ಸಂಬಂಧಪಟ್ಟ ವ್ಯವಹಾರ ನಿಯಮಗಳ ಮೇರೆಗೆ, ಸರ್ಕಾರದಲ್ಲಿನ ತಮ್ಮ ಸೇವೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಸರ್ಕಾರಿ ನೌಕರರು ಯಾವುದೇ ವರಿಷ್ಠಾಧಿಕಾರಿಯ ಮೂಲಕ ಯಾವುದೇ ರಾಜಕೀಯ ಅಥವಾ ಇತರ ಪ್ರಭಾವ ತರುವುದು ಅಥವಾ ಹಾಗೇ ಆ ಪ್ರಭಾವ ತರಲು ಪ್ರಯತ್ನಿಸುವುದನ್ನು ನಿಷೇಧಿಸಲಾಗಿದೆ. ಆದುದರಿಂದ ಸರ್ಕಾರಿ ನೌಕರರನ್ನು ತಮ್ಮ ವೈಯಕ್ತಿಕ ವಿಷಯದ ಬಗ್ಗೆ ಸಂಸತ್ ಅಥವಾ ರಾಜ್ಯ ವಿಧಾನ ಮಂಡಲದ ಸದಸ್ಯರ ಸಂಪರ್ಕವನ್ನು ನಿರೀಕ್ಷಿಸಬಹುದು

**ಎನ್.ಎ. ಮುತ್ತಣ್ಣ**
ಸರ್ಕಾರದ ಉಪಕಾರ್ಯದರ್ಶಿ,
ಸಾಮಾನ್ಯ ಆಡಳಿತ ಇಲಾಖೆ (ರಾಜಕೀಯ)

GOVERNMENT OF KARNATAKA

No. GAD 4 PLX 75

Karnataka Government Secretariat,
Vidhana Soudha,
Bangalore, dated: 19th May 1975

**OFFICE MEMORANDUM**

Subject: Official dealings between the Administration and Members of Parliament and State Legislatures-Observance of proper procedure-Instructions-regarding

The undersigned is directed to state that Members of Parliament and State Legislatures occupy in our democratic set-up a very Important place as accredited representatives of the people. They have important functions to perform under the Constitution and they may occasionally find it necessary to seek information from the Departments of State Government or make suggessions for their consideration or ask for interviews with officers in connection with their parliamentary and allied public duties. In this connection certain well recognised principles and conventions to govern the relations between Members of Parliament and of Slate Legislatures and Government servants have already been established.

However, on a review of the position it has been considered necessary to reiterate, and to spell out in some detail, the principles and practices that should govern the relations between Members of Parliament and of State Legislatures and Government servants. The instructions in this regard are contained in the subsequent paragraphs.

1. The two basic principles to be borne in mind (i) that Government servants should show courtesy and consideration to Members of Parliament and of State Legislatures and (ii) that while they should consider carefully or listen patiently to what the Members of Parliament and of State Legislatures may have to say, they should always act according to their own best judgement.

2. It should be the endeavour of every officer to help the Members of Parliament and of State Legislature to the extent possible in the discharge of their important functions under the Constitution. In cases however, where an officer is unable to accede to the request or suggestion of a Member, the reasons for this inability to do so should be courteously explained to the Member.

3. It is realised that many officers have very heavy public duties and responsibilities and if they are to function effectively they should be permitted to plan out their day's work with some care and adhere to the plan. An officer should feel free to set-apart some hour when he can refuse to meet visitors without being considered guilty of discourtesy, lack of consideration and the like. He should, however, set apart some time every day when any body can see him and, within these hours and also during other office hours in which he is to meet visitors, he must give priority to Members for Parliament and of State Legislatures except when a visitor has come by previous appointment and a Member of Parliament or of a State Legislature has come without an appointment. In such a case he should see the Member of Parliament or of State Legislature immediately after he has met the visitor who had come by previous appointment. Any deviation from an appointment made with a Member of Parliament or of a State Legislature-or indeed with any other

person might cause inconvenience and a fresh appointment should be fixed in consultation with him.

4. When a Member of Parliament or of a State Legislature comes to see him, an officer should rise in his seal to receive the Member and to see him off. Small gestures have symbolic value and officers should therefore, be meticulously correct and courteous in their dealings with Members of Parliament and of State Legislatures.

5. Similarly, seating arrangements at Public functions should receive very careful attention at all times and it should be ensured that there is no room for any misunderstanding on this score. The position of Members of Parliament has been clearly brought out in the Warrant of Presedence approved by the President. Members of Parliament appear at Article 30 above officers of the rank of full General or equivalent, Secretaries to the Government of India, etc. The instructions ap en bloc to major State functions, the enclosure reserved for them should be next to the Governors, Chief Justice, Speaker of the Lok Sabha, Ambassadors etc. A further provision in the instructions is that the Members of State Legislature who, owing to their presence in Delhi happen to be invited to Stale functions should be assigned rank just after Members of Parliament. To avoid inconvenience to Members of Parliament and of State Legislatures who may come late, the block seats meant for them should be kept reserved till the end of the functions and should not be occupied by other persons even though they may be vacant. The seats provided for them should be atleast as comfortable and as prominently placed as those for officiates.

6. Letters received from Members of Parliament and of State Legislatures should be acknowledge promptly. All such letters should receive careful consideration and should be responded to at an appropriate level and expeditiously. The Officers should furnish to Members of Parliament and of State Legislatures when asked for, such information or statistics relating to matters of local importance as are readily available and are not confidential. In doubtful cases instructions should be taken from a higher authority before refusing the request.

7. While the official dealings of Government servants with Members of Parliament and of State Legislatures have to be regulated as stated in the previous paragraph, it is necessary to invite the attention of Government servants to what is expected of them in their individual capacity in respect of their own grievances in the matter of conditions of service. Under the relevant conduct Rules governing them, Government servants are prohibited from brining or attempting bring any political or other influence to bear upon any superior authority to further their interest in respect of matters pertaining to their service under the Government. Therefore, a Government servant is not expected to approach a Member of Parliament or of a State Legislature for sponsoring his individual case.

**N.A. MUTHANNA**
Deputy Secretary to Government,
General Administration Department. (Political).



G.C.P.B-59, WD O-025, Copies-500, Dt.13-6-2025